ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನದ 2010–14ರ ಮೌಲ್ಯಮಾಪನ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evalution Authority

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ**

**ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ**

**ಕರ್ನಾಟಕ ಸರ್ಕಾರ**

ಫೆಬ್ರವರಿ 2018

# ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನದ 2010–14ರ ಮೌಲ್ಯಮಾಪನ


**ಲಲಿತ ಐಯರ್**

ಪ್ರಧಾನ ತನಿಖೆದಾರರು

**ಅರ್ನ್ಸ್ಟ್ & ಯಂಗ್, ಬೆಂಗಳೂರು**


**ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಏಜೆನ್ಸಿ**

**ಕರ್ನಾಟಕ ಸರ್ಕಾರ**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evalution Authority


**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ**

**ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ**

**ಕರ್ನಾಟಕ ಸರ್ಕಾರ**

ಫೆಬ್ರವರಿ 2018

**©ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, 2017**

**ಇವರಿಗಾಗಿ**
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
#542, 5ನೇ ಮಹಡಿ, 2ನೇ ಹಂತ
ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀಧಿ
ಬೆಂಗಳೂರು–560 001.

**ಇವರಿಂದ**
ಅರ್ನ್ಸ್ಟ್ & ಯಂಗ್ ಎಲ್ ಎಲ್ ಪಿ,
(Ernst & Young LLP)
ಯು ಬಿ ಸಿಟಿ, 6ನೇ, 12ನೇ ಮತ್ತು 13ನೇ ಮಹಡಿ,
ಕ್ಯಾನ್‌ಬೆರಾ ಬ್ಲಾಕ್, # 24, ವಿಟಲ್ ಮಲ್ಯ ರಸ್ತೆ,
ಬೆಂಗಳೂರು– 560 001

**ಟೈಪ್ಸೆಟ್ & ಪ್ರಿಂಟರ್:**
ಭೂಮಿಕ ಡಿಜಿಟಲ್ ಕಾಪಿಯರ್, # 438, 3ನೇ ಮುಖ್ಯ ರಸ್ತೆ, ಚಿಕ್ಕಮಾರನಹಳ್ಳಿ ಮತ್ತಿಕೆರೆ, ಬೆಂಗಳೂರು-54

ಭಾರತ ಸರ್ಕಾರ

**ಪೀಠಿಕೆ**

# ಭಾರತದ ಸಂವಿಧಾನ

**ಭಾರತದ ಪ್ರಜೆಗಳಾದ ನಾವು,**

**ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ**

**ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ**

ರೂಪಿಸುವುದಕ್ಕಾಗಿ;

ಭಾರತದ ಎಲ್ಲಾ ಪ್ರಜೆಗಳಿಗೆ

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯವನ್ನು**;

ವಿಚಾರ, ಅಭಿವ್ಯಕ್ತ, ನಂಬಿಕೆ, ಧರ್ಮ ಮತ್ತು

ಉಪಾಸನೆಯ **ಸ್ವಾತಂತ್ರ್ಯವನ್ನು**;

ಸ್ಥಾನಮಾನ ಮತ್ತು ಅವಕಾಶಗಳ **ಸಮತೆಯನ್ನು**

ದೊರೆಯುವಂತೆ ಮಾಡುವುದಕ್ಕಾಗಿ;

ವ್ಯಕ್ತಿಗೌರವ, ದೇಶದಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ

**ಭ್ರಾತೃತ್ವ ಭಾವನೆಯನ್ನು** ಮೂಡಿಸುವುದಕ್ಕೆ

ದೃಢ ಸಂಕಲ್ಪ ಮಾಡಿ,

ನಮ್ಮ ಸಂವಿಧಾನ ಸಭೆಯಲ್ಲಿ

1949ನೇಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು

**ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,**

**ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.**

# ಮುನ್ನುಡಿ

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯು ರಾಜ್ಯ ಸಾಂಖ್ಯಿಕ ವ್ಯವಸ್ಥೆಗಳನ್ನು ಬಲಪಡಿಸಲು ಸಾಂಖ್ಯಿಕ ಸಾಮರ್ಥ್ಯವನ್ನು ಸುಧಾರಿಸುವ ಉದ್ದೇಶದೊಂದಿಗೆ ಮತ್ತು ಪರಿಣಾಮಕಾರಿಯಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಗೂ ನೀತಿಗಳನ್ನು ರೂಪಿಸಲು ಹಾಗೂ ಅನುಷ್ಠಾನಗೊಳಿಸಲು ದತ್ತಾಂಶ ಆಧಾರವನ್ನು ಬಲಪಡಿಸುವ ಗುರಿಯನ್ನು ಹೊಂದಿರುತ್ತದೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನದ ಮೇಲಿನ ಮೌಲ್ಯಮಾಪನದ ಅಧ್ಯಯನವನ್ನು ಕರ್ನಾಟಕ ರಾಜ್ಯದಲ್ಲಿ 2010–11ರಿಂದ 2013–14ರವರೆಗಿನ ಅವಧಿಯಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನದಲ್ಲಿ ಸಾಧಿಸಿದ ಪ್ರಗತಿಯನ್ನು ನಿರ್ಣಯಿಸುವ ಉದ್ದೇಶದಿಂದ ಕೈಗೊಳ್ಳಲಾಗಿರುತ್ತದೆ. ಕರ್ನಾಟಕ ಸಾಂಖ್ಯಿಕ ವ್ಯವಸ್ಥೆಯ ಅಭಿವೃದ್ಧಿ ಸಂಸ್ಥೆಯು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಈ ಅಧ್ಯಯನವನ್ನು ಕೈಗೊಳ್ಳಲು ಕೋರಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಈ ಅಧ್ಯಯನವನ್ನು ಕೈಗೊಳ್ಳಲು ಮೆಸರ್ಸ್ ಅರ್ನ್‌ಸ್ಟ್ ಮತ್ತು ಯಂಗ್ ಎಲ್‌ಎಲ್‌ಪಿ ಮೌಲ್ಯಮಾಪಕ ಸಮಾಲೋಚಕ ಸಂಸ್ಥೆಗೆ (ಇವೈ) ಹೊರಗುತ್ತಿಗೆಯಡಿ ನೀಡಿರುತ್ತದೆ. ಪ್ರಾಥಮಿಕ ಸಮೀಕ್ಷೆಗಳಿಂದ, ಮಧ್ಯಸ್ಥಗಾರರೊಂದಿಗಿನ ಸಮಾಲೋಚನೆಯಿಂದ ಮತ್ತು ಕಛೇರಿಯಲ್ಲಿ ಪ್ರಮುಖ ದಾಖಲೆಗಳನ್ನು ಪರಿಶೀಲಿಸುವುದರ ಮೂಲಕವಾಗಿ ಈ ಯೋಜನೆಯ ಪರಿಣಾಮವನ್ನು ವಿಶ್ಲೇಷಿಸಲಾಗಿರುತ್ತದೆ. ಸಾಂಖ್ಯಿಕ ಮೂಲಸೌಕರ್ಯಗಳನ್ನು ಮತ್ತು ದತ್ತಾಂಶ ನೆಲೆಗಳನ್ನು ಸುಧಾರಿಸುವಲ್ಲಿ ಮಹತ್ತರ ಸಾಧನೆಗಳನ್ನು ಅಧ್ಯಯನದ ಶೋಧನೆಗಳು ಸೂಚಿಸಿರುತ್ತವೆ. ಈ ಅಧ್ಯಯನದ ಶೋಧನೆಗಳು ಮತ್ತು ಶಿಫಾರಸ್ಸುಗಳು ರಾಜ್ಯದಲ್ಲಿನ ಸಾಂಖ್ಯಿಕ ವ್ಯವಸ್ಥೆಯ ಆಧಾರವನ್ನು ಮತ್ತು ಗುಣಮಟ್ಟವನ್ನು ಹೆಚ್ಚಿಸಲು ಇಲಾಖೆಗೆ ಮತ್ತು ಸರ್ಕಾರಕ್ಕೆ ಉಪಯುಕ್ತವಾಗುತ್ತದೆ ಎಂದು ನಾನು ನಿರೀಕ್ಷಿಸುತ್ತೇನೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ, ಇವರುಗಳ ನಿರಂತರ ಬೆಂಬಲ ಮತ್ತು ಮಾರ್ಗದರ್ಶನವನ್ನು ಈ ಅಧ್ಯಯನವು ಪಡೆದಿರುತ್ತದೆ. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಯೋಜನಾ ನಿರ್ದೇಶಕರು, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಇವರುಗಳು ಅಗತ್ಯ ಮಾಹಿತಿಯನ್ನು ಒದಗಿಸುವುದರ ಮೂಲಕವಾಗಿ ಬೆಂಬಲ ಹಾಗೂ ಸಹಕಾರವನ್ನು ನೀಡಿರುತ್ತಾರೆ. ಈ ವರದಿಯ ಗುಣಮಟ್ಟವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ತಾಂತ್ರಿಕ ಸಮಿತಿಯ ಸದಸ್ಯರುಗಳು ಮತ್ತು ಓರ್ವ ಸ್ವತಂತ್ರ ಮೌಲ್ಯಮಾಪಕರ ಮೂಲಕವಾಗಿ ಪರಿಶೀಲಿಸಿದ್ದು ಅನುಮೋದನೆ ಪಡೆದಿರುತ್ತದೆ. ಅವರ ಉಪಯುಕ್ತ ಒಳನೋಟಗಳು ಮತ್ತು ಸಲಹೆಗಳು ಕರಡು ವರದಿಯ ಗುಣಮಟ್ಟವನ್ನು ಹೆಚ್ಚಿಸಿರುತ್ತವೆ. ಅಧ್ಯಯನದಲ್ಲಿ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ತೊಡಗಿಸಿಕೊಂಡ ಎಲ್ಲರ ನೆರವು ಮತ್ತು ಕೊಡುಗೆಗಾಗಿ ಅವರಿಗೆ ನನ್ನ ಕೃತಜ್ಞತೆಗಳು.

30 ಜನವರಿ 2018
ಬೆಂಗಳೂರು

(ವನಶ್ರೀ ವಿಪಿನ್ ಸಿಂಗ್)
ಮುಖ್ಯ ಮೌಲ್ಯಮಾಪನಾಧಿಕಾರಿಗಳು
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

30/01/18

# ಪರಿವಿಡಿ


| | |
|---|---|
| 1. ಮುನ್ನುಡಿ | |
| 2. ಕಾರ್ಯಕಾರಿ ಸಾರಾಂಶ | 1 |
| 3. ಪೀಠಿಕೆ | 9 |
| 3. ಕಾರ್ಯಕ್ರಮ ಸಿದ್ಧಾಂತ | 19 |
| 4. ಪ್ರಗತಿ ಪರಿಶೀಲನೆ | 29 |
| 5. ಸಮಸ್ಯಾ ಹೇಳಿಕೆ | 31 |
| 6. ಮೌಲ್ಯಮಾಪನಕ್ಕಾಗಿ ಉದ್ದೇಶಗಳು ಮತ್ತು ವಿಷಯಗಳು | 35 |
| 7. ಮೌಲ್ಯಮಾಪನ ವಿನ್ಯಾಸ | 37 |
| 8. ಮೌಲ್ಯಮಾಪನ ವಿಧಾನ | 39 |
| 9. ದತ್ತಾಂಶ ಸಂಗ್ರಹ ಮತ್ತು ವಿಶ್ಲೇಷಣೆ | 47 |
| 10. ಶೋಧನೆಗಳು ಮತ್ತು ಚರ್ಚೆಗಳು | 143 |
| 11. ಪ್ರತಿಫಲನಗಳು ಮತ್ತು ನಿರ್ಣಯಗಳು | 159 |
| 12. ಶಿಫಾರಸ್ಸುಗಳು | 163 |
| 13. ಅನುಬಂಧಗಳು(Annexures) | 171 |

# ಚಿತ್ರಗಳ ಪಟ್ಟಿ


| | | |
|---|---|---|
| ಚಿತ್ರ 1 | ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ 5 ವಿಷಯಾಧಾರಿತ ಕ್ಷೇತ್ರಗಳು | 10 |
| ಚಿತ್ರ 2 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಬಿಡುಗಡೆಯಾದ ನಿಧಿಗಳ ಪ್ರಮಾಣ | 27 |
| ಚಿತ್ರ 3 | ಮೌಲ್ಯಮಾಪನ ಅಧ್ಯಯನದ ಉದ್ದೇಶಗಳು | 36 |
| ಚಿತ್ರ 4 | ಚೌಕಟ್ಟು ವಿಶ್ಲೇಷಣೆ: ಆದ್ಯತಾ ಒತ್ತು ನೀಡುವ ಕ್ಷೇತ್ರಗಳ ಮೂಲಕ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಮೌಲ್ಯಮಾಪನ. | 38 |
| ಚಿತ್ರ 5 | ಮೌಲ್ಯ ಮಾಪನ ಅಧ್ಯಯನಕ್ಕಾಗಿ ದತ್ತಾಂಶ ಸಂಗ್ರಹ ವಿಧಾನ | 45 |
| ಚಿತ್ರ 6 | ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ವೆಬ್ ಪೋರ್ಟಲ್‌ನ ಸ್ನ್ಯಾಪ್‌ಶಾಟ್ | 116 |

# ಕೋಷ್ಟಕಗಳ ಪಟ್ಟಿ


| | | |
|---|---|---|
| ಕೋಷ್ಟಕ 1 | ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯ ಅಡಿಯಲ್ಲಿ ಬಿಡುಗಡೆಯಾದ ಆಯವ್ಯಯ ಹಂಚಿಕೆ ಮತ್ತು ವಾಸ್ತವಿಕ ಮೊತ್ತ. | 11 |
| ಕೋಷ್ಟಕ 2 | 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳು | 12 |
| ಕೋಷ್ಟಕ 3 | ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನದಲ್ಲಿ ರಾಜ್ಯದ ಸದ್ಯದ ಸ್ಥಿತಿಗತಿ | 14 |
| ಕೋಷ್ಟಕ 4 | ಮೂಲ ತಿಳುವಳಿಕೆ ಪತ್ರದನ್ವಯ(2010–14) ಅನುಮೋದಿತ ಹಂಚಿಕೆಯ ವಿವರಗಳು | 23 |
| ಕೋಷ್ಟಕ 5 | ಪರಿಷ್ಕೃತ ತಿಳುವಳಿಕೆ ಪತ್ರದ ಅಡಿಯಲ್ಲಿ ನಿಧಿಗಳ ಹಂಚಿಕೆ | 24 |
| ಕೋಷ್ಟಕ 6 | ನಿಧಿವಾರು ಹಣಕಾಸು ಪಟ್ಟಿ | 26 |
| ಕೋಷ್ಟಕ 7 | ಈ ಅಧ್ಯಯನದ ಅಡಿಯಲ್ಲಿ ಒಳಗೊಳ್ಳುವ ಜಿಲ್ಲೆಗಳು ಮತ್ತು ತಾಲ್ಲೂಕುಗಳ ಪಟ್ಟಿ | 40 |
| ಕೋಷ್ಟಕ 8 | ಪ್ರತಿಕ್ರಿಯೆದಾರರ ವಯಸ್ಸು | 42 |
| ಕೋಷ್ಟಕ 9 | ಪ್ರತಿಕ್ರಿಯೆದಾರರ ಲಿಂಗ | 42 |
| ಕೋಷ್ಟಕ 10 | ಪ್ರತಿಕ್ರಿಯೆದಾರರ ಶಿಕ್ಷಣ ಮಟ್ಟ | 43 |
| ಕೋಷ್ಟಕ 11 | 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳ ಅಡಿಯಲ್ಲಿ ತೆಗೆದುಕೊಂಡ ಕ್ರಮಗಳು | 67 |
| ಕೋಷ್ಟಕ 12 | ಮೆ॥ ಡೆಲೊಟ್ಟೆ ಅವರಿಂದ ಮಾಡಲ್ಪಟ್ಟ ಶಿಫಾರಸ್ಸುಗಳ ಬಗ್ಗೆ ತೆಗೆದುಕೊಂಡ ಕ್ರಮಗಳು | 71 |
| ಕೋಷ್ಟಕ 13 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಅನುಷ್ಠಾನಗೊಳಿಸಿದ ದತ್ತಾಂಶ ಸಂಗ್ರಹಣ ಕಾರ್ಯಕ್ರಮಗಳು | 86 |
| ಕೋಷ್ಟಕ 14 | ಎಲ್ಲ ಮುಖ್ಯ ಸಾಂಖ್ಯಿಕ ಚಟುವಟಿಕೆಗಳ ಬಗ್ಗೆ ದತ್ತಾಂಶ ಸಂಗ್ರಹದ ಸ್ಥಿತಿಗತಿ | 88 |
| ಕೋಷ್ಟಕ 15 | 2011–16 ರ ಅವಧಿಯಲ್ಲಿ ನೇಮಕವಾದ ಪ್ರೋಗ್ರಾಮರ್ ಸಮಾಲೋಚಕರ ವಿವರಗಳು | 109 |
| ಕೋಷ್ಟಕ 16 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಎರವಲು ಪಡೆದ ಪ್ರೋಗ್ರಾಮರ್ ಸಮಾಲೋಚಕರು ವಹಿಸಿದ ಪಾತ್ರ. | 110 |
| ಕೋಷ್ಟಕ 17 | ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ವೆಬ್ ಪೋರ್ಟಲ್‌ನಲ್ಲಿ ಲಭ್ಯವಿರುವ ವರದಿಗಳ ಪಟ್ಟಿ. | 114 |
| ಕೋಷ್ಟಕ 18 | ವೆಬ್ ಅಪ್ಲಿಕೇಶನ್‌ಗಳ ಮೇಲೆ ದತ್ತಾಂಶ ಉನ್ನತೀಕರಣದ ಆವರ್ತನ | 116 |
| ಕೋಷ್ಟಕ 19 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಯೋಜಿಸಿದ ಮತ್ತು ಸಾಧಿಸಿದ ಮಾಹಿತಿ ಸಂವಹನ ತಂತ್ರಜ್ಞಾನದ ಅಗತ್ಯತೆಗಳು | 117 |
| ಕೋಷ್ಟಕ 20 | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಡಿಯಲ್ಲಿ ಯೋಜಿಸಿದ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್. | 118 |
| ಕೋಷ್ಟಕ 21 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಯೋಜಿಸಿದ ಪೂರಕ ಉಪಕರಣ | 119 |
| ಕೋಷ್ಟಕ 22 | ಈ ಅಧ್ಯಯನದ ಭಾಗವಾಗಿ ಮೌಲ್ಯಮಾಪನ ಮಾಡಿದ ಮಿನಿ ಲ್ಯಾಪ್‌ಟಾಪ್‌ಗಳ ವಿವರಗಳು | 120 |
| ಕೋಷ್ಟಕ 23 | ಮಿನಿ–ಲ್ಯಾಪ್‌ಟಾಪ್‌ಗಳ ಲಭ್ಯತೆಯ ಬಗ್ಗೆ ಸಾಂಖ್ಯಿಕ ನಿರೀಕ್ಷಕರ ಅಭಿಪ್ರಾಯ | 121 |
| ಕೋಷ್ಟಕ 24 | ಬ್ಯಾಟರಿ, ಕೀಬೋರ್ಡ್ ಮತ್ತು ಡಿಸ್‌ಪ್ಲೇ–ಇವುಗಳಿಗಾಗಿ ಮಿನಿಲ್ಯಾಪ್‌ಟಾಪ್‌ಗಳ ತಪಾಸಣೆ | 122 |
| ಕೋಷ್ಟಕ 25 | ಕಾರ್ಯಸ್ಥಿತಿ ಮತ್ತು ಉಪಯಕ್ತತೆಗಾಗಿ ಮಿನಿ–ಲ್ಯಾಪ್‌ಟಾಪ್‌ಗಳ ತಪಾಸಣೆ | 122 |
| ಕೋಷ್ಟಕ 26 | ಮಿನಿ–ಲ್ಯಾಪ್‌ಟಾಪ್‌ಗಳಿಗಾಗಿ ತಹಶೀಲ್ದಾರರು ಕೈಗೊಂಡ ಸುರಕ್ಷಿತಾ ಕ್ರಮಗಳು | 123 |
| ಕೋಷ್ಟಕ 27 | ಸಂದರ್ಶನ ಮಾಡಿದ ಪ್ರತಿಕ್ರಿಯೆದಾರರ /ಅಧಿಕಾರಿಗಳ ವಿವರಗಳು | 124 |
| ಕೋಷ್ಟಕ 28 | ತರಬೇತಿ ಕಾರ್ಯಕ್ರಮಗಳ ಪರಿಣಾಮ ಕುರಿತು ಪ್ರತಿಕ್ರಿಯೆದಾರರ ಅಭಿಪ್ರಾಯ. | 124 |
| ಕೋಷ್ಟಕ 29 | ತರಬೇತಿ ಕಾರ್ಯಕ್ರಮಗಳ ಸಮಗ್ರ ಗುಣಮಟ್ಟ | 125 |
| ಕೋಷ್ಟಕ 30 | ತರಬೇತಿ ಕಾರ್ಯಕ್ರಮಗಳ ಅವಧಿಯಲ್ಲಿ ವಾಸ್ತವಿಕ ತರಬೇತಿಯ ಉಪಯೋಗ. | 126 |

| | | |
|---|---|---|
| ಕೋಷ್ಟಕ 31 | ತರಬೇತಿ ಕಾರ್ಯಕ್ರಮಗಳ ನಂತರ ಮುಂದುವರಿಕೆ ಚಟುವಟಿಕೆಗಳು | 127 |
| ಕೋಷ್ಟಕ 32 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ವೆಬ್ ಅಪ್ಲಿಕೇಶನ್‌ಗಳಿಗಾಗಿ ಅನುಷ್ಠಾನ ಯೋಜನೆ. | 128 |
| ಕೋಷ್ಟಕ 33 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಿದ 7 ವೆಬ್-ಅಪ್ಲಿಕೇಶನ್‌ಗಳ ಅಡಿಯಲ್ಲಿ ಒಳಗೊಂಡ ಸಾಂಖ್ಯಿಕ ಚಟುವಟಿಕೆಗಳು. | 128 |
| ಕೋಷ್ಟಕ 34 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಿದ ವೆಬ್ ಅಪ್ಲಿಕೇಶನ್‌ಗಳ ಸದ್ಯದ ಸ್ಥಿತಿಗತಿ | 129 |
| ಕೋಷ್ಟಕ 35 | ಲ್ಯಾಪ್‌ಟಾಪ್‌ಗಳನ್ನು ಮತ್ತು ವೆಬ್ ಅಪ್ಲಿಕೇಶನ್‌ಗಳ ಉಪಯೋಗಕ್ಕಾಗಿ ಕೈಗೊಂಡ ತರಬೇತಿ | 130 |
| ಕೋಷ್ಟಕ 36 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಗೆ ಒದಗಿಸಿದ ನೆರವು. | 131 |
| ಕೋಷ್ಟಕ 37 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆಯಿಂದ ನಿಧಿ ಬಳಕೆ | 132 |
| ಕೋಷ್ಟಕ 38 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯಿಂದ ಅನುಷ್ಠಾನಗೊಂಡ ಚಟುವಟಿಕೆಗಳ ಪಟ್ಟಿ | 132 |
| ಕೋಷ್ಟಕ 39 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದ ಕ್ರಿಯಾಯೋಜನೆ. | 136 |
| ಕೋಷ್ಟಕ 40 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಿಂದ ನಿಧಿ ಬಳಕೆ | 137 |
| ಕೋಷ್ಟಕ 41 | ಶಿಫಾರಸ್ಸುಗಳು | 163 |

# 1. ಕಾರ್ಯಕಾರಿ ಸಾರಾಂಶ

ಅಂಕಿ–ಅಂಶವು ರಾಷ್ಟ್ರದ ಅಭಿವೃದ್ಧಿ, ಬೆಳವಣಿಗೆ ಮತ್ತು ಯೋಜನೆಗೆ ಅಗತ್ಯವಾದ ಸಾಧನವಾಗಿದೆ. ಯಾವುದೇ ರಾಷ್ಟ್ರವು ವ್ಯವಸ್ಥಿತ ಹಾಗೂ ಖಚಿತ ಅಭಿವೃದ್ಧಿ ಕಾರ್ಯಕ್ರಮವನ್ನು ಹೊಂದಬೇಕಾದರೆ ಆ ರಾಷ್ಟ್ರದಲ್ಲಿನ ರಾಷ್ಟ್ರೀಯ ಸಾಂಖ್ಯಿಕ ವ್ಯವಸ್ಥೆಯನ್ನು ಬಹಳಷ್ಟು ಗಮನಿಸಬೇಕಾಗುತ್ತದೆ. ('ವಿಶ್ವ ಅಂಕಿಅಂಶ ದಿನ' 2010 ರಂದು ಸಂಯುಕ್ತ ರಾಷ್ಟ್ರಗಳ ನಿರ್ಣಯ). ಆದ್ದರಿಂದ ಸಕಾಲಿಕ, ನಿಖರ ಹಾಗೂ ವಿಶ್ವಾಸಾರ್ಹ ಅಂಕಿ–ಅಂಶವು ಸಬಲವಾದ, ನೀತಿಸಮ್ಮತವಾದ ಅಭಿವೃದ್ಧಿಗೆ ಪೋಷಕವಾದ ವಾತಾವರಣವನ್ನು ನಿರ್ಮಿಸಲು ಮತ್ತು ನಿಭಾಯಿಸಲು ನಿರ್ಣಾಯಕವಾಗಿದೆ ಮತ್ತು ಉತ್ತಮ ಆರ್ಥಿಕ ಅಭಿವೃದ್ಧಿ ನೀತಿಗಳ ನಿರೂಪಣೆಗಾಗಿ ಅಗತ್ಯವಾದ ಅಂಶವಾಗಿದೆ.

ಡಾ॥ ಸಿ.ರಂಗರಾಜನ್ ನೇತೃತ್ವದ ರಾಷ್ಟ್ರೀಯ ಸಾಂಖ್ಯಿಕ ಆಯೋಗವು ಭಾರತದ ಸಾಂಖ್ಯಿಕ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಲು ಅನುಷ್ಠಾನಗೊಳಿಸಬೇಕಾದ ಆಡಳಿತಾತ್ಮಕ, ಶಾಸನಾತ್ಮಕ ಹಾಗೂ ತಾಂತ್ರಿಕ ಕ್ರಮಗಳನ್ನು ಗುರುತಿಸುವುದಕ್ಕೆ ಮತ್ತು ಸಾರ್ವಜನಿಕ ಹಾಗೂ ಖಾಸಗಿ ವಲಯಗಳ, ಅಕಾಡೆಮಿ ಸದಸ್ಯರ, ಸಂಶೋಧಕರ ಮತ್ತು ಇತರ ಬಳಕೆದಾರರ ವಿವಿಧ ಸಾಂಖ್ಯಿಕ ಅಗತ್ಯತೆಗಳನ್ನು ಪೂರೈಸಲು ಅದನ್ನು ಸಮರ್ಥವಾಗಿಸಲು ಭಾರತೀಯ ಸಾಂಖ್ಯಿಕ ವ್ಯವಸ್ಥೆಯ ಬಗ್ಗೆ ಸಂಪೂರ್ಣವಾದ ಮತ್ತು ಆಳವಾದ ಅಧ್ಯಯನವನ್ನು 2000ನೇ ಇಸವಿಯಲ್ಲಿ ಕೈಗೊಂಡಿದೆ. ಈ ಆಯೋಗವು ರಾಷ್ಟ್ರದ ಹಾಗೂ ರಾಜ್ಯದ ಸಾಂಖ್ಯಿಕ ವ್ಯವಸ್ಥೆಯ ಸುಧಾರಣೆಗಾಗಿ ಹಲವಾರು ಶಿಫಾರಸ್ಸುಗಳನ್ನು ಪ್ರಕಟಿಸಿತು ಮತ್ತು ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಕಾರ್ಯನೀತಿಯುಕ್ತ ಸಾಂಖ್ಯಿಕ ಯೋಜನೆಗಳನ್ನು ಹೊಂದುವ ಅಗತ್ಯತೆಗೆ ಒತ್ತು ನೀಡಿತು. ಈ ಶಿಫಾರಸ್ಸಿನ ಅನ್ವಯ, ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನಗಳ ಸಚಿವಾಲಯವು ವಿಶ್ವ ಬ್ಯಾಂಕ್ ಸಹಕಾರದೊಂದಿಗೆ 'ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆ'ಯನ್ನು ಆರಂಭಿಸಿತು.

ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯು–ವಿಶೇಷವಾಗಿ ರಾಜ್ಯ ಹಾಗೂ ಉಪ–ರಾಜ್ಯ ಮಟ್ಟಗಳಲ್ಲಿ ನೀತಿ ಯೋಜನೆಯ ಉದ್ದೇಶಗಳಿಗಾಗಿ ವಿಶ್ವಾಸಾರ್ಹವಾದ ಅಧಿಕೃತ ಅಂಕಿ–ಅಂಶಗಳನ್ನು ಸಂಗ್ರಹಿಸಲು, ಸಂಕಲಿಸಲು ಮತ್ತು ಪ್ರಕಟಿಸಲು ತಮ್ಮ ಸಾಂಖ್ಯಿಕ ಸಾಮರ್ಥ್ಯವನ್ನು, ಮೂಲಸೌಕರ್ಯವನ್ನು ಸುಧಾರಿಸಲಿಕ್ಕೆ ಸೂಕ್ತ ತಾಂತ್ರಿಕ ಹಾಗೂ ಆರ್ಥಿಕ ಬೆಂಬಲವನ್ನು ಒದಗಿಸುವುದರಿಂದ 35 ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ರಾಜ್ಯ ಸಾಂಖ್ಯಿಕ ವ್ಯವಸ್ಥೆಗಳನ್ನು ಬಲಪಡಿಸಲು–ಉದ್ದೇಶಿಸಿದೆ. ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯು ಮೂಲತಃ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ 5 ಪ್ರಮುಖ ಬೆಂಬಲದ ಕ್ಷೇತ್ರಗಳನ್ನು ಒಳಗೊಳ್ಳುತ್ತದೆ. ಅವುಗಳೆಂದರೆ– (1)ರಾಜ್ಯಗಳಲ್ಲಿ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಂಕಿ–ಅಂಶಗಳ ಚಟುವಟಿಕೆಗಳ ಸಂಯೋಜನೆ ಮತ್ತು ವ್ಯವಸ್ಥಾಪನೆಯನ್ನು ಸುಧಾರಿಸುವುದು; (2)ಮಾನವ ಸಂಪನ್ಮೂಲ ಅಭಿವೃದ್ಧಿ (3)ಸಾಂಖ್ಯಿಕ ಮೂಲಸೌಕರ್ಯ ಅಭಿವೃದ್ಧಿಪಡಿಸುವುದು (4)ಮಾಹಿತಿ ತಂತ್ರಜ್ಞಾನ (5)ಒಳಗೊಂಡಂತೆ ಭೌತಿಕ ಮೂಲಸೌಕರ್ಯದಲ್ಲಿ ಹೂಡಿಕೆ ಮಾಡುವುದು (6)ಸಾಂಖ್ಯಿಕ ದತ್ತಾಂಶಗಳ ಗುಣಮಟ್ಟದಲ್ಲಿ ಮತ್ತು ಪ್ರಸಾರದಲ್ಲಿ ಸುಧಾರಣೆಯ ಉದ್ದೇಶವನ್ನು ಬೆಂಬಲಿಸುವ ಸಾಂಖ್ಯಿಕ ಕಾರ್ಯಾಚರಣೆಗಳನ್ನು ಸುಧಾರಿಸುವುದು. ಆದಾಗ್ಯೂ, ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯನ್ನು 'ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಗಾಗಿ ಬೆಂಬಲ'ಎಂಬ ಕೇಂದ್ರ ವಲಯ ಯೋಜನೆಯಾಗಿ 2015 ರಲ್ಲಿ ಪುನರ್ ರಚಿಸಲಾಯಿತು.

ಈ ಹಿನ್ನೆಲೆಯಲ್ಲಿ, 4ನೇ ಮತ್ತು 5ನೇ ಡಿಸೆಂಬರ್, 2005ರಂದು ಶಿಮ್ಲಾದಲ್ಲಿ ಜರುಗಿದ 'ಕೇಂದ್ರ ಮತ್ತು ರಾಜ್ಯ ಸಾಂಖ್ಯಿಕ ಸಂಘಟನೆಗಳ 16ನೇ ಸಮ್ಮೇಳನವು' ಭಾರತೀಯ ಸಾಂಖ್ಯಿಕ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ 'ರಾಜ್ಯ ಕಾರ್ಯನೀತಿಯುಕ್ತ ಸಾಂಖ್ಯಿಕ ಯೋಜನೆ'ಯ ನಿರೂಪಣೆಗೆ ಮಾರ್ಗದರ್ಶನವನ್ನು ನೀಡಿತು. ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯು ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯ ಅನುಷ್ಠಾನದಲ್ಲಿ ನಿರ್ಣಾಯಕವಾದ ಮೊದಲ ಹೆಜ್ಜೆಯನ್ನು ಹಾಕಿರುತ್ತದೆ. ರಾಜ್ಯ ಕಾರ್ಯ ತಾಂತ್ರಿಕ ಯೋಜನೆಯು ಇಡೀ ರಾಜ್ಯಾದ್ಯಂತ ರಾಜ್ಯ ಸಾಂಖ್ಯಿಕ ವ್ಯವಸ್ಥೆಯ ಸಾಂಖ್ಯಿಕ ಸಾಮರ್ಥ ಬಲಪಡಿಸಿಕೊಳ್ಳಲು ರಾಜ್ಯಕ್ಕೆ ಕಾರ್ಯನೀತಿಯನ್ನು ಒದಗಿಸಿತು. 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಕನಿಷ್ಠ ಗುಣಮಟ್ಟವನ್ನು ದಕ್ಷವಾಗಿ, ಸಮರ್ಪಕವಾಗಿ ಹಾಗೂ ವ್ಯವಸ್ಥಿತವಾಗಿ ಪೂರೈಸಲು ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯಲ್ಲಿ ಭಾಗವಹಿಸುವ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಸಮರ್ಥವಾಗುವ ಪ್ರಮಾಣವೇ ಈ ಯೋಜನೆಯನ್ನು ಪ್ರಮುಖವಾಗಿ ನೆರವೇರಿಸುವ ಮಾನದಂಡವಾಗಿತ್ತು.

ಕರ್ನಾಟಕ ಸರ್ಕಾರವು ದಿನಾಂಕ: 28–05–2008 ರಂದು ಭಾರತ ಸರ್ಕಾರಕ್ಕೆ ಬರೆದ ಪತ್ರದಲ್ಲಿ ತನ್ನ ಆಸಕ್ತಿಯನ್ನು ವ್ಯಕ್ತಪಡಿಸಿ ತಾನು ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಿತು ಮತ್ತು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಿತು. ಮತ್ತು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯನ್ನು ನಿರೂಪಿಸಲು ಒಪ್ಪಿಕೊಂಡಿರುತ್ತದೆ. ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಯೋಜನಾ ನಿರ್ವಹಣಾ ತಂಡವನ್ನು ರಚಿಸುವುದರೊಂದಿಗೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಪ್ರಕ್ರಿಯೆಯನ್ನು ಆರಂಭಿಸಿರುತ್ತದೆ. ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಅಡಿಯಲ್ಲಿ ನೋಂದಣಿಯಾದ 'ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಏಜೆನ್ಸಿ' ಎಂಬ ಸಂಘದ ಮೂಲಕ 'ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯನ್ನು' ಜಾರಿಗೊಳಿಸಿರುತ್ತದೆ. ಈ ಸಂಘದ ಧ್ಯೇಯೋದ್ದೇಶಗಳೆಂದರೆ–(1) ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯನ್ನು ಜಾರಿಗೊಳಿಸುವುದು (2) ರಾಷ್ಟ್ರೀಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನ್ವಯ ರಾಜ್ಯ ಸಾಂಖ್ಯಿಕ ವ್ಯವಸ್ಥೆಯನ್ನು ಬಲಪಡಿಸಲು ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯನ್ನು ಜಾರಿಗೊಳಿಸುವುದು.

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನವು ಎಷ್ಟು ಪ್ರಮಾಣದಲ್ಲಿ ಪೂರ್ಣಗೊಂಡಿದೆ ಮತ್ತು ಈಡೇರಿದ ಗುರಿಗಳು ಮತ್ತು ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯ 5 ವಿಷಯಗಳ ಅನ್ವಯ ಸಾಧಿಸಿದ ಪ್ರಗತಿಯ ಲೆಕ್ಕಾಚಾರ–ಇವುಗಳನ್ನು ಅಧ್ಯಯನ ಮಾಡುವ ಉದ್ದೇಶದಿಂದ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯನ್ನು ಮೌಲ್ಯಮಾಪನ ಮಾಡಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಉದ್ದೇಶಿಸಿರುತ್ತದೆ. ಹಿಂದಿನ ಮತ್ತು ಈಗಿನ ಚಟುವಟಿಕೆಗಳಿಂದ, ಪ್ರಸಕ್ತ ಮಾಹಿತಿಯಿಂದ ರಾಜ್ಯ ಸರ್ಕಾರದ ಉದ್ಧೃತ ಭಾಗಕ್ಕೆ ಸಹಾಯ ಮಾಡಲು ಮತ್ತು ಆನಂತರದಲ್ಲಿ ಯೋಜನೆಯ ಭವಿಷ್ಯಕ್ಕಾಗಿ ಯೋಜನಾತ್ಮಕ ಸುಸ್ಥಿತಿ, ಹೊಸದೃಷ್ಟಿ ಮತ್ತು ಯೋಜನೆಗೆ ಆಧಾರವಾಗಿ ಬಳಸಿಕೊಳ್ಳಲು ಅನುವಾಗುವಂತೆ ಈ ಮೌಲ್ಯಮಾಪನ ಅಧ್ಯಯನವನ್ನು ವಿನ್ಯಾಸಗೊಳಿಸಲಾಯಿತು.

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಮೂಲಕ ಈ ಯೋಜನೆಯ ಅಡಿಯಲ್ಲಿ ಅನುಷ್ಠಾನಗೊಂಡ ಕಾರ್ಯಕ್ರಮಗಳ ಫಲಿತಾಂಶ, ಪರಿಣಾಮ ಹಾಗೂ ಪ್ರಭಾವಗಳ ಅಧ್ಯಯನ ಹಾಗೂ ವಿಶ್ಲೇಷಣೆ ಮಾಡಲಾಗಿದೆ. 'ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಏಜೆನ್ಸಿ', 'ರಾಜ್ಯ ಆದಾಯ, ಉದ್ದಿಮೆಗಳ ವ್ಯವಸ್ಥೆ ಅಭಿವೃದ್ಧಿ ಏಜೆನ್ಸಿ', 'ರಾಜ್ಯ ಆದಾಯ, ಉದ್ದಿಮೆಗಳು ಮತ್ತು ಬೆಲೆಗಳ ವಿಭಾಗ', 'ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ನಿರ್ದೇಶನಾಲಯ', 'ಕೃಷಿ ಸಾಂಖ್ಯಿಕ ವಿಭಾಗ', 'ಬೆಳೆ ವಿಮಾ ವಿಭಾಗ', 'ನ್ಯಾಶನಲ್ ಇನ್‌ಫಾರ್ಮೇಟಿಕ್ಸ್ ಸೆಂಟರ್'– ಇವುಗಳಿಂದ ಮತ್ತು ಮಂಡ್ಯ ಜಿಲ್ಲೆಯಲ್ಲಿ ಸಮೀಕ್ಷಾ ಸಾಧ'ನಗಳ ಪ್ರಾಯೋಗಿಕ ಪರೀಕ್ಷೆಗಳಿಂದ ಪಡೆದ ದತ್ತಾಂಶಗಳನ್ನು ಮತ್ತು ಮಾಹಿತಿಯನ್ನು ಈ ಮೌಲ್ಯಮಾಪನ ಅಧ್ಯಯನವು ಆಧರಿಸಿದೆ. ಅಲ್ಲದೆ, ಔಪಚಾರಿಕ ಸಮೀಕ್ಷೆಯನ್ನು ಮಂಡ್ಯ, ಯಾದಗಿರಿ, ಬೆಳಗಾಂ, ಶಿವಮೊಗ್ಗ ಮತ್ತು ಚಿತ್ರದುರ್ಗ–ಈ 5 ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿರುತ್ತದೆ.

ಜಿಲ್ಲಾ ಸಾಂಖ್ಯಿಕ ಕಛೇರಿಗಳೊಂದಿಗೆ ಕ್ಷೇತ್ರ ಸಮೀಕ್ಷೆಯ ಅವಧಿಯಲ್ಲಿ ಮಾದರಿಯ ವಿವರಗಳನ್ನು ಮತ್ತು ತರಬೇತಿ ಪಡೆದವರ ವಿವರಗಳನ್ನು ಸಂಗ್ರಹಿಸಲಾಯಿತು ಮತ್ತು ಒದಗಿಸಲಾದ ವಿವರಗಳನ್ನು ಆಧರಿಸಿ ತರಬೇತಿ ಪಡೆದವರ ಆಯಾಯ ತಾಲೂಕುಗಳಿಗೆ/ಸ್ಥಳಗಳಿಗೆ ಭೇಟಿ ನೀಡಲಾಯಿತು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಕೈಗೊಂಡ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ 37 ತಾಲೂಕುಗಳನ್ನು ಒಳಗೊಂಡು 5 ಜಿಲ್ಲಾ ಸಾಂಖ್ಯಿಕ ಕಛೇರಿಗಳಲ್ಲಿ ಲಭ್ಯವಿರುವ ಎಲ್ಲ ಕ್ಷೇತ್ರಾಧಿಕಾರಿಗಳನ್ನು/ಅಧಿಕಾರಿಗಳನ್ನು ಒಳಗೊಂಡು ಮೌಲ್ಯಮಾಪನ ಅಧ್ಯಯನದ ಭಾಗವಾಗಿ ಒಟ್ಟು 68 ತರಬೇತಿ ಪಡೆದವರನ್ನು ಸಮೀಕ್ಷೆ ಮಾಡಲಾಯಿತು. ಪ್ರಾಥಮಿಕ ಮತ್ತು ದ್ವಿತೀಯಕ ಮೂಲಗಳಿಂದ ಪಡೆದ ಯೋಜನಾ ಸಂಬಂಧಿತ ದತ್ತಾಂಶಗಳನ್ನು ನಿರ್ಣಯಗಳು ಮತ್ತು ಶಿಫಾರಸ್ಸುಗಳನ್ನು ಪಡೆಯಲು ಪರಿಣಾತ್ಮಕ ಹಾಗೂ ಗುಣಾತ್ಮಕ ಎರಡೂ ವಿಧಾನಗಳ ಮೂಲಕ ವಿಮರ್ಶಿಸಲಾಯಿತು. ಈ ಯೋಜನೆಯ ಫಲಿತಾಂಶವು– ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಸಾಂಖ್ಯಿಕ ಅಧಿನಿಯಮ, 2008ರ ಸಂಗ್ರಹಣೆಯ ಅನುಷ್ಠಾನದಲ್ಲಿ ಯಶಸ್ವಿಯಾದ ವ್ಯಾಪ್ತಿಗೆ, ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಪೂರ್ಣಗೊಂಡ ಮತ್ತು ಗುರಿಗಳು ಈಡೇರಿದ ವ್ಯಾಪ್ತಿಗೆ ಹಾಗೂ 2013 ರಲ್ಲಿ ಕೈಗೊಂಡ ಡೆಲೊಟ್ಟೆ ಅಧ್ಯಯನದಿಂದ ಸೂಚಿಸಲ್ಪಟ್ಟ ಶಿಫಾರಸ್ಸುಗಳ ಮೇಲೆ ಕ್ರಮ ಕೈಗೊಂಡಿದೆಯೆ? ಎಂಬುದನ್ನು ನಿರ್ಧರಣೆ ಮಾಡುವುದು–ಇವುಗಳನ್ನು ಈ ಯೋಜನೆಯ ಫಲಿತಾಂಶವು ಒಳಗೊಂಡಿರುತ್ತದೆ. ಈ ಯೋಜನೆಗಾಗಿ ಅದರ ಆರಂಭದ ವರ್ಷ 2009–10 ರಿಂದ 2013–14 ರ ವರೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಒದಗಿಸಲಾದ ಆರ್ಥಿಕ ನೆರವು, ನಿಧಿಗಳ ವಿಕೇಂದ್ರೀಕರಣ ಪ್ರಕ್ರಿಯೆ, ನಿಧಿಗಳ ಬಳಕೆ ಇತ್ಯಾದಿಗಳನ್ನು ಮೌಲ್ಯಮಾಪನ ಮಾಡುವುದು ಅದರ ಉದ್ದೇಶವಾಗಿತ್ತು. ಈ ಯೋಜನೆಯ ಫಲಿತಾಂಶವನ್ನು ಅಳೆಯುವಾಗ, ಆರಂಭಿಕ ಮತ್ತು ಪರಿಷ್ಕೃತ ಹಣಕಾಸು ಮತ್ತು ಭೌತಿಕ ಗುರಿಗಳು ಮತ್ತು ಕರ್ನಾಟಕದಲ್ಲಿ ಸಾಂಖ್ಯಿಕ ಮೂಲಸೌಕರ್ಯ ಅಭಿವೃದ್ಧಿಯ ಮೇಲೆ ಅವುಗಳ ಪರಿಣಾಮಗಳಿಗೆ ಸಂಬಂಧಿಸಿದ ಅನುಷ್ಠಾನ ಸ್ಥಿತಿಯನ್ನು ಸಹ ಮುಖ್ಯವಾಗಿ ಪರೀಕ್ಷಿಸಲಾಯಿತು.

ಈ ಯೋಜನೆಯ ಫಲಿತಾಂಶವನ್ನು ಹಂತಗಳ ಶ್ರೇಣಿಗಳ ಮೂಲಕ ನಿರ್ಧರಣೆ ಮಾಡಲಾಯಿತು ಮತ್ತು ಪ್ರತಿಯೊಂದೂ ಹಂತವು ಕಾರ್ಯಗಳ ಸಮೂಹವನ್ನು ಒಳಗೊಂಡಿತು. ಈ ಹಂತಗಳು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನದ ಅವಧಿಯಲ್ಲಿನ ಮತ್ತು ಆನಂತರದ ಕಾಲಾವಧಿಯನ್ನು ಸೂಚಿಸುತ್ತವೆ. ಯೋಜನೆಯ ಬಗ್ಗೆ ಬರೀ ಜ್ಞಾನವನ್ನಷ್ಟೇ ಪಡೆಯದೇ, ಅದರ ಬಗ್ಗೆ ಸಮಗ್ರವಾಗಿ ನಿರ್ಧಾರಣೆ

ಮಾಡುವುದೇ ಇದರ ಉದ್ದೇಶವಾಗಿದೆ. ಈ ಯೋಜನೆಯ ಫಲಿತಾಂಶದ ಅಡಿಯಲ್ಲಿ, 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳನ್ನು ಸಂಪೂರ್ಣವಾಗಿ ಪರಿಶೀಲಿಸಲಾಯಿತು ಮತ್ತು ಆ 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳ ಅನ್ವಯ ಕ್ರಮ ಕೈಗೊಳ್ಳಲಾಯಿತು. ಇದರೊಂದಿಗೆ ಸಾರ್ವಜನಿಕ ಬಳಕೆಗಾಗಿ ಪಬ್ಲಿಕ್ ಪೋರ್ಟಲ್‌ನ್ನು ಒದಗಿಸಲಾಗಿದೆಯೆ ಮತ್ತು ವೆಬ್ ಅಪ್ಲಿಕೇಶನ್‌ಗಳಿಂದ ಮಾಹಿತಿ ಪಡೆಯಲು ಅದನ್ನು ಅಭಿವೃದ್ಧಿ ಪಡಿಸಲಾಗಿದೆಯೆ ಎಂಬುದನ್ನು ಸಹ ನಿರ್ಧಾರಣೆ ಮಾಡಲಾಯಿತು.

ಒದಗಿಸಿದ ಮೂಲಸೌಕರ್ಯದ ಮಟ್ಟವನ್ನು ನಿರ್ಧಾರಣೆಮಾಡಲು ಮತ್ತು ಆ ಮೂಲಸೌಕರ್ಯದ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಹಾಗೂ ಸಂಬಂಧಿಸಿದ ಇಲಾಖೆಗಳ ಸಿಬ್ಬಂದಿ/ ಅಧಿಕಾರಿಗಳಿಗಾಗಿ ಕೈಗೊಂಡ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವನ್ನು ಅಳೆಯಲು ಪ್ರಾಥಮಿಕ ಸಮೀಕ್ಷೆಗಳು, ಮಧ್ಯಸ್ಥಗಾರರ ಸಲಹೆ ಹಾಗೂ ದ್ವಿತೀಯಕ ಮಾಹಿತಿ–ಇವುಗಳ ಮೂಲಕ ಈ ಯೋಜನಾ ಪರಿಣಾಮವನ್ನು ವಿಶ್ಲೇಷಿಸಲಾಯಿತು. ನಿರ್ಮಿಸಲಾದ ಅಂತಹ ಸಾಂಖ್ಯಿಕ ಮೂಲಸೌಕರ್ಯದ ಪ್ರಸ್ತುತ ಸ್ಥಿತಿಯನ್ನು ಮತ್ತು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ನಿಧಿಗಳ ಅಡಿಯಲ್ಲಿ ಕೈಗೊಂಡ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವನ್ನು ವಿಮರ್ಶಿಸುವುದು ಇಂತಹ ಪ್ರಾಥಮಿಕ ಸಮೀಕ್ಷೆಗಳ ಉದ್ದೇಶವಾಗಿದ್ದವು. ಆ ಪ್ರಾಥಮಿಕ ಸಮೀಕ್ಷೆಯ ಭಾಗವಾಗಿದ್ದ ಪ್ರತಿಕ್ರಿಯೆದಾರರ ದಾಖಲೆ ಸೂಚಿಗಳನ್ನು ಸೆಕ್ಷನ್ 8.1.2–'ಪ್ರಾಥಮಿಕ ಸಮೀಕ್ಷೆಗಳಿಗಾಗಿ ಪ್ರತಿಕ್ರಿಯೆದಾರರ ಸಂಕ್ಷಿಪ್ತ ವಿವರಗಳು' ಇದರಲ್ಲಿ ಚರ್ಚಿಸಲಾಗುತ್ತದೆ. ಈ ಯೋಜನೆಯ ಪರಿಣಾಮ ವಿಶ್ಲೇಷಣೆಯ ಅಡಿಯಲ್ಲಿ ಪರೀಕ್ಷಿಸಿದ ದಾಖಲೆ ಸೂಚಕಗಳು ಹೀಗಿವೆ: (1)ದತ್ತಾಂಶ ಸಂಗ್ರಹಕ್ಕಾಗಿ ಕ್ಷೇತ್ರಾಧಿಕಾರಿಗಳಿಗೆ ಒದಗಿಸಿದ ಮೂಲ ಸೌಕರ್ಯಗಳ (ಉಪಕರಣಗಳ) ಮಟ್ಟವನ್ನು ನಿರ್ಧಾರಣೆ ಮಾಡುವುದು; (2) ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಸಿಬ್ಬಂದಿ/ಅಧಿಕಾರಿಗಳಿಗಾಗಿ ಕೈಗೊಂಡ ಪ್ರವೇಶ/ಪುನಶ್ಚೇತನ/ಅರಿವು ತರಬೇತಿಗಳಿಗಾಗಿ ವ್ಯಾಪ್ತಿಯನ್ನು ನಿರ್ಧಾರಣೆ ಮಾಡುವುದು ಮತ್ತು (3) ಈ ಯೋಜನೆಯ ಅಡಿಯಲ್ಲಿ ಅಭಿವೃದ್ಧಿಪಡಿಸಿದ ವೆಬ್ ಅಪ್ಲಿಕೇಶನ್‌ಗಳ ಸಂಖ್ಯೆಯನ್ನು ನಿರ್ಧಾರಣೆ ಮಾಡುವುದು.

**ಮೌಲ್ಯಮಾಪನ ಆಧಾರಿಸಿದ ಶೋಧನೆಗಳ ಸಾರಾಂಶವನ್ನು ಈ ಕೆಳಕಂಡಂತೆ ನಿವೇದಿಸಲಾಗುತ್ತದೆ:**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರೂಪಿಸಿದ ಕಾರ್ಯನೀತಿ ಗುರಿಗಳನ್ನು ಮತ್ತು ಕಾರ್ಯನೀತಿಗಳನ್ನು ಈಡೇರಿಸಲಾಗಿದೆ ಮತ್ತು ಅನುಷ್ಠಾನಗೊಳಿಸಲಾಗಿದೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಮಂಜೂರು ಮಾಡಿದ ಒಟ್ಟು ಮೊತ್ತದ ಸಮಗ್ರ ನಿಧಿ ಬಳಕೆ ಅನುಪಾತವು ಶೇ.90.53 ಆಗಿರುತ್ತದೆ, ಅದರಲ್ಲಿ ಕರ್ನಾಟಕ ಸರ್ಕಾರಕ್ಕಾಗಿ ನಿಧಿ ಬಳಕೆ ಅನುಪಾತವು ಶೇ.87.66 ಆಗಿದೆ.
- ಸಾಂಖ್ಯಿಕ ದತ್ತಾಂಶದ ಗುಣಮಟ್ಟ ಮತ್ತು ಪ್ರಸಾರದಲ್ಲಿ ಸುಧಾರಣೆ ತರುವ ಉದ್ದೇಶಕ್ಕೆ ಪೂರಕವಾಗಿರುವ ಸಾಂಖ್ಯಿಕ ಕಾರ್ಯಾಚರಣೆಗಳನ್ನು ಸುಧಾರಿಸುವುದಕ್ಕಾಗಿ ಹಲವಾರು ವಿಚಾರ ಸಂಕಿರಣಗಳನ್ನು, ಕಾರ್ಯಾಗಾರಗಳನ್ನು ಹಾಗೂ ಸಭೆಗಳನ್ನು ಇಲಾಖೆಗಳ ವಿವಿಧ ಮುಖ್ಯಸ್ಥರೊಂದಿಗೆ ಆರಂಭದಿಂದಲೂ ನಡೆಸಲಾಯಿತು.
- ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ನ್ಯಾಶನಲ್ ಇನ್‌ಫಾರ್ಮೇಟಿಕ್ಸ್ ಸೆಂಟರ್ ನೆರವಿನೊಂದಿಗೆ 7 ವೆಬ್ ಅಪ್ಲಿಕೇಶನ್ ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಗಿರುತ್ತದೆ. ಅವುಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗಾಗಿ ಉಪಯೋಗಿಸುತ್ತಾರೆ. ಬೆಳೆ ಅಂದಾಜು ಸಮೀಕ್ಷೆ,

ಬೆಳೆ ಕ್ಷೇತ್ರ ಗಣತಿ, ಗ್ರಾಹಕ ಬೆಲೆ ಸೂಚ್ಯಂಕ, ಸಗಟು ದರ ಸೂಚ್ಯಂಕ ಮತ್ತು ಔದ್ಯಮಿಕ ಉತ್ಪಾದನೆಯ ಸೂಚ್ಯಂಕ ಇವುಗಳಿಗೆ ಸಂಬಂಧಿಸಿದ ವೆಬ್ ಅಪ್ಲಿಕೇಶನ್‌ಗಳನ್ನು 2010–11ರಲ್ಲಿ ಕಾರ್ಯಾಚರಣೆಗಾಗಿ ಸಿದ್ಧಪಡಿಸಲಾಗಿರುತ್ತದೆ.

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ವೆಬ್ ಪಬ್ಲಿಕ್ ಪೋರ್ಟಲ್‌ನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸಾಂಖ್ಯಿಕದತ್ತಾಂಶ ವರದಿಯನ್ನು ಪಡೆಯಲು ಸಾರ್ವಜನಿಕರಿಗೆ ಅವು ಲಭ್ಯವಿದೆ. ಸಾಂಖ್ಯಿಕ ಮೂಲಸೌಕರ್ಯವನ್ನು ಸುಧಾರಿಸುವ ಉದ್ದೇಶದಿಂದ, ವೆಬ್ ಪೋರ್ಟಲ್ ನಿರ್ಮಾಣವು ತಳಮಟ್ಟಗಳಲ್ಲಿ ದತ್ತಾಂಶ ಸಂಗ್ರಹಿಸುವಲ್ಲಿ ನೆರವಾಗಿದೆ ಮತ್ತು ಕೇಂದ್ರೀಕೃತ ವೆಬ್ ಪೋರ್ಟಲ್‌ಗೆ ದತ್ತಾಂಶವನ್ನು ರವಾನಿಸಲು ಅನುವಾಗಿದೆ ಮತ್ತು ಅವು ದತ್ತಾಂಶದ ಸಂಗ್ರಹಣೆ, ಪುನಸ್ಸಂಪಾದನೆ ಮತ್ತು ವಿಶ್ಲೇಷಣೆಯನ್ನು ಬಹು ಸುಲಭಗೊಳಿಸಿದೆ.
- ರಾಜ್ಯದಲ್ಲಿ ಸಾಂಖ್ಯಿಕ ಮೂಲಸೌಕರ್ಯವನ್ನು ಸುಧಾರಿಸುವಲ್ಲಿ ಮಹತ್ವದ ಸಾಧನೆಗಳಾಗಿವೆ. ಸಂಬಂಧಿಸಿದ ಇಲಾಖೆಗಳಿಂದ, ಸಮೀಕ್ಷೆಗಳನ್ನು ಕೈಗೊಳ್ಳುವುದಕ್ಕಾಗಿ ಪ್ರತಿಯೊಂದೂ ಗ್ರಾಮ ಪಂಚಾಯಿತಿಗೆ ಒದಗಿಸುವುದಕ್ಕೆ 4828 ಮಿನಿ ಲ್ಯಾಪ್‌ಟಾಪ್‌ಗಳನ್ನು/10 ನೆಟ್‌ಬುಕ್‌ಗಳನ್ನು/ಹಸ್ತಚಾಲಿತ ಉಪಕರಣಗಳನ್ನು ಖರೀದಿಸಲು ಯೋಜಿಸಲಾಯಿತು. ಮಿನಿ ಲ್ಯಾಪ್‌ಟಾಪ್‌ಗಳಿಗಾಗಿ ವಿತರಿಸಿದ ಆಯವ್ಯಯ 724.2 ಲಕ್ಷಗಳಷ್ಟು ಆಗಿತ್ತು. ಸದರಿ ಇಲಾಖೆಯಿಂದ ಒದಗಿಸಲಾದ ಮಾಹಿತಿಯ ಅನ್ವಯ ಇಂದಿನವರೆಗೆ ರೂ.786.708 ಲಕ್ಷ ಮೌಲ್ಯದ 4153 ಮಿನಿ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲಾಗಿದೆ.
- 425 ಡೆಸ್ಕ್‌ಟಾಪ್‌ಗಳನ್ನು ಸಹ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಒಳಗೊಂಡು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳು, ತಾಲ್ಲೂಕು ಕಛೇರಿಗಳು, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಿಗೆ ಒದಗಿಸಲಾಗಿದೆ. ಲ್ಯಾಪ್‌ಟಾಪ್‌ಗಳು, ಪ್ರಿಂಟರ್‌ಗಳು ಮತ್ತು ಪ್ರೊಜೆಕ್ಟರ್‌ಗಳನ್ನು ಸಹ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಕಛೇರಿಗಳಿಗೆ ಒದಗಿಸಲಾಗಿದೆ.
- ಕ್ಷೇತ್ರ ಸಿಬ್ಬಂದಿಗೆ ಒದಗಿಸಲಾದ ಮಿನಿ–ಲ್ಯಾಪ್‌ಟಾಪ್‌ಗಳ ಕಾರ್ಯದ ಸದ್ಯದ ಸ್ಥಿತಿಯನ್ನು ಬ್ಯಾಟರಿ, ಕೀಬೋರ್ಡ್ ಮತ್ತು ಬ್ಯಾಟರಿಯಂತಹ ಪ್ರಮುಖ ಉಪಕರಣಗಳಿಗಾಗಿ ಮೌಲ್ಯಮಾಪನ ಮಾಡಲಾಯಿತು. ಮೌಲ್ಯಮಾಪನ ಮಾಡಿದ ಶೇ. 56–28 ರಷ್ಟು ಮಿನಿ ಲ್ಯಾಪ್‌ಟಾಪ್‌ಗಳ ಬ್ಯಾಟರಿಗಳು ಉತ್ತಮ ಬ್ಯಾಕ್ ಅಪ್‌ನಿಂದ ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿದ್ದವು. ಶೇ.86.85 ರಷ್ಟು ಮಿನಿ ಲ್ಯಾಪ್‌ಟಾಪ್ ಕೀಬೋರ್ಡ್‌ಗಳು ಅತ್ಯುತ್ತಮವಾಗಿ/ದಕ್ಷವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಮೌಲ್ಯಮಾಪನ ಮಾಡಿದ 87.23 ರಷ್ಟು ಲ್ಯಾಪ್‌ಟಾಪ್‌ಗಳ ಡಿಸ್‌ಪ್ಲೇ ಸ್ಕ್ರೀನ್‌ಗಳು ಅತ್ಯುತ್ತಮವಾಗಿ/ದಕ್ಷವಾಗಿ ಕಾರ್ಯನಿರ್ವಹಿಸುತ್ತಿದ್ದವು.
- ಮಿನಿ ಲ್ಯಾಪ್‌ಟಾಪ್‌ಗಳನ್ನು ಅವುಗಳ ಉತ್ತಮ ಕಾರ್ಯಸ್ಥಿತಿಗಾಗಿ ಮತ್ತು ಉಪಯುಕ್ತತೆಗಾಗಿ ಮೌಲ್ಯಮಾಪನ ಮಾಡಲಾಯಿತು. ಮಾಹಿತಿಗಳನ್ನು ಸಂಗ್ರಹಿಸಲು ಕ್ಷೇತ್ರ ಸಿಬ್ಬಂದಿಯಿಂದ ತಾಲೂಕು ಕಛೇರಿಗಳಿಗೆ/ ಸಾಂಖ್ಯಿಕ ನಿರೀಕ್ಷಕರಿಗೆ ಬಳಕೆಗಾಗಿ ಒದಗಿಸಿದ ಮಿನಿ ಲ್ಯಾಪ್ ಟಾಪ್‌ಗಳಲ್ಲಿ ಶೇ.67.77 ರಷ್ಟು ಅತ್ಯುತ್ತಮವಾಗಿರುವುದು ಕಂಡುಬಂದಿತು.
- ಸ್ವಯಂ ಸೇವಕರಾಗಿ ಕೆಲಸ ಮಾಡಿದ ಶೇ.67.39 ರಷ್ಟು ಪ್ರತಿಕ್ರಿಯೆದಾರರು–ಕೈಗೊಂಡ ತರಬೇತಿ ಕಾರ್ಯಕ್ರಮಗಳ ಪರಿಣಾಮ ಮಧ್ಯಮ ದರ್ಜೆಯದಾಗಿತ್ತು ಎಂದು ಅಭಿಪ್ರಾಯಪಟ್ಟರು. ಶೇ.59.46 ರಷ್ಟು ಪ್ರತಿಪಾದಕರು–ಕೈಗೊಂಡ ತರಬೇತಿ ಕಾರ್ಯಕ್ರಮಗಳ ಪರಿಣಾಮವು ಅತ್ಯುತ್ತಮವಾಗಿತ್ತು ಎಂದು ಅಭಿಪ್ರಾಯಪಟ್ಟರು ಹಾಗೂ ಶೇ.50 ರಷ್ಟು

ಪ್ರತಿಕ್ರಿಯೆದಾರರು–ಆ ತರಬೇತಿ ಕಾರ್ಯಕ್ರಮಗಳ ಪರಿಣಾಮವು ಮಧ್ಯಮ ದರ್ಜೆಯದಾಗಿತ್ತು ಎಂದು ಅಭಿಪ್ರಾಯಪಟ್ಟರು.

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ, ಹಾಸನ, ಮಂಗಳೂರು, ಮೈಸೂರು, ಬೆಂಗಳೂರು, ಚಿಕ್ಕಮಗಳೂರು ಹಾಗೂ ರಾಯಚೂರುಗಳಲ್ಲಿ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿ ಕಟ್ಟಡಗಳ ಭೌತಿಕ ಮೂಲ ಸೌಕರ್ಯವನ್ನು ಸುಧಾರಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ನಿವೇಶನಗಳ ಖರೀದಿ, ಕಛೇರಿ ಕಟ್ಟಡದ ನಿರ್ಮಾಣ ಮತ್ತು ಸದ್ಯದ ಸೌಲಭ್ಯಗಳ ನವೀಕರಣ– ಇವುಗಳು ಮುಖ್ಯ ಚಟುವಟಿಕೆಗಳಲ್ಲಿ ಒಳಗೊಳ್ಳುತ್ತವೆ.
- ವಿಶ್ವಾಸಾರ್ಹ, ನಂಬಲರ್ಹ ಮತ್ತುಸಕಾಲಿಕ ಸಾಂಖ್ಯಿಕ ಮೂಲಸೌಕರ್ಯ, ದತ್ತಾಂಶ ಮತ್ತು ದಾಖಲೆ ಸೂಚಕಗಳನ್ನು ಅಭಿವೃದ್ಧಿಪಡಿಸಲು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಆರ್ಥಿಕ ನೆರವು ನೀಡಲ್ಪಟ್ಟ ಇಲಾಖೆಗಳ ಕಾರ್ಯ ನೆರವೇರಿಸಿರುವುದನ್ನು ಮೌಲ್ಯಮಾಪನ ಮಾಡಲಾಯಿತು. ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆಯು ಶೇ.96.87 ರಷ್ಟು ಅತ್ಯಧಿಕ ನಿಧಿ ಬಳಕೆ ಅನುಪಾತವನ್ನು ಹೊಂದಿದೆ ಮತ್ತು 'ಕಾರ್ಮಿಕ ಹಾಗೂ ಉದ್ಯೋಗ ಮತ್ತು ತರಬೇತಿ ಇಲಾಖೆ'ಯು ಸಾಂಖ್ಯಿಕ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಗಿತ್ತು ಮತ್ತು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಗುರಿಗಳ ಅನ್ವಯ ಆನ್‌ಲೈನ್ ವೆಬ್ ಅಪ್ಲಿಕೇಶನ್‌ಗಳನ್ನು ಅನುಷ್ಠಾನಗೊಳಿಸಿತು–ಎಂದು ಮೂರೂ ಇಲಾಖೆಗಳಿಂದ ಕಂಡುಬಂದಿತು.

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಕರ್ನಾಟಕದಲ್ಲಿ ಅನುಷ್ಠಾನಗೊಳ್ಳಲಿರುವ ಪ್ರಥಮ ಯೋಜನೆಯಾಗಿದೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯು ವಿಶ್ವಾಸಾರ್ಹ ಮತ್ತು ಸಕಾಲಿಕ ಕಛೇರಿ ಅಂಕಿ ಅಂಶಗಳನ್ನು ಸಂಗ್ರಹಿಸುವುದಕ್ಕಾಗಿ, ಒಟ್ಟುಗೂಡಿಸುವುದಕ್ಕಾಗಿ ಹಾಗೂ ಪ್ರಸಾರ ಮಾಡುವುದಕ್ಕಾಗಿ ಸಾಂಖ್ಯಿಕ ಸಾಮರ್ಥ್ಯ ಮತ್ತು ಮೂಲ ಸೌಕರ್ಯವನ್ನು ಸುಧಾರಿಸಲು ಧ್ಯೇಯದೊಂದಿಗೆ ರಾಜ್ಯ ಸಾಂಖ್ಯಿಕ ವ್ಯವಸ್ಥೆಯನ್ನು ಬಲಪಡಿಸಲು ಉದ್ದೇಶಿಸಿದೆ. ಸರ್ಕಾರವು ಸಂಪೂರ್ಣ, ನಿಖರ, ಸಕಾಲಿಕ ಹಾಗೂ ವಿಶ್ವಾಸಾರ್ಹ ದತ್ತಾಂಶ ಸಂಗ್ರಹವನ್ನು ನಿರ್ಮಿಸುವುದರಿಂದ ಅತ್ಯುತ್ತಮವಾದ ಆರ್ಥಿಕ ಅಭಿವೃದ್ಧಿ ನೀತಿಗಳನ್ನು ರೂಪಿಸಲು ಈ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಮುಂದುವರಿಕೆಯಿಂದ ಸಾಧ್ಯವಾಗುತ್ತದೆ.

**ಈ ಮೌಲ್ಯಮಾಪನದಿಂದ ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಲಾಗಿದೆ:**

- ಅಭಿವೃದ್ಧಿಪಡಿಸಿದ ಸಾಂಖ್ಯಿಕ ಮೂಲಸೌಕರ್ಯದ ನಿರ್ವಹಣೆ ಮತ್ತು ತಾಂತ್ರಿಕ ಮೇಲ್ದರ್ಜೆಯಂತಹ ಎರಡು ಪ್ರಮುಖ್ಯ ಮೂಲಾಂಶಗಳನ್ನು ಹೆಚ್ಚಿಸುವ ಅಗತ್ಯವಿದೆ. ಮೊಬೈಲ್–ಚಾಲಿತ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸುವುದರಿಂದ ಹಾಗೂ ದತ್ತಾಂಶಗಳ ಸಂಗ್ರಹಣೆಗೆ ಟ್ಯಾಬ್ಲೆಟ್‌ಗಳನ್ನು ಉಪಯೋಗಿಸುವುದರಿಂದ ಬಳಕೆದಾರರ ಸ್ನೇಹಿ ಉತ್ತಮವಾದ ದತ್ತಾಂಶ ವ್ಯಾಖ್ಯಾನ, ಸಲ್ಲಿಕೆ ಹಾಗೂ ವರದಿಗಾರಿಕೆ ಸಾಧ್ಯವಾಗುತ್ತದೆ.
- ಸರ್ಕಾರದ ಎಲ್ಲ ಸಂಬಂಧಿಸಿದ ಇಲಾಖೆಗಳಲ್ಲಿ ದತ್ತಾಂಶ ತಯಾರಕರು, ಬಳಕೆದಾರರು ಮತ್ತು ಒದಗಿಸುವವರ ನಡುವೆ ಅತ್ಯುತ್ತಮ ಸಂಯೋಜನೆ, ಸಹಯೋಗ, ನೆಟ್‌ವರ್ಕಿಂಗ್ ಮತ್ತು ಮಾಹಿತಿ ಹಂಚಿಕೆಯ ಮೂಲಕ ಆನ್‌ಲೈನ್ ದತ್ತಾಂಶ ಸಂಗ್ರಹಣಾ ವ್ಯವಸ್ಥೆಯನ್ನು ಬಲಪಡಿಸಲು ಶಿಫಾರಸ್ಸು ಮಾಡಲಾಗುತ್ತದೆ.

- ಜನವರಿ 2013 ರ ತಮ್ಮ ವರದಿಯಲ್ಲಿ ಮೆ॥ ಡೆಲೊಟ್ಟೆ ರವರಿಂದ ಪ್ರಸ್ತಾಪಿಸಲ್ಪಟ್ಟ ಮಧ್ಯಂತರ ಶಿಫಾರಸ್ಸುಗಳು ರಾಜ್ಯದಲ್ಲಿ ಸಾಂಖ್ಯಿಕ ವ್ಯವಸ್ಥೆಯನ್ನು ವರ್ಧಿಸುವ ಯಶಸ್ಸಿಗಾಗಿ ಜಟಿಲವಾಗಿದೆ. ಆದ್ದರಿಂದ ಬಿಡುಗಡೆಯಾದ ನಿಧಿಗಳ ರೂಪದಲ್ಲಿನ ಯೋಜನೆಯ ಒಳಗೊಳ್ಳುವಿಕೆಯನ್ನು ಈ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಮುಂದಿನ ಹಂತದಲ್ಲಿ ಹೆಚ್ಚಿಸುವ ಅಗತ್ಯವಿದೆ.
- ತರಬೇತಿ ಅಭ್ಯರ್ಥಿಗಳ ದಕ್ಷತೆ ಮತ್ತು ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಮಟ್ಟದ ತರಬೇತಿ ಅಭ್ಯರ್ಥಿಗಳನ್ನು ಪ್ರೇರೇಪಿಸುವ ಅಗತ್ಯವಿದೆ. ಅವರ ಕಲಿಕೆಗೆ ಮತ್ತು ಅಭಿವೃದ್ಧಿಗೆ ಅನುಕೂಲವಾಗುವ ಪ್ರಮಾಣಪತ್ರ ಆಧಾರಿತ ತರಬೇತಿಗಳನ್ನು ನಡೆಸುವುದರಿಂದ ಅವರನ್ನು ಪ್ರೇರೇಪಿಸಲು ಸಾಧ್ಯವಾಗುತ್ತದೆ.
- ಸಮಾಲೋಚಕರ ಸೇವೆಯನ್ನು ಹಿಂಪಡೆಯುವುದಕ್ಕಿಂತ ಮೊದಲು ಅಲ್ಲಿ ಕೈಜೋಡಿಸುವಿಕೆ/ಸಾಮರ್ಥ್ಯ ನಿರ್ಮಾಣವಿಲ್ಲದ್ದರಿಂದ ಮುಕ್ತ, ದೃಢವಾದ ಹಾಗೂ ಪರಿಣಾಮಕಾರಿ ದತ್ತಾಂಶ ಸಂಗ್ರಹಿಸುವುದರಿಂದ ಪರಿಣಾಮಕಾರಿ ಮಾಹಿತಿ ಮತ್ತು ಸಂಹವನ ತಂತ್ರಜ್ಞಾನ ಅನುಷ್ಠಾನದಲ್ಲಿ ಆಂತರಿಕ ಸಿಬ್ಬಂದಿ ಹಾಗೂ ಸಾಂಖ್ಯಿಕ ಅಧಿಕಾರಿಗಳು ತರಬೇತಿ ಹೊಂದುವ ಅಗತ್ಯವಿದೆ.
- ಅಡಕಾಂಶ, ವಿನ್ಯಾಸ, ಕಾರ್ಯದಕ್ಷತೆ ಮತ್ತು ನೆರವುಗಳಿಗೆ ಸುಧಾರಣೆಗಳನ್ನು ಅನುಷ್ಠಾನಗೊಳಿಸುವುದರಿಂದ ಪೋರ್ಟಲ್‌ನ ದೃಶ್ಯತೆ, ಉಪಯುಕ್ತತೆ ಹಾಗೂ ಪ್ರವೇಶಗಳ ಗುಣವರ್ಧನೆ ಮಾಡುವುದು.
- ಮಾಸಿಕ ಪರಿಷ್ಕರಣೆಗಳನ್ನು, ವಿಮರ್ಶಾತ್ಮಕ ಸಾಮಾಜಿಕ–ಆರ್ಥಿಕ ದಾಖಲೆ ಸೂಚಕಗಳ ಕುರಿತು ಬುಲ್ಲೆಟಿನ್‌ಗಳನ್ನು ಹೊಂದುವುದರಿಂದ ಈ ಪೋರ್ಟಲ್‌ನ ದಕ್ಷತೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ಅಗತ್ಯವಿದೆ.
- ಅತ್ಯುತ್ತಮ ದತ್ತಾಂಶ ಸಲ್ಲಿಕೆಗಾಗಿ ಅಕಾಡೆಮಿಗಳು, ತಜ್ಞರ–ತಂಡ (ವಿಚಾರ ವೇದಿಕೆಗಳು), ಔದ್ಯಮಿಕ ಪ್ರತಿನಿಧಿಗಳೊಂದಿಗೆ, ನಿಯತಕಾಲಿಕವಾಗಿ ಮಧ್ಯಸ್ಥಗಾರ ಸಲಹೆಗಳನ್ನು ಪಡೆಯುವ ಅಗತ್ಯವಿರುತ್ತದೆ.
- ಎಲ್ಲ 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗಾಗಿ ವೆಬ್ ಆಧಾರಿತ ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಬೇಕಿತ್ತು. ಆದರೆ ಆ ಪೈಕಿ 4 ಸಾಂಖ್ಯಿಕ ಚಟುವಟಿಕೆಗಳನ್ನು ಒಳಗೊಂಡ ಕೇವಲ 7 ವೆಬ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಆದ್ದರಿಂದ ಒಳಗೊಂಡ ಸಾಂಖ್ಯಿಕ ಚಟುವಟಿಕೆಗಳ ವ್ಯಾಪ್ತಿಯನ್ನು ಹೆಚ್ಚಿಸುವ ಉದ್ದೇಶದಿಂದ, ಎಲ್ಲ ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗಾಗಿ ವಿಶ್ವಾಸನೀಯ, ನಂಬಲರ್ಹ ಮತ್ತು ಸಕಾಲಿಕ ದತ್ತಾಂಶವನ್ನು ಹೊಂದಲು ಇನ್ನೂ ಹೆಚ್ಚು ವೆಬ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯವಿದೆ.
- ವಿಶ್ವಾಸನೀಯ, ನಂಬಲರ್ಹ ಹಾಗೂ ಸಕಾಲಿಕ ಸಾಂಖ್ಯಿಕ ಮೂಲಸೌಕರ್ಯ, ದತ್ತಾಂಶ ಮತ್ತು ದಾಖಲೆ ಸೂಚಕಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಸಂಬಂಧಿಸಿದ ಇಲಾಖೆಗಳಿಗೆ ಒದಗಿಸಿದ ಸಹಾಯಧನದ ಪ್ರಗತಿಯ ಮೇಲ್ವಿಚಾರಣೆ ಮಾಡುವ ಅಗತ್ಯವಿದೆ.
- ದತ್ತಾಂಶದ ಅತ್ಯುತ್ತಮ ಸಂಗ್ರಹ, ದೃಢ ವಿಶ್ಲೇಷಣೆ ಮತ್ತು ವ್ಯಾಪಕ ವರದಿಗಾರಿಕೆಗಾಗಿ ನೂತನ ಮಾಹಿತಿ ತಂತ್ರಜ್ಞಾನಗಳ ಉಪಯೋಗವನ್ನು ರಾಜ್ಯದಲ್ಲಿನ ಸಾಂಖ್ಯಿಕ ವ್ಯವಸ್ಥೆಯನ್ನು ವರ್ಧಿಸಲು ಇನ್ನಷ್ಟು ಶೋಧಿಸುವ ಅಗತ್ಯವಿದೆ.

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನವನ್ನು ಮುಂದುವರಿಸಬಹುದು. ಈ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಕರ್ನಾಟಕದಲ್ಲಿ ಅನುಷ್ಠಾನಗೊಳ್ಳಬೇಕಾದ ಈ ವಿಧದ ಪ್ರಥಮ ಯೋಜನೆಯಾಗಿದೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ವಿಶ್ವಾಸನೀಯ ಮತ್ತು ಸಕಾಲಿಕ ಅಧಿಕೃತ ಅಂಕಿ–ಅಂಶಗಳನ್ನು ಸಂಗ್ರಹಿಸಲು, ಸಂಕಲನಮಾಡಲು ಮತ್ತು ಪ್ರಸಾರ ಮಾಡುವುದಕ್ಕಾಗಿ ಸಾಂಖ್ಯಿಕ ಸಾಮರ್ಥ್ಯವನ್ನು, ಮೂಲಸೌಕರ್ಯವನ್ನು ಸುಧಾರಿಸುವ ಉದ್ದೇಶದಿಂದ ರಾಜ್ಯ ಸಾಂಖ್ಯಿಕ ವ್ಯವಸ್ಥೆಗಳನ್ನು ಬಲಪಡಿಸುವ–ಉದ್ದೇಶವನ್ನು ಹೊಂದಿದೆ. ಸರ್ಕಾರವು ಸಂಪೂರ್ಣ, ನಿಖರ, ಸಕಾಲಿಕ ಹಾಗೂ ವಿಶ್ವಾಸಾರ್ಹ ದತ್ತಾಂಶ ಸಂಗ್ರಹವನ್ನು ನಿರ್ಮಿಸುವುದರಿಂದ ಅತ್ಯುತ್ತಮವಾದ ಆರ್ಥಿಕ ಅಭಿವೃದ್ಧಿ ನೀತಿಗಳನ್ನು ರೂಪಿಸಲು ಈ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಮುಂದುವರಿಕೆಯಿಂದ ಸಾಧ್ಯವಾಗುತ್ತದೆ.

# 2. ಪೀಠಿಕೆ

ರಾಷ್ಟ್ರೀಯ ಸಾಂಖ್ಯಿಕ ಆಯೋಗವು ಆಯೋಗವು 2000 ನೇ ಇಸ್ವಿಯಲ್ಲಿ ಡಾ॥ ಸಿ. ರಂಗರಾಜನ್ ಅವರ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟಿತು. ಅವು ಭಾರತದ ಸಾಂಖ್ಯಿಕ ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸಲು ಅನುಷ್ಠಾನಗೊಳಿಸಬೇಕಾದ ಆಡಳಿತಾತ್ಮಕ, ಶಾಸನಾತ್ಮಕ ಹಾಗೂ ತಾಂತ್ರಿಕ ಕ್ರಮಗಳನ್ನು ಗುರುತಿಸಲಿಕ್ಕೆ ಮತ್ತು ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಅಕಾಡೆಮಿ ಸದಸ್ಯರ, ಸಂಶೋಧಕರ ಹಾಗೂ ಇತರ ಬಳಕೆದಾರರ ವಿವಿಧ ಸಾಂಖ್ಯಿಕ ಅಗತ್ಯತೆಗಳನ್ನು ಪೂರೈಸಲಿಕ್ಕೆ ಅದನ್ನು ಸಮರ್ಥವಾಗಿಸಲು ಭಾರತದ ಸಾಂಖ್ಯಿಕ ವ್ಯವಸ್ಥೆಯ ಬಗ್ಗೆ ಸಂಪೂರ್ಣವಾದ ಮತ್ತು ಆಳವಾದ ಅಧ್ಯಾಯನವನ್ನು ಕೈಗೊಂಡಿತು. ಈ ಆಯೋಗವು ರಾಷ್ಟ್ರದ ಹಾಗೂ ರಾಜ್ಯದ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಣೆಗಾಗಿ ಹಲವಾರು ಶಿಫಾರಸ್ಸುಗಳನ್ನು ಪ್ರಕಟಿಸಿತು ಮತ್ತು ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಕಾರ್ಯನೀತಿಯುಕ್ತ ಸಾಂಖ್ಯಿಕ ಯೋಜನೆಗಳನ್ನು ಹೊಂದುವ ಅಗತ್ಯತೆಗೆ ಒತ್ತು ನೀಡಿತು. ಈ ಶಿಫಾರಸ್ಸಿನ ಅನ್ವಯ, ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನಗಳ ಸಚಿವಾಲಯವು ವಿಶ್ವ ಬ್ಯಾಂಕ್ ಸಹಕಾರದೊಂದಿಗೆ 'ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆ'ಯನ್ನು ಆರಂಭಿಸಿತು. ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯನ್ನು 'ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಗಾಗಿ ಬೆಂಬಲ' ಎಂಬ ಕೇಂದ್ರ ವಲಯ ಯೋಜನೆಯಾಗಿ 2015ರಲ್ಲಿ ಪುನರ್ ರಚಿಸಲಾಯಿತು. ಈ ಮೊದಲು ಅವುಗಳು ಭಾರತ ಸರ್ಕಾರದ ಕೇಂದ್ರೀಯ ಪ್ರಾಯೋಜಿತ ಯೋಜನೆಯಾಗಿದ್ದು, ರೂ.650.43 ಕೋಟಿಗಳ ಅನುಮೋದಿತ ಆರಂಭಿಕ ಹೂಡಿಕೆಯೊಂದಿಗೆ ಅವುಗಳು 11ನೇ ಪಂಚವಾರ್ಷಿಕ ಯೋಜನೆಯಿಂದಲೂ ಅನುಷ್ಠಾನಗೊಳ್ಳುತ್ತಿತ್ತು. ಆ ಹೂಡಿಕೆಯಲ್ಲಿ ಶೇಕಡಾ 80ರಷ್ಟನ್ನು ವಿಶ್ವಸಂಸ್ಥೆಯ ಸಾಲದ ಮೂಲಕ ಒದಗಿಸಲಾಗಿತ್ತು ಮತ್ತು ಶೇ.20 ರಷ್ಟು ಭಾರತ ಸರ್ಕಾರವು ಭರಿಸಿತ್ತು.

ರಾಷ್ಟ್ರೀಯ ಸಾಂಖ್ಯಿಕ ಆಯೋಗದ ವರದಿಯಲ್ಲಿ (ಆಗಸ್ಟ್ 2001) ಒಳಗೊಂಡ ಪ್ರಸ್ತುತ ಶಿಫಾರಸ್ಸುಗಳ ಅನ್ವಯ, ವಿಶೇಷವಾಗಿ ಅಂಕಿ–ಅಂಶಗಳ ಸಂಗ್ರಹ, ಸಂಕಲನ ಹಾಗೂ ಪ್ರಸಾರಕ್ಕೆ ಸಂಬಂಧಿಸಿದಂತೆ 35 ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ರಾಜ್ಯ ಸಾಂಖ್ಯಿಕ ವ್ಯವಸ್ಥೆಗಳನ್ನು ಬಲಪಡಿಸಲು ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯು ಉದ್ದೇಶಿಸಿದೆ. ಅಲ್ಲದೆ ವಿಶೇಷವಾಗಿ ರಾಜ್ಯ ಮತ್ತು ಉಪರಾಜ್ಯ ಮಟ್ಟಗಳಲ್ಲಿ ವಿಶ್ವಾಸಾರ್ಹ ಅಧಿಕೃತ ಅಂಕಿ–ಅಂಶಗಳನ್ನು ಸಂಗ್ರಹಿಸಲು, ಸಂಕಲನ ಮಾಡಲು ಮತ್ತು ಪ್ರಸಾರ ಮಾಡಲು ಅವುಗಳ ಸಾಂಖ್ಯಿಕ ಸಾಮರ್ಥ್ಯವನ್ನು ಮತ್ತು ಮೂಲ ಸೌಕರ್ಯವನ್ನು ಸುಧಾರಿಸಲಿಕ್ಕೆ ಸೂಕ್ತ ತಾಂತ್ರಿಕ ಮತ್ತು ಆರ್ಥಿಕ ಬೆಂಬಲವನ್ನು ಒದಗಿಸಲು ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯು ಉದ್ದೇಶಿಸಿದೆ. ಆದ್ದರಿಂದ ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟಗಳಲ್ಲಿ ಬೆಳೆಯುತ್ತಿರುವ ದತ್ತಾಂಶ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ರಾಷ್ಟ್ರೀಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನವನ್ನು ಸುಗಮಗೊಳಿಸುವಲ್ಲಿ ಪರಿವರ್ತನಾಗಿ ಪಾತ್ರವಹಿಸುತ್ತದೆ.

ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯು ಮೂಲತಃ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಬೆಂಬಲದ ಈ ಕೆಳಗಿನ ಮುಖ್ಯ ಕ್ಷೇತ್ರಗಳ ಬಗ್ಗೆ ಒತ್ತು ನೀಡುವ ಉದ್ದೇಶವನ್ನು ಹೊಂದಿದೆ:

**ಚಿತ್ರ 1: ಭಾರತ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ 5 ವಿಷಯಾಧಾರಿತ ಕ್ಷೇತ್ರಗಳು**

**ಭಾರತ ಸಾಂಖ್ಯಿಕ ಯೋಜನೆಯ 5 ವಿಷಯಾಧಾರಿತ ಕ್ಷೇತ್ರಗಳು**

1. ರಾಜ್ಯಗಳಲ್ಲಿ / ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಾಂಖ್ಯಿಕ ಚಟುವಟಿಕೆಗಳ ಸಂಯೋಜನೆ & ವ್ಯವಸ್ಥಾಪನೆ ಸುಧಾರಿಸುವುದು.
2. ಮಾನವ ಸಂಪನ್ಮೂಲ ಅಭಿವೃದ್ಧಿ
3. ಸಾಂಖ್ಯಿಕ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವುದು.
4. IT ಒಳಗೊಂಡು ಭೌತಿಕ ಮೂಲಸೌಕರ್ಯದಲ್ಲಿ ಹೂಡಿಕೆಮಾಡುವುದು
5. ಸಾಂಖ್ಯಿಕ ಕಾರ್ಯಾಚರಣೆಗಳನ್ನು ಸುಧಾರಿಸುವುದು.

ಈ ಮೇಲ್ಕಂಡ ಐದು ಪ್ರಮುಖ ವಿಷಯಾಧಾರಿತ ಕ್ಷೇತ್ರಗಳ ಮೇಲೆ ಬೆಳಕುಚೆಲ್ಲುತ್ತ, ಭಾಗವಹಿಸುವ ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಸೂಕ್ತ ಮಾಹಿತಿ ತಂತ್ರಜ್ಞಾನ ಮತ್ತು ಭೌತಿಕ ಮೂಲಸೌಕರ್ಯವನ್ನು ಹೊಂದಿವೆ ಹಾಗೂ ಅದರಿಂದಾಗಿ ಅಧಿಕಾರಿಗಳಿಗೆ ಸೂಕ್ತ ಕಾರ್ಯ–ಪರಿಸರವಿದೆ ಮತ್ತು ನೂತನ ತಂತ್ರಜ್ಞಾನ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಒದಗಿಸಲಾಗಿದೆ ಎಂಬುದನ್ನು ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯು ಖಚಿತ ಪಡಿಸುತ್ತದೆ. ಹೀಗೆ ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ಸೂಕ್ತ ಮತ್ತು ಪರಿಣಾಮಕಾರಿ ಅನುಷ್ಠಾನದಿಂದ ರಾಜ್ಯ/ಉಪ–ರಾಜ್ಯ ಮಟ್ಟದ ದತ್ತಾಂಶ/ಸಾಂಖ್ಯಿಕ ಉತ್ಪನ್ನಗಳ ನಂಬಲರ್ಹತೆ, ಸಕಾಲಕತೆ ಮತ್ತು ವಿಶ್ವಾಸಾರ್ಹತೆಯಲ್ಲಿ ಮಹತ್ವದ ಸುಧಾರಣೆಯಾಗುವುದೆಂದು ನಿರೀಕ್ಷಿಸಲಾಗುತ್ತದೆ. ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನದ ಮೂಲಕ, ರಾಷ್ಟ್ರೀಯ ಸಾಂಖ್ಯಿಕ ಆಯೋಗದಿಂದ ಪಟ್ಟಿಮಾಡಲ್ಪಟ್ಟ 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಸಾಧಿಸಲು ಅರ್ಹವಾಗುವವು ಎಂದು ಸಚಿವಾಲಯವು ಭಾವಿಸುತ್ತದೆ.

### 2.1.1 ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಗಾಗಿ ಸರ್ಕಾರದ ನೆರವು

ಸಾಂಖ್ಯಿಕ ಮತ್ತು ಅನುಷ್ಠಾನ ಸಚಿವಾಲಯದ ವಾರ್ಷಿಕ ವರದಿಯ (2015–16) ಅನ್ವಯ, ಈ ಯೋಜನೆಯ ಮುಖ್ಯಾಂಶವು–ಸ್ಪಷ್ಟವಾದ ಅಗತ್ಯತೆ/ಪ್ರಸ್ತುತ ಸಾಂಖ್ಯಿಕ ಫಲಿತಾಂಶಗಳು/ಸಾಂಖ್ಯಿಕ ಉತ್ಪನ್ನಗಳನ್ನು ಪ್ರಕಟಿಸುವುದು ಮತ್ತು ರಾಜ್ಯ ವ್ಯವಸ್ಥೆಗಳನ್ನು ಅಭಿವೃದ್ಧಿಯ ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗುವುದಾಗಿದೆ. ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಪರಿಷ್ಕೃತ ತಿಳುವಳಿಕೆ ಪತ್ರಗಳನ್ನು ಹಾಗೂ ರಾಜ್ಯ ಕಾರ್ಯಕ್ರಮಗಳನ್ನು (ಚಾಲ್ತಿ ರಾಜ್ಯಗಳ ಸಂದರ್ಭದಲ್ಲಿ ಸಿದ್ಧಪಡಿಸುವುದಕ್ಕಾಗಿ ಸಚಿವಾಲಯದೊಂದಿಗೆ ಚರ್ಚೆಗಳನ್ನು ನಡೆಸುತ್ತಲಿವೆ. ಪರಿಷ್ಕೃತ ತಿಳುವಳಿಕೆ ಪತ್ರಗಳಿಗೆ ಬಹುಪಾಲು ಚಾಲ್ತಿ ಅನುಷ್ಠಾನಗೊಳಿಸುತ್ತಿರುವ ರಾಜ್ಯಗಳು ಸಹಿ ಹಾಕಿವೆ. ಅದಕ್ಕಾಗಿ ರಾಜ್ಯಗಳಿಗೆ ರೂ.221.89 ಕೋಟಿ ಮೊತ್ತವನ್ನು ರಾಜ್ಯಗಳಿಗೆ ಬಿಡುಗಡೆ ಮಾಡಲಾಗಿದೆ. ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ಮೇಲೆ 2011–12 ರಿಂದ 2014–15 ರ ಅವದಿಯಲ್ಲಿನ ಆಯ–ವ್ಯಯ ಅಂದಾಜುಗಳು ಮತ್ತು ಕೋಟಿ ರೂ. ಮೊತ್ತದಲ್ಲಿ ವ್ಯಯಿಸಿದ ವೆಚ್ಚಗಳ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

**ಕೋಷ್ಟಕ 1: ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯ ಅಡಿಯಲ್ಲಿ ಬಿಡುಗಡೆಯಾದ ಆಯವ್ಯಯ ಹಂಚಿಕೆ ಮತ್ತು ವಾಸ್ತವಿಕ ಮೊತ್ತ. (ಕೋಟಿ ರೂ.)**

| 2011–12 | | 2012–13 | | 2013–14 | | 2014–15 | |
|---|---|---|---|---|---|---|---|
| ಆಯವ್ಯಯ ಅಂದಾಜು | ವೆಚ್ಚ (ಫೆಬ್ರವರಿ2015) | ಆಯವ್ಯಯ ಅಂದಾಜು | ವೆಚ್ಚ (ಫೆಬ್ರವರಿ2015) | ಆಯವ್ಯಯ ಅಂದಾಜು | ವೆಚ್ಚ (ಫೆಬ್ರವರಿ2015) | ಆಯವ್ಯಯ ಅಂದಾಜು | ವೆಚ್ಚ (ಫೆಬ್ರವರಿ2015) |
| 212 | 124 | 210 | 24.2 | 53 | 25 | 100 | 0.1 |

**ಟಿಪ್ಪಣಿ:** ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ವೆಚ್ಚವು ಬಿಡುಗಡೆ ಮಾಡಿದ ನಿಧಿಯನ್ನು ಸೂಚಿಸುತ್ತದೆ.

**ಮೂಲ:** ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ.

## 2.2 ಹಿನ್ನೆಲೆ

ರಾಜ್ಯ ಮತ್ತು ಉಪ–ರಾಜ್ಯ ಮಟ್ಟಗಳಲ್ಲಿ ನೀತಿ ಮತ್ತು ಯೋಜನೆಯ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ರಾಷ್ಟ್ರ ಮಟ್ಟದ ಅಂಕಿ–ಅಂಶಗಳ ವ್ಯಾಪಕ ಪ್ರಮಾಣಕ್ಕಾಗಿ ದತ್ತಾಂಶಗಳನ್ನು ಸೃಷ್ಟಿಸುವಲ್ಲಿ ಮತ್ತು ಸಕಾಲಿಕ ರೀತಿಯಲ್ಲಿ ಸೂಕ್ತ ಮತ್ತು ನಿಖರ ದತ್ತಾಂಶವನ್ನು ಒದಗಿಸುವುದಕ್ಕಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ವಹಿಸಬೇಕಾದ ಪಾತ್ರವನ್ನು ರಾಷ್ಟ್ರೀಯ ಸಾಂಖ್ಯಿಕ ಆಯೋಗದ ವರದಿಯು ಒತ್ತಿಹೇಳಿತು. ಈ ಹಿನ್ನೆಲೆಯಲ್ಲಿ, ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯಲ್ಲಿ ಪಾಲ್ಗೊಳ್ಳಲು ತಮ್ಮ ಒಪ್ಪಿಗೆಯನ್ನು ತಿಳಿಸುವಂತೆ ರಾಜ್ಯ ಸರ್ಕಾರಗಳಿಗೆ ಭಾರತ ಸರ್ಕಾರವು ಕೋರಿದೆ. 5 ಮತ್ತು 6ನೇ ಡಿಸೆಂಬರ್, 2008 ರಂದು ಜರುಗಿದ ಕೇಂದ್ರ ಮತ್ತು ರಾಜ್ಯ ಸಾಂಖ್ಯಿಕ ಸಂಸ್ಥೆಗಳ 16ನೇ ಸಮ್ಮೇಳನವು 'ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ' ಯನ್ನು ರೂಪಿಸುವಲ್ಲಿ ಮಾರ್ಗದರ್ಶನ ಮಾಡಿತು. ಅದರಿಂದಾಗಿ ಭಾರತೀಯ ಸಾಂಖ್ಯಿಕ ವ್ಯವಸ್ಥೆಯ ವಿಶ್ವಾಸಾರ್ಹತೆಯು ಹೆಚ್ಚಾಯಿತು.

ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ರೂಪಿಸುವಿಕೆಯು ಭಾರತ ಸಾಂಖ್ಯಿಕ ಸಬಲೀಕರಣ ಯೋಜನೆಯ ಅನುಷ್ಠಾನದಲ್ಲಿ ಮಹತ್ವದ ಮೊದಲ ಹೆಜ್ಜೆಯನ್ನು ಸೂಚಿಸುತ್ತದೆ. ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯು ಇಡೀ ರಾಜ್ಯ ಸಾಂಖ್ಯಿಕ ವ್ಯವಸ್ಥೆಯುದ್ದಕ್ಕೂ ರಾಜ್ಯದ ಸಾಂಖ್ಯಿಕ ಸಾಮರ್ಥ್ಯವನ್ನು ಬಲಪಡಿಸುವುದಕ್ಕಾಗಿ ರಾಜ್ಯಕ್ಕೆ ಕಾರ್ಯನೀತಿಯನ್ನು ಒದಗಿಸುವುದೆಂದು ನಿರೀಕ್ಷಿಸಲಾಗುತ್ತದೆ.

ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಸಿದ್ಧತೆಯು ಎಲ್ಲ ಮಧ್ಯಸ್ಥಗಾರರಿಗೆ ಈ ಕೆಳಗಿನವುಗಳನ್ನು ಕೈಗೊಳ್ಳಲು ಅವಕಾಶವನ್ನು ಒದಗಿಸುತ್ತದೆ.

- ಅಂಕಿ–ಅಂಶಗಳ ಸದ್ಯದ ಸ್ಥಿತಿಯನ್ನು ನಿರ್ಧಾರಣೆ ಮಾಡುವುದು ಮತ್ತು ರಾಜ್ಯ ಸಾಂಖ್ಯಿಕ ಚಟುವಟಿಕೆಗಳಿಗೆ ಪರಿಣಾಮ ಬೀರುವ ಪ್ರಮುಖ ನಿರ್ಬಂಧಗಳನ್ನು ಗುರುತಿಸುವುದು.
- ಎಲ್ಲ ಬಳಕೆದಾರರ ದತ್ತಾಂಶ ಅಗತ್ಯತೆಗಳನ್ನು ಪರಿಶೀಲಿಸುವುದು.
- ಅಧಿಕೃತ ಅಂಕಿ–ಅಂಶಗಳ ಗುಣಮಟ್ಟ, ವ್ಯಾಪಕತೆ ಹಾಗೂ ಸಕಾಲಿಕತೆಯನ್ನು ಸುಧಾರಿಸುವುದಕ್ಕಾಗಿ ಒಪ್ಪಿಕೊಂಡ ಮಧ್ಯಮಾವಧಿ ಗುರಿಗಳನ್ನು ರೂಪಿಸುವುದರಿಂದ ಮುಂದಿನ 5 ರಿಂದ 10 ವರ್ಷಗಳಲ್ಲಿ 'ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಗಳು' ಎಲ್ಲಿ ಇರಬೇಕೆಂಬ ಬಗ್ಗೆ ಸ್ಪಷ್ಟ ಚಿತ್ರಣವನ್ನು ಒದಗಿಸುವುದು.
- ನಿರ್ಬಂಧಗಳನ್ನು ನಿವಾರಿಸಲು ಮತ್ತು ಗುರಿಗಳನ್ನು ಸಾಧಿಸಲು ಅತ್ಯಂತ ಸೂಕ್ತವಾದ ಕಾರ್ಯನೀತಿಗಳನ್ನು ರೂಪಿಸುವುದು.

- ಅಪೇಕ್ಷಿತ ಸುಧಾರಣೆ ಸಾಧಿಸಲು ಉದ್ದೇಶಿಸಿರುವ ಸಂಸ್ಥೆಗಳು, ದತ್ತಾಂಶ ತಯಾರಿಕೆ, ಪ್ರಸಾರ ಮತ್ತು ಇತರ ಸುಧಾರಣೆಗಳಿಗಾಗಿ ಸಾಮರ್ಥ್ಯ ನಿರ್ಮಾಣವನ್ನು ಒಳಗೊಂಡು ಕಾರ್ಯನೀತಿಗಳನ್ನು ಜಾರಿಯಲ್ಲಿಡಲು ವಾರ್ಷಿಕ ಗುರಿಗಳು, ಕ್ರಿಯಾ ಯೋಜನೆಗಳು ಹಾಗೂ ಕ್ರಮಗಳೊಂದಿಗೆ ಕಾರ್ಯಸಾಧ್ಯವಾದ, ತಾಂತ್ರಿಕವಾಗಿ ಉತ್ತಮವಾದ ಹಾಗೂ ಬಳಕೆದಾರ–ಉದ್ದೇಶಿತ ವಿವರವಾದ ಅನುಷ್ಠಾನ ಯೋಜನೆಯನ್ನು ರೂಪಿಸುವುದು.

20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಕನಿಷ್ಠ ಗುಣಮಟ್ಟವನ್ನು ದಕ್ಷವಾಗಿ, ಸಮರ್ಪಕವಾಗಿ ಹಾಗೂ ವ್ಯವಸ್ಥಿತವಾಗಿ ಪೂರೈಸಲು ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯಲ್ಲಿ ಭಾಗವಹಿಸುವ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಸಮರ್ಥವಾಗುವ ಪ್ರಮಾಣವು ಈ ಯೋಜನೆಗಾಗಿ ಪ್ರಮುಖ ನೆರವೇರಿಸುವ ಮಾನದಂಡವಾಗಿದೆ.

**ಕೋಷ್ಟಕ 2: 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳು**

| ಕ್ರ..ಸಂ. | 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳು |
|---|---|
| 1. | ►ರಾಜ್ಯ ಆಂತರಿಕ ಉತ್ಪನ್ನ ಅಂದಾಜುಗಳು |
| 2. | ►ಬಂಡವಾಳ ನಿರ್ಮಾಣ ಮತ್ತು ಉಳಿತಾಯದ ಅಂದಾಜುಗಳು |
| 3. | ►ಜಿಲ್ಲಾ ಆಂತರಿಕ ಉತ್ಪನ್ನ ಅಂದಾಜುಗಳು |
| 4. | ►ಸ್ಥಳೀಯ ಸಂಸ್ಥೆಗಳ ಕೊಡುಗೆಗಳ ಅಂದಾಜುಗಳು |
| 5. | ►ಪ್ರಧಾನ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ದತ್ತಾಂಶ |
| 6. | ►ಉದ್ದಿಮೆಗಳ ವಾರ್ಷಿಕ ಸಮೀಕ್ಷೆ |
| 7. | ►ಔದ್ಯಮಿಕ ಉತ್ಪಾದನೆಯ ಸೂಚ್ಯಂಕ |
| 8. | ►ಬೆಳೆ ಕ್ಷೇತ್ರ ಮತ್ತು ಉತ್ಪಾದನಾ ಅಂಕಿ ಅಂಶಗಳು |
| 9. | ►ಸಗಟು ಮಾರಾಟ ಬೆಲೆ ಸೂಚ್ಯಂಕ |
| 10. | ►ಗ್ರಾಹಕ ಬೆಲೆ ಸೂಚ್ಯಂಕ |
| 11. | ►ಆರೋಗ್ಯ, ಅಸ್ವಸ್ಥತೆ, ಮರಣ ಪ್ರಮಾಣ ಮತ್ತು ಕುಟುಂಬ ಕಲ್ಯಾಣ ಅಂಕಿಅಂಶಗಳು. |
| 12. | ►ಶಿಕ್ಷಣ ಮತ್ತು ಸಾಕ್ಷರತೆ ಅಂಕಿ ಅಂಶಗಳು<br>►ಶೈಕ್ಷಣಿಕ ಸಂಸ್ಥೆಗಳ ಬಗ್ಗೆ ಅಂಕಿಅಂಶಗಳು<br>►ಶಾಲಾ ದಾಖಲಾತಿ ದತ್ತಾಂಶ |
| 13. | ►ಕಾರ್ಮಿಕ ಮತ್ತು ಉದ್ಯೋಗ ಅಂಕಿ ಅಂಶಗಳು<br>►ಕಾರ್ಮಿಕ ಅಂಕಿಅಂಶಗಳು<br>►ಉದ್ಯೋಗ ಅಂಕಿಅಂಶಗಳು<br>►ಬಾಲಕಾರ್ಮಿಕ ಅಂಕಿಅಂಶಗಳು |
| 14. | ►ವಸತಿಗಳು |
| 15. | ►ಜನನ ಮತ್ತು ಮರಣ ನೋಂದಣಿ ಅಂಕಿಅಂಶಗಳು ಮತ್ತು ಜನಸಂಖ್ಯೆ<br>►ಮದುವೆಯ ನೋಂದಣಿಯ ಅಂಕಿಅಂಶಗಳು (ನೂತನ) |
| 16. | ►ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ವಿತರಣೆ ಅಂಕಿಅಂಶಗಳು |

| | |
|---|---|
| 17. | ▶ಪರಿಸರ ಮತ್ತು ಅರಣ್ಯ ಅಂಕಿಅಂಶಗಳು<br>▶ಅರಣ್ಯ ಅಂಕಿಅಂಶಗಳು<br>▶ನೀರುಪೂರೈಕೆ ಮತ್ತು ನೈರ್ಮಲ್ಯ ಅಂಕಿಅಂಶಗಳು |
| 18. | ▶ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ ಸಮೀಕ್ಷೆಗಳಲ್ಲಿ ಭಾಗವಹಿಸುವುದು. |
| 19. | ▶ಸಾರಿಗೆ ಅಂಕಿಅಂಶಗಳು<br>▶ಮೋಟಾರು ವಾಹನ ನೋಂದಣಿ ಅಂಕಿಅಂಶಗಳು<br>▶ರಸ್ತೆ ಅಂಕಿಅಂಶಗಳು<br>▶ವಾಹನದಟ್ಟಣೆ ಅಪಘಾತ ಅಂಕಿಅಂಶಗಳು<br>▶ಪ್ರಯಾಣಿಕರ ದಟ್ಟಣೆಯ ಅಂಕಿಅಂಶಗಳು |
| 20. | ▶ಸ್ಥಳೀಯ ಪ್ರದೇಶ ಯೋಜನೆಗಾಗಿ ಅಂಕಿಅಂಶಗಳು<br>▶ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ(ನೂತನ) |

### 2.1.1 ಭಾರತ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ರಾಜ್ಯಗಳಿಗೆ ನೀಡಿದ ನೆರವು

ಆರಂಭದಲ್ಲಿ ಕರ್ನಾಟಕ, ಬಿಹಾರ, ಸಂಯುಕ್ತ ಆಂಧ್ರಪ್ರದೇಶ, ರಾಜಸ್ಥಾನ, ಗುಜರಾತ್, ತಮೀಳುನಾಡು, ಕೇರಳ ಪಶ್ಚಿಮ ಬಂಗಾಲ, ಓರಿಸ್ಸಾ, ಸಿಕ್ಕಿಂ ಮಿಝೋರಾಂ, ಮಣಿಪುರ, ಜಾರ್ಖಂಡ್ ಮತ್ತು ಲಕ್ಷದ್ವೀಪ–ಈ 13 ರಾಜ್ಯಗಳಿಗೆ ಮತ್ತು 1 ಕೇಂದ್ರಾಡಳಿತ ಪ್ರದೇಶಕ್ಕೆ ತಮ್ಮ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ನಿಧಿಗಳನ್ನು ಹಂಚಲಾಗಿತ್ತು. ಮೂಲತಃ ಈ ಯೋಜನೆಯನ್ನು ಮಾರ್ಚ್ 2012 ರ ವರೆಗೆ (11ನೇ ಪಂಚವಾರ್ಷಿಕ ಯೋಜನೆ) ಅನುಮೋದಿಸಿದ್ದರಿಂದ, ಇದುವರೆಗೆ ಯೋಜನೆಯಲ್ಲಿ ಪಾಲ್ಗೊಳ್ಳದ ಇನ್ನುಳಿದ 19 ರಾಜ್ಯಗಳ/ಕೇಂದ್ರಾಡಳಿತ ಪ್ರದೇಶಗಳನ್ನು ಸೇರಿಸಿಕೊಳ್ಳಲು ಅನುವಾಗುವಂತೆ ಸದರಿ ಯೋಜನೆಯನ್ನು ಪುನರ್ ರಚಿಸಬೇಕೆಂದು ಸಕ್ಷಮ ಪ್ರಾಧಿಕಾರವು ಸದರಿ ಯೋಜನೆಯನ್ನು ಮಾರ್ಚ್, 2017ರ ವರೆಗೆ (12ನೇ ಪಂಚವಾರ್ಷಿಕ ಯೋಜನೆ) ವಿಸ್ತರಿಸುವುದಕ್ಕಾಗಿ ಅನುಮೋದನೆಯನ್ನು ಮಂಜೂರು ಮಾಡುವಾಗ ಸೂಚಿಸಿದರು. ಈ ಯೋಜನೆಯು ಈಗಾಗಲೇ ಕರ್ನಾಟಕ, ಗುಜರಾತ್, ರಾಜಸ್ಥಾನ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಬಿಹಾರ, ಸಿಕ್ಕಿಂ, ಮಿಝೋರಾಮ್, ಪಶ್ಚಿಮ ಬಂಗಾಳ, ಓಡಿಸ್ಸಾ, ಕೇರಳ, ಜಾರ್ಖಂಡ್, ಮಣಿಪುರ, ಉತ್ತರ ಪ್ರದೇಶ ಮತ್ತು ಉತ್ತರಾಖಂಡ–ಈ 16 ರಾಜ್ಯಗಳಲ್ಲಿ ಚಾಲ್ತಿ ಅನುಷ್ಠಾನಗೊಳ್ಳುತ್ತಿದೆ. ಹೀಗೆ, 2014–15 ರಲ್ಲಿ, ಪ್ರಮುಖ ಪರಿಶೀಲನೆ ಮತ್ತು ಪುನರಾವಲೋಕನ ಕಾರ್ಯಗಳನ್ನು ನೆರವೇರಿಸಿತು ಮತ್ತು ಚಾಲ್ತಿಯಾಗಿ ಅನುಷ್ಠಾನಗೊಳಿಸುತ್ತಿರುವ ರಾಜ್ಯಗಳಿಗೆ ಮಾಡಿದ ಹಂಚಿಕೆಗಳನ್ನು ಪರಿಷ್ಕರಿಸಲಾಯಿತು. ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯನ್ನು ಚಾಲ್ತಿಯಾಗಿ ಅನುಷ್ಠಾನಗೊಳಿಸುತ್ತಿರುವ ರಾಜ್ಯಗಳ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಲಾಗಿದೆ:

**ಕೋಷ್ಟಕ 3: ಭಾರತ ಸಾಂಖ್ಯಿಕ ಯೋಜನೆಯ ಅನುಷ್ಟಾನದಲ್ಲಿ ರಾಜ್ಯದ ಸದ್ಯದ ಸ್ಥಿತಿಗತಿ**

| ಕ್ರ. ಸಂ. | ರಾಜ್ಯ | ಕಾರ್ಯಾಚರಣೆಗಳ ಸದ್ಯದ ಸ್ಥಿತಿಗತಿ |
|---|---|---|
| 1. | ಆಂಧ್ರ ಪ್ರದೇಶ | ▸ ಪುನರಾವಲೋಕನ ಕಾರ್ಯದ ನಂತರ ಆಂಧ್ರಪ್ರದೇಶಕ್ಕೆ ಭಾರತ ಸರ್ಕಾರದ ಹಂಚಿಕೆಯು ರೂ. 14.9409 ಕೋಟಿ ಆಗಿದೆ. ಅದರಲ್ಲಿ ರೂ. 8.1236 ಕೋಟಿ ಮೊತ್ತವನ್ನು ಪುನರಾವಲೋಕನಕ್ಕಿಂತ ಮೊದಲು ಆಂಧ್ರಪ್ರದೇಶಕ್ಕೆ (ರಾಜ್ಯಗಳ ವಿಭಜನೆಯ ನಂತರದ ನಿಯಮಗಳ ಅನ್ವಯ) ಬಿಡುಗಡೆ ಮಾಡಬೇಕೆಂದು ಪರಿಗಣಿಸಲಾಯಿತು.<br>▸ ಯೋಜನಾ ಅವಧಿಯು ಮಾರ್ಚ್, 2016ರ ವರೆಗೆ ಇದೆ.<br>▸ ರಾಜ್ಯದ ಕಡ್ಡಾಯ ಪಾಲು ರೂ. 0.75 ಕೋಟಿ |
| 2. | ಬಿಹಾರ | ▸ ಪರಿಷ್ಕೃತ ಹಂಚಿಕೆಯು ರೂ. 20.1339 ಕೋಟಿ ಮೊತ್ತದ್ದಾಗಿದೆ. ಅದರಲ್ಲಿ 17.5424 ಕೋಟಿ ಮೊತ್ತವನ್ನು ಪುನರಾವಲೋಕನಕ್ಕಿಂತ ಮೊದಲು 2011–12 ನೇ ಹಣಕಾಸು ವರ್ಷದಲ್ಲಿ ಬಿಡುಗಡೆ ಮಾಡಿದ್ದು ಕೇವಲ ರೂ. 3.6756545 ಕೋಟಿ ಮೊತ್ತವನ್ನು 2013–14ರಲ್ಲಿ ಬಳಕೆ ಪ್ರಮಾಣ ಪತ್ರದನ್ವಯ ಮಾತ್ರ ವ್ಯಯಿಸಿದ್ದು (ವಾಹನಗಳಿಗಾಗಿ) ಕಂಡುಬಂದಿದೆ ಮತ್ತು ವೆಚ್ಚಮಾಡಿರದ ರೂ. 13.8668455 ಮೊತ್ತವನ್ನು ಬಳಸಲು ಇಟ್ಟುಕೊಳ್ಳಲಾಗಿದೆ.<br>▸ ತಿಳುವಳಿಕೆ ಪತ್ರದ ಅನ್ವಯ ರಾಜ್ಯದ ಪಾಲು ಶೂನ್ಯವಾಗಿದೆ.<br>▸ ಯೋಜನಾ ಅವಧಿಯು ಮಾರ್ಚ್, 2017ರ ವರೆಗೆ ಇದೆ. |
| 3. | ಗುಜರಾತ | ▸ ಪರಿಷ್ಕೃತ ಹಂಚಿಕೆಯು ರೂ.28.56775 ಕೋಟಿ ಆಗಿದೆ. ಒಟ್ಟಾರೆ ರೂ. 23.955875 ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ರೂ. 19.344 ಕೋಟಿ ಮೊತ್ತವನ್ನು ಪುನರಾವಲೋಕನಕ್ಕಿಂತ ಮೊದಲು ಬಿಡುಗಡೆ ಮಾಡಲಾಗಿದೆ ಮತ್ತು ರೂ. 4.611875 ಕೋಟಿ ಮೊತ್ತವನ್ನು ಮಾರ್ಚ್, 2016ರಂದು ಬಿಡುಗಡೆ ಮಾಡಲಾಗಿದೆ.<br>▸ ರಾಜ್ಯದ ಕಡ್ಡಾಯ ಪಾಲಿಗಿಂತಲೂ ಹೆಚ್ಚಾಗಿ ರೂ. 10.3638 ಕೋಟಿ ಮೊತ್ತವನ್ನು ಒದಗಿಸಲು ರಾಜ್ಯವು ಬದ್ಧವಾಗಿದೆ.<br>▸ ಭಾರತ ಸರ್ಕಾರದ ರೂ. 23.9509 ಕೋಟಿ ಮತ್ತು ರಾಜ್ಯ ನಿಧಿಗಳ ರೂ. 7.8515ಕೋಟಿ ಮೊತ್ತಗಳ ಬಳಕೆಯನ್ನು ವರದಿಮಾಡಲಾಗಿದೆ.<br>▸ ಯೋಜನಾ ಅವಧಿಯು ಮಾರ್ಚ್, 2016ರ ವರೆಗೆ ಇದೆ. |
| 4. | ಜಾರ್ಖಂಡ್ | ▸ ಪರಿಷ್ಕೃತ ಹಂಚಿಕೆಯು ರೂ.12.57885 ಕೋಟಿ ಆಗಿದೆ. ಅದರಲ್ಲಿ ರೂ. 5.19264 ಕೋಟಿ ಮೊತ್ತವನ್ನು ಪುನರಾವಲೋಕನಕ್ಕಿಂತ ಮೊದಲು ಮೊದಲು 2012–13 ನೇ ಹಣಕಾಸು ವರ್ಷದಲ್ಲಿ ಬಿಡುಗಡೆ ಮಾಡಲಾಗಿದೆ. ಆದರೆ ರಾಜ್ಯದಿಂದ ಕೊಡಲ್ಪಟ್ಟ ಬಳಕೆ ಪ್ರಮಾಣ |

| | | |
|---|---|---|
| | | ಪತ್ರದನ್ವಯ, ರಾಜ್ಯವು ಕೇವಲ ರೂ. 2.25 ಕೋಟಿ ಮೊತ್ತವನ್ನು ಮಾತ್ರ ಉಪಯೋಗಿಸಿದೆ ಮತ್ತು ವೆಚ್ಚಮಾಡಿರದೇ ಉಳಿದ ರೂ. 2.94264 ಕೋಟಿ ಮೊತ್ತವನ್ನು ಬಳಸುವುದಕ್ಕಾಗಿ ಇಟ್ಟುಕೊಳ್ಳಲಾಗಿದೆ. ಆದ್ದರಿಂದ ಮುಂದಿನ ಕಂತನ್ನು ಬಿಡುಗಡೆ ಮಾಡುವುದಕ್ಕಿಂತಲೂ ಮೊದಲು ಈ ವೆಚ್ಚಮಾಡಿರದ ಮೊತ್ತವನ್ನು ಮರುಊರ್ಜಿತಗೊಳಿಸಬೇಕು. ತಿಳುವಳಿಕೆ ಪತ್ರದನ್ವಯ, ರಾಜ್ಯದ ಕಡ್ಡಾಯ ಪಾಲು ರೂ. 1.3026 ಕೋಟಿ ಆಗಿದೆ.<br>▸ ಯೋಜನಾ ಅವಧಿಯು ಮಾರ್ಚ್, 2017ರವರೆಗೆ ಇದೆ. |
| 5. | ಕರ್ನಾಟಕ | ▸ ಕರ್ನಾಟಕದ ಹಂಚಿಕೆಯನ್ನು ಮೊದಲಿನ ರೂ. 32.8468 ಕೋಟಿಯಿಂದ ರೂ. 26.9696 ಕೋಟಿ ಮೊತ್ತಕ್ಕೆ ಪರಿಷ್ಕರಿಸಲಾಯಿತು. ಅದೇ ಮೊತ್ತವನ್ನು ಮಾರ್ಚ್, 2013ರ ವರೆಗೆ ಮೂರು ಕಂತುಗಳಲ್ಲಿ ಕರ್ನಾಟಕಕ್ಕೆ ಬಿಡುಗಡೆ ಮಾಡಲಾಯಿತು. ಆದ್ದರಿಂದ ರಾಜ್ಯಕ್ಕೆ ಹೆಚ್ಚಿನ ನಿಧಿಗಳನ್ನು ಬಿಡುಗಡೆ ಮಾಡಿಲ್ಲ. ಆದರೆ ವೆಚ್ಚಮಾಡಿರದ ಉಳಿಕೆ ಮೊತ್ತವನ್ನು ಮರು ಊರ್ಜಿತಗೊಳಿಸಬಹುದು.<br>▸ ಅನುಮೋದಿತ ಯೋಜನಾ ಅವಧಿಯು ಮಾರ್ಚ್, 2016ರವರೆಗೆ ಇದೆ.<br>▸ ತಮ್ಮ ಚಾಲನೆಯಲ್ಲಿರುವ ಕಾಮಗಾರಿಗಳನ್ನು ಮೇಲ್ವಿಚಾರಣೆಮಾಡಲು ಅನುವಾಗಲು ಪರಿಷ್ಕೃತ ತಿಳುವಳಿಕೆ ಪ್ರಮಾಣ ಪತ್ರಕ್ಕೆ ಸಹಿಮಾಡಬೇಕಾಗಿದೆ. |
| 6. | ಕೇರಳ | ▸ ಪರಿಷ್ಕೃತ ಹಂಚಿಕೆಯು ರೂ.14.9925 ಕೋಟಿ ಆಗಿದೆ. ರೂ. 9.37122 ಕೋಟಿ ಮೊತ್ತವನ್ನು 2011–12 ರಲ್ಲಿ ಬಿಡುಗಡೆ ಮಾಡಲಾಯಿತು. ಪುನರಾವಲೋಕನದ ನಂತರ ರೂ.5.66841 ಕೋಟಿ ಬಳಸದೇ ಇರುವ ಬಾಕಿಯನ್ನು ಮರುಊರ್ಜಿತಗೊಳಿಸಲಾಗಿದೆ. ಬಾಕಿ ಬಿಡುಗಡೆಯು ರೂ.5.62128 ಕೋಟಿ ಇದೆ<br>▸ ಯೋಜನಾ ಅವಧಿಯನ್ನು ಮಾರ್ಚ್, 2017ರ ವರೆಗೆ ವಿಸ್ತರಿಸಲಾಗಿದೆ.<br>▸ ರಾಜ್ಯದ ಕಡ್ಡಾಯದ ಪಾಲು ರೂ. 0.3975 ಕೋಟಿ ಇತ್ತು. ಆದರೆ ರಾಜ್ಯವು ಒಟ್ಟು ರಾಜ್ಯದ ಪಾಲಿನಂತೆ ರೂ. 1.258 ಕೋಟಿ ಮೊತ್ತವನ್ನು ಒದಗಿಸುತ್ತದೆ. |
| 7. | ಮಣಿಪುರ | ▸ ಭಾರತ ಸರ್ಕಾರವು ಮಣಿಪುರಕ್ಕೆ ನೀಡಿದ ಪರಿಷ್ಕೃತ ಹಂಚಿಕೆ ರೂ. 20.69 ಕೋಟಿ ಆಗಿತ್ತು. ಅದರಲ್ಲಿ ರೂ. 14.887025 ಕೋಟಿ ಮೊತ್ತವನ್ನು ಇದುವರೆಗೆ ಬಿಡುಗಡೆ ಮಾಡಲಾಗಿದ್ದು, ಪುನರಾವಲೋಕನದ ನಂತರ ಮಾರ್ಚ್, 2016ರಲ್ಲಿ ರೂ. 3.590725 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಯಿತು.<br>▸ ಮಣಿಪುರದ ಯೋಜನಾ ಅವಧಿಯು ಮಾರ್ಚ್, 2016ರ ವರೆಗೆ ಇದೆ.<br>▸ ರಾಜ್ಯದ ಕಡ್ಡಾಯ ಪಾಲು ರೂ. 0.75 ಕೋಟಿ ಇದೆ. |

| | | |
|---|---|---|
| 8. | ಮಿರ್ಝೋರಾಂ | ▸ ಭಾರತ ಸರ್ಕಾರವು ಮೀರ್ಝೋರಾಂಗೆ ನೀಡಿದ ಪರಿಷ್ಕೃತ ಹಂಚಿಕೆ ರೂ. 15. 27 ಕೋಟಿ ಇದೆ. ಅದರಲ್ಲಿ ರೂ 10.5125 ಕೋಟಿ ಮೊತ್ತವನ್ನು ಇಂದಿನವರೆಗೆ ಬಿಡುಗಡೆ ಮಾಡಲಾಗಿದ್ದು, ರೂ. 4.7575 ಕೋಟಿ ಮೊತ್ತವನ್ನು ಪುನರಾವಲೋಕನದ ನಂತರ ಮಾರ್ಚ್, 2015 ರಲ್ಲಿ ಬಿಡುಗಡೆ ಮಾಡಲಾಯಿತು.<br>▸ ಯೋಜನಾ ಅವಧಿಯನ್ನು ಮಾರ್ಚ್, 2017ರ ವರೆಗೆ ವಿಸ್ತರಿಸಲಾಗಿದೆ.<br>▸ ರಾಜ್ಯದ ಕಡ್ಡಾಯ ಪಾಲು ರೂ. 1.0005 ಕೋಟಿ ಇದೆ.<br>▸ ರಾಜ್ಯವು ರೂ. 0.29 ಕೋಟಿ ಮೊತ್ತದ ರಾಜ್ಯದ ಪಾಲನ್ನು ಒದಗಿಸಲು ಪ್ರಸ್ತಾಪಿಸಿದೆ. ರಾಜ್ಯದ ಒಟ್ಟು ಪಾಲು ರೂ. 1.295 ಕೋಟಿ ಮೊತ್ತದಲ್ಲಿ, ರೂ. 0.7325 ಕೋಟಿ ಮೊತ್ತವನ್ನು ಈಗಾಗಲೇ ರಾಜ್ಯವು ವೆಚ್ಚ ಮಾಡಿದೆ. |
| 9. | ಒಡಿಸ್ಸಾ | ▸ ಪರಿಷ್ಕೃತ ಹಂಚಿಕೆಯು ರೂ. 28.8118 ಕೋಟಿ ಇದೆ. ಒಟ್ಟು ರೂ. 19.96624 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದ್ದು, ರೂ. 11.12064 ಕೋಟಿ ಮೊತ್ತವನ್ನು ಪುನರಾವಲೋಕನದ ಕಾರ್ಯಕ್ಕೆ ಮೊದಲು ಬಿಡುಗಡೆ ಮಾಡಲಾಗಿದೆ ಮತ್ತು ಜೂನ್ 2015ರಲ್ಲಿ ಪುನರಾವಲೋಕನದ ನಂತರ ರೂ. 8.84176 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ.<br>▸ ಯೋಜನಾ ಅವಧಿಯು ಮಾರ್ಚ್, 2017ರ ವರೆಗೆ ಇದೆ.<br>▸ ಪರಿಷ್ಕೃತ ತಿಳುವಳಿಕೆ ಪತ್ರನ್ವಯ, ಒಟ್ಟು ರಾಜ್ಯದ ಪಾಲು ರೂ. 27.7498 ಕೋಟಿ ಇದೆ. ಅದರಲ್ಲಿ ರಾಜ್ಯಸರ್ಕಾರವು ತನ್ನ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ. 25.0438 ಕೋಟಿ ಮೊತ್ತವನ್ನು ಮತ್ತು ರೂ. 2.7060 ಕೋಟಿ ಮೊತ್ತವನ್ನು ಮಾಹಿತಿ ತಂತ್ರಜ್ಞಾನದಲ್ಲಿ ಒದಗಿಸಿದೆ. |
| 10. | ರಾಜಸ್ಥಾನ | ▸ ಪರಿಷ್ಕೃತ ಹಂಚಿಕೆಯು ರೂ. 34.6127 ಕೋಟಿ ಇದೆ. ಒಟ್ಟು ರೂ. 29.5732 ಕೋಟಿ ಬಿಡುಗಡೆ ಮಾಡಲಾಗಿದ್ದು, ರೂ. 24.5337 ಕೋಟಿ ಮೊತ್ತವನ್ನು ಪುನರಾವಲೋಕನ ಕಾರ್ಯಕ್ಕೂ ಮೊದಲು ಬಿಡುಗಡೆ ಮಾಡಲಾಗಿದೆ ಮತ್ತು ರೂ. 5.0395 ಕೋಟಿ ಮೊತ್ತವನ್ನು ಅಕ್ಟೋಬರ್, 2015ರಲ್ಲಿ ಬಿಡುಗಡೆ ಮಾಡಲಾಗಿದೆ<br>▸ ಯೋಜನಾ ಅವಧಿಯು ಮಾರ್ಚ್, 2017ರ ವರೆಗೆ ಇದೆ.<br>▸ ಬಿಡುಗಡೆಯಾಗಬೇಕಾದ ಉಳಿದ ಮೊತ್ತವು ರೂ. 5.0395 ಕೋಟಿ ಇದೆ.<br>▸ ರಾಜ್ಯದ ಕಡ್ಡಾಯ ಪಾಲು ರೂ. 7.9 ಕೋಟಿ ಇದ್ದು, ರಾಜ್ಯ ಸರ್ಕಾರವು ರೂ. 16.5050 ಕೋಟಿ ಮೊತ್ತವನ್ನು ಒದಗಿಸಲು ಬದ್ಧವಾಗಿದೆ. |
| 11. | ಸಿಕ್ಕಿಂ | ▸ ಪುನರಾವಲೋಕನ ಕಾರ್ಯದ ನಂತರ ಭಾರತ ಸರ್ಕಾರದ ಪರಿಷ್ಕೃತ ಹಂಚಿಕೆಯು ರೂ. 16.6849 ಕೋಟಿ ಇರುತ್ತದೆ. ಅದರಲ್ಲಿ ಇಂದಿನವರೆಗೆ ರೂ. 10.79 ಕೋಟಿ ಬಿಡುಗಡೆ |

| | | |
|---|---|---|
| | | ಮಾಡಲಾಗಿದೆ. ಪುನರಾವಲೋಕನದ ನಂತರ ಜೂನ್, 2015ರಲ್ಲಿ ರೂ. 5.8948 ಕೋಟಿ ಬಿಡುಗಡೆಯಾಗಿದೆ.<br>▸ ಯೋಜನಾ ಅವಧಿಯು ಮಾರ್ಚ್, 2016ರ ವರೆಗೆ ಇದೆ.<br>▸ ರಾಜ್ಯದ ಕಡ್ಡಾಯ ಪಾಲು ರೂ. 0.6987 ಕೋಟಿ ಇದೆ. |
| 12. | ತಮಿಳುನಾಡು | ▸ ಈ ಯೋಜನೆಯ ಪುನರಾವಲೋಕನದ ನಂತರ ತಮಿಳುನಾಡಿಗೆ ರೂ. 19.415575 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಯಿತು. 2011–12ರಲ್ಲಿ ಮೊದಲ ಕಂತಾಗಿ ರೂ. 11.544 ಕೋಟಿ ಮೊತ್ತವನ್ನು ರಾಜ್ಯಕ್ಕೆ ಬಿಡುಗಡೆ ಮಾಡಲಾಗಿದೆ. ರಾಜ್ಯವು ರೂ. 11.2928 ಕೋಟಿ ಮೊತ್ತದ ಬಳಕೆಯ ಬಗ್ಗೆ ವರದಿಮಾಡಿದೆ ಮತ್ತು ಪುನರಾವಲೋಕನದ ನಂತರ ಇನ್ನುಳಿದ ನಿಧಿಗಳ ಮೊದಲನೇ ಕಂತಿಗಾಗಿ ವಿನಂತಿಸಲಾಗುತ್ತಿದೆ. ಆದಾಗ್ಯೂ, ಪರಿಷ್ಕೃತ ತಿಳುಳಿಕೆ ಪತ್ರವು ಅನುಮೋದಿಸಬೇಕಾಗಿದೆ ಮತ್ತು ಸಹಿಮಾಡಬೇಕಾಗಿದೆ. ಎರಡು (ಅಥವಾ ಹೆಚ್ಚು) ಕಂತುಗಳಲ್ಲಿ ಬಿಡುಗಡೆಯಾಗಬೇಕಾದ ಬಾಕಿ ಮೊತ್ತವು ರೂ. 7.771575 ಕೋಟಿ ಆಗಿದೆ.<br>▸ ಅನುಮೋದಿತ ಯೋಜನಾ ಅವಧಿಯು ಮಾರ್ಚ್, 2016ರ ವರೆಗೆ ಇದೆ.<br>▸ ಪರಿಷ್ಕೃತ ತಿಳುಳಿಕೆ ಪತ್ರದ ಅನ್ವಯ, ರಾಜ್ಯದ ಕಡ್ಡಾಯ ಪಾಲು ರೂ. 4.84 ಕೋಟಿ ಇದೆ. ಆದರೆ ರಾಜ್ಯಸರ್ಕಾರವು ತನ್ನ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ. 19.36 ಕೋಟಿ ಮೊತ್ತವನ್ನು ಒದಗಿಸಲು ರಾಜ್ಯ ಸರ್ಕಾರವು ಬದ್ಧವಾಗಿರುತ್ತದೆ. |
| 13. | ತೆಲಂಗಾಣ | ▸ ಪುನರಾವಲೋಕನ ಕಾರ್ಯದ ನಂತರ ಭಾರತ ಸರ್ಕಾರವು ತೆಲಂಗಾಣಕ್ಕೆ ನೀಡಿದ ಪರಿಷ್ಕೃತ ಹಂಚಿಕೆ ರೂ. 12.3494 ಕೋಟಿ ಆಗಿದೆ. ಪುನರಾವಲೋಕನದ ಮೊದಲು ತೆಲಂಗಾಣಕ್ಕೆ ರೂ. 10.168 ಕೋಟಿ ಮೊತ್ತವನ್ನು ಬಿಡುಗಡೆ ಮಾಡಬೇಕಾದದ್ದು ಎಂದು ಪರಿಗಣಿಸಲಾಯಿತು. (ರಾಜ್ಯಗಳ ವಿಭಜನೆಯ ನಂತರದ ನಿಯಮಗಳ ಅನ್ವಯ) ಮತ್ತು ಪುನರಾವಲೋಕನದ ನಂತರ ಅಕ್ಟೋಬರ್, 2015ರಲ್ಲಿ ರೂ. 1.0884 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಯಿತು. ರಾಜ್ಯದ ಕಡ್ಡಾಯ ಪಾಲು ರೂ. 1.50 ಕೋಟಿ ಆಗಿದೆ.<br>▸ ಇಲ್ಲಿಯವರೆಗೆ ಬಿಡುಗಡೆಯಾದ ರೂ. 12.7564 ಕೋಟಿ ಮೊತ್ತದ [ರೂ.11.2564 ಕೋಟಿ (ಭಾರತ ಸರ್ಕಾರ)+ ರೂ.1.5 ಕೋಟಿ (ರಾಜ್ಯದ ಪಾಲು)] ನಿಧಿಗಳಿಂದ, ರೂ.12.7564 ಕೋಟಿ ಮೊತ್ತವನ್ನು [ರೂ.10.6164 ಕೋಟಿ (ಭಾರತ ಸರ್ಕಾರ)+ ರೂ.1.50 ಕೋಟಿ (ರಾಜ್ಯದ ಪಾಲು)] ವೆಚ್ಚ ಮಾಡಲಾಗಿದೆ.<br>▸ ಕೊನೆಯ ಕಂತು ರೂ. 1.0884 ಕೋಟಿ ಮೊತ್ತದಲ್ಲಿ ರೂ. 0.4484 ಕೋಟಿ ಮೊತ್ತವನ್ನು ಉಪಯೋಗಿಸಲಾಗಿದೆ.<br>▸ ಯೋಜನಾ ಅವಧಿಯು ಮಾರ್ಚ್, 2016ರ ವರೆಗೆ ಇದೆ. |
| 14. | ಉತ್ತರಾಖಂಡ | ▸ ಉತ್ತರಾಖಂಡಕ್ಕೆ ಭಾರತ ಸರ್ಕಾರದ ಹಂಚಿಕೆಯು ರೂ. 43.86 ಕೋಟಿ ಆಗಿದೆ. ಅದರಲ್ಲಿ ರೂ. 4 ಕೋಟಿ ಮೊತ್ತವನ್ನು ನವ್ಹೆಂಬರ್, 2015ರಲ್ಲಿ ಬಿಡುಗಡೆ ಮಾಡಲಾಗಿದೆ. ರಾಜ್ಯದ |

| | | |
|---|---|---|
| | | ಪಾಲು 0.75 ಕೋಟಿ ಆಗಿದೆ.<br>▸ ಉತ್ತರಾಖಂಡದ ಯೋಜನಾ ಅವಧಿಯು ಮಾರ್ಚ್, 2017ರ ವರೆಗೆ ಇದೆ. |
| 15. | ಉತ್ತರ ಪ್ರದೇಶ | ▸ ಉತ್ತರಪ್ರದೇಶಕ್ಕೆ ಭಾರತ ಸರ್ಕಾರದ ಹಂಚಿಕೆಯು ರೂ. 43.86 ಕೋಟಿ ಆಗಿದೆ. ಅದರಲ್ಲಿ ರೂ. 6 ಕೋಟಿ ಮೊತ್ತವನ್ನು ನವೆಂಬರ್, 2015ರಲ್ಲಿ ಬಿಡುಗಡೆ ಮಾಡಲಾಗಿದೆ. ರಾಜ್ಯದ ಪಾಲು ರೂ. 1.6193 ಕೋಟಿ ಆಗಿದೆ.<br>▸ ಉತ್ತರಪ್ರದೇಶದ ಯೋಜನಾ ಅವಧಿಯು ಮಾರ್ಚ್, 2017ರವರೆಗೆ ಇದೆ. |
| 16. | ಪಶ್ಚಿಮ ಬಂಗಾಳ | ▸ ಪುನರಾವಲೋಕನ ಕಾರ್ಯದ ನಂತರ ಪಶ್ಚಿಮ ಬಂಗಾಳಕ್ಕೆ ಭಾರತ ಸರ್ಕಾರದ ಪರಿಷ್ಕೃತ ಹಂಚಿಕೆ ರೂ. 20.522 ಕೋಟಿ ಆಗಿದೆ. ಅದರಲ್ಲಿ ರೂ. 12.896 ಕೋಟಿ ಮೊತ್ತವನ್ನು ಇದುವರೆಗೆರ ಬಿಡುಗಡೆ ಮಾಡಲಾಗಿದ್ದು, ಮಾಚ್, 2015ರಲ್ಲಿ ಬಿಡುಗಡೆಗೊಳಿಸಲಾಯಿತು.<br>▸ ಯೋಜನಾ ಅವಧಿಯು ಮಾರ್ಚ್, 2016ರವರೆಗೆ ಇದೆ.<br>▸ ರಾಜ್ಯದ ಕಡ್ಡಾಯ ಪಾಲು ರೂ. 1.964 ಕೋಟಿ ಇತ್ತು. ರಾಜ್ಯವು ಅದನ್ನು ವೆಚ್ಚ ಮಾಡಿದ್ದಾಗಿ ವರದಿ ಮಾಡಿದೆ. |

**ಮೂಲ:** ಅಂಕಿ ಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ.

# 3. ಕಾರ್ಯಕ್ರಮ ಸಿದ್ಧಾಂತ

## 3.1 ಕರ್ನಾಟಕದಲ್ಲಿ ಸಾಂಖ್ಯಿಕ ವ್ಯವಸ್ಥೆ

ಹಿಂದಿನ ಮೈಸೂರು ರಾಜ ಸಂಸ್ಥಾನದಲ್ಲಿಯೂ ಸಹ, ಅಂಕಿ-ಅಂಶಗಳಿಗೆ ಯೋಜನೆ ಮತ್ತು ಆಡಳಿತ ಮಹತ್ವದ ಸಾಧನವೆಂದು ಸೂಕ್ತ ಮಾನ್ಯತೆ ನೀಡಲಾಗಿತ್ತು. 1982 ಕ್ಕೂ ಮುಂಚೆ, ಭಾರತ ಸರ್ಕಾರದಿಂದ 1979 ರಲ್ಲಿ ರೂಪಿಸಿದ ರಾಷ್ಟ್ರೀಯ ಸಾಂಖ್ಯಿಕ ವ್ಯವಸ್ಥೆಯನ್ನು ಪರೀಶೀಲಿಸುವ ಸಮಿತಿಯ ಶಿಫಾರಸ್ಸುಗಳ ಅನ್ವಯ, ರಾಜ್ಯದಲ್ಲಿನ ಎಲ್ಲ ಸಾಂಖ್ಯಿಕ ವಿಷಯಗಳಿಗೆ ಸಂಬಂಧಿಸಿದಂತೆ ('ಆರ್ಥಿಕ ಹಾಗೂ ಸಾಂಖ್ಯಿಕ ಬ್ಯೂರೋ' ಎಂದು ಆಗ ಕರೆಯಲ್ಪಡುತ್ತಿದ್ದ) 'ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯವನ್ನು ನೋಡೆಲ್ ಏಜೆನ್ಸಿ' ಎಂದು ಭಾರತ ಸರ್ಕಾರವು ಘೋಷಿಸಿತು ಮತ್ತು ರಾಜ್ಯದಲ್ಲಿನ ಇಲಾಖಾ ಸಾಂಖ್ಯಿಕ ವಿಭಾಗಗಳ ಕಾರ್ಯದ ವ್ಯವಸ್ಥಿತ ಪರಿಶೀಲನೆ ಕೈಗೊಳ್ಳಲು ಅದಕ್ಕೆ ಅಧಿಕಾರ ನೀಡಿತು. ಈ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಎಲ್ಲ ಸಂಬಂಧಿಸಿದ ಇಲಾಖೆಗಳಿಗೆ ಸಾಂಖ್ಯಿಕ ಮಾನವ ಸಂಪನ್ಮೂಲವನ್ನು ಒದಗಿಸುವ ಮತ್ತು ಅಂಕಿ-ಅಂಶಗಳ ಸಂಗ್ರಹ, ವಿಶ್ಲೇಷಣೆ ಹಾಗೂ ಪ್ರಸಾರಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ರಾಜ್ಯ ಸರ್ಕಾರಕ್ಕೆ ಮತ್ತು ಅದರ ವಿವಿಧ ಇಲಾಖೆಗಳಿಗೆ ಮಾರ್ಗದರ್ಶನ ಮಾಡುವ ಹಾಗೂ ಸಲಹೆ ನೀಡುವ ರಾಜ್ಯದ ಕೇಂದ್ರ ಸಾಂಖ್ಯಿಕ ಪ್ರಾಧಿಕಾರವಾಗಿದೆ.

## 3.2 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಬಗ್ಗೆ

ಕರ್ನಾಟಕ ಸರ್ಕಾರವು ದಿನಾಂಕ: 28-05-2008 ರಂದು ಭಾರತ ಸರ್ಕಾರಕ್ಕೆ ಬರೆದ ಪತ್ರದಲ್ಲಿ ತನ್ನ ಆಸಕ್ತಿಯನ್ನು ವ್ಯಕ್ತಪಡಿಸುವುದರಿಂದ ತಾನು ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಿತು. ಹಾಗೆ ಮಾಡುವಾಗ ರಾಜ್ಯವು ರಾಷ್ಟ್ರೀಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ರಾಷ್ಟ್ರೀಯ ದೃಷ್ಟಿಕೋನ ಹಾಗೂ ಕಾರ್ಯತಾಂತ್ರಿಕ ಸಾಂಖ್ಯಿಕ ನೀತಿ ರೂಪುರೇಷೆಗೆ ತನ್ನ ವಂತಿಕೆ ಸಲ್ಲಿಸಲು ಮತ್ತು ಪ್ರೋತ್ಸಾಹಿಸಲು ಒಪ್ಪಿಕೊಂಡಿತು. ಅದರಿಂದಾಗಿ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಅವರಿಂದ ನೀಡಲ್ಪಟ್ಟ ವ್ಯಾಪಕ ಮಾರ್ಗಸೂಚಿಗಳ ಆಧಾರದ ಮೇಲೆ 'ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ'ಯನ್ನು ನಿರೂಪಿಸಲು ರಾಜ್ಯವು ಒಪ್ಪಿಕೊಂಡಿತು. 'ಭಾಗವಹಿಸುವ ಪತ್ರದ ಅನ್ವಯ ರಾಜ್ಯ ಸರ್ಕಾರವು-ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಂಚಾಲಕ ಸಮಿತಿಯನ್ನು ರಚಿಸಿತು ಮತ್ತು ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ನಿರೂಪಣೆ ಮತ್ತು ಅನುಷ್ಠಾನದ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರದ ಭಾಗವಹಿಸುವ ಎಲ್ಲ ಏಜೆನ್ಸಿಗಳೊಂದಿಗೆ ಸಹಭಾಗಿಯಾಗಲು 'ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಎಂಬ ಸಂಸ್ಥೆಯನ್ನು ಸಹ ರಚಿಸಿತು.

**ದಿನಾಂಕ: 10-12-2010 ರಂದು ಕರ್ನಾಟಕವು ಭಾರತ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಭಾರತ ಸರ್ಕಾರದ ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ದೊಂದಿಗೆ ತಿಳುವಳಿಕೆ ಪತ್ರಕ್ಕೆ ಸಹಿಮಾಡಿದ ಮೊದಲನೇ ರಾಜ್ಯವಾಗಿತ್ತು.**

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ನಿರೂಪಣೆಯ ಪ್ರಕ್ರಿಯೆಯು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ 'ಯೋಜನಾ ನಿರ್ವಹಣಾ ತಂಡ'ವನ್ನು ರಚಿಸುವುದರೊಂದಿಗೆ ಆರಂಭವಾಯಿತು. ಅದಕ್ಕಾಗಿ ಮಧ್ಯಸ್ಥಗಾರರೊಂದಿಗೆ ಚರ್ಚೆಗಳು, ವಿಚಾರಸಂಕಿರಣಗಳು ಹಾಗೂ ಕಾರ್ಯಾಗಾರಗಳಲ್ಲಿ ಚರ್ಚೆಗಳು ಮತ್ತು ವೈಯಕ್ತಿಕ ಸಲಹೆಗಳ ನಂತರ ಕರಡು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ

ಯೋಜನೆಯನ್ನು ಸಿದ್ಧಪಡಿಸುವುದು ಅನಿವಾರ್ಯವಾಯಿತು. ಅದರಂತೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಡಿಯಲ್ಲಿ ನೇರವಾಗಿ ಬರುವ 11 ಪ್ರಮುಖ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕರಡು ಯೋಜನೆಯನ್ನು ತಯಾರಿಸಲಾಯಿತು. ಸಂಬಂಧಿಸಿದ ಇಲಾಖೆಗಳೊಂದಿಗೆ ವ್ಯವಹರಿಸುವ ಇನ್ನುಳಿದ 9 ಚಟುವಟಿಕೆಗಳಿಗಾಗಿ ಇಂತಹದೇ ಪ್ರಕ್ರಿಯೆಗಳನ್ನು ಕೈಗೊಳ್ಳಲಾಯಿತು.

ಅದರಂತೆ, ಕರ್ನಾಟಕ ಸರ್ಕಾರವು 'ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ'ಯನ್ನು ಸ್ಥಾಪಿಸಿತು. ಈ ಸಂಸ್ಥೆಯು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960 ರ ಅಡಿಯಲ್ಲಿ ನೋಂದಾಯಿಸಲಾಗಿದೆ.

ಈ ಸಂಘದ ಧ್ಯೇಯೋದ್ದೇಶಗಳು ಹೀಗಿವೆ:

- ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯನ್ನು ಅನುಷ್ಠಾನಗೊಳಿಸುವುದು.
- ರಾಷ್ಟ್ರೀಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನ್ವಯ ರಾಜ್ಯ ಸಾಂಖ್ಯಿಕ ವ್ಯವಸ್ಥೆಯನ್ನು ಬಲಪಡಿಸುವುದಕ್ಕಾಗಿ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯನ್ನು ವಿನ್ಯಾಸಗೊಳಿಸುವುದು ಮತ್ತು ಅನುಷ್ಠಾನಗೊಳಿಸುವುದು.

ಈ ಮೇಲ್ಕಂಡ ಧ್ಯೇಯೋದ್ದೇಶಗಳನ್ನು ಅನುಸರಿಸಿ, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಈ ಕೆಳಕಂಡ ಕಾರ್ಯಭಾರಗಳನ್ನು ಮತ್ತು ಚಟುವಟಿಕೆಗಳನ್ನು ಕೈಗೊಂಡಿದೆ.

- ಸಂಘದ ವ್ಯವಹಾರಗಳನ್ನು ನಡೆಸಲು ನಿಯಮಗಳನ್ನು ಮತ್ತು ಉಪ–ವಿಧಿಗಳನ್ನು ರಚಿಸುವುದು ಮತ್ತು ಅವುಗಳಿಗೆ ಕಾಲಕಾಲಕ್ಕೆ ಸೇರ್ಪಡೆ, ತಿದ್ದುಪಡಿ, ಬದಲಾವಣೆ ಅಥವಾ ತೆಗೆದುಹಾಕುವುದನ್ನು ಮಾಡುವುದು.
- ಯಾವುದೇ ರೂಪದ ಸ್ವತ್ತನ್ನು ಒಳಗೊಂಡು ನಗದು ಅಥವಾ ಇನ್ಯಾವುದೇ ರೂಪದಲ್ಲಿ ನಿಧಿಗಳನ್ನು ಎತ್ತುವುದು, ದೇಣಿಗೆಗಳನ್ನು ಅಥವಾ ಅನುದಾನಗಳನ್ನು ಸ್ವೀಕರಿಸುವುದು.
- ಸಂದರ್ಭಾನುಸಾರ, ರಾಜ್ಯ ಸರ್ಕಾರದ ಪೂರ್ವಾನುಮತಿ ಪಡೆದು ಅಥವಾ ಪಡೆಯದೇ ಸಂಘದ ಆಡಳಿತ ಮಂಡಳಿಯಿಂದ ನಿರ್ಧರಿಸಿದಂತಹ ಷರತ್ತುಗಳ ಮೇಲೆ ಮತ್ತು ರೀತಿಯಲ್ಲಿ ಭದ್ರತೆಯುಕ್ತ ಅಥವಾ ಭದ್ರತೆ ರಹಿತವಾಗಿ ಸಂಘದ ಉದ್ದೇಶಗಳಿಗಾಗಿ ಅಗತ್ಯವಿರುವ ಹಣವನ್ನು ಸಾಲ ಮಾಡುವುದು ;
- ಸಂಘದ ಆಡಳಿತ ಮಂಡಳಿಯಿಂದ ನಿರ್ಧರಿಸಿದಂತಹ ರೀತಿಯಲ್ಲಿ ಅದರ ಯಾವುದೇ ಉದ್ದೇಶಗಳಿಗಾಗಿ ಕೂಡಲೇ ಅಗತ್ಯವಾಗಿರದ ಸಂಘದ ಯಾವುದೇ ಹಣವನ್ನು ಹೂಡಿಕೆ ಮಾಡುವುದು.
- ಸಂಘದ ರಚನೆ, ನೋಂದಣಿ ಮತ್ತು ಕಾರ್ಯಾಚರಣೆಗಳಿಗೆ ಸಂಬಂಧಿಸಿದಂತೆ ಸಂಘವು ವ್ಯಯಯಿಸಬಹುದಾದ ಯಾವುದೇ ವೆಚ್ಚಗಳನ್ನು ಸಂಘದ ನಿಧಿಗಳಿಂದ ಭರಿಸುವುದು.
- ಸಂಘದ ಆಡಳಿತ ಮಂಡಳಿಯು ನಿರ್ಧರಿಸಿದಂತೆ ಓವರ್ ಡ್ರಾಫ್ಟ್ ಖಾತೆ ಒಳಗೊಂಡಂತೆ ಯಾವುದೇ ವಿಧದ ಬ್ಯಾಂಕ್ ಖಾತೆಗಳನ್ನು ತೆರೆಯುವುದು ಮತ್ತು ಅದನ್ನು ದಿನನಿತ್ಯದ ವ್ಯವಹಾರದಲ್ಲಿ ಕಾರ್ಯಾಚರಣೆಗೊಳಿಸುವುದು;
- ಸಂಘವು ತನ್ನ ವ್ಯವಹಾರವನ್ನು ನಡೆಸುವ ಉದ್ದೇಶಕ್ಕಾಗಿ ರಾಜ್ಯದ ವ್ಯಾಪ್ತಿಯಲ್ಲಿ ಕಛೇರಿಗಳನ್ನು, ಶಾಲೆಗಳನ್ನು ಮತ್ತು ಏಜೆನ್ಸಿಗಳನ್ನು ಸ್ವಂತಕ್ಕೆ ಹೊಂದುವುದು, ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

- ಸಂಘವು ತಾನು ಸೂಕ್ತವೆಂದು ಪರಿಗಣಿಸಿದ ಯಾವುದೇ ಕಂಪನಿಗಳು, ಅಧೀನ ಸಂಸ್ಥೆಗಳು, ಸಂಘಗಳು ಅಥವಾ ಇಂತಹ ಇತರ ವ್ಯಕ್ತಿ ಸಮೂಹಗಳನ್ನು ಪ್ರವರ್ತನೆ, ರಚನೆ, ನಿರ್ವಹಣೆ ಮಾಡುವುದು ಅಥವಾ ಅದಕ್ಕಾಗಿ ನೆರವಾಗುವುದು.
- ಸಂಘವು ತನಗೆ ಸೂಕ್ತವೆಂದು ಕಂಡು ಬಂದ ತನ್ನ ಯಾವುದೇ ಉದ್ಯಮವನ್ನು ಅಥವಾ ಅದರ ಯಾವುದೇ ಭಾಗವನ್ನು ಆಡಳಿತ ಮಂಡಳಿಯ ಪೂರ್ವಾನುಮತಿ ಪಡೆದು ಮೌಲ್ಯಕ್ಕಾಗಿ ಮತ್ತು ವಿಶೇಷವಾಗಿ ಸಂಘವು ಹೊಂದಿರುವಂತಹದೇ ಹೊಂದಿದ ಇತರ ಯಾವುದೇ ಕಂಪನಿಯ ಶೇರುಗಳು, ಸಾಲಪತ್ರಗಳು ಅಥವಾ ಭದ್ರತಾ ಪತ್ರಗಳಿಗಾಗಿ – ಮಾರುವುದು ಅಥವಾ ಹಸ್ತಾಂತರಿಸುವುದು.
- ಸಂಘದ ಆಡಳಿತ ಮಂಡಳಿಯ ಪೂರ್ವಾನುಮತಿಯೊಂದಿಗೆ, ಯಾವುದೇ ಕಂಪನಿ, ಸಂಘ, ವ್ಯಕ್ತಿ ಸಮೂಹ ಅಥವಾ ವ್ಯಕ್ತಿಯೊಂದಿಗೆ ಪಾಲುದರಿಕೆ ಅಥವಾ ಜಂಟಿ ವ್ಯವಹಾರ ಹೊಂದುವುದು ಅಥವಾ ಅಂತಹ ಯಾವುದೇ ಕಂಪನಿ, ಸಂಘ, ವ್ಯಕ್ತಿ ಸಮೂಹ ಅಥವಾ ವ್ಯಕ್ತಿಗೆ ಯಾವುದೇ ರೂಪದಲ್ಲಿ ಸಹಕರಿಸುವುದು, ಸಹಾಯಧನ ನೀಡುವುದು ಅಥವಾ ನೆರವಾಗುವುದು ಮತ್ತು ಸಂಘದ ಉದ್ದೇಶಗಳ ಈಡೇರಿಕೆಗೆ ಅಗತ್ಯವಾಗಿವೆ, ಅನುಷಂಗಿಕವಾಗಿವೆ ಅಥವಾ ನೆರವಾಗುತ್ತವೆ ಎಂದು ಸಂಘವು ಪರಿಗಣಿಸಿದಾಗ ಮಾತ್ರ ಇವೆಲ್ಲ ಕಾರ್ಯಗಳನ್ನು ಮಾಡುವುದು.

- ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯಿಂದ ಕಾರ್ಯಭಾರಗಳನ್ನು ಅಥವಾ ಚಟುವಟಿಕೆಗಳನ್ನು ಕೈಗೊಳ್ಳುವುದರಿಂದ ಅಥವಾ ಸಂಬಂಧಿಸಿದ ಇಲಾಖೆಗಳು/ಏಜೆನ್ಸಿಗಳು/ಘಟಕಗಳಿಂದ ಕೈಗೊಳ್ಳಲು ಕಾರಣವಾಗುವುದರಿಂದ–ಈ ಮೇಲ್ಕಂಡ ಧ್ಯೇಯೋದ್ದೇಶಗಳನ್ನು ನೆರವೇರಿಸತಕ್ಕದ್ದು.

### 3.3 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಲಕ್ಷಣಗಳು

#### 3.3.1 ಉದ್ದೇಶಗಳು

'ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ'ಯ ಉದ್ದೇಶಗಳು ಈ ಕೆಳಗಿನವುಗಳನ್ನು ಒಳಗೊಳ್ಳುತ್ತವೆ:

- 'ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ'ಯನ್ನು ಅನುಷ್ಠಾನಗೊಳಿಸುವುದು ಹಾಗೂ ಈ ಕೆಳಕಂಡ ಚಟುವಟಿಕೆಗಳನ್ನು ಬೆಂಬಲಿಸುವುದು:
  - ದಕ್ಷ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿ ಸಾಂಖ್ಯಿಕ ಮೂಲಾಧಾರವನ್ನು ಬಲಪಡಿಸುವುದು.
  - ಅರ್ಹ ಮತ್ತು ಸೂಕ್ತ ಮಾನವ ಸಂಪನ್ಮೂಲವನ್ನು ಸುಸ್ಥಿತಿಯಲ್ಲಿಡುವುದು.
  - ಪೂರಕ ಸಂಶೋಧನೆ, ತರಬೇತಿ ಮತ್ತು ಬೆಂಬಲ ಸೇವೆಗಾಗಿ ಸಾಮರ್ಥ್ಯ ಹೊಂದುವುದು.
  - ದತ್ತಾಂಶ ಸಂಗ್ರಹ, ಸಂಕಲನ, ವಿಶ್ಲೇಷಣೆ, ಸಂಗ್ರಹಣೆ, ಪ್ರಸಾರ ಮತ್ತು ಹಂಚಿಕೆಗಳಿಗಾಗಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ.
  - ಅಂಕಿ ಅಂಶಗಳ ಸಂಗ್ರಹಣೆ, ಬಳಕೆ, ಪ್ರಕಟಣೆ, ಹಂಚಿಕೆಯ ಬಗ್ಗೆ ಸುಸಂಬದ್ಧ ನೀತಿ ಮತ್ತು ಕನಿಷ್ಠ ಮಾನದಂಡಗಳು.
  - ವಿಶ್ವಾಸಾರ್ಹ, ನಂಬಲರ್ಹ, ಸಕಾಲಿಕ ಮತ್ತು ಸೂಕ್ತ ಸಾಂಖ್ಯಿಕ ಬೆಂಬಲ.

- ಸಂಬಂಧಿಸಿದ ಇಲಾಖೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಹೊಣೆಗಾರಿಕೆ, ಪರಸ್ಪರಬೆಂಬಲ, ಸಹಯೋಗಗಳು ಮತ್ತು ಸ್ಪಷ್ಟ ಉತ್ತರದಾಯಿತ್ವ –ಇವುಗಳ ಬಗ್ಗೆ ಸ್ಪಷ್ಟತೆ.

### 3.4 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಹಣಕಾಸು ನೆರವು

#### 3.4.1 ಮೂಲ ತಿಳುವಳಿಕೆ ಪತ್ರದ ಅಡಿಯಲ್ಲಿ ಚಟುವಟಿಕೆವಾರು ನಿಧಿಗಳ ಕ್ರಮಾನುಗತ ಹಂಚಿಕೆ

ಮೂಲ ತಿಳುವಳಿಕೆ ಪತ್ರದ ಅನ್ವಯ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ನಿಧಿಗಳು ಭಾರತ ಸರ್ಕಾರದಿಂದ ರೂ. 32.8468 ಕೋಟಿ ಮತ್ತು ಕರ್ನಾಟಕ ಸರ್ಕಾರದಿಂದ ರೂ. 13.9759 ಕೋಟಿ ಆಗಿತ್ತು. ರೂ. 10.00 ಲಕ್ಷ ಮೊತ್ತವನ್ನು ಮೂಲಧನವಾಗಿ ಬಿಡುಗಡೆ ಮಾಡಲಾಯಿತು. ಅದರಲ್ಲಿ ರೂ. 1.53 ಲಕ್ಷ ಮೊತ್ತವನ್ನು ಬಳಸಲಾಯಿತು ಮತ್ತು ಉಳಿದ ರೂ. 8.47 ಲಕ್ಷ ಮೊತ್ತವನ್ನು ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯಕ್ಕೆ ವಾಪಸ್ಸು ಮಾಡಲಾಯಿತು.

ವಿಷಯವಾರು/ಅಂಶವಾರು ವರ್ಗೀಕರಿಸಿದ ಅನುಮೋದಿತ ಹಂಚಿಕೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಪಟ್ಟಿ ಮಾಡಲಾಗಿದೆ.

**ಕೋಷ್ಟಕ 4: ಮೂಲ ತಿಳುವಳಿಕೆ ಪತ್ರದನ್ವಯ(2010–14) ಅನುಮೋದಿತ ಹಂಚಿಕೆಯ ವಿವರಗಳು :**

**ಅನುಮೋದಿತ ಹಂಚಿಕೆಯ ವಿವರಗಳು**

| ಕ್ರ.. ಸಂ. | ವಿಷಯಗಳು | ಚಟುವಟಿಕೆ ಮತ್ತು ಗುರಿಗಳು | | ಅನುಮೋದಿತ ಹಂಚಿಕೆ (ಕೋಟಿ ರೂ.) |
|---|---|---|---|---|
| I | ಸಾಂಖ್ಯಿಕ ಚಟುವಟಿಕೆಗಳ ಸಮನ್ವಯ ಮತ್ತು ವ್ಯವಸ್ಥಾಪನೆಯನ್ನು ಸುಧಾರಿಸುವುದು. | I ಎ) | ಸಮ್ಮೇಳನಗಳು/ಕಾರ್ಯಾಗಾರಗಳು (ವೆಚ್ಚವನ್ನು ಈಗಾಗಲೇ ವ್ಯಯಿಸಲಾಗಿದೆ) | 0.2676 |
| | | I ಬಿ) | ಜಾಗೃತಿ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು, ಸಮ್ಮೇಳನಗಳು ಮತ್ತು ಜಾಹೀರಾತು (0.0939+0.0507+0.143) | 0.2876 |
| | | Iಸಿ) | ಫೆಡರೇಶನ್ ಆಫ್ ಕರ್ನಾಟಕ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳೊಂದಿಗೆ ಸಭೆಗಳು ಮತ್ತು ಮುಖ್ಯ ಕಾರ್ಯದರ್ಶಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು, ಇತ್ಯಾದಿಯವರೊಂದಿಗೆ ಸಮ್ಮೇಳನಗಳು.(0.0053+0.0051+0.0283) | 0.0387 |
| | | ಉಪ–ಮೊತ್ತ – I | | 0.5939 |
| II | ಮಾನವ ಸಂಪನ್ಮೂಲ ಅಭಿವೃದ್ಧಿ | II | 24 ತರಬೇತಿಗಳು | 1.1638 |
| | | ಉಪ–ಮೊತ್ತ – II | | 1.1638 |
| III | ಸಾಂಖ್ಯಿಕ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವುದು. | III | 06 ಚಟುವಟಿಕೆಗಳು | 0.5227 |
| | | ಉಪ– ಮೊತ್ತ – III | | 0.5227 |
| IV | ಭೌತಿಕ ಮೂಲಸೌಕರ್ಯದಲ್ಲಿ ಮತ್ತು ಮಾಹಿತಿ ತಂತ್ರಜ್ಞಾನದಲ್ಲಿ ಹೂಡಿಕೆ | IV a) | ನೂತನ ಕಟ್ಟಡ ನಿರ್ಮಾಣ | 4.528* |
| | | IV | ಭಾರತ ಸರ್ಕಾರದಲ್ಲಿ ಸಿವಿಲ್‌ನ ಉಪ–ಮೊತ್ತ | 3.396**** |
| | | V b) | ಮಾಹಿತಿ ತಂತ್ರಜ್ಞಾನ (ರೂ. 11.3995 ಕೋಟಿ ಈಗಾಗಲೇ ವ್ಯಯಯಿಸಲಾಗಿದೆ) | 11.4982** |
| | | ಉಪ–ಮೊತ್ತ – IV(IV + V b)) | | 14.8942 |
| V | ಸಾಂಖ್ಯಿಕ ಚಟುವಟಿಕೆಗಳನ್ನು ಸುಧಾರಿಸುವುದು. | V a) | ಅಧ್ಯಯನಗಳು, ಸಮೀಕ್ಷೆಗಳು ಹಾಗೂ ಇತರ ಸಾಂಖ್ಯಿಕ ಚಟುವಟಿಕೆಗಳು. | 5.9954 |
| | | V b) | ಜಿಲ್ಲೆಗಳಲ್ಲಿನ ಕಾರ್ಯಕ್ರಮ ಸಮಾಲೋಚಕರು (ವೆಚ್ಚವನ್ನು ಈಗಾಗಲೇ ವ್ಯಯಿಸಲಾಗಿದೆ) | 2.2896 |
| | | V c) | ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸಲು ಅಧ್ಯಯನಗಳು–ಡೆಲೊಟ್ಟೆ ಅಧ್ಯಯನ ಸಂದಾಯ. | 0.51 |
| | | V d) | ನ್ಯಾಶನಲ್ ಇನ್‌ಫಾರ್ಮಿಟಿಕ್ಸ್ ಸೆಂಟರ್–ನ್ಯಾಶನಲ್ ಇನ್‌ಫಾರ್ಮಿಟಿಕ್ಸ್ ಸೆಂಟರ್ ಸರ್ವೀಸಸ್ ಇನ್‌ಕಾರ್ಪೋರೇಟೆಡ್ (ಇಂಡಿಯಾ)ರವರಿಂದ ಸಲಹಾ ಶುಲ್ಕ, ವೆಬ್ ಆಧಾರಿತ ಅಪ್ಲಿಕೇಶನ್, ವೆಬ್ ಪೋರ್ಟಲ್, ಕಾರ್ಮಿಕ ಇಲಾಖೆಯ ಅಡಿಯಲ್ಲಿ ನೋಂದಾಯಿಸಿರದ ಸಂಸ್ಥೆ ಸಂಗ್ರಹಣೆ ಮತ್ತು ಗಣಕೀಕರಣ. | 1.0 |
| | | ಉಪ–ಮೊತ್ತ – V | | 9.795 |
| | ಒಟ್ಟು ಮೊತ್ತ (ಭಾರತ ಸರ್ಕಾರ) | | | 26.9696 |

*ರಾಜ್ಯದ 25% ಸಿವಿಲ್ ಪಾಲನ್ನು ಒಳಗೊಂಡಿದೆ. **ಮಾಹಿತಿ ತಂತ್ರಜ್ಞಾನಕ್ಕಾಗಿ ರೂ. 8.04874 ಕೋಟಿ ಇತರ ಪೂರಕ ವೆಚ್ಚಗಳಿಗಾಗಿ ರೂ. 3.44946 ಕೋಟಿ. ಅಂದರೆ–ವಾರ್ಷಿಕ ನಿರ್ವಹಣೆ, ಹಾರ್ಡ್‌ವೇರ್ ಮೇಲ್ದರ್ಜೆ, ವೆಬ್–ಹಾಸ್ಟಿಂಗ್ ಇತ್ಯಾದಿ. ***ರೂ. 26.9696 ಕೋಟಿ ಮೊತ್ತ ಬಿಟ್ಟು ರೂ. 0.1 ಕೋಟಿ ಮೊತ್ತವನ್ನು ಈಗಾಗಲೇ ಮೂಲಧನವಾಗಿ ಬಿಡುಗಡೆ ಮಾಡಲಾಗಿದೆ. ****ರೂ. 1.132 ಕೋಟಿ ಮೊತ್ತವನ್ನು ರಾಜ್ಯದ ಸಿವಿಲ್ ಪಾಲಿನಂತೆ ರಾಜ್ಯದಿಂದ ಒದಗಿಸಲಾಗುವುದು.

**3.4.2 ಪರಿಷ್ಕೃತ ತಿಳುವಳಿಕೆ ಪತ್ರದ ಅಡಿಯಲ್ಲಿ ಚಟುವಟಿಕೆವಾರು ನಿಧಿಗಳ ಕ್ರಮಾನುಗತ ಹಂಚಿಕೆ**

ಎಲ್ಲ 14 ಅನುಷ್ಠಾನಗೊಳಿಸುತ್ತಿರುವ ರಾಜ್ಯಗಳ ಮರುಭೇಟಿ ಕಾರ್ಯವನ್ನು – ಅನುಷ್ಠಾನ ವಿವಾದಗಳಾದ ನಿಧಾನ ಪ್ರಗತಿ ಮತ್ತು ನಿಯಮಗಳಿಗೆ ಹಂಟಿಕೊಳ್ಳದಿರುವಿಕೆ–ಇವುಗಳ ನಿವಾರಣೆಗಾಗಿ ಮಾಡಲಾಯಿತು. ಪರಿಷ್ಕೃತ ವಿಷಯವಾರು ಹಂಚಿಕೆಗಳನ್ನು ಕರ್ನಾಟಕವನ್ನು ಒಳಗೊಂಡು ಎಲ್ಲ 14 ರಾಜ್ಯಗಳಿಗೂ ಕೊಂಡೊಯ್ಯಲಾಯಿತು. ಆದ್ದರಿಂದ, ಕರ್ನಾಟಕಕ್ಕಾಗಿ ಪರಿಷ್ಕೃತ ಹಂಚಿಕೆಯು ರೂ. 29.9696 ಕೋಟಿಗಳಾಗಿದ್ದು, ಈ ಮುಂಚಿನ ಹಂಚಿಕೆಯು ರೂ.32.8468 ಕೋಟಿ ಆಗಿತ್ತು. ವಿಷಯವರು/ಅಂಶವಾರು ವರ್ಗೀಕರಿಸಿದ ಪರಿಷ್ಕೃತ ಹಂಚಿಕೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

**ಕೋಷ್ಟಕ 5: ಪರಿಷ್ಕೃತ ತಿಳುವಳಿಕೆ ಪತ್ರದ ಅಡಿಯಲ್ಲಿ ನಿಧಿಗಳ ಹಂಚಿಕೆ (ಕೋಟಿ ರೂ.ಗಳಲ್ಲಿ)**

| ಕ್ರ. ಸಂ. | ಅಂಶಗಳು | ಮೊತ್ತ | ಮೂಲ ಅನುಮೋದಿತ ಹಂಚಿಕೆ ಕೋಷ್ಟಕದಲ್ಲಿ ಅನುಗುಣವಾದ ನಮೂದು |
|---|---|---|---|
| 1. | ಮಾಹಿತಿ ತಂತ್ರಜ್ಞಾನ | 8.04874 | IV (b) |
| 2. | ಭೌತಿಕ ಮೂಲಸೌಕರ್ಯ (#) | 3.396 | IV |
| 3. | ಇತರ ಪೂರಕ ವೆಚ್ಚಗಳು–ಅಂದರೆ ವಾರ್ಷಿಕ ನಿರ್ವಹಣೆ, ಹಾರ್ಡ್‌ವೇರ್ ಮೇಲ್ದರ್ಜೆ, ವೆಬ್–ಹಾಸ್ಟಿಂಗ್ ಇತ್ಯಾದಿ | 3.44946 | IV (b) |
| 4. | ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಸಿದ್ಧತೆ ಮತ್ತು ರಾಜ್ಯಗಳು ಮತ್ತು ಭಾರತ ಸರ್ಕಾರದೊಂದಿಗೆ ತಿಳುವಳಿಕೆ ಪತ್ರಕ್ಕೆ ಸಹಿಮಾಡುವುದು. | 0.1 (##) | ಮೂಲ ಧನವನ್ನು ಈಗಾಗಲೇ ಹಂಚಲಾಗಿದೆ. |
| 5. | ರಾಜ್ಯದ/ಕೇಂದ್ರಾಡಳಿತ ಪ್ರದೇಶದ ವಿಶೇಷ ಹೆಚ್ಚುವರಿಗಳನ್ನು ಒಳಗೊಂಡು ಅಸ್ತಿತ್ವದಲ್ಲಿರುವ ಮತ್ತು ನಿರೀಕ್ಷಿತ/ಅಗತ್ಯವಿರುವ ದತ್ತಾಂಶ ಅಂತರಗಳನ್ನು ಭರ್ತಿಮಾಡುವುದಕ್ಕಾಗಿ ತಾಂತಿಕ ಸಮೂಹಗಳ/ಸಂಸ್ಥೆಗಳ ಶಿಫಾರಸ್ಸುಗಳ ಅನುಷ್ಠಾನ. | 2.5572 | I (a) & V (b) |
| 6. | ಪ್ರಾದೇಶಿಕ ತರಬೇತಿ ಕೇಂದ್ರಗಳಿಗೆ ಬೆಂಬಲವನ್ನು ಒಳಗೊಂಡು ಸಾಮರ್ಥ್ಯ ಅಭಿವೃದ್ಧಿ ಮತ್ತು ಕೌಶಲ್ಯಗಳ ವರ್ಧನೆ/ಉನ್ನತೀಕರಣಕ್ಕಾಗಿ ತರಬೇತಿಯ ಬಗ್ಗೆ ಒತ್ತು | 1.1638 | II |
| 7. | ಸಾಂಖ್ಯಿಕ ಪ್ರಕ್ರಿಯೆಗಳ ಮತ್ತು ಕಾರ್ಯಾಚರಣೆಗಳ ದಕ್ಷತೆಯನ್ನು ಸುಧಾರಿಸುವುದಕ್ಕಾಗಿ ನೂತನ ತಂತ್ರಗಳ ಮತ್ತು ವಿಧಾನಗಳ ಪರಿಚಯ. | 0.5227 | III |

| | | | |
|---|---|---|---|
| 8. | ನಿರಂತರ/ನಿಯತಕಾಲಿಕ (ಪ್ರತಿವರ್ಷ ಒಂದು ಸಲ) ಬಳಕೆದಾರ–ಉತ್ಪಾದಕ ಮಾತುಕತೆಗಳನ್ನು, ಮಧ್ಯಸ್ಥಗಾರ ಸಲಹೆಗಳನ್ನು ಏರ್ಪಡಿಸುವುದು ಮತ್ತು ಬಳಕೆದಾರ ತೃಪ್ತಿಯ ಕುರಿತು ನಿಯತಕಾಲಿಕ (ವಾರ್ಷಿಕ) ಸಮೀಕ್ಷೆಗಳನ್ನು ಕೈಗೊಳ್ಳುವುದು. | 0.0387 | I (c) |
| 9. | ರಾಜ್ಯ ಸಾಂಖ್ಯಿಕ ವ್ಯವಸ್ಥೆಗಳ ನೆರವೇರಿಕೆಯ ಬಗ್ಗೆ ವಾರ್ಷಿಕ ವರದಿಗಳ ಪ್ರಸಾರದ ಮತ್ತು ವೆಚ್ಚ ಪರಿಣಾಮಕಾರಿತ್ವ ಮತ್ತು ದತ್ತಾಂಶ ಪ್ರವೇಶಾತಿಯ ಸುಗಮತೆಯನ್ನು ಸುಧಾರಿಸುವುದು. | 0.51 | V (c) |
| 10. | ದತ್ತಾಂಶ ಗುಣಮಟ್ಟ ಮತ್ತು ದಕ್ಷತೆ ಸುಧಾರಣಾ ಕ್ರಮಗಳು. | 5.9954 | V (a) |
| 11. | ಸಾಂಖ್ಯಿಕ ಉತ್ಪನ್ನಗಳನ್ನು ಮತ್ತು ದಕ್ಷತೆ ಸುಧಾರಣಾ ಕ್ರಮಗಳು. | 1.2876 | I (b) & V (d) |
| 12. | ಯೋಜನಾ ಹಂತದಲ್ಲಿ ಮುಂದಾಲೋಚಿಸಲಾರದ ಇತರ ಪೂರಕ ಅಂಶಗಳು/ಚಟುವಟಿಕೆಗಳ ಮೇಲೆ ವೆಚ್ಚಗಳು. | | |
| **ಒಟ್ಟು ವೆಚ್ಚ – ಭಾರತ ಸರ್ಕಾರ**(#) (##) | | **26.9696** | |

(#) ರಾಜ್ಯದ ಪಾಲಿನಂತೆ ರೂ. 1.132 ಕೋಟಿ ಹೆಚ್ಚುವರಿ ಮೊತ್ತವನ್ನು ರಾಜ್ಯದಿಂದ ಒದಗಿಸಲಾಗುವುದು.
(##) ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಸಿದ್ಧತೆಗಾಗಿ ಮೂಲಧನವಾಗಿ ರೂ. 0.1 ಕೋಟಿ ಹೆಚ್ಚುವರಿ ಮೊತ್ತವನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ.

### 3.4.3 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ನಿಧಿ ಬಳಕೆ:

'ಕರ್ನಾಟಕ ರಾಜ್ಯ ಕಾರ್ಯನೀತಿಯುಕ್ತ ಸಾಂಖ್ಯಿಕ ಯೋಜನೆ'ಯ ಅಡಿಯಲ್ಲಿ ಸರ್ಕಾರದ ನೆರವು ಹಣಕಾಸು ನೆರವಿನ ರೂಪದಲ್ಲಿತ್ತು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಗಾಗಿ 2009–10 ರಿಂದ 2014–15 ರ ಅವಧಿಗಾಗಿ ರೂ.40.95 ಕೋಟಿ ಮೊತ್ತದ ಬಜೆಟ್‌ನ್ನು ಹಂಚಿಕೆ ಮಾಡಲಾಯಿತು. ಒಟ್ಟು ಬಜೆಟ್ ಹಂಚಿಕೆ ರೂ.40.95 ಕೋಟಿ ಮೊತ್ತದಲ್ಲಿ ಭಾರತ ಸರ್ಕಾರದ ಪಾಲು ರೂ.26.97 ಕೋಟಿ ಮೊತ್ತದಷ್ಟಿತ್ತು ಮತ್ತು ರಾಜ್ಯದ ಪಾಲು ರೂ.13.98 ಕೋಟಿ ಮೊತ್ತದ್ದಾಗಿತ್ತು. ಆರಂಭದಿಂದ ಫೆಬ್ರವರಿ 2015 ರ ವರೆಗೆ ವ್ಯಯಿಸಿದ ಒಟ್ಟು ವೆಚ್ಚವು ರೂ.37.07 ಕೋಟಿಗಳು ಆಗಿತ್ತು. ಅದರಲ್ಲಿ ಭಾರತ ಸರ್ಕಾರದ ಪಾಲು ರೂ.23.64 ಕೋಟಿಗಳು ಹಾಗೂ ರಾಜ್ಯದ ಪಾಲು ರೂ.13.42 ಕೋಟಿಯಷ್ಟು ಆಗಿತ್ತು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ 2009–10 ರಿಂದ 2014–15 ರ ಅವಧಿಗಾಗಿ ವರ್ಷವಾರು ಹಣಕಾಸು ಪ್ರಗತಿ, ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

ಮಂಜೂರು ಮಾಡಿದ ಒಟ್ಟು ಮೊತ್ತದ ಸಮಗ್ರ ಬಳಕೆ ಅನುಪಾತವು ಶೇ. 90.53 ಆಗಿತ್ತು. ಅದರಲ್ಲಿ ಕರ್ನಾಟಕದ ನಿಧಿ ಬಳಕೆ ಅನುಪಾತವು ಶೇ.96.06 ರಷ್ಟಿತ್ತು ಮತ್ತು ಭಾರತ ಸರ್ಕಾರದ ನಿಧಿ ಬಳಕೆ ಅನುಪಾತವು ಶೇ.87.66 ಆಗಿತ್ತು.

**ಕೋಷ್ಟಕ 6: ನಿಧಿವಾರು ಹಣಕಾಸು ಪಟ್ಟಿ (ಲಕ್ಷ ರೂ. ಗಳಲ್ಲಿ)**

| ಕ್ರ. ಸಂ. | ವಿವರಗಳು | ವರ್ಷ | ಬಿಡುಗಡೆಗಳು | | | ವೆಚ್ಚ | | | ಸರ್ಕಾರಕ್ಕೆ ವಾಪಸುಮಾಡಿದ ಮೊತ್ತ. | | |
|---|---|---|---|---|---|---|---|---|---|---|---|
| | | | ಭಾರತ ಸರ್ಕಾರ | ಕರ್ನಾಟಕ ಸರ್ಕಾರ | ಒಟ್ಟು | ಭಾರತ ಸರ್ಕಾರ | ಕರ್ನಾಟಕ ಸರ್ಕಾರ | ಒಟ್ಟು | ಭಾರತ ಸರ್ಕಾರ | ಕರ್ನಾಟಕ ಸರ್ಕಾರ | ಒಟ್ಟು |
| 1 | **ಮೂಲ ಧನ** | 2009-10 | 10.00 | 0.00 | 10.00 | 1.53 | 0.00 | 1.53 | 8.47 | 0 | 8.47 |
| 2 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ (ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ) | 2009-10 | 0.00 | 0.00 | 0.00 | 0.00 | 0.00 | 0.00 | 0 | 0 | 0.00 |
| | | 2010-11 | 1193.61 | 156.19 | 1349.80 | 15.86 | 8.43 | 24.29 | 0 | 0 | 0.00 |
| | | 2011-12 | 899.15 | 100.00 | 999.15 | 1094.58 | 195.89 | 1290.47 | 0 | 0 | 0.00 |
| | | 2012-13 | 0.00 | 112.06 | 112.06 | 755.03 | 162.60 | 917.63 | 0 | 0 | 0.00 |
| | | 2013-14 | 604.20 | 349.18 | 953.38 | 186.97 | 222.23 | 409.20 | 0 | 0 | 0.00 |
| | | 2014-15 | 0.00 | 200.00 | 200.00 | 203.15 | 181.92 | 385.07 | 0 | 0 | 0.00 |
| | | 2015-16 | 0.00 | 480.16 | 480.16 | 96.64 | 464.93 | 561.57 | 0 | 0 | 0.00 |
| | | 2016-17 (31.08.2016ರ 'ವರೆಗೆ) | 0.00 | 0.00 | 0.00 | 12.00 | 106.50 | 118.50 | 0 | 0 | 0.00 |
| | | MlÄÖ | **2696.96** | **1397.59** | **4094.55** | **2364.23** | **1342.50** | **3706.73** | **0.00** | **0.00** | **8.47** |

2010–11 ರಿಂದ 2014–15 ರ ವರೆಗಿನ ಅವಧಿಗಾಗಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಬಿಡುಗಡೆಮಾಡಿದ ಹಣಕಾಸು ನೆರವಿನ ಸಂಪೂರ್ಣ ಚಿತ್ರಣವನ್ನು ಈ ಕೆಳಗಿನ ಆಕೃತಿಯು ಕೊಡುತ್ತದೆ. 2010–11ರಲ್ಲಿ ರೂ. 1349.80 ಲಕ್ಷದಿಂದ 2014–15ರಲ್ಲಿ ರೂ. 200 ಲಕ್ಷಕ್ಕೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಬಿಡುಗಡೆ ಮಾಡಿದ ನಿಧಿಗಳ ಪ್ರಮಾಣದಲ್ಲಿ ಭಾರೀ ಇಳಿಕೆಯಾಗಿದೆ. ಆನಂತರದ ವರ್ಷಗಳಿಗೆ ಹೋಲಿಸಿದರೆ ನಿಧಿಗಳ ಹಂಚಿಕೆ ಪ್ರಮಾಣವು ಕ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುನುಷ್ಠಾನ ಅವಧಿಯ ಆರಂಭದ ವರ್ಷಗಳಲ್ಲಿ ಹೆಚ್ಚಾಗಿತ್ತು.

**ಚಿತ್ರ 2 : ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಬಿಡುಗಡೆಯಾದ ನಿಧಿಗಳ ಪ್ರಮಾಣ (ಲಕ್ಷ ರೂ.ಗಳಲ್ಲಿ)**




ವ್ಯವಸ್ಥೆಯಲ್ಲಿ ಸುಧಾರಣೆ ಉಂಟು ಮಾಡಲು ಮತ್ತು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ತರಲು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ವಿವಿಧ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಮಾಹಿತಿ ಸಂವಹನ ತಂತ್ರಜ್ಞಾನ ಕಾರ್ಯಕ್ರಮಗಳ ಉಪಯೋಗದಿಂದ ಗುಣಮಟ್ಟದ ಮತ್ತು ಸಕಾಲಿಕವಾದ ಅಂಕಿ–ಅಂಶಗಳ ಸಂಗ್ರಹಣೆ ಮತ್ತು ವರದಿಗಾರರಿಗೆ ಒತ್ತು ನೀಡುವಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಸಾಧನವಾಗಿದೆ ಮತ್ತು ವೆಬ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸುವುದು, ನೂತನ ತರಬೇತಿ ತಂತ್ರಗಳನ್ನು ಬೋಧಿಸುವುದು, ಶ್ರವಣ–ದೃಶ್ಯ ತರಬೇತಿ ಸಾಮಗ್ರಿ ಬಳಸುವುದು.

ರೇಡಿಯೋ ಪದ್ಯಗಳನ್ನು ಪ್ರಸಾರ ಮಾಡುವುದರ ಮೂಲಕ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಲು ಜಾಹಿರಾತು ಸಾಮಗ್ರಿಗಳನ್ನು ಬಳಸುವುದು ಇತ್ಯದಿ ಇಂತಹ ಆಚರಣೆಗಳನ್ನು ಆರಂಭಿಸಿದೆ. ಸಾಂಪ್ರದಾಯಿಕ ತರಬೇತಿ ವಿಧಾನಗಳಿಗೆ ಹೋಲಿಸಿದರೆ, ನೂತನ ತರಬೇತಿ ವಿಧಾನಗಳನ್ನು ಪರಿಚಯಿಸುವುದರೊಂದಿಗೆ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಉಪಕ್ರಮಗಳ ಮೂಲಕ, ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ 7 ವೆಬ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಯಿತು. ಸಾಂಖ್ಯಿಕ ಇಲಾಖೆಯಲ್ಲಿ ಪ್ರಥಮ ಬಾರಿಗೆ, ಶ್ರವಣ–ದೃಶ್ಯ ತರಬೇತಿ ಸಾಮಗ್ರಿಯನ್ನು ಅಭಿವೃದ್ಧಿಪಡಿಸಿ ಶ್ರವಣ–ದೃಶ್ಯ ತರಬೇತಿಯನ್ನು ಕೈಗೊಳ್ಳಲಾಯಿತು ಉಪಗ್ರಹ ಸಂಪರ್ಕಿತ ತರಬೇತಿ ಕಾರ್ಯಕ್ರಮಗಳನ್ನು ಉಪಯೋಗಿಸಿಕೊಂಡು ಒಂದು ಅಥವಾ ಎರಡು ದಿನಗಳಲ್ಲಿ 25,000 ರಿಂದ 30,000 ಶಿಬಿರಾರ್ಥಿಗಳನ್ನು ಒಳಗೊಂಡ ಸಾಮೂಹಿಕ ತರಬೇತಿಯನ್ನು ಆಯೋಜಿಸಲಾಯಿತು. ಅಲ್ಲದೆ, ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ಭೌತಿಕ ಮೂಲ ಸೌಕರ್ಯ ಅಭಿವೃದ್ಧಿ ಪಡಿಸಲು ಚಾಲನೆ ನೀಡಲಾಗಿದ್ದು, ಅದರಿಂದಾಗಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಮೂಲಕ 6 ಹೊಸ ಕಟ್ಟಡಗಳನ್ನು ಹಾಗೂ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಮೂಲಕ ಕಟ್ಟಡ ನಿರ್ಮಾಣ ಮಾಡಲು 5 ಸೈಟ್‌ಗಳನ್ನು ಮಂಜೂರು ಮಾಡಲಾಗಿದೆ.

ಅಲ್ಲದೆ, ಪ್ರೋಗ್ರಾಮರ್ ಸಮಾಲೋಚಕರು ಅಪ್ಲಿಕೇಶನ್‌ಗಳ ಬಳಕೆಯಲ್ಲಿ ಸುಮಾರು 14000 ಕಾರ್ಯಕರ್ತರನ್ನು ತರಬೇತಿಗೊಳಿಸಿದ್ದಾರೆ. ಆದ್ದರಿಂದ ಮುಕ್ತ, ದೃಢ ಹಾಗೂ ಪರಿಣಾಮಕಾರಿ ದತ್ತಾಂಶಗಳನ್ನು ಸೃಷ್ಟಿಸುವುದರಿಂದ ಮಾಹಿತಿ ಸಂವಹನ ತಂತ್ರಜ್ಞಾನ ಅನುಷ್ಟಾನವು ಪರಿಣಾಮಕಾರಿಯಾಗುತ್ತದೆ.

# 4. ಪ್ರಗತಿ ಪರಿಶೀಲನೆ

ಈ ಯೋಜನೆಯ ಪ್ರಗತಿ ಪರಿಶೀಲನೆಯನ್ನು 'ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ'ಯ ಫಲಿತಾಂಶ, ಪರಿಣಾಮ ಮತ್ತು ಪ್ರಭಾವದ ಪರಿಶೀಲನಾ ಪ್ರಕ್ರಿಯೆಯ ಮೂಲಕ ಅಳೆಯಲಾಯಿತು. ಈ ಯೋಜನೆಯ ಫಲಿತಾಂಶವು– ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಸಾಂಖ್ಯಿಕ ಕಾಯ್ದೆ, 2008ರ ಸಂಗ್ರಹಣೆಯ ಅನುಷ್ಠಾನದಲ್ಲಿ ಯಶಸ್ವಿಯಾದ ವ್ಯಾಪ್ತಿಗೆ, ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಪೂರ್ಣಗೊಂಡ ಮತ್ತು ಗುರಿಗಳು ಈಡೇರಿದ ವ್ಯಾಪ್ತಿಗೆ ಹಾಗೂ 2013 ರಲ್ಲಿ ಕೈಗೊಂಡ ಡೆಲೊಟ್ಟೆ ಅಧ್ಯಯನದಿಂದ ಸೂಚಿಸಲ್ಪಟ್ಟ ಶಿಫಾರಸ್ಸುಗಳ ಮೇಲೆ ಕ್ರಮ ಕೈಗೊಂಡಿದೆಯೆ? ಎಂಬುದನ್ನು ನಿರ್ಧರಣೆ ಮಾಡುವುದು– ಇವುಗಳನ್ನು ಈ ಯೋಜನೆಯ ಫಲಿತಾಂಶವು ಒಳಗೊಂಡಿತು. ಈ ಯೋಜನೆಗಾಗಿ ಅದರ ಆರಂಭದ ವರ್ಷ 2009–10 ರಿಂದ 2013–14 ರ ವರೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಒದಗಿಸಲಾದ ಆರ್ಥಿಕ ನೆರವು, ನಿಧಿಗಳ ವಿಕೇಂದ್ರೀಕರಣ ಪ್ರಕ್ರಿಯೆ, ನಿಧಿಗಳ ಬಳಕೆ ಇತ್ಯಾದಿಗಳನ್ನು ಮೌಲ್ಯಮಾಪನ ಮಾಡುವುದು ಅದರ ಉದ್ದೇಶವಾಗಿತ್ತು. ಈ ಯೋಜನೆಯ ಫಲಿತಾಂಶವನ್ನು ಅಳೆಯುವಾಗ, ಆರಂಭಿಕ ಮತ್ತು ಪರಿಷ್ಕೃತ ಹಣಕಾಸು ಮತ್ತು ಭೌತಿಕ ಗುರಿಗಳು ಮತ್ತು ಕರ್ನಾಟಕದಲ್ಲಿ ಸಾಂಖ್ಯಿಕ ಮೂಲಸೌಕರ್ಯ ಅಭಿವೃದ್ಧಿಯ ಮೇಲೆ ಅವುಗಳ ಪರಿಣಾಮಗಳಿಗೆ ಸಂಬಂಧಿಸಿದ ಅನುಷ್ಠಾನ ಸ್ಥಿತಿಯನ್ನು ಸಹ ಮುಖ್ಯವಾಗಿ ಪರೀಕ್ಷಿಸಲಾಯಿತು.

ಭೌತಿಕ ಮತ್ತು ಹಣಕಾಸು ನೆರವೇರಿಕೆಯ ದಾಖಲೆ ಸೂಚಕಗಳು ಅವುಗಳನ್ನು ಒಳಗೊಳ್ಳುತ್ತವೆ:

- ಈ ಯೋಜನೆಯ ಅಡಿಯಲ್ಲಿ ನಿಧಿಗಳ ಹಂಚಿಕೆ, ಬಿಡುಗಡೆ ಮತ್ತು ಬಳಕೆ.
- ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ 5 ಮುಖ್ಯ ಅಂಶಗಳ ಅಡಿಯಲ್ಲಿ ನಿಧಿಯ ಹಂಚಿಕೆ ಮತ್ತು ಹಂಚಿಕೆಯ ಪ್ರಮಾಣಗಳು.
- ಸೃಷ್ಟಿಸಿದ ಸಾಂಖ್ಯಿಕ ಮೂಲ ಸೌಕರ್ಯದ ವಿಧಗಳು (ಯಂತ್ರಾಂಶ ಮತ್ತು ತಂತ್ರಾಂಶದ್ದು)

ಈ ಯೋಜನೆಯ ಫಲಿತಾಂಶವನ್ನು ಹಂತಗಳ ಶ್ರೇಣಿಗಳ ಮೂಲಕ ನಿರ್ಧರಣೆ ಮಾಡಲಾಯಿತು ಮತ್ತು ಪ್ರತಿಯೊಂದೂ ಹಂತವು ಕಾರ್ಯಗಳ ಸಮೂಹವನ್ನು ಒಳಗೊಂಡಿತು. ಈ ಹಂತಗಳು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನದ ಅವಧಿಯಲ್ಲಿನ ಮತ್ತು ಆನಂತರದ ಕಾಲಾವಧಿಯನ್ನು ಸೂಚಿಸುತ್ತವೆ. ಯೋಜನೆಯ ಬಗ್ಗೆ ಬರೀ ಜ್ಞಾನವನ್ನಷ್ಟೇ ಪಡೆಯದೇ, ಅದರ ಬಗ್ಗೆ ಸಮಗ್ರವಾಗಿ ನಿರ್ಧಾರಣೆ ಮಾಡುವುದೇ ಇದರ ಉದ್ದೇಶವಾಗಿದೆ. ಈ ಯೋಜನೆಯ ಫಲಿತಾಂಶದ ಅಡಿಯಲ್ಲಿ, 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳನ್ನು ಸಂಪೂರ್ಣವಾಗಿ ಪರಿಶೀಲಿಸಲಾಯಿತು ಮತ್ತು ಆ 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳ ಅನ್ವಯ ಕ್ರಮ ಕೈಗೊಳ್ಳಲಾಯಿತು. ಇದರೊಂದಿಗೆ ಸಾರ್ವಜನಿಕ ಬಳಕೆಗಾಗಿ ಪಬ್ಲಿಕ್ ಪೋರ್ಟಲ್‌ನ್ನು ಒದಗಿಸಲಾಗಿದೆಯೆ ಮತ್ತು ವೆಬ್ ಅಪ್ಲಿಕೇಶನ್‌ಗಳಿಂದ ಮಾಹಿತಿ ಪಡೆಯಲು ಅದನ್ನು ಅಭಿವೃದ್ಧಿ ಪಡಿಸಲಾಗಿದೆಯೆ? ಎಂಬುದನ್ನು ಸಹ ನಿರ್ಧಾರಣೆ ಮಾಡಲಾಯಿತು.

ಒದಗಿಸಿದ ಮೂಲಸೌಕರ್ಯದ ಮಟ್ಟವನ್ನು ನಿರ್ಧಾರಣೆಮಾಡಲು ಮತ್ತು ಆ ಮೂಲಸೌಕರ್ಯದ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಹಾಗೂ ಸಂಬಂಧಿಸಿದ ಇಲಾಖೆಗಳ ಸಿಬ್ಬಂದಿ/ ಅಧಿಕಾರಿಗಳಿಗಾಗಿ ಕೈಗೊಂಡ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವನ್ನು ಅಳೆಯಲು ಪ್ರಾಥಮಿಕ ಸಮೀಕ್ಷೆಗಳು, ಮಧ್ಯಸ್ಥಗಾರರ ಸಲಹೆ ಹಾಗೂ ದ್ವಿತೀಯಕ

ಮಾಹಿತಿ–ಇವುಗಳ ಮೂಲಕ ಈ ಯೋಜನಾ ಪರಿಣಾಮವನ್ನು ವಿಶ್ಲೇಷಿಸಲಾಯಿತು. ನಿರ್ಮಿಸಲಾದ ಅಂತಹ ಸಾಂಖ್ಯಿಕ ಮೂಲಸೌಕರ್ಯದ ಪ್ರಸ್ತುತ ಸ್ಥಿತಿಯನ್ನು ಮತ್ತು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ನಿಧಿಗಳ ಅಡಿಯಲ್ಲಿ ಕೈಗೊಂಡ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವನ್ನು ವಿಮರ್ಶಿಸುವುದು ಇಂತಹ ಪ್ರಾಥಮಿಕ ಸಮೀಕ್ಷೆಗಳ ಉದ್ದೇಶವಾಗಿದ್ದವು. ಆ ಪ್ರಾಥಮಿಕ ಸಮೀಕ್ಷೆಯ ಭಾಗವಾಗಿದ್ದ ಪ್ರತಿಕ್ರಿಯೆದಾರರ ದಾಖಲೆ ಸೂಚಕಗಳನ್ನು ಸೆಕ್ಷನ್ 8.1.2–'ಪ್ರಾಥಮಿಕ ಸಮೀಕ್ಷೆಗಳಿಗಾಗಿ ಪ್ರತಿಕ್ರಿಯೆದಾರರ ಪ್ರೊಫೈಲ್‌ಗಳು' ಇದರಲ್ಲಿ ಚರ್ಚಿಸಲಾಗುತ್ತದೆ. ಈ ಯೋಜನೆಯ ಪರಿಣಾಮ ವಿಶ್ಲೇಷಣೆಯ ಅಡಿಯಲ್ಲಿ ಪರೀಕ್ಷಿಸಿದ ದಾಖಲೆ ಸೂಚಕಗಳು ಹೀಗಿವೆ: (1) ದತ್ತಾಂಶ ಸಂಗ್ರಹಕ್ಕಾಗಿ ಕ್ಷೇತ್ರಾಧಿಕಾರಿಗಳಿಗೆ ಒದಗಿಸಿದ ಮೂಲ ಸೌಕರ್ಯಗಳ (ಉಪಕರಣಗಳ) ಮಟ್ಟವನ್ನು ನಿರ್ಧಾರಣೆ ಮಾಡುವುದು; (2) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಿಬ್ಬಂದಿ/ಅಧಿಕಾರಿಗಳಿಗಾಗಿ ಕೈಗೊಂಡ ಪ್ರವೇಶ/ ಪುನಶ್ಚೇತನ/ ಅರಿವು ತರಬೇತಿಗಳಿಗಾಗಿ ವ್ಯಾಪ್ತಿಯನ್ನು ನಿರ್ಧಾರಣೆ ಮಾಡುವುದು ಮತ್ತು (3) ಈ ಯೋಜನೆಯ ಅಡಿಯಲ್ಲಿ ಅಭಿವೃದ್ಧಿಪಡಿಸಿದ ವೆಬ್ ಅಪ್ಲಿಕೇಶನ್‌ಗಳ ಸಂಖ್ಯೆಯನ್ನು ನಿರ್ಧಾರಣೆ ಮಾಡುವುದು.

ನಿರ್ಧಾರಣೆಯ ಪರಿಣಾಮ ಮತ್ತು ಫಲಿತಾಂಶದ ದಾಖಲೆ ಸೂಚಕಗಳು ಈ ಕೆಳಗಿನವುಗಳನ್ನು ಒಳಗೊಳ್ಳುತ್ತವೆ :

- ಅಭಿವೃದ್ಧಿ ಪಡಿಸಿದ ಸಾಂಖ್ಯಿಕ ಮೂಲ ಸೌಕರ್ಯದ ಸಮಗ್ರ ಪರಿಣಾಮ ;
- 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳ ಅಡಿಯಲ್ಲಿ ತೆಗೆದುಕೊಂಡ ಕ್ರಮ;
- ಕೈಗೊಂಡ ತರಬೇತಿಗಳ ಪರಿಣಾಮತ್ವ, ತರಬೇತಿ ಅಭ್ಯರ್ಥಿಗಳ ಮೇಲೆ ಉಂಟಾದ ತರಬೇತಿಯ ಪರಿಣಾಮಗಳು;
- ಅಭಿವೃದ್ಧಿ ಪಡಿಸಿದ ವೆಬ್ ಅಪ್ಲಿಕೇಶನ್‌ಗಳ ಸಂಖ್ಯೆ
- ಯೋಜನೆಯ ಉಪಯುಕ್ತತೆಯ ಬಗ್ಗೆ ಮಧ್ಯಸ್ಥಗಾರನ ಪಾಲ್ಗೊಳ್ಳುವಿಕೆ.
- ತಾಲ್ಲೂಕು/ಕ್ಷೇತ್ರದಲ್ಲಿ ಸಾಂಖ್ಯಿಕ ಮೂಲ ಸೌಕರ್ಯ ಸೌಲಭ್ಯಗಳಲ್ಲಿ ಸಮಗ್ರ ಸುಧಾರಣೆ.

ಕರ್ನಾಟಕ ರಾಜ್ಯ ಕಾರ್ಯನೀತಿಯುಕ್ತ ಸಾಂಖ್ಯಿಕ ಯೋಜನೆಯ ಫಲಿತಾಂಶ, ಪರಿಣಾಮ ಮತ್ತು ಫಲಶೃತಿ–ಇವುಗಳನ್ನು 'ದತ್ತಾಂಶ ವಿಶ್ಲೇಶಣೆ' ಅಧ್ಯಾಯದಲ್ಲಿ ವಿವರವಾಗಿ ವಿಶ್ಲೇಷಿಸಲಾಗುತ್ತದೆ.

# 5. ಸಮಸ್ಯಾ ಹೇಳಿಕೆ

ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಮೂಲಕ 'ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ'ಯನ್ನು 2010–14, ಜಾರಿಗೆ ತಂದಿತು ಮತ್ತು 2009 ರಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಆರಂಭದಿಂದಲೂ, ಕೇವಲ ಒಂದು ಮೌಲ್ಯಮಾಪನ ಅಧ್ಯಯನವನ್ನು 2012 ರಲ್ಲಿ ಕೈಗೊಳ್ಳಲಾಯಿತು. ಹೀಗೆ, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಏಜೆನ್ಸಿಯ ಪರವಾಗಿ "ಕರ್ನಾಟಕದಲ್ಲಿ 'ರಾಜ್ಯ ಕಾರ್ಯನೀತಿಯುಕ್ತ ಸಾಂಖ್ಯಿಕ ಯೋಜನೆ'ಯ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅನುಷ್ಠಾನ"ಕ್ಕಾಗಿ ಮೌಲ್ಯಮಾಪನ ಅಧ್ಯಯನ ಕೈಗೊಳ್ಳುವುದಕ್ಕೆ ಮೌಲ್ಯಮಾಪನ ಸಮಾಲೋಚಕರನ್ನು ಎರವಲು ಪಡೆಯಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಜವಾಬ್ದಾರಿ ನೀಡಲಾಯಿತು.

ಯಾವ ಪ್ರಮಾಣಕ್ಕೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನವು ಪೂರ್ಣಗೊಂಡಿದೆ ಮತ್ತು ಗುರಿಗಳು ಈಡೇರಿವೆ ಮತ್ತು ಭಾರತ ಸಾಂಖ್ಯಿಕ ಯೋಜನೆಯ 5 ಅಂಶಗಳ ಅಡಿಯಲ್ಲಿ ಸಾಧಿಸಿದ ಪ್ರಗತಿಯನ್ನು ನಿರ್ಧಾರಣೆ ಮಾಡುವುದು–ಇವುಗಳ ಅಧ್ಯಯನ ಮಾಡುವುದು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಮೌಲ್ಯ ಮಾಪನವನ್ನು ಕೈಗೊಳ್ಳುವುದರ ಉದ್ದೇಶವಾಗಿತ್ತು. ಈ ಮೌಲ್ಯಮಾಪನ ಅಧ್ಯಯನದ ಮೂಲಕ–ಈ ಯೋಜನೆಯ ಪರಿಣಾಮ, ಮಾಹಿತಿ ತಂತ್ರಜ್ಞಾನ ಕೇಂದ್ರದ ಮೂಲ ಸೌಕರ್ಯದ ಮಟ್ಟವನ್ನು ನಿರ್ಧಾರ ಮಾಡುವುದರೊಂದಿಗೆ ಅನುಷ್ಠಾನದ ಯಶಸ್ಸು ಮತ್ತು ಯೋಜನೆಯ ಮೂಲಕ ಒದಗಿಸಿದ ತರಬೇತಿ ಮತ್ತು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಯಶಸ್ಸಿಗಾಗಿ ದಾಖಲೆ ಸೂಚಕಗಳು–ಇವುಗಳನ್ನು ಪರಿಶೀಲಿಸಲು ನಾವು ಪ್ರಯತ್ನಿಸಿದ್ದೇವೆ.

### 5.1. ಮೌಲ್ಯಮಾಪನ ಅಧ್ಯಯನ ವ್ಯಾಪ್ತಿ

ಯೋಜನೆಯ ಯಶಸ್ಸಿಗಾಗಿ ಅನುಷ್ಠಾನದ ಪ್ರಸ್ತುತ ಸ್ಥಿತಿ ಮತ್ತು ಪ್ರಭಾವ, ಫಲಿತಾಂಶಗಳು ಮತ್ತು ದಾಖಲೆ ಸೂಚಕಗಳನ್ನು ಅಧ್ಯಯನ ಮಾಡುವುದು "ಕರ್ನಾಟಕದಲ್ಲಿ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ"'ಯ ಮೌಲ್ಯಮಾಪನ ಕೈಗೊಳ್ಳುವುದರ ಉದ್ದೇಶವಾಗಿದೆ.

### 5.2. ಅಧ್ಯಯನಕ್ಕಾಗಿ ಮೌಲ್ಯಮಾಪನ ಪ್ರಶ್ನೆಗಳು

ಈ ಅಧ್ಯಯನದ ಉದ್ದೇಶಕ್ಕಾಗಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ವ್ಯಾಖ್ಯಾನಿಸಿದ ಮೌಲ್ಯಮಾಪನ ಪ್ರಶ್ನೆಗಳು ಈ ಕೆಳಗಿನಂತಿವೆ.

1) ಅಂಕಿ–ಅಂಶಗಳ ಸಂಗ್ರಹಣಾ ಅಧಿನಿಯಮ–2008 ಮತ್ತು ನಿಯಮಗಳ ಅನುಷ್ಠಾನದಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಯಾವ ಪ್ರಮಾಣದಲ್ಲಿ ಯಶಸ್ವಿಯಾಗಿದೆ? ಈ ನಿಬಂಧನೆಗಳ ಅನುಷ್ಠಾನದಲ್ಲಿನ ಅನಿಶ್ಚಿತತೆ ಏನು?
2) ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಕ್ರಿಯಾ ಯೋಜನೆ ಮತ್ತು ಗುರಿಗಳನ್ನು ಕರ್ನಾಟಕದಲ್ಲಿ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ 2010–14ರ ದಸ್ತಾವೇಜಿನ 5 ಮತ್ತು 6 ನೇ ಅಧ್ಯಾಯಗಳಲ್ಲಿ ವಿವರಿಸಲಾಗುತ್ತದೆ. ಯಾವ ಪ್ರಮಾಣದಲ್ಲಿ ಯೋಜನೆಯ ಅನುಷ್ಠಾನವು ಪೂರ್ಣಗೊಂಡಿದೆ ಮತ್ತು ಗುರಿಗಳು ಈಡೇರಿವೆ?

3) ಆನ್‌ಲೈನ್ ದತ್ತಾಂಶದ ಸಂಗ್ರಹದ ಎಲ್ಲಾ ಕ್ಷೇತ್ರ ಮಟ್ಟದ ಸಿಬ್ಬಂದಿಗೆ ಅಗತ್ಯವಿರುವ ಸಲಕರಣೆಗಳನ್ನು ಪೂರೈಸಲಾಗಿದೆಯೆ? ಇವೆಲ್ಲವೂ ಮೌಲ್ಯಮಾಪನ ದಿನಾಂಕದಂದು ಲಭ್ಯವಿರುತ್ತವೆಯೆ? ಇಲ್ಲದಿದ್ದರೆ, ಅವುಗಳ ಅಲಭ್ಯತೆ ಮತ್ತು ಬಳಸದಿರುವಿಕೆ/ಬಳಕೆ ಸ್ಥಗಿತತೆಗೆ ಪ್ರಸಂಗಗಳು ಮತ್ತು ಕಾರಣಗಳು ಯಾವವು?

4) ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯಲ್ಲಿ ನಿರೂಪಿಸಿದ ಎಲ್ಲ ಸಾಂಖ್ಯಿಕ ಚಟುವಟಿಕೆಗಳ ಬಗ್ಗೆ ಆನ್‌ಲೈನ್ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆಯೇ? ಇಲ್ಲದಿದ್ದರೆ, ಅದಕ್ಕೆ ಕಾರಣಗಳಾವವು?

5) ಭಾರತ ಸಾಂಖ್ಯಿಕ ಯೋಜನೆ ಮತ್ತು 13 ನೇ ಹಣಕಾಸು ಆಯೋಗ ಅನುದಾನಗಳ ಅಡಿಯಲ್ಲಿ ಮಾಡಲ್ಪಟ್ಟ ಸುಧಾರಣೆಗಳನ್ನು ಒಳಗೊಂಡು ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸಾಂಖ್ಯಿಕ ವ್ಯವಸ್ಥೆಯ ನಿರ್ಧಾರಣೆಯನ್ನು ಒಳಗೊಂಡ ಅಧ್ಯಯನವನ್ನು ಮೆ. ಡೆಲೊಟ್ಟೆರವರಿಗೆ ವಹಿಸಲಾಗಿತ್ತು. ಅಂತರಗಳನ್ನು ಮತ್ತು ತಾಂತ್ರಿಕ ಹಾಗೂ ಹಣಕಾಸು ತೊಡಕುಗಳನ್ನು ಕಡಿಮೆ ಮಾಡುವುದಕ್ಕಾಗಿ ಲಭ್ಯವಿರುವ ಕಾರ್ಯನೀತಿಯುಕ್ತ ಆಯ್ಕೆಗಳನ್ನು ಸೂಚಿಸಲಾಗಿದೆ. ಈ ವರದಿಯಲ್ಲಿ ವಿವರಿಸಬೇಕಾದಷ್ಟು ಈ ಶಿಫಾರಸ್ಸುಗಳ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

6) ಪ್ರವೇಶ/ಪುನಶ್ಚೇತನ/ಜಾಗೃತಿ ತರಬೇತಿಗಳು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಿಬ್ಬಂದಿ/ಲೈನ್ ಇಲಾಖೆಗಳ ಅಧಿಕಾರಿಗಳಿಗೆ ಎಷ್ಟು ಪ್ರಮಾಣದಲ್ಲಿ ಪರಿಣಾಮಕಾರಿಯಾಗಿದೆ?

7) ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳು ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಜಿಲ್ಲಾ ಮಟ್ಟದಲ್ಲಿ ನೇಮಕವಾದ ಸಮಾಲೋಚಕರು ನಿರ್ವಹಿಸಿದ ಪಾತ್ರವೇನು?

8) ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಮೂಲಕ ಅಭಿವೃದ್ಧಿ ಪಡಿಸಲ್ಪಟ್ಟ ವೆಬ್ ಅಪ್ಲಿಕೇಶನ್‌ಗಳಿಂದ ಸಾಂಖ್ಯಿಕ ದತ್ತಾಂಶಗಳನ್ನು ಪಡೆಯಲು ಸಾರ್ವಜನಿಕ ಉಪಯೋಗಕ್ಕಾಗಿ ಯಾವುದೇ ಪೋರ್ಟಲ್‌ನ್ನು ಒದಗಿಸಲಾಗಿದೆಯೇ? ವೆಬ್ ಅಪ್ಲಿಕೇಶನ್‌ಗಳಲ್ಲಿ ದತ್ತಾಂಶವನ್ನು ನಿರಂತರವಾಗಿ ಪರಿಷ್ಕರಿಸಲಾಗುತ್ತದೆಯೆ ?

9) ಈ ಯೋಜನೆಯ ಅಡಿಯಲ್ಲಿ ಇದುವರೆಗೆ ಎಷ್ಟು ವೆಬ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ ? ಉಪ–ಜಿಲ್ಲಾ ಮಟ್ಟದ ಸಿಬ್ಬಂದಿಗಳಿಗೆ ಈ ವೆಬ್ ಅಪ್ಲಿಕೇಶನ್‌ಗಳ ಬಗ್ಗೆ ತರಬೇತಿ ನೀಡಲಾಗಿದೆಯೇ ? ಹಾಗಿದ್ದರೆ, ಮಿನಿ ಲ್ಯಾಪ್‌ಟಾಪ್‌ಗಳನ್ನು ಉಪಯೋಗಿಸುವುದರಿಂದ ಆನ್‌ಲೈನ್‌ನಲ್ಲಿ ಸುರಕ್ಷಿತವಾದ ವಿವಿಧ ಅಪ್ಲಿಕೇಶನ್‌ಗಳಲ್ಲಿ ಸಂಪೂರ್ಣ ದತ್ತಾಂಶ ಹೊಂದಲಾಗಿದೆಯೇ ? ಇಲ್ಲದಿದ್ದರೆ, ಏಕೆ ಹೊಂದಿಲ್ಲ?

10) ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ 2010–14 ಯೋಜನೆಯ ಅನುಬಂಧ 1(ಎ)ಯಲ್ಲಿ (ಈ ದಸ್ತಾವೇಜಿನ ಅನುಬಂಧ 1) ಕೊಟ್ಟ ಇಲಾಖೆಗಳಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಯಾವ ಮೂರು ಇಲಾಖೆಗಳು ವಿಶ್ವಾಸಾರ್ಹ, ನಂಬಲರ್ಹ, ಸಕಾಲಿಕ ದತ್ತಾಂಶವನ್ನು ಮತ್ತು ದಾಖಲೆಸೂಚಕಗಳನ್ನು ಸಂಕಲನ ಮಾಡುವಲ್ಲಿ ಅತ್ಯುತ್ತಮ ನೆರವೇರಿಕೆ ಮಾಡಿವೆಯೇ? ಯಾವ ಮೂರು ಇಲಾಖೆಗಳು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ವಿಶ್ವಾಸಾರ್ಹ, ನಂಬಲರ್ಹ ಹಾಗೂ ಸಕಾಲಿಕ ದತ್ತಾಂಶವನ್ನು ಮತ್ತು ದಾಖಲೆ ಸೂಚಕಗಳನ್ನು ಸಂಕಲನ ಮಾಡುವಲ್ಲಿ ವಿಳಂಬ ಮಾಡಿವೆಯೇ?

11) ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಫಲಿತಾಂಶವಾಗಿರುವ ಅತ್ಯುತ್ತಮ ಆಚರಣೆಗಳ/ಸಾಧನೆಗಳ ಅಥವಾ ದಾಖಲೆಸೂಚಕಗಳ ಪೈಕಿ ಕೆಲವೊಂದರ ಪ್ರಕರಣ ಅಧ್ಯಯನ್ನು ದಯವಿಟ್ಟು ಮಾಡುತ್ತೀರಾ?

12) ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯನ್ನು 2015–16 ರಲ್ಲಿ ಮುಕ್ತಾಯಗೊಳಿಸಲು ನಿಗಧಿಪಡಿಸಲಾಗಿದೆಯೇ? ಇಲ್ಲಿಯವರೆಗಿನ ಸಾಧನೆಗಳನ್ನು ಮತ್ತು ಅಮಾನತ್ತಿನಲ್ಲಿರುವ ಕಾರ್ಯಸೂಚಿ (ಇದ್ದರೆ, ಅವು ಯಾವುದೆಂದು ವಿವರಿಸಬೇಕು) ಪರಿಗಣಿಸಿದರೆ ಹಾಗೆ ಮುಕ್ತಾಯಗೊಳಿಸುವುದು ವಿವೇಚನಾಯುಕ್ತ ನಿರ್ಣಯವಾಗುವುದೆ? ಇಲ್ಲದಿದ್ದರೆ, ಯಾವ ಕಾರ್ಯಸೂಚಿ ಅಂಶಗಳನ್ನು ಸಂಪೂರ್ಣವಾಗಿ ಕೈಬಿಡಬೇಕು ಮತ್ತು ಯೋಜನೆಯಲ್ಲಿ ಮಾಡಿದ ಯಾವ ಸಾಧನೆಗಳನ್ನು ಬೆಂಬಲಿಸಬೇಕು ಮತ್ತು ನಿರ್ವಹಿಸಬೇಕು?

# 6. ಮೌಲ್ಯಮಾಪನಕ್ಕಾಗಿ ಉದ್ದೇಶಗಳು ಮತ್ತು ವಿಷಯಗಳು

ಕರ್ನಾಟಕ ರಾಜ್ಯ ಸಾಂಖ್ಯಿಕ ವ್ಯವಸ್ಥೆಯ ಸಾಮರ್ಥ್ಯವನ್ನು ಬಲಪಡಿಸುವ ಉದ್ದೇಶದಿಂದ, ಕರ್ನಾಟಕ ಸರ್ಕಾರವು – ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ 2010–2014 ರ ನಿರೂಪಣೆಯ ಪ್ರಕ್ರಿಯೆಯನ್ನು ಆರಂಭಿಸಿದೆ ಮತ್ತು ಅದರಂತೆ 'ರಾಷ್ಟ್ರೀಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ'ಯ ಅನ್ವಯ 'ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ''ಯ ಅನ್ವಯ 'ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯನ್ನು ವಿನ್ಯಾಸಗೊಳಿಸುವ ಮತ್ತು ಅನುಷ್ಠಾನಗೊಳಿಸುವ ಉದ್ದೇಶದಿಂದ 'ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಿದೆ. ಎಷ್ಟು ಪ್ರಮಾಣದಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನವು ಪೂರ್ಣಗೊಂಡಿದೆ ಮತ್ತು ಗುರಿಗಳು ಈಡೇರಿವೆ ಎಂಬುದನ್ನು ಅಧ್ಯಯನ ಮಾಡುವುದು ಹಾಗೂ ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ 5 ಅಂಶಗಳ ಅಡಿಯಲ್ಲಿ ಸಾಧಿಸಿದ ಪ್ರಗತಿಯನ್ನು ನಿರ್ಧಾರಣೆ ಮಾಡುವುದು–ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಮೌಲ್ಯಮಾಪನ ಕೈಗೊಳ್ಳುವುದರ ಉದ್ದೇಶವಾಗಿತ್ತು.

### 6.1 ಮೌಲ್ಯಮಾಪನಕ್ಕಾಗಿ ಅಧ್ಯಯನದ ಉದ್ದೇಶಗಳು

ಹಿಂದಿನ, ಈಗಿನ ಮತ್ತು ಮುಂದಿನ ಮಧ್ಯಸ್ಥಿಕೆಗಳು ಮತ್ತು ಫಲಿತಾಂಶಗಳ ನಡುವೆ ಸ್ಪಷ್ಟ ಸಂಪರ್ಕಗಳನ್ನು ಏರ್ಪಡಿಸುವುದರಿಂದ ಈ ಯೋಜನೆಗಾಗಿ ಸರ್ಕಾರದ ನೆರವಿನ ಪರಿಣಾಮಕಾರತ್ವವನ್ನು ಹೆಚ್ಚಿಸಲು "ಕರ್ನಾಟಕದಲ್ಲಿ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅನುಷ್ಠಾನ 2010–14" ಇದರ ಮೌಲ್ಯಮಾಪನದಿಂದ ನಿರೀಕ್ಷಿಸಲಾಗುತ್ತದೆ. ಯೋಜನೆಯ ಭವಿಷ್ಯಕ್ಕಾಗಿ ಯೋಜನಾ ಸುಸ್ಥಿತಿ, ಹೊಸದೃಷ್ಟಿ ಹಾಗೂ ಯೋಜಿಸುವುದಕ್ಕಾಗಿ ಆಧಾರದಂತೆ ಆನಂತರದಲ್ಲಿ ಪ್ರಸಕ್ತ ಮಾಹಿತಿಯನ್ನು ಹಿಂದಿನ ಮತ್ತು ಚಾಲನೆಯಲ್ಲಿರುವ ಚಟುವಟಿಕೆಗಳಿಂದ ಪಡೆಯಲು ರಾಜ್ಯ ಸರ್ಕಾರಕ್ಕೆ ಸಹಾಯಕವಾಗಲು – ಮೌಲ್ಯಮಾಪನ ಅಧ್ಯಯನವನ್ನು ವಿನ್ಯಾಸಗೊಳಿಸಲಾಗುತ್ತದೆ. ಹೀಗೆ, ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಭಾಗವಾಗಿ ಕೈಗೊಂಡ ಚಟುವಟಿಕೆಗಳು ಸರಿಯಾದ ದಿಕ್ಕಿನಲ್ಲಿ ಸಾಗಿವೆಯೆ? ಯೋಜನೆಯ ಅಡಿಯಲ್ಲಿ ಪ್ರಗತಿ ಮತ್ತು ಯಶಸ್ಸನ್ನು ಪಡೆಯಲಾಗಿತ್ತೆ? ಅಂದರೆ ಅನುಷ್ಠಾನದ ಪರಿಣಾಮಕಾರತ್ವ ಮತ್ತು ಭವಿಷ್ಯದ ಪ್ರಯತ್ನಗಳು ಹೇಗೆ ಸುಧಾರಿಸಬಹುದು?

**ಚಿತ್ರ 3: ಮೌಲ್ಯಮಾಪನ ಅಧ್ಯಯನದ ಉದ್ದೇಶಗಳು**



# 7. ಮೌಲ್ಯಮಾಪನ ವಿನ್ಯಾಸ

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಈ ಮೌಲ್ಯಮಾಪನ ಅಧ್ಯಯನದ ಮೂಲಕ, ಉದ್ದೇಶಗಳು, ಕಾರ್ಯನೀತಿಗಳು, ಗುರಿಗಳು ಹಾಗೂ ಅನುಷ್ಠಾನವನ್ನು ಪರಿಶೀಲಿಸುವುದರಿಂದ ನಾವು ಯೋಜನೆಯ ನೆರವೇರಿಕೆಯನ್ನು ಅಳೆದಿದ್ದೇವೆ ಮತ್ತು ನಿರ್ಧಾರಣೆ ಮಾಡಿದ್ದೇವೆ. ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ, ರಾಜ್ಯ ಆದಾಯ ಉದ್ದಿಮೆಗಳು ಮತ್ತು ಬೆಲೆಗಳ ವಿಭಾಗ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ನಿರ್ದೇಶನಾಲಯ, ಕೃಷಿ ಸಾಂಖ್ಯಿಕ ವಿಭಾಗ, ಬೆಳೆ ವಿಮಾ ವಿಭಾಗ, ನ್ಯಾಶನಲ್ ಇನ್‌ಫಾರ್ಮೇಟಿಕ್ಸ್ ಸೆಂಟರ್) ಮತ್ತು ಮಂಡ್ಯ ಜಿಲ್ಲೆಯಲ್ಲಿ ಮಾದರಿ ಸಮೀಕ್ಷೆ– ಇವುಗಳಿಂದ ಸಂಗ್ರಹಿಸಿದ ದತ್ತಾಂಶ ಮತ್ತು ಮಾಹಿತಿಯನ್ನು ಆಧರಿಸಿ ಈ ಯೋಜನೆಯ ಹಣಕಾಸಿನ ಮತ್ತು ಭೌತಿಕ ನೆರವೇರಿಕೆಯನ್ನು ವಿಶ್ಲೇಷಿಸಲಾಗುತ್ತದೆ. ಪ್ರಾಥಮಿಕ ಮತ್ತು ದ್ವಿತೀಯಕ ಮೂಲಗಳಿಂದ ಪಡೆದ ಈ ಯೋಜನಾ ಸಂಬಂಧಿತ ದತ್ತಾಂಶವನ್ನು ವಿಶ್ಲೇಷಿಸಲು ನಾವು ಪರಿಮಾಣಾತ್ಮಕ ಮತ್ತು ಗುಣಾತ್ಮಕ ವಿಧಾನಗಳನ್ನು ಉಪಯೋಗಿಸಿದ್ದೇವೆ. ಯೋಜನೆಯ ಎಲ್ಲ ಮಧ್ಯಸ್ಥಗಾರರನ್ನು ಮೌಲ್ಯಮಾಪನ ಅಧ್ಯಯನ ಚೌಕಟ್ಟಿನ ಭಾಗವಾಗಿ ಒಳಗೊಳ್ಳುವುದು ನಮ್ಮ ಕಾರ್ಯಾರಂಭದ ಉದ್ದೇಶವಾಗಿತ್ತು.

ಈ ಅಧ್ಯಯನದ ಚೌಕಟ್ಟು– ಫಲಿತಾಂಶ, ಫಲಶೃತಿ ಮತ್ತು ಪರಿಣಾಮ – ಈ ಮೂರು ಒತ್ತು ನೀಡಬೇಕಾದ ಸಂಯುಕ್ತ ಕ್ಷೇತ್ರಗಳಲ್ಲಿ 12 ಮೌಲ್ಯಮಾಪನ ಪ್ರಶ್ನೆಗಳಾಗಿ ವಿಂಗಡಿಸುತ್ತದೆ. ಈ ಕಾರ್ಯವಿಧಾನವು ಮೂರು ಕ್ಷೇತ್ರಗಳ ಮೇಲೆ ಒತ್ತು ನೀಡುತ್ತದೆ. ಆದ್ದರಿಂದ ಅವುಗಳನ್ನು ಉದ್ದೇಶಿಸಲಾಗುತ್ತದೆ ಮತ್ತು ಪರಿಗಣಿಸಲಾಗುತ್ತದೆ ಮತ್ತು ಈ ಕೆಳಗಿನ ಅಂಕಿ–ಅಂಶಗಳಲ್ಲಿ ಪಟ್ಟಿ ಮಾಡಲಾಗುತ್ತದೆ. ಅಂಕಿ–ಅಂಶಗಳ ಅಧಿನಿಯಮ–2008 ಮತ್ತು ನಿಯಮಗಳು ಯೋಜನೆಯ ಅನುಷ್ಠಾನದ ಗುರಿಗಳು ಮತ್ತು ಕಾರ್ಯನೀತಿಗಳು–ಇವುಗಳ ಸಂಗ್ರಹಣೆಯ ಅನುಷ್ಠಾನ, ಒದಗಿಸಿದ ಹಣಕಾಸು ನೆರವು, ಅಭಿವೃದ್ಧಿ ಪಡಿಸಿದ ಸಾಂಖ್ಯಿಕ ಮೂಲ ಸೌಕರ್ಯಗಳು ಮತ್ತು ಮೆ॥ ಡೆಲೊಟ್ಟೆರವರ ಶಿಫಾರಸ್ಸುಗಳ ಮೇಲೆ ಕೈಗೊಂಡ ಕ್ರಮಗಳು – ಇವುಗಳ ಪರಿಶೀಲನೆಯ ಪ್ರಕ್ರಿಯೆಯ ಮೂಲಕ ಮೊದಲನೇ ಗುಂಪು ಯೋಜನಾ ಫಲಿತಾಂಶವನ್ನು ಅಳೆಯುತ್ತದೆ. ಆನ್‌ಲೈನ್ ಅಥವಾ ಮಾನವಿಕ ರೀತಿಯ ಉಪಯೋಗದ ಮೂಲಕ ಸಾಂಖ್ಯಿಕ ದತ್ತಾಂಶದ ಸಂಗ್ರಹಣೆಯ ವಿಧಾನಗಳನ್ನು ಅಭಿವೃದ್ಧಿಪಡಿಸಿದ ವೆಬ್ ಅಪ್ಲಿಕೇಶನ್‌ಗಳಿಂದ ದತ್ತಾಂಶಗಳನ್ನು ಪಡೆಯಲು ಸಾರ್ವಜನಿಕ ಪೋರ್ಟಲ್‌ನ ಸೌಲಭ್ಯವನ್ನು, ನೂತನ ಮಾಹಿತಿ ಸಂವಹನ ತಂತ್ರಜ್ಞಾನ ಅಪ್ಲಿಕೇಶನ್‌ಗಳನ್ನು ಉಪಯೋಗಿಸುವಲ್ಲಿ ಉಪ–ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಲು ನೇಮಕವಾದ ಪ್ರೋಗ್ರಾಮರ್ ಸಮಾಲೋಚಕರ ಪಾತ್ರ–ಇವುಗಳನ್ನು ಪರಿಶೀಲಿಸುವುದರಿಂದ–ಎರಡನೇ ಗುಂಪು ಯೋಜನೆಯ ಫಲಶೃತಿಯನ್ನು ನಿರ್ಧಾರಣೆ ಮಾಡುತ್ತದೆ. ಮೂರನೇ ಗುಂಪು ಯೋಜನೆಯ ಪರಿಣಾಮಕ್ಕೆ ಸಂಬಂಧಿಸಿದ್ದಾಗಿದೆ. ಪೂರೈಸಿದ ಮತ್ತು ಒದಗಿಸ ಭೌತಿಕ ಮೂಲ ಸೌಕರ್ಯದ ಮಟ್ಟ, ಕೈಗೊಂಡ ತರಬೇತಿಯ ಪರಿಣಾಮಕಾರತ್ವ ಅಭಿವೃದ್ಧಿ ಪಡಿಸಿದ ವೆಬ್ ಅಪ್ಲಿಕೇಶನ್‌ಗಳು ಮತ್ತು ಅವುಗಳ ಸ್ಥಿತಿಗತಿ, ವಿಶ್ವಾಸಾರ್ಹ, ನಂಬಲರ್ಹ ಮತ್ತು ಸಂಕಾಲಿಕ ದತ್ತಾಂಶವನ್ನು ಒದಗಿಸುವಲ್ಲಿ ಯಶಸ್ವಿಯಾದ ಇಲಾಖೆಗಳನ್ನು ನಿರ್ಧಾರಿಸುವುದು–ಇವುಗಳನ್ನು ಮೂರನೇ ಗುಂಪು ನಿರ್ಧಾರಣೆ ಮಾಡುತ್ತದೆ. ಈ ಮೂರು ಒತ್ತು ಕ್ಷೇತ್ರಗಳ ಒಗ್ಗೂಡುವಿಕೆಯು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅನುಷ್ಠಾನ ಕುರಿತು ವಿವಿಧ ದಾಖಲೆ ಸೂಚಕರನ್ನು ಸಂಪರ್ಕಿಸುವ ಸಮೀಕರಣ ಪ್ರಶ್ನೆಗಳಿಗೆ ಉತ್ತರಿಸಲು ನಮಗೆ ಸಹಾಯಕವಾಗುವುದು.

**ಚಿತ್ರ 4: ಚೌಕಟ್ಟು ವಿಶ್ಲೇಷಣೆ: ಆದ್ಯತಾ ಒತ್ತು ನೀಡುವ ಕ್ಷೇತ್ರಗಳ ಮೂಲಕ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಮೌಲ್ಯಮಾಪನ.**



# 8. ಮೌಲ್ಯಮಾಪನ ವಿಧಾನ

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯು–ಕರ್ನಾಟಕದಾದ್ಯಂತ 30 ಜಿಲ್ಲಾ ಸಾಂಖ್ಯಿಕ ಕಛೇರಿಗಳ ಮೂಲಕ 2010 ರಿಂದಲೂ ಅನುಷ್ಠಾನದಲ್ಲಿದೆ. ಈ ಯೋಜನೆಯ ಅನುಷ್ಠಾನದ ಸ್ಪಷ್ಟ ಫಲಶೃತಿಗಳು, ಸಾಧನೆಗಳು ಹಾಗೂ ನ್ಯೂನತೆಗಳನ್ನು ಸೂಚಿಸುವ ಮೌಲ್ಯಮಾಪನದ ಬಗ್ಗೆ ನಮ್ಮ ಪ್ರಯತ್ನವಾಗಿದ್ದು, ಅದರಿಂದಾಗಿ ಅಧ್ಯಯನದ ನಿರ್ಣಯಗಳು ಹಾಗೂ ಶಿಫಾರಸ್ಸುಗಳು ವಸ್ತುನಿಷ್ಠ ಹಾಗೂ ನೀತಿಯುತ ಆಗಿರುತ್ತದೆ.

ನಿರ್ದಿಷ್ಟಪಡಿಸಿದ ಮತ್ತು ಸು–ವಿನ್ಯಾಸಗೊಳಿಸಿದ ಅನುಸೂಚಿಗಳನ್ನು ವಿನ್ಯಾಸಗೊಳಿಸಲು ಎಲ್ಲ ಮಟ್ಟಗಳಲ್ಲಿ ಸಲಹೆಗಳನ್ನು ಪಡೆಯಲಾಗಿದೆ ಮತ್ತು ವಾಸ್ತವಿಕ ಸಂಗತಿಗಳನ್ನು ಮತ್ತು ಮಾಹಿತಿಯನ್ನು ಪಡೆಯಲು ಸಮೀಕ್ಷಾ ಸಾಧನಗಳನ್ನು ಇನ್ನಷ್ಟು ಉಪಯೋಗಿಸಲಾಯಿತು. ಮೌಲ್ಯಮಾಪನ ಅಧ್ಯಯನವನ್ನು ವೃತ್ತಿಪರ, ವಾಸ್ತವಿಕ ಹಾಗೂ ನೈತಿಕತೆಯ ರೀತಿಯಲ್ಲಿ ಕೈಗೊಳ್ಳಲಾಯಿತು ಮತ್ತು ಈ ಕಾರ್ಯಕ್ರಮದ ನಿಷ್ಪಕ್ಷಪಾತ ಮೌಲ್ಯಮಾಪನವನ್ನು ಮಾಡಲು ನಿರ್ದಿಷ್ಟ ದತ್ತಾಂಶದಿಂದ ಅದನ್ನು ಬೆಂಬಲಿಸಲಾಯಿತು. ಯೋಜನೆಯ ಫಲಶೃತಿಗಳು, ಫಲಿತಾಂಶಗಳು ಹಾಗೂ ಉದ್ದೇಶಗಳಿಗೆ ಪರಿಣಾಮಗಳನ್ನು ಉಂಟು ಮಾಡಲು ಫಲಿತಾಂಶ–ಆಧಾರಿತ ಮೌಲ್ಯಮಾಪನ ಮತ್ತು ಔಪಚಾರಿಕ ಸಮೀಕ್ಷೆಗಳನ್ನು ಉಪಯೋಗಿಸಲಾಯಿತು. ಅನುಷ್ಠಾನದ ಬಗ್ಗೆ ಮುಖ್ಯ ಮಾಹಿತಿಯನ್ನು ಪಡೆಯಲು ಮಂಡ್ಯ, ಯಾದಗಿರಿ, ಬೆಳಗಾಂ, ಶಿವಮೊಗ್ಗ ಮತ್ತು ಚಿತ್ರದುರ್ಗ ಈ 5 ಜಿಲ್ಲೆಗಳಾದ್ಯಂತ ಆಯ್ಕೆ ಮಾಡಿದ ಪ್ರತಿಯೊಂದೂ ಮಾದರಿಗಳಿಗಾಗಿ ತಾಲೂಕು ಮಟ್ಟದಲ್ಲಿ ಮಾದರಿ ಸಿಂಧುತ್ವವನ್ನು ಕೈಗೊಳ್ಳಲಾಯಿತು. ಅನುಷ್ಠಾನದ ಪ್ರಗತಿಯನ್ನು ದಾಖಲಿಸಲು ಪ್ರತಿಪಾದಕರ/ಅಧಿಕಾರಿಗಳ ಹಾಗೂ ಇತರ ಮಧ್ಯಸ್ಥಗಾರರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಮಾದರಿ ಕ್ಷೇತ್ರಗಳಲ್ಲಿ ವಿವಿಧ ಮಧ್ಯಸ್ಥಗಾರರೊಂದಿಗೆ ಕೇಂದ್ರಿಕೃತ ಸಮೂಹ ಚರ್ಚೆಗಳನ್ನು ನಡೆಸಲಾಯಿತು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನದ ಮೊದಲಿನ ಮತ್ತು ಆನಂತರದ ನಿಬಂಧನೆಗಳನ್ನು ತಿಳಿದುಕೊಳ್ಳಲು ಅಧಿಕಾರಿ ಮಟ್ಟದ ಚರ್ಚೆಗಳು ಆಧಾರವಾದವು.

## 8.1 ಮಾದರಿಗಳ ಆಯ್ಕೆ

### 8.1.1 ಜಿಲ್ಲೆಗಳು ಮತ್ತು ತಾಲ್ಲೂಕುಗಳ ಆಯ್ಕೆ

ಉಲ್ಲೇಖ ನಿಯಮಗಳ ಅನ್ವಯ, 1 ರಿಂದ 11 ರವರೆಗೆ ಎಲ್ಲ ಮೌಲ್ಯಮಾಪಕ ಪ್ರಶ್ನೆಗಳಿಗಾ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಕಛೇರಿಯಲ್ಲಿ ಲಭ್ಯವಿರುವ ಮಾಹಿತಿಯ ಪರಿಶೀಲನೆಯನ್ನು ಕೈಗೊಳ್ಳಲು ಜಿಲ್ಲಾ ಸಾಂಖ್ಯಿಕ ಕಛೇರಿಗಳನ್ನು ಮತ್ತು ಮಂಡ್ಯ, ಯಾದಗಿರಿ, ಬೆಳಗಾಂ, ಶಿವಮೊಗ್ಗ ಮತ್ತು ಚಿತ್ರದುರ್ಗ ತಾಲ್ಲೂಕು ಕಛೇರಿಗಳನ್ನು ಜಿಲ್ಲಾ ಮಾದರಿಗಳಂತೆ ಒಳಗೊಳ್ಳಲಾಯಿತು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಮೌಲ್ಯಮಾಪನ ಅಧ್ಯಯನಕ್ಕಾಗಿ ಒಳಗೊಂಡ ಜಿಲ್ಲೆಗಳು ಮತ್ತು ತಾಲೂಕುಗಳನ್ನು ಕೋಷ್ಟಕ–7 ರಲ್ಲಿ ಕೊಡಲಾಗಿದೆ.

**ಕೋಷ್ಟಕ – 7: ಈ ಅಧ್ಯಯನದ ಅಡಿಯಲ್ಲಿ ಒಳಗೊಳ್ಳುವ ಜಿಲ್ಲೆಗಳು ಮತ್ತು ತಾಲ್ಲೂಕುಗಳ ಪಟ್ಟಿ.**

| ಕ್ರ. ಸಂ. | ಕಛೇರಿ/ಸ್ಥಳದ ಹೆಸರು | ಒಳಗೊಳ್ಳುವ ತಾಲೂಕುಗಳ ಪಟ್ಟಿ |
|---|---|---|
| 1 | ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಬೆಂಗಳೂರು | – |
| 2 | ಜಿಲ್ಲಾ ಸಾಂಖ್ಯಿಕ ಕಛೇರಿ ಬೆಳಗಾವಿ | ಸೌದತ್ತಿ |
| | | ಅಥಣಿ |
| | | ಬೈಲಹೊಂಗಲ |
| | | ಬೆಳಗಾವಿ |
| | | ಚಿಕ್ಕೋಡಿ |
| | | ಗೋಕಾಕ |
| | | ಹುಕ್ಕೇರಿ |
| | | ಖಾನಾಪೂರ |
| | | ರಾಯಬಾಗ |
| | | ರಾಮದುರ್ಗ |
| 3 | ಜಿಲ್ಲಾ ಸಾಂಖ್ಯಿಕ ಕಛೇರಿ ಚಿತ್ರದುರ್ಗ | ಚೆಳ್ಳಕೆರೆ |
| | | ಚಿತ್ರದುರ್ಗ |
| | | ಹಿರಿಯೂರು |
| | | ಹೊಳಲ್ಕೆರೆ |
| | | ಹೊಸದುರ್ಗ |
| | | ಮೊಳಕಾಲ್ಮೂರು |
| 4 | ಜಿಲ್ಲಾ ಸಾಂಖ್ಯಿಕ ಕಛೇರಿ ಮಂಡ್ಯ | ಕೃಷ್ಣರಾಜಪುರ |
| | | ಮದ್ದೂರು |
| | | ಮಳವಳ್ಳಿ |
| | | ಮಂಡ್ಯ |
| | | ನಾಗಮಂಗಲ |
| | | ಪಾಂಡವಪುರ |
| | | ಶ್ರೀರಂಗಪಟ್ಟಣ |

| | | |
|---|---|---|
| 5 | ಜಿಲ್ಲಾ ಸಾಂಖ್ಯಿಕ ಕಛೇರಿ ಶಿವಮೊಗ್ಗ | ಭದ್ರಾವತಿ |
| | | ಹೊಸನಗರ |
| | | ಸಾಗರ |
| | | ಶಿಕಾರಿಪುರ |
| | | ಶಿವಮೊಗ್ಗ |
| | | ಸೊರಬ |
| | | ತೀರ್ಥಹಳ್ಳಿ |
| 6 | ಜಿಲ್ಲಾ ಸಾಂಖ್ಯಿಕ ಕಛೇರಿ ಯಾದಗಿರಿ | ಶಹಾಪೂರ |
| | | ಶೋರಾಪೂರ |
| | | ಯಾದಗಿರಿ |

**8.1.2 ತರಬೇತುದಾರರ ಆಯ್ಕೆ**

ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಒದಗಿಸಿದ ಮಾಹಿತಿಯ ಅನ್ವಯ, 5 ಜಿಲ್ಲಾ ಸಾಂಖ್ಯಿಕ ಕಛೇರಿಗಳಲ್ಲಿ ಹಾಜರಿದ್ದ/ ನೇಮಕ ಮಾಡಲ್ಪಟ್ಟ ಎಲ್ಲ ಸಾಂಖ್ಯಿಕ ಅಧಿಕಾರಿಗಳು, ಗ್ರಾಮ ಲೆಕ್ಕಿಗರು ಮತ್ತು ಗಣತಿಗಾರರು ಇವರನ್ನು ಮೌಲ್ಯ ಮಾಪನ ಅಧ್ಯಯನದ ಭಾಗವಾಗಿ ಒಳಗೊಳ್ಳಲಾಯಿತು.

ತರಬೇತುದಾರರ ಆಯ್ಕೆಗಾಗಿ ಮಾದರಿ ಯೋಜನೆಯನ್ನು ಯೋಜನಾಧಿಕಾರಿ, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ, ಇವರ ಸಲಹೆಯಲ್ಲಿ ಅಂತಿಮಗೊಳಿಸಲಾಯಿತು.

**8.1.2.1 ಔಪಚಾರಿಕ ಸಮೀಕ್ಷೆಗಳಿಗಾಗಿ ಪ್ರತಿಕ್ರಿಯೆದಾರರ ಸಂಕ್ಷಿಪ್ತ ಸ್ವ–ವಿವರ**

ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳೊಂದಿಗಿನ ಕ್ಷೇತ್ರ ಸಮೀಕ್ಷಾ ಅವಧಿಯಲ್ಲಿ ಮಾದರಿ ವಿವರಗಳನ್ನು ಮತ್ತು ತರಬೇತುದಾರರ ವಿವರಗಳನ್ನು ಸಂಗ್ರಹಿಸಲಾಯಿತು ಮತ್ತು ಒದಗಿಸಿದ ವಿವರಗಳ ಆಧಾರದ ಮೇಲೆ ಟ್ರೇನಿಗಳ ಆಯಾಯ ತಾಲೂಕುಗಳಿಗೆ ಸ್ಥಳಗಳಿಗೆ ಭೇಟಿ ನೀಡಲಾಯಿತು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಕೈಗೊಂಡ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ 37 ತಾಲ್ಲೂಕುಗಳನ್ನು ಒಳಗೊಂಡು 5 ಜಿಲ್ಲಾ ಸಾಂಖ್ಯಿಕ ಕಛೇರಿಗಳಲ್ಲಿ ಲಭ್ಯವಿರುವ ಎಲ್ಲಾ ಕ್ಷೇತ್ರ ಅಧಿಕಾರಿಗಳನ್ನು/ಅಧಿಕಾರಿಗಳನ್ನು ಒಳಗೊಂಡು ಮೌಲ್ಯಮಾಪನ ಅಧ್ಯಯನದ ಭಾಗವಾಗಿ ಒಟ್ಟು 68 ತರಬೇತಿದಾರರನ್ನು ಸಮೀಕ್ಷೆ ಮಾಡಲಾಯಿತು.

**ಪ್ರತಿಕ್ರಿಯೆದಾರರ ವಯಸ್ಸು**

- ಜಿಲ್ಲಾ ಸಾಂಖ್ಯಿಕ ಕಛೇರಿಗಳಲ್ಲಿನ ಪ್ರತಿಕ್ರಿಯೆದಾರರಲ್ಲಿ – ಶೇ. 47 ರಷ್ಟು 30 ರಿಂದ 45 ವರ್ಷ ವಯಸ್ಸಿನವರು; ಶೇ.27 ರಷ್ಟು ಪ್ರತಿಕ್ರಿಯೆದಾರರು 25 ರಿಂದ 30 ವರ್ಷ ವಯಸ್ಸಿನವರು; ಶೇ. 14.71 ರಷ್ಟು 18 ರಿಂದ 25 ವರ್ಷ ವಯಸ್ಸಿನವರು ಮತ್ತು ಶೇ. 10.29 ರಷ್ಟು 45 ವರ್ಷಕ್ಕಿಂತ ಹೆಚ್ಚು ವಯಸ್ಸಿನವರು ಇದ್ದರು.

ಪ್ರತಿಕ್ರಿಯೆದಾರಗಳ/ಫಲಾನುಭವಿಗಳ ವಯಸ್ಸನ್ನು ಕೋಷ್ಟಕ 8 ಸೂಚಿಸುತ್ತದೆ.

**ಕೋಷ್ಟಕ 8: ಪ್ರತಿಕ್ರಿಯೆದಾರರ ವಯಸ್ಸು**

| ಪ್ರತಿಕ್ರಿಯೆದಾರರ ವಯಸ್ಸು | ಸಾಂಖ್ಯಿಕ ನಿರೀಕ್ಷಕರ ಸಂಖ್ಯೆ | ಗ್ರಾಮಲೆಕ್ಕಿಗರ ಮತ್ತು ಗಣತಿದಾರರ ಸಂಖ್ಯೆ | ಪ್ರತಿಕ್ರಿಯೆದಾರರ ಒಟ್ಟು ಸಂಖ್ಯೆ | ಒಟ್ಟು ಮೊತ್ತದ ಪ್ರತಿಶತ |
|---|---|---|---|---|
| 18–25 ವರ್ಷಗಳು | 1 | 9 | 10 | 14.71 |
| 25-30 ವರ್ಷಗಳು | 4 | 15 | 19 | 27.94 |
| 30–45 ವರ್ಷಗಳು | 19 | 13 | 32 | 47.06 |
| >45 ವರ್ಷಗಳು | 3 | 4 | 7 | 10.29 |
| ಒಟ್ಟು | | | 68 | 100.00 |

**ಪ್ರತಿಕ್ರಿಯೆದಾರರ ಲಿಂಗ**

- ಜಿಲ್ಲಾ ಸಾಂಖ್ಯಿಕ ಕಛೇರಿಗಳಲ್ಲಿನ ಪ್ರತಿಕ್ರಿಯೆದಾರರಲ್ಲಿ ಶೇ. 83.82 ರಷ್ಟು ಪ್ರತಿಕ್ರಿಯೆದಾರರು ಪುರುಷರಾಗಿದ್ದರು ಮತ್ತು ಶೇ. 16.18 ರಷ್ಟು ಪ್ರತಿಕ್ರಿಯೆದಾರರು ಮಾತ್ರ ಮಹಿಳೆಯರಾಗಿದ್ದರು.
- ಪ್ರತಿಕ್ರಿಯೆದಾರರ/ಫಲಾನುಭವಿಗಳ ಲಿಂಗವನ್ನು ಕೋಷ್ಟಕ 8 ಸೂಚಿಸುತ್ತದೆ.

**ಕೋಷ್ಟಕ 9: ಪ್ರತಿಕ್ರಿಯೆದಾರರ ಲಿಂಗ**

| ಪ್ರತಿಕ್ರಿಯೆದಾರರ ಲಿಂಗ | ಸಾಂಖ್ಯಿಕ ನಿರೀಕ್ಷಕರ ಸಂಖ್ಯೆ | ಗ್ರಾಮಲೆಕ್ಕಿಗರ ಮತ್ತು ಗಣತಿದಾರರ ಸಂಖ್ಯೆ | ಪ್ರತಿಕ್ರಿಯೆದಾರಗಳ ಒಟ್ಟು ಸಂಖ್ಯೆ | ಒಟ್ಟು ಮೊತ್ತದ ಪ್ರತಿಶತ |
|---|---|---|---|---|
| ಪುರುಷ | 20 | 37 | 57 | 83.82 |
| ಮಹಿಳೆ | 7 | 4 | 11 | 16.18 |
| ಒಟ್ಟು | | | 68 | 100.00 |

**ಪ್ರತಿಕ್ರಿಯೆದಾರರ ಶಿಕ್ಷಣ ಮಟ್ಟ**

- ಶೇ.50 ರಷ್ಟು ಪ್ರತಿಕ್ರಿಯೆದಾರರು ತಮ್ಮ ಪದವಿ ಶಿಕ್ಷಣ ಮುಗಿಸಿದ್ದರು; ಶೇ. 26.47 ರಷ್ಟು ಪ್ರತಿಕ್ರಿಯೆದಾರರು ಪಿ. ಯು. ಶಿಕ್ಷಣ ಮುಗಿಸಿದ್ದರು; ಶೇ. 17.65 ಪ್ರತಿಕ್ರಿಯೆದಾರರು ಸ್ನಾತಕೋತ್ತರ ಶಿಕ್ಷಣ ಮುಗಿಸಿದ್ದರು ಮತ್ತು ಶೇ. 5.88 ರಷ್ಟು ಪ್ರತಿಕ್ರಿಯೆದಾರರು ಎಸ್ಎಸ್ಎಲ್‌ಸಿ ಮುಗಿಸಿದ್ದರು.
- ಪ್ರತಿಕ್ರಿಯೆದಾರರ ಶಿಕ್ಷಣ ಮಟ್ಟವು ಕೋಷ್ಟಕ 10 ಸೂಚಿಸುತ್ತದೆ.

**ಕೋಷ್ಟಕ 10: ಪ್ರತಿಕ್ರಿಯೆದಾರರ ಶಿಕ್ಷಣ ಮಟ್ಟ**

| ಪ್ರತಿಕ್ರಿಯೆದಾರರ ಶಿಕ್ಷಣದ ಮಟ್ಟ | ಸಾಂಖ್ಯಿಕ ನಿರೀಕ್ಷಕರ ಸಂಖ್ಯೆ | ಗ್ರಾಮಲೆಕ್ಕಿಗರ ಮತ್ತು ಗಣತಿದಾರರ ಸಂಖ್ಯೆ | ಪ್ರತಿಕ್ರಿಯೆದಾರರ ಒಟ್ಟು ಸಂಖ್ಯೆ | ಒಟ್ಟು ಮೊತ್ತದ ಪ್ರತಿಶತ |
|---|---|---|---|---|
| ಸ್ನಾತಕೋತ್ತರ ಪದವಿ | 11 | 1 | 12 | 17.65 |
| ಸ್ನಾತಕ ಪದವಿ | 14 | 20 | 34 | 50.00 |
| ಪದವಿ–ಪೂರ್ವ | 2 | 16 | 18 | 26.47 |
| ಎಸ್.ಎಸ್..ಎಲ್.ಸಿ. | 0 | 4 | 4 | 5.88 |
| ಒಟ್ಟು | | | 68 | 100.00 |

### 8.1.2.2 ಮಾಹಿತಿ ಸಂವಹನ ತಂತ್ರಜ್ಞಾನ ಉಪಕರಣದ ಆಯ್ಕೆ

ಉಲ್ಲೇಖ ನಿಯಮಗಳ ಅನ್ವಯ ಮತ್ತು ಕ್ಷೇತ್ರ ಮಟ್ಟದ ಸಿಬ್ಬಂದಿಗೆ ಪೂರೈಸಿದ ಉಪಕರಣಗಳನ್ನು ನಿರ್ಧಾರಣೆ ಮಾಡುವುದಕ್ಕಾಗಿ ಮಂಡ್ಯ, ಯಾದಗಿರಿ, ಬೆಳಗಾಂ, ಶಿವಮೊಗ್ಗ ಮತ್ತು ಚಿತ್ರದುರ್ಗ–ಈ 5 ಜಿಲ್ಲೆಗಳಲ್ಲಿ ಕ್ಷೇತ್ರ ಅಧ್ಯಯನವನ್ನು ಕೈಗೊಳ್ಳಲಾಯಿತು. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯವರ ಸಲಹೆಯೊಂದಿಗೆ, ಪೂರೈಸಿದ ಉಪಕರಣಗಳ ಲಭ್ಯತೆ ಮತ್ತು ಕ್ರಿಯಾಶೀಲತೆಯನ್ನು ಪರಿಶೀಲಿಸುವುದಕ್ಕಾಗಿ 371 ಮಾದರಿಗಳನ್ನು (ಮಿನಿ ಲ್ಯಾಪ್‌ಟಾಪ್‌ಗಳು, ಲ್ಯಾಪ್‌ಟಾಪ್‌ಗಳು, ಪ್ರಿಂಟರ್‌ಗಳು ಇತ್ಯಾದಿ ಒಳಗೊಂಡು) ಆಯ್ಕೆ ಮಾಡಲಾಯಿತು.

## 8.2 ದತ್ತಾಂಶ ಸಂಗ್ರಹ

ಔಪಚಾರಿಕ ಸಮೀಕ್ಷೆಗಳ ಮೂಲಕ ಮತ್ತು ದ್ವಿತೀಯಕ ಮೂಲಗಳಿಂದ ದತ್ತಾಂಶ ಕಣಜದ ಮೂಲಕ ಮಧ್ಯಸ್ಥಗಾರರು ಮತ್ತು ಅಧಿಕಾರಿಗಳಿಂದ ಸಂಗ್ರಹಿಸಿದ ಪ್ರಾಥಮಿಕ ಮತ್ತು ದ್ವಿತೀಯಕ ದತ್ತಾಂಶದ ಮೇಲೆ ಈ ಮೌಲ್ಯಮಾಪನ ಅಧ್ಯಯನವು ಆಧರಿಸಿರುತ್ತದೆ. ಅಧ್ಯಯನದ ಭಾಗವಾಗಿ, ಅಧ್ಯಯನ ಅವಧಿ 2010–14ಕ್ಕಾಗಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನ ವಿವರಗಳನ್ನು ಕುರಿತು ಮಾಹಿತಿ/ದತ್ತಾಂಶವನ್ನು ಕಲೆಹಾಕಲು ಹಲವು ಸುತ್ತು ಸಭೆಗಳ ಮೂಲಕ ನಾವು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯವರಿಂದ ಸಲಹೆ ಪಡೆದೆವು.

ಎರಡನೇ ಹಂತದಲ್ಲಿ, ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಕೈಗೊಂಡ ಚಟುವಟಿಕೆಗಳ ಸಂಪೂರ್ಣ ಪಟ್ಟಿಗಾಗಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಅವರಿಂದ ಸಂಗ್ರಹಿಸಲಾಯಿತು.

ಮೂರನೇ ಹಂತದಲ್ಲಿ, ರಚಿಸಿದ ಪ್ರಶ್ನಾವಳಿಗಳ ಪ್ರಾಯೋಗಿಕ ಪರೀಕ್ಷೆಯನ್ನು ಮಾಡಲು ಸಂಬಂಧಿಸಿದ ಉಸ್ತುವಾರಿ ಅಧಿಕಾರಿಗಳೊಂದಿಗೆ ಮಂಡ್ಯಕ್ಕೆ ಕ್ಷೇತ್ರ ಭೇಟಿ ಕೈಗೊಳ್ಳಲಾಯಿತು.

ನಾಲ್ಕನೇ ಹಂತದಲ್ಲಿ, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯಿಂದ ಒದಗಿಸಲ್ಪಟ್ಟ ಮಾಹಿತಿಯ ಸಿಂಧುತ್ವಕ್ಕಾಗಿ ಜಿಲ್ಲಾ ಮಾದರಿಗಳ ಎಲ್ಲ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳನ್ನು ನಾವು ಭೇಟಿ ಮಾಡಿದೆವು.

ಐದನೇ ಹಂತದಲ್ಲಿ, ವಿವರವಾದ ಮಾಹಿತಿಯನ್ನು ಕಲೆಹಾಕಲು ಆಯ್ದ ಜಿಲ್ಲಾ ಮಾದರಿಗಳಲ್ಲಿ ತಾಲೂಕು ಮಟ್ಟದಲ್ಲಿ ಕ್ಷೇತ್ರ ಮಟ್ಟದ ಅಧಿಕಾರಿಗಳಿಂದ ನಾವು ಪ್ರಾಥಮಿಕ ಸಮೀಕ್ಷೆಯನ್ನು ಕೈಗೊಂಡೆವು ಮತ್ತು ರಚಿಸಿದ ಪ್ರಶ್ನಾವಳಿಗಳ ಮೂಲಕ ಅಧ್ಯಯನಕ್ಕಾಗಿ ಮಾದರಿಗಳ ಪರಿಶೀಲನೆ ಕೈಗೊಂಡೆವು.

ಆರನೇ ಹಂತದಲ್ಲಿ, ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಯೋಜನೆ ಅನುಷ್ಠಾನದ ಅಡಿಯಲ್ಲಿ ವೆಬ್ ಅಪ್ಲಿಕೇಶನ್‌ಗಳ ಮೇಲೆ ಮಾಹಿತಿಯನ್ನು ಸಂಗ್ರಹಿಸಲು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಯೋಜನಾ ನಿರ್ದೇಶಕರೊಂದಿಗೆ ಮತ್ತು ನ್ಯಾಶನಲ್ ಇನ್‌ಫಾರ್ಮೆಟಿಕ್ಸ್ ಸೆಂಟರ್‌ನ ಅಧಿಕಾರಿಗಳೊಂದಿಗೆ ನಾವು ಸಭೆಗಳನ್ನು ನಡೆಸಿದ್ದೇವೆ.

ದ್ವಿತೀಯಕ ದತ್ತಾಂಶವನ್ನು ಬಹುಶಃ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯಿಂದ ಮತ್ತು ಅದರ ಅನುಷ್ಠಾನಗೊಳಿಸುತ್ತಿರುವ ಮಧ್ಯಸ್ಥಗಾರರಿಂದ ಸಂಗ್ರಹಿಸಲಾಗಿದೆ.

ಚಿತ್ರ 5 : ಮೌಲ್ಯ ಮಾಪನ ಅಧ್ಯಯನಕ್ಕಾಗಿ ದತ್ತಾಂಶ ಸಂಗ್ರಹ ವಿಧಾನ

| ಹಂತ | ದತ್ತಾಂಶ ಸಂಗ್ರಹ | ವಿವರಗಳು | ಮಧ್ಯಸ್ಥಗಾರ | ಬಳಸಿದ ಸಾಧನ/ವಿಧಾನ |
|---|---|---|---|---|
| ಹಂತ 1 | KSSSP ಬಗ್ಗೆ ಮಾಹಿತಿ/ವಿವರಗಳು | ▶ ಮಾಹಿತಿ ಮತ್ತು ನಿಧಿನೀಡಿಕೆ ರೂಪುರೇಷೆ<br>▶ ಕಾರ್ಯಗತಗೊಳಿಸಿದ ಚಟುವಟಿಕೆಗಳ ಪಟ್ಟಿ<br>▶ ದ್ವಿತೀಯಕ ವರದಿಗಳು | ▶ KSSDA<br>▶ KEA | ▶ ಆರಂಭಿಕ ಸಭೆ ದ್ವಿತೀಯಕ ದತ್ತಾಂಶ ವಿಶ್ಲೇಷಣೆ |
| ಹಂತ 2 | ಅನುಷ್ಠಾನ ವಿವರಗಳು | ▶ ಕಾರ್ಯಗತಗೊಳಿಸಿದ ಚಟುವಟಿಕೆಗಳು<br>▶ ಕಾರ್ಯಗತಗೊಳಿಸಿದ ಚಟುವಟಿಕೆಗಳ ಮೂಲ ಮಾಹಿತಿ<br>▶ ಕರಡು ಆರಂಭಿಕ ವರದಿ | ▶ KSSDA<br>▶ KEA | ▶ KSSDA ದೊಂದಿಗೆ ಚರ್ಚೆ<br>▶ ಕಾರ್ಯಗತಗೊಳಿಸಿದ ಚಟುವಟಿಕೆಗಳ ಸಂಗ್ರಹಿತ ಪಟ್ಟಿ |
| ಹಂತ 3 | ಸಮೀಕ್ಷಾ ಸಾಧನಗಳ ಅಂತಿಮಗೊಳಿಸುವಿಕೆ | ▶ ಮಂಡ್ಯ ಜಿಲ್ಲೆಗೆ ಭೇಟಿ<br>▶ ಎಲ್ಲ ಸಮೀಕ್ಷಾ ಸಲಕರಣೆಗಳ ಅಥವಾ ರಚಿಸಿದ ಪ್ರಶ್ನಾವಳಿಗಳ ಪ್ರಾಯೋಗಿಕ ಪರೀಕ್ಷೆ<br>▶ ಆರಂಭಿಕ ವರದಿಯ ಸಲ್ಲಿಕೆ | ▶ KSSDA<br>▶ KEA | ▶ ಭಾಗ A ಮತ್ತು ಭಾಗ B ಪ್ರಶ್ನಾವಳಿಗಳು<br>▶ ಆರಂಭಿಕ ವರದಿಯ ಅನುಮೋದನೆ |
| ಹಂತ 4 | ಪ್ರಾಥಮಿಕ ಸಮೀಕ್ಷೆ | ▶ ಎಲ್ಲಾ ಜಿಲ್ಲಾ ಸಾಂಖ್ಯಿಕ ಕಛೇರಿಗಳಿಗೆ ಭೇಟಿ<br>▶ KSSDAಯಿಂದ ಒದಗಿಸಿದ ವಿವರಗಳ ಊರ್ಜಿತತೆ | ▶ DSO's<br>▶ Taluk offices<br>▶ KEA | ▶ ಕ್ಷೇತ್ರ ಭೇಟಿ<br>▶ ಭಾಗ A ಮತ್ತು ಭಾಗ B ಪ್ರಶ್ನಾವಳಿಗಳು<br>▶ ನಮೂನೆಗಳ ಪರಿಶೀಲನೆ |
| ಹಂತ 5 | ಪ್ರಾಥಮಿಕ ಸಮೀಕ್ಷೆ | ▶ ಎಲ್ಲ ತಾಲೂಕಾ ಕಛೇರಿಗಳಿಗೆ ಭೇಟಿ<br>▶ ಪ್ರತಿವಾದಿಗಳು/ಟ್ರೇನೀಗಳು/ಅಧಿಕಾರಿಗಳೊಂದಿಗೆ ಪ್ರಾಥಮಿಕ ಸಮೀಕ್ಷೆ | ▶ DSO's<br>▶ Taluk offices<br>▶ KEA | ▶ ಕ್ಷೇತ್ರ ಭೇಟಿ<br>▶ ಭಾಗ A ಮತ್ತು ಭಾಗ B ಪ್ರಶ್ನಾವಳಿಗಳು<br>▶ ನಮೂನೆಗಳ ಪರಿಶೀಲನೆ |
| ಹಂತ 6 | ಸಲಹಾ ಸಭೆಗಳು | ▶ ಲೈನ್ ಇಲಾಖೆಗಳು ಮತ್ತು ಇತರ ಏಜೆನ್ಸಿಗಳೊಂದಿಗೆ ಮಾಹಿತಿ ಮತ್ತು ನಿಧಿನೀಡಿಕೆ ರೂಪುರೇಷೆ<br>▶ ಅಭಿವೃದ್ಧಿಪಡಿಸಿದ ವೆಬ್ ಅಪ್ಲಿಕೇಶನ್‌ಗಳ ವಿವರಗಳು | ▶ KSSDA<br>▶ NIC<br>▶ KEA | ▶ ಅನುಷ್ಠಾನಗೊಳಿಸುವ ಪಾಲುದಾರರೊಂದಿಗೆ 1–1 ಸಂದರ್ಶನಗಳು |

# 9. ದತ್ತಾಂಶ ಸಂಗ್ರಹ ಮತ್ತು ವಿಶ್ಲೇಷಣೆ

## 9.1 ದತ್ತಾಂಶ ವಿಶ್ಲೇಷಣೆ: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಫಲಿತಾಂಶ

### 9.1.1 ಅಂಕಿ–ಅಂಶಗಳ ಸಂಗ್ರಹಣ ಅಧಿನಿಯಮ, 2008 ರ ಅನುಷ್ಠಾನ ಸ್ಥಿತಿಗತಿ

#### 9.1.1.1 ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮ 2008

ಸಾಂಖ್ಯಿಕ ಶಾಸನವು ಪರಿಣಾಮಕಾರಿ ಸಾಂಖ್ಯಿಕ ವ್ಯವಸ್ಥೆಗಾಗಿ ಮೂಲಭೂತವಾದ ಪೂರ್ವಾಗತ್ಯವಾಗಿದೆ. ಸಾಂಖ್ಯಿಕ ಶಾಸನವು ಸಾಂಖ್ಯಿಕ ವ್ಯವಸ್ಥೆಯಲ್ಲಿನ ವಿವಿಧ ಕಾರ್ಯನಿರ್ವಾಹಕರು ನಿರ್ವಹಿಸಬೇಕಾದ ಪಾತ್ರಗಳನ್ನು ವ್ಯಾಖ್ಯಾನಿಸುತ್ತದೆ ಮತ್ತು ಆ ವ್ಯವಸ್ಥೆಯನ್ನು ಕಾಪಾಡುತ್ತದೆ ಮತ್ತು ಅಧಿಕೃತ ಅಂಕಿ–ಅಂಶಗಳ ಸಂಗ್ರಹಣೆ ಮತ್ತು ನಿರ್ವಹಣೆಯನ್ನು ವಿಧಿಬದ್ಧಗೊಳಿಸುತ್ತದೆ. ವಿಶ್ವ ವ್ಯಾಪಾರ ಸಂಸ್ಥೆಯ ಒಪ್ಪಂದದಿಂದಾಗಿ ಅವತರಿಸಿದ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣ ಉಂಟಾದ ನೂತನ ಸವಾಲುಗಳನ್ನು ಎದುರಿಸಲು ಅಂಕಿಅಂಶಗಳ ಸಂಗ್ರಹಣ ಅಧಿನಿಯಮ, 1953 ರ ಉಪಬಂಧಗಳು ಸೂಕ್ತವಾಗಿದ್ದಿಲ್ಲ. ಪ್ರಸ್ತುತ ಇರುವ ಅಂಕಿ–ಅಂಶಗಳ ಸಂಗ್ರಹಣ ಅಧಿನಿಯಮ, 1953 ರ ಸೂಕ್ತತೆಯ ಫಲಿತಾಂಶವನ್ನು ಡಾ॥ ಸಿ. ರಂಗರಾಜನ್‌ರವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸಾಂಖ್ಯಿಕ ಆಯೋಗವು 2001 ರಲ್ಲಿ ಸುದೀರ್ಘವಾಗಿ ಅಧ್ಯಯನ ಮಾಡಲಾಯಿತು. ಅಂಕಿ–ಅಂಶಗಳ ಸಂಗ್ರಹಣ ಅಧಿನಿಯಮ, 1953 ರ ಉಪಬಂಧಗಳನ್ನು ಪರಿಶೀಲಿಸಿದ ರಂಗರಾಜನ್ ಸಮೀತಿಯು–ಬದಲಾಗುತ್ತಿರುವ ಸಾಮಾಜಿಕ–ಆರ್ಥಿಕ ಸನ್ನಿವೇಶದಲ್ಲಿ ಪ್ರಸ್ತುತ ಇರುವ ಅಧಿನಿಯಮದ ಇತಿಮಿತಿಗಳನ್ನು ನಿವಾರಿಸುವ ಅಂಕಿ–ಅಂಶಗಳ ಸಂಗ್ರಹಣೆಯ ಬಗ್ಗೆ ನೂತನ ಕಾನೂನು ತುರ್ತು ಹಾಗೂ ಅನಿವಾರ್ಯ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟಿತು.

#### 9.1.1.2 ಹಿನ್ನೆಲೆ

ನೂತನ ಅಧಿನಿಯಮದ ಪರವಾಗಿ ರಂಗರಾಜನ್ ಸಮೀತಿಯ ಶಿಫಾರಸ್ಸುಗಳ ಮೇಲೆ ಕಾರ್ಯತತ್ಪರವಾದ ಕೇಂದ್ರ ಸರ್ಕಾರವು ದಿನಾಂಕ 7 ಜನವರಿ 2009 ರಂದು 'ಅಂಕಿಅಂಶಗಳ ಸಂಗ್ರಹಣ, 2008 (2009 ರ 7ನೆಯದ್ದು)–ಎಂಬ ನೂತನ ಶಾಸನವನ್ನು ಕಾನೂನಾಗಿಸಿತು. ಅವು ಸಾಮಾನ್ಯ ಮಾಹಿತಿಗಾಗಿ ಅಧಿಕೃತ ರಾಜ್ಯ ಪತ್ರದಲ್ಲಿ 9 ನೇ ಜನವರಿ 2009 ರಂದು ಪ್ರಕಟವಾಯಿತು. ಈ ಅಧಿನಿಯಮವನ್ನು ಜಮ್ಮು ಮತ್ತು ಕಾಶ್ಮೀರ ಹೊರತುಪಡಿಸಿ ಇಡೀ ದೇಶದಲ್ಲಿ ಮತ್ತೊಂದು ಅಧಿಸೂಚನೆಯ ಮೂಲಕ 11 ನೇ ಜೂನ್ 2010 ರಿಂದ ಜಾರಿಗೆ ತರಲಾಯಿತು. ಜಮ್ಮು ಮತ್ತು ಕಾಶ್ಮೀರ ರಾಜ್ಯವು ಈ ಕೇಂದ್ರ ಅಧಿನಿಯಮದ 2010 ನ್ನು ಕಾನೂನಾಗಿಸಿದೆ. ಈ ಅಧಿನಿಯಮದ ಅಡಿಯಲ್ಲಿ 'ಅಂಕಿಅಂಶಗಳ ಸಂಗ್ರಹಣ ನಿಯಮಗಳು, 2011' ಎಂಬ ನಿಯಮಗಳನ್ನು 16ನೇ ಮೇ 2011 ರಂದು ಅಧಿಸೂಚಿಸಲಾಯಿತು. ಈ ಹೊಸ ಅಧಿನಿಯಮವನ್ನು 1935 ರ ಅಧಿನಿಯಮದ ಇತಿಮಿತಿಗಳನ್ನು ನಿವಾರಿಸಲು ಮತ್ತು ಸಾಂಖ್ಯಿಕ ಚಟುವಟಿಕೆಗಳ ಆಡಳಿತವನ್ನು ಬಲಪಡಿಸಲು ಅಧಿನಿಯಮಿಸಲಾಯಿತು. ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ–ಅಂಕಿ ಸಂಖ್ಯೆಗಳ ಸಂಗ್ರಹಣ ಅಧಿನಿಯಮ, 2008 ಮತ್ತು ಅಂಕಿ–ಅಂಶಗಳ ನಿಯಮಗಳು, 2011–ಇವುಗಳು ದೇಶದಲ್ಲಿನ ಸಾಂಖ್ಯಿಕ ಚಟುವಟಿಕೆಗಳ ಆಡಳಿತಕ್ಕಾಗಿ ಅತ್ಯಂತ ಅಗತ್ಯವಾದ ಶಾಸನಾತ್ಮಕ ಬೆಂಬಲವನ್ನು ಒದಗಿಸಿದವು. ಈ ಅಧಿನಿಯಮವನ್ನು ಅಧಿಸೂಚಿಸುವುದಕ್ಕಿಂತ ಮೊದಲು–ಉದ್ದಿಮೆ, ವ್ಯಾಪಾರ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದ ಅಂಕಿ–ಅಂಶಗಳ ಸಂಗ್ರಹಕ್ಕಾಗಿ ಅಂಕಿ–ಅಂಶಗಳ ಸಂಗ್ರಹಣ ಅಧಿನಿಯಮ, 1953 ಶಾಸನಾತ್ಮಕ ಬೆಂಬಲವನ್ನು ಒದಗಿಸಿತ್ತು. ಹಲವು ರೀತಿಗಳಲ್ಲಿ ದತ್ತಾಂಶ ಸಂಗ್ರಹದ ವ್ಯಾಪ್ತಿಯನ್ನು ಹೆಚ್ಚಿಸುವುದರಿಂದ 2008 ರ ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮವು 1953 ರ ಅಂಕಿ

ಅಂಶಗಳ ಸಂಗ್ರಹಣ ಅಧಿನಿಯಮದ ಹಲವಾರು ಇತಿಮಿತಿಗಳನ್ನು ನಿವಾರಿಸಲು ಉದ್ದೇಶಿಸಿತ್ತು. 1953 ರ ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮದ ಉಪಬಂಧಗಳಿಗೆ ಮುಖಾಮುಖಿಯಾಗಿರುವ 2008 ರ ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮದ ಕೆಲವು ಲಕ್ಷಣಗಳು ಹೀಗಿವೆ:

- 1953 ರ ಅಧಿನಿಯಮದಲ್ಲಿ, ಯಾವುದೇ ಔದ್ಯಮಿಕ ಅಥವಾ ವಾಣಿಜ್ಯ ಸಂಸ್ಥೆಯಿಂದ ಯಾವುದೇ ವಿಷಯದ ಬಗ್ಗೆ ಅಂಕಿ ಅಂಶಗಳ ಸಂಗ್ರಹಕ್ಕಾಗಿ ಅಧಿಸೂಚನೆ ನೀಡಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಮಾತ್ರ ಅಧಿಕಾರ ನೀಡಲಾಗಿತ್ತು. ಈ ಹೊಸ ಅಧಿನಿಯಮದಲ್ಲಿ, ಔದ್ಯಮಿಕ/ವಾಣಿಜ್ಯ ಸಂಸ್ಥೆಗಳಿಂದ ಅಷ್ಟೇ ಅಲ್ಲದೆ ವ್ಯಕ್ತಿಗಳಿಂದ ಮತ್ತು ಗ್ರಹಸ್ಥರಿಂದಲೂ ಸಹ ಎಲ್ಲ ವಿಧದ ಅಂಕಿ ಅಂಶಗಳನ್ನು ಸಂಗ್ರಹಿಸಲು ಅದರ ವ್ಯಾಪ್ತಿಯನ್ನು ಹೆಚ್ಚಿಸಲಾಯಿತು. ಸ್ಥಳೀಯ ಸರ್ಕಾರಗಳಾದ ಪಂಚಾಯಿತಿಗಳು ಹಾಗೂ ನಗರಸಭೆಗಳಿಗೆ ಈ ಹೊಸ ಅಧಿನಿಯಮದ ಅಡಿಯಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಲು ಅಧಿಕಾರ ನೀಡಲಾಯಿತು.
- 1953 ರ ಅಧಿನಿಯಮದಲ್ಲಿ, ಅಂಕಿ ಅಂಶಗಳ ಸಂಗ್ರಹಣೆಯನ್ನು ಕೈಗೊಳ್ಳುವುದಕ್ಕಾಗಿ ಅಂಕಿ ಅಂಶಗಳ ಅಧಿಕಾರಿಯನ್ನು ನೇಮಕಮಾಡಲು, ಸಂದರ್ಭಾನುಸಾರ, ಕೇಂದ್ರ ಸರ್ಕಾರಕ್ಕೆ/ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡಲಾಯಿತು. ಹೊಸ ಅಧಿನಿಯಮದಲ್ಲಿ, ಅದರ ವ್ಯಾಪ್ತಿಯನ್ನು ಹೆಚ್ಚಿಸಿ, ರಾಜ್ಯಗಳಲ್ಲಿನ ಅಥವಾ ಕೇಂದ್ರದಲ್ಲಿನ ಅಥವಾ ಸ್ಥಳೀಯ ಸರ್ಕಾರದಲ್ಲಿನ ಯಾವುದೇ ಸರ್ಕಾರಿ ಇಲಾಖೆ/ಸಂಸ್ಥೆಯು ದತ್ತಾಂಶ ಸಂಗ್ರಹಣೆಯ ಪ್ರತಿಯೊಂದೂ ವಿಷಯಕ್ಕೆ/ಅಥವಾ ಪ್ರತಿಯೊಂದೂ ಭೌಗೋಳಿಕ ಘಟಕಕ್ಕೆ ಅಂಕಿ ಅಂಶಗಳ ಅಧಿಕಾರಿಯನ್ನು ನೇಮಿಸಬಹುದಾಗಿತ್ತು. ಹೀಗೆ 1953 ರ ಅಧಿನಿಯಮದ ಅನುಕೂಲಕರ ಸ್ವರೂಪದೊಂದಿಗೆ ಮುಂದುವರಿಯುತ್ತ ಹೊಸ ಅಧಿನಿಯಮವು ತನ್ನ ಪರಿಧಿಯಲ್ಲಿ ಸ್ಥಳೀಯ ಸರ್ಕಾರಗಳನ್ನು ಒಳಪಡಿಸುವುದರಿಂದ 'ಸಮುಚಿತ ಸರ್ಕಾರ'ದ ವ್ಯಾಖ್ಯೆಯ ವ್ಯಾಪ್ತಿಯನ್ನು ಹೆಚ್ಚಿಸುತ್ತದೆ.
- ಹೊಸ ಅಧಿನಿಯಮದಲ್ಲಿ, ಅಗತ್ಯವಿರುವ ದತ್ತಾಂಶ, ಮಾನವ ಸಂಪನ್ಮೂಲ ಇತ್ಯಾದಿಗಳ ರೂಪದಲ್ಲಿ ಒದಗಿಸುವುದರಿಂದ ಸಮುಚಿತ ಸರ್ಕಾರದಿಂದ ನೇಮಕವಾದ ಯಾವುದೇ ಸಾಂಖ್ಯಿಕ ಅಧಿಕಾರಿಗೆ ಬೆಂಬಲ ಖಚಿತ ಪಡಿಸುವುದಕ್ಕಾಗಿ ಅಗತ್ಯವಿರುವ ನಿಬಂಧನೆಗಳನ್ನು ಸಹ ಮಾಡಲಾಗಿದೆ. ಇಂತಹ ಉಪಬಂಧಗಳು 1953 ರ ಅಧಿನಿಯಮದಲ್ಲಿ ಇರಲಿಲ್ಲ.
- 1953 ಅಧಿನಿಯಮದಲ್ಲಿ, ಸಮೀಕ್ಷೆಗಳ ನಕಲನ್ನು ತಡೆಯುವುದಕ್ಕಾಗಿ ಮತ್ತು ಅಂಕಿ ಸಂಖ್ಯೆಗಳ ಸಂಗ್ರಹಣೆಗಾಗಿ ಗುಣಮಟ್ಟಗಳನ್ನು ಖಾತ್ರಿ ಪಡಿಸುವುದಕ್ಕಾಗಿ ಯಾವುದೇ ವ್ಯವಸ್ಥೆ ನಿಗದಿಪಡಿಸಿಲ್ಲ. ಹೊಸ ಅಧಿನಿಯಮದಲ್ಲಿ, ಪುನರಾವರ್ತನೆಯನ್ನು ತಪ್ಪಿಸುವುದಕ್ಕಾಗಿ ಮತ್ತು 'ಮುಖ್ಯ ಅಂಕಿಅಂಶಗಳಿಗೆ' ಸಂಬಂಧಿಸಿದಂತೆ ದತ್ತಾಂಶ ಸಂಗ್ರಹಣೆಯಲ್ಲಿ ತಾಂತ್ರಿಕ ಗುಣಮಟ್ಟಗಳನ್ನು ನಿರ್ವಹಿಸುವುದಕ್ಕಾಗಿ ಕೇಂದ್ರ ಸರ್ಕಾರಕ್ಕೆ ನಿಯಮಗಳನ್ನು ರಚಿಸುವ ಅಧಿಕಾರ ನೀಡಲಾಗಿದ್ದು, ಈ ಅಂಶಗಳು ರಾಷ್ಟ್ರಕ್ಕಾಗಿ ಮಹತ್ವದ್ದಾಗಿವೆ.
- 1953 ರ ಅಧಿನಿಯಮದಲ್ಲಿ, ಪ್ರತಿಯೊಂದು ಔದ್ಯಮಿಕ/ವಾಣಿಜ್ಯ ಸಂಸ್ಥೆಗೆ ನೋಟೀಸು ನೀಡಿದ ನಂತರ ಅಂಕಿ ಅಂಶಗಳ ಅಧಿಕಾರಿಯು ಪಡೆಯುವ ರಿಟರ್ನ್ ರೂಪದಲ್ಲಿ ದತ್ತಾಂಶ ಸಂಗ್ರಹಣಾ ವಿಧಾನವಿತ್ತು. ಈ ಹೊಸ ಅಧಿನಿಯಮದಲ್ಲಿ, ಬಾಹ್ಯ ಸಂದರ್ಶನಗಳು ಮತ್ತು ಎಲೆಕ್ಟ್ರಾನ್ ರೂಪದಲ್ಲಿ ರಿಟರ್ನ್ ಸಲ್ಲಿಸುವುದು ಒಳಗೊಂಡಂತೆ ದತ್ತಾಂಶ ಸಂಗ್ರಹಣೆಯ ಎಲ್ಲ ವಿಧಾನಗಳೂ ಒಳಗೊಳ್ಳುತ್ತವೆ.

- 1953 ರ ಅಧಿನಿಯಮದನ್ವಯ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಮಾಹಿತಿದಾರನಿಂದ ಸಂಗ್ರಹಿಸಿದ ಮಾಹಿತಿಯನ್ನು ಈ ಅಧಿನಿಯಮದ ಅಡಿಯಲ್ಲಿ ಅಥವಾ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಯಾವುದೇ ಕ್ರಮ ಜರುಗಿಸುವುದಕ್ಕಾಗಿ ಉಪಯೋಗಿಸಲಾಗದು. ಹೊಸ ಅಧಿನಿಯಮದಲ್ಲಿ, ಮಾಹಿತಿಯನ್ನು ಕೇವಲ ಸಾಂಖ್ಯಿಕ ಉದ್ದೇಶಗಳಿಗಾಗಿ ಮತ್ತು ಈ ಅಧಿನಿಯಮದ ಅಡಿಯಲ್ಲಿ ಕ್ರಮ ಜರುಗಿಸಲು ಉಪಯೋಗಿಸಬಹುದಾಗಿದೆ.
- 1953 ರ ಅಧಿನಿಯಮದಲ್ಲಿ, ದಂಡಗಳು ತೀರಾ ಕಡಿಮೆಯಾಗಿದ್ದವು ಮತ್ತು ಕ್ರಮ ಕೈಗೊಳ್ಳುವುದಕ್ಕಾಗಿ ಕಾರ್ಯ ವಿಧಾನಗಳು ಬಹಳ ತೊಡಕಿನವುಗಳಾಗಿದ್ದವು. ಹೊಸ ಅಧಿನಿಯಮದಲ್ಲಿ, ಇವುಗಳನ್ನು ಸುಧಾರಿಸಲಾಗಿದೆ. ಮಾಹಿತಿ ಒದಗಿಸಲಾರದ್ದಕ್ಕಾಗಿ ದಂಡಗಳನ್ನು ಹೆಚ್ಚಿಸಲಾಗಿದೆ. ಸಾರಾಂಶ ವಿಚಾರಣೆಯ ರೀತಿಯಿಂದ ದತ್ತಾಂಶ ಸಂಗ್ರಹಣಾ ಸಂಸ್ಥೆಗಳ ಪುರಾವೆಯ ಭಾರವನ್ನು ನಿವಾರಿಸಲು ವಿಚಾರಣಾ ಕಾರ್ಯವಿಧಾನವನ್ನು ಸರಳೀಕರಿಸಲಾಗಿದೆ.
- ವಿಧಾನಶಾಸ್ತ್ರೀಯ ಗುಣಮಟ್ಟಗಳು, ಸಕಾಲಿಕತೆ, ವಿಶ್ವಾಸಾರ್ಹತೆ ಮತ್ತು ಸಂಪೂರ್ಣತೆಗಳನ್ನು ಖಾತ್ರಿಪಡಿಸುವ ಉದ್ದೇಶಕ್ಕಾಗಿ ರಾಷ್ಟ್ರೀಯ ಮಹತ್ವದ ಕೆಲವು ವಿಷಯಗಳನ್ನು 'ಮುಖ್ಯ ಅಂಕಿ ಅಂಶಗಳು' ಎಂದು ಅಧಿಸೂಚಿಸುವುದಕ್ಕಾಗಿ ಹೊಸ ಅಧಿನಿಯಮದಲ್ಲಿ ಸೂಕ್ತವಾದ ಅನುಕೂಲಕರ ನಿಬಂಧನೆಗಳನ್ನು ಸಹ ಮಾಡಲಾಗಿದೆ.
- ದತ್ತಾಂಶ ಸಂಗ್ರಹಣ ಕಾರ್ಯಕ್ರಮಗಳ ಅನಾವಶ್ಯಕ ಪುನರಾವರ್ತನೆಯನ್ನು ತಪ್ಪಿಸಲು ಸಮಂಜಸವಾದ ನಿಬಂಧನೆಗಳು ಸಹ ಹೊಸ ಅಧಿನಿಯಮದಲ್ಲಿ ಲಭ್ಯವಿರುತ್ತವೆ.

**9.1.1.3 ಅಧಿನಿಯಮದ ಅನುಷ್ಠಾನ.**

**ಗುರಿಗಳು:**

- ಈ ಅಧಿನಿಯಮದ ಬಗ್ಗೆ ಸರ್ಕಾರದ ಎಲ್ಲ ಶಾಖೆಗಳಿಗೂ ವ್ಯಾಪಕ ಸುತ್ತೋಲೆ ಕಳಿಸುವುದು.
- ಅಧಿನಿಯಮದ ನಿಬಂಧನೆಗಳನ್ನು ಹಾಗೂ ಇಲಾಖೆಗಳ ಪಾತ್ರವನ್ನು ತಿಳಿಯಪಡಿಸಲು ಕಾರ್ಯದರ್ಶಿಗಳಿಗೆ, ಇಲಾಖಾ ಮುಖ್ಯಸ್ಥರಿಗೆ ಮತ್ತು ಅಕಾಡೆಮಿ ಸದಸ್ಯರುಗಳಿಗೆ ಕಾರ್ಯಾಗಾರಗಳನ್ನು ಏರ್ಪಡಿಸುವುದು.
- ಎಲ್ಲಾ ಸಾಂಖ್ಯಿಕ ಸಿಬ್ಬಂದಿಗೆ ಅಧಿನಿಯಮದ ನಿಬಂಧನೆಗಳ ಬಗ್ಗೆ ತರಬೇತಿ ಕಾರ್ಯಕ್ರಮ ಏರ್ಪಡಿಸುವುದು.

**9.1.1.3.1 'ಅಂಕಿಅಂಶಗಳ ಸಂಗ್ರಹಣ ಅಧಿನಿಯಮ, 2008 ಮತ್ತು ನಿಯಮಗಳು 2011'ರ ಅನುಷ್ಠಾನದಲ್ಲಿ ಕರ್ನಾಟಕ ಸರ್ಕಾರವು ತೆಗೆದುಕೊಂಡ ಕ್ರಮಗಳು**

ತಳಮಟ್ಟದಿಂದ ಸಕಾಲಿಕವಾಗಿ ದತ್ತಾಂಶವನ್ನು ಸಂಗ್ರಹಿಸುವ ಉದ್ದೇಶದಿಂದ ರಾಜ್ಯದಲ್ಲಿ ದತ್ತಾಂಶ ಸಂಗ್ರಹಣ ವ್ಯವಸ್ಥೆಯನ್ನು ಬಲಪಡಿಸುವುದು ಸರ್ಕಾರದ ಧ್ಯೇಯವಾಗಿದೆ. ಸಶಕ್ತ ಬೆಳವಣಿಗೆಯನ್ನು ಸಾಧಿಸಲು ನೂತನ ನೀತಿಗಳನ್ನು ಮತ್ತು ಯೋಜನೆಗಳನ್ನು ಯೋಜಿಸುವಲ್ಲಿ ಸಂಗ್ರಹಿಸಿದ ದತ್ತಾಂಶವು ಸಹಾಯಕವಾಯಿತು. ಈ ದೃಷ್ಟಿಯಿಂದ,

'ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮ, 2008 ಹಾಗೂ ನಿಯಮಗಳು 2011' ಅನುಷ್ಠಾನಗೊಳಿಸಲಿಕ್ಕೆ ಈ ಕೆಳಗಿನ ಉಪಕ್ರಮಗಳನ್ನು ತೆಗೆದುಕೊಳ್ಳಲಾಗಿದೆ:

**9.1.1.3.2 ಸಂಪರ್ಕ ಅಧಿಕಾರಿಗಳ ಹುದ್ದೆ**

- ಅಂಕಿ ಅಂಶಗಳ ಸಂಗ್ರಹಣ ನಿಯಮಗಳು 2011 ರ ನಿಯಮ 2 ರ ಉಪನಿಯಮ (1) ರ ಅನ್ವಯ, ಸಾಂಖ್ಯಿಕ ವಿಷಯಗಳಲ್ಲಿ ಎಲ್ಲ ಸರ್ಕಾರಿ ಇಲಾಖೆಗಳಿಗೆ ಉಪಬಂದಿಸಲು ಮತ್ತು ಸಲಹೆ ನೀಡಲು ರಾಜ್ಯದ ಎಲ್ಲ ಸಾಂಖ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮ ಮತ್ತು ನಿಯಮಗಳಲ್ಲಿ ನಮೂದಿಸಿದ ಎಲ್ಲ ಅಧಿಕಾರಿಗಳು ಮತ್ತು ಕರ್ತವ್ಯಗಳನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು ಸಂಪರ್ಕ ಇಲಾಖೆಯನ್ನಾಗಿ ಮಾಡಲಾಗಿದೆ. ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ ಪಿಡಿ 183 ಎಸ್ಎಂಸಿ 2010 ದಿನಾಂಕ 25–01–2011.
- ಅಲ್ಲದೆ, ಜಂಟಿ ನಿರ್ದೇಶಕರು, ಪ್ರಕಾಶನ, ತರಬೇತಿ ಮತ್ತು ಸಂಯೋಜನಾ ವಿಭಾಗ ಅವರನ್ನು ನೋಡಲ್ ಅಧಿಕಾರಿ ಎಂದು ನಾಮನಿರ್ದೇಶನ ಮಾಡಲಾಗಿದೆ ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ ಪಿಡಿ 115 ಎಸ್ಎಂಸಿ 2011 ದಿನಾಂಕ 12–09–2011.
- ಸಂಪರ್ಕ ಸಂಸ್ಥೆಯ ಚಟುವಟಿಕೆಗಳ ಮೇಲ್ವಿಚಾರಣೆ ಮಾಡಲು ಮತ್ತು ಎಲ್ಲ ಸಂಬಂಧಿಸಿದ ಇಲಾಖೆಗಳಿಂದ ವಿಶ್ವಾಸಾರ್ಹ, ನಂಬಲರ್ಹ ಮತ್ತು ಸಕಾಲಿಕ ಅಂಕಿ ಅಂಶಗಳನ್ನು ತಯಾರಿಸಲು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ನಿರ್ದೇಶಕರ ಅಧ್ಯಕ್ಷತೆ ಅಡಿಯಲ್ಲಿ ರಾಜ್ಯ ಮಟ್ಟದ ಸಂಯೋಜನಾ ಸಮಿತಿಯನ್ನು ಮತ್ತು ಮುಖ್ಯ ಯೋಜನಾಧಿಕಾರಿ ಆಯಾಯ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ರವರ ಅಧ್ಯಕ್ಷತೆ ಅಡಿಯಲ್ಲಿ ಜಿಲ್ಲಾ ಸಂಯೋಜನಾ ಸಮೀತಿಯನ್ನು ರಚಿಸಲಾಗಿದೆ.

**9.1.1.3.3 ಈ ಅಧಿನಿಯಮ ಮತ್ತು ನಿಯಮಗಳಿಗೆ ಸಂಬಂಧಿಸಿದ ಪತ್ಯದ ಲಭ್ಯತೆ:**

**ಹನ್ನೆರಡು ಕೋರ್ ಸಮಿತಿಗಳು:**
1) **ಅಂಕಿಅಂಶಗಳ ಮೇಲಿನ ಉನ್ನತಾಧಿಕಾರ ಸಮಿತಿ**
2) **ಕೃಷಿ ಅಂಕಿಅಂಶಗಳ ಮೇಲಿನ ರಾಜ್ಯ ಮಟ್ಟದ ಸಂಯೋಜನಾ ಸಮಿತಿ.**
3) **ಬೆಳೆ ವಿಮೆ ಮೇಲಿನ ರಾಜ್ಯ ಮಟ್ಟದ ಸಂಯೋಜನಾ ಸಮಿತಿ.**
4) **ಬೆಲೆ ಅಂಕಿಅಂಶಗಳ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿ.**
5) **ಜೈವಿಕ ಅಂಕಿಅಂಶಗಳ ಮೇಲಿನ ಅಂತರ್ ಇಲಾಖಾ ಸಂಯೋಜನಾ ಸಮಿತಿ.**
6) **ಹವಾಮಾನ ಮತ್ತು ಬೆಳೆ ವರದಿಗ್ರಾಕೆ ಪುನರ್‌ವ್ಯವಸ್ಥೆ ಮೇಲಿನ ಉನ್ನತ ಮಟ್ಟದ ಸಮಿತಿ**
7) **ಕೃಷಿ ಅಂಕಿಅಂಶಗಳ ನಿಖರತೆ ಸುಧಾರಿಸಲು ಕ್ರಮಗಳನ್ನು ಅಧ್ಯಯನ ಮಾಡಲು ಉನ್ನತ ಮಟ್ಟದ ಸಮಿತಿ**
8) **ಉದ್ದಿಮೆಗಳ ವಾರ್ಷಿಕ ಸಮೀಕ್ಷೆಗಾಗಿ ಸಂಯೋಜನಾ ಸಮಿತಿ**
9) **ಕನಿಷ್ಠ ವೇತನ ಸಲಹಾ ಸಮಿತಿ**
10) **ಕೃಷಿ ಅಂಕಿಅಂಶಗಳ ಮೇಲಿನ ಜಿಲ್ಲಾ ಮಟ್ಟದ ಸಮಿತಿ.**
11) **ನಾಗರಿಕ (ಜನನ ಮತ್ತು ಮರಣಗಳು) ನೋಂದಣಿ ವ್ಯವಸ್ಥೆ ಮೇಲಿನ ಜಿಲ್ಲಾ ಮಟ್ಟದ ಸಂಯೋಜನಾ ಸಮಿತಿ.**
12) **ನಾಗರಿಕ (ಜನನ ಮತ್ತು ಮರಣಗಳು) ನೋಂದಣಿ ವ್ಯವಸ್ಥೆ ಮೇಲಿನ ತಾಲ್ಲೂಕು ಮಟ್ಟದ ಸಂಯೋಜನಾ ಸಮಿತಿ.**

- ಉಲ್ಲೇಖ ಕೈಪಿಡಿಯಂತಹ ಸಂಬಂಧಿತ ಪತ್ಯದ ಲಭ್ಯತೆಯ ನಿಬಂಧನೆಗಳನ್ನು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನವನ್ನು ತಿಳಿದುಕೊಳ್ಳುವಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅಂಕಿಅಂಶಗಳ ಸಂಗ್ರಹಣೆ ಅಧಿನಿಯಮ, 2008 ರ ಬಗ್ಗೆ ಕೈಪಿಡಿಯ ಮಹತ್ವ ಮತ್ತು ಅಗತ್ಯತೆಯನ್ನು ಮನಗಂಡು ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ಜನವರಿ 2012 ರಂದು 'ಅಂಕಿಅಂಶಗಳ ಸಂಗ್ರಹಣೆ ಅಧಿನಿಯಮ, 2008' ಎಂಬ ಕಿರುಪುಸ್ತಕವನ್ನು ಹೊರತಂದಿದೆ. ಈ ಕಿರುಹೊತ್ತಿಗೆಯಲ್ಲಿ–ಅಂಕಿ ಅಂಶಗಳ ಸಂಗ್ರಹಣಾ ಅಧಿನಿಯಮ, 2008 ರ ನಿಬಂಧನೆಗಳು ಮತ್ತು ಅದರಡಿ ರಚಿಸಿದ ನಿಯಮಗಳು, ಸಾಮಾನ್ಯ ಪ್ರಶ್ನೆಗಳು ಮತ್ತು ಅವುಗಳಿಗೆ ಉತ್ತರಗಳು–ಇವುಗಳನ್ನು ಒಳಗೊಂಡಿದೆ. ಈ ಅಧಿನಿಯಮವನ್ನು ನೈಜ ಕ್ರಿಯಾಶೀಲತೆಯಿಂದ ಅನುಷ್ಠಾನಗೊಳಿಸಲು ಸಾಂಖ್ಯಿಕ ಚಟುವಟಿಕೆಗಳಲ್ಲಿ ತೊಡಗಿದ ಎಲ್ಲಾ ಸಂಬಂಧಿಸಿದ ಇಲಾಖೆಗಳಿಗೆ 'ಅಂಕಿ ಅಂಶಗಳ ಸಂಗ್ರಹಣಾ ಅಧಿನಿಯಮ, 2008 ಮತ್ತು ನಿಯಮಗಳು 2011' ರ ಪ್ರತಿಗಳನ್ನು ವಿತರಿಸಲಾಗಿದೆ.

**9.1.1.3.4 ಅಧಿನಿಯಮದ ಬಗ್ಗೆ ಜಾಗೃತಿ ಮೂಡಿಸುವುದು**

- ಗುಣಮಟ್ಟದ ದತ್ತಾಂಶ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಈ ಅಧಿನಿಯಮವನ್ನು ಉಪಯೋಗಿಸುವುದರ ಬಗ್ಗೆ ಜಾಗೃತಿ ಮೂಡಿಸಲು ಎಲ್ಲಾ ಮುಖ್ಯ ಯೋಜನಾ ಅಧಿಕಾರಿಗಳು ಜಿಲ್ಲಾ ಅಧಿಕಾರಿಗೊಂದಿಗೆ ಸಭೆಗಳನ್ನು ನಡೆಸುತ್ತಿದ್ದಾರೆ.
- ಈ ಅಧಿನಿಯಮದ ಬಗ್ಗೆ ಜಾಗೃತಿ ಮೂಡಿಸಲು ಎಲ್ಲ ಸಂಬಂಧಿಸಿದ ಇಲಾಖೆಗಳೊಂದಿಗೆ ರಾಜ್ಯ ಮಟ್ಟದ ಸಭೆಯನ್ನು ಸಹ ನಡೆಸಲಾಗಿದೆ.
- ಸಂಗ್ರಹಿಸಿದ ದತ್ತಾಂಶದ ಗುಣಮಟ್ಟವನ್ನು ಸುಧಾರಿಸಲು ಮತ್ತು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಒಂದು ಸೆಟ್ ದತ್ತಾಂಶವನ್ನು ನಿರ್ವಹಿಸಲಾಗುತ್ತದೆ ಹಾಗೂ ಅದರ ವರದಿಗಳನ್ನು ಸಾರ್ವಜನಿಕ ಕ್ಷೇತ್ರದ ಮೂಲಕ ಪ್ರಸಾರ ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ಪ್ರಮುಖ 21 ಇಲಾಖೆಗಳ ಸಾಂಖ್ಯಿಕ ಚಟುವಟಿಗಳನ್ನು

ಪರಿಶೀಲಿಸುವ ಉದ್ದೇಶದಿಂದ ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಜಂಟಿ ನಿರ್ದೇಶಕರ/ ಉಪ ನಿರ್ದೇಶಕರ ಅಧ್ಯಕ್ಷತೆಯ ಅಡಿಯಲ್ಲಿ 12 ಕೋರ್ ಸಮಿತಿಗಳನ್ನು ರಚಿಸಲಾಗಿದೆ.

ದತ್ತಾಂಶ ಸಂಗ್ರಹಣೆ ಮತ್ತು ಪ್ರಸಾರದಲ್ಲಿ ಸುಧಾರಣೆಗಾಗಿ ಈ ಅಧಿನಿಯಮದ ಮತ್ತು ನಿಯಮಗಳ ಅಡಿಯಲ್ಲಿ ಮಾಡಿದ ಉಪಬಂಧಗಳ ಬಗ್ಗೆ ಸಾಂಖ್ಯಿಕ ಸಿಬ್ಬಂದಿಗೆ ಜ್ಞಾನ ನೀಡಲು ಮತ್ತು ಜಾಗೃತಗೊಳಿಸಲು ಅವರಿಗಾಗಿ ದಿನಾಂಕ 19–02–2013ರಂದು ಕಾರ್ಯಗಾರವನ್ನು ಆಯೋಜಿಸಲಾಗಿತ್ತು.

**9.1.1.3.5 ತರಬೇತಿ**

- ವಿವಿಧ ಸಂಬಂಧಿಸಿದ ಇಲಾಖೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದು, ರಾಜ್ಯದಲ್ಲಿ ಸಂವೇದನಾಶೀಲ ತರಬೇತಿಯನ್ನು ಆಯೋಜಿಸಲಾಗಿದೆ. **ಈ ಕೆಳಗಿನ ಇಲಾಖೆಗಳು ಕಾರ್ಯಗಾರದಲ್ಲಿ ಭಾಗವಹಿಸಿದ್ದವು:**
- ನೇಮಕವಾದ ಸಹಾಯಕ ನಿರ್ದೇಶಕರಿಗೆ ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳಿಗೆ ಸಾಮಾನ್ಯ ಬುನಾದಿ ಕೋರ್ಸ್‌ನ್ನು ನಡೆಸುವ ಮೈಸೂರಿನ ಆಡಳಿತಾತ್ಮಕ ತರಬೇತಿ ಸಂಸ್ಥೆ, 'ಸಿ' ದರ್ಜೆ ಅಧಿಕಾರಿಗಳಿಗೆ ತರಬೇತಿ ನೀಡುತ್ತಿದ್ದು, ಅದರ ತರಬೇತಿ ಕಾರ್ಯಕ್ರಮದಲ್ಲಿ 'ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮ 2008 ನ್ನು ಮತ್ತು ನಿಯಮಗಳು 2011' ನ್ನು ಕಡ್ಡಾಯ ವಿಷಯವಾಗಿ ಸೇರಿಸಲು ಸೂಚಿಸಲಾಗಿದೆ.

- ಉಪ ನಿರ್ದೇಶಕರು, ಕೇಂದ್ರ ಅಂಕಿಅಂಶಗಳ ಕಛೇರಿ, ನವದೆಹಲಿ
- ಉಪ ಮಹಾನಿರ್ದೇಶಕರು, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ (ಕ್ಷೇತ್ರ ಕಾರ್ಯಾಚರಣೆಗಳ ವಿಭಾಗ), ಬೆಂಗಳೂರು
- ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ. ಬೆಂಗಳೂರು
- ರಾಜ್ಯ ಆದಾಯ, ಉದ್ದಿಮೆಗಳು ಮತ್ತು ಬೆಲೆಗಳು ವಿಭಾಗ
- ರಾಜ್ಯ ಆದಾಯ, ಉದ್ದಿಮೆಗಳು ಮತ್ತು ಬೆಲೆಗಳು ವಿಭಾಗಕ್ಕೆ ಸೇರಿದ ಸಂಯೋಜನೆ ಮತ್ತು ಯೋಜನೆ
- ಪ್ರಕಟಣೆ ವಿಭಾಗ
- ಕೃಷಿ ಗಣತಿ, ಮಳೆ ಮತ್ತು ಕಂಪ್ಯೂಟರ್ ವಿಭಾಗ ಕೃಷಿ ಅಂಕಿಅಂಶಗಳು ವಿಭಾಗ
- ಹಣಕಾಸು ಮತ್ತು ಲೆಕ್ಕಪತ್ರಗಳು, ಕರ್ನಾಟಕ ಸರ್ಕಾರ
- ನಾಗರಿಕ ನೋಂದಣಿ, ನ್ಯಾಶನಲ್ ಮಾದರಿ ಸರ್ವೇ ಮತ್ತು ಸ್ಥಳೀಯ ಸಂಸ್ಥೆ ಅಂಕಿಅಂಶಗಳ ವಿಭಾಗ
- ವಸತಿ ಮತ್ತು ನಗರಪ್ರದೇಶ ಅಭಿವೃದ್ಧಿ ಇಲಾಖೆ
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
- ಪಶುಸಂಗೋಪನೆ ಇಲಾಖೆ
- ಉದ್ದಿಮೆಗಳು ಮತ್ತು ವಾಣಿಜ್ಯ ನಿರ್ದೇಶನಾಲಯ
- ಪ್ರವಾಸೋದ್ಯಮ ಇಲಾಖೆ
- ತಾಂತ್ರಿಕ ಶಿಕ್ಷಣ ಇಲಾಖೆ
- ಜಲ ಸಂಪನ್ಮೂಲ ಇಲಾಖೆ
- ಶಿಕ್ಷಣ ಇಲಾಖೆ
- ಕೃಷಿ ನಿರ್ದೇಶನಾಲಯ
- ಜಿಲ್ಲಾ ಪಂಚಾಯತ್

### 9.1.2 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನದ ಅಡಿಯಲ್ಲಿ ಗುರಿಗಳು ಮತ್ತು ಕಾರ್ಯನೀತಿಗಳು

**ಈ ಯೋಜನೆಯ ಅಡಿಯಲ್ಲಿ ರಾಜ್ಯದಲ್ಲಿ ಸಾಂಖ್ಯಿಕ ಅಧಿನಿಯಮದ ಅನುಷ್ಠಾನಕ್ಕಾಗಿ ಹಲವಾರು ಉಪಕ್ರಮಗಳನ್ನು ತೆಗೆದುಕೊಂಡಿದ್ದರೂ ಅದಕ್ಕಾಗಿ ವ್ಯಾಪಕವಾದ ಅನುಷ್ಠಾನ ಯೋಜನೆಯ ಕೊರತೆಯಿದೆ.**

ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ವಿಷಯಗಳ ಅಡಿಯಲ್ಲಿ ಸದ್ಯದ ವ್ಯವಸ್ಥೆಯ ಸಾಮರ್ಥ್ಯಗಳನ್ನು ಮತ್ತು ದೌರ್ಬಲ್ಯಗಳನ್ನು ಪರಿಗಣಿಸುವುದರಿಂದ ತನ್ನ ಚಟುವಟಿಕೆಗಳನ್ನು ಮತ್ತು ಅಂತರಗಳನ್ನು ಸರಿದೂಗಿಸಲು ಮತ್ತು ಬದಲಾಗುತ್ತಿರುವ ಪರಿಸರಕ್ಕೆ ತಕ್ಕಂತೆ ಸುಧಾರಿತ ವ್ಯವಸ್ಥೆಗಳಿಗೆ ಕಾರಣವಾಗುವ ಚಟುವಟಿಕೆಗಳನ್ನು ಸಂಯೋಜಿಸಲು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಪ್ರಯತ್ನಿಸಿತು. ಈ ಕಾರ್ಯನೀತಿ ಯುಕ್ತ ಗುರಿಗಳನ್ನು ಕಾರ್ಯನೀತಿಗಳನ್ನು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರೂಪಿಸಲಾಯಿತು ಮತ್ತು ಈ ಯೋಜನೆಯ ಅನುಷ್ಠಾನವು ಪೂರ್ಣಗೊಳ್ಳುವ ಮತ್ತು ಗುರಿಗಳು ಈಡೇರುವ ಪ್ರಮಾಣವನ್ನು ಈ ಕೆಳಗಿನ ವಿಭಾಗದಲ್ಲಿ ವಿವರಿಸಲಾಗುತ್ತದೆ.

**ಗುರಿ–1:**

**ಗುರಿ–1 ಉದ್ದೇಶ:** ಸಂಪನ್ಮೂಲಗಳ ಉತ್ತಮ ವಿತರಣೆಗಾಗಿ ಯೋಜಿಸುವುದರಲ್ಲಿ ಅವುಗಳ ಪರಿಣಾಮಕಾರಿ ಬಳಕೆಗಾಗಿ, ನೀತಿ ಉಪಕ್ರಮಗಳ ರಚನೆಯಲ್ಲಿ ಅಂಕಿಅಂಶಗಳ ಬಳಕೆಗಾಗಿ, ದತ್ತಾಂಶ ನಿರ್ಮಾತೃಗಳು ಮತ್ತು ದತ್ತಾಂಶ ಒದಗಿಸುವವರ ನಡುವೆ ಉತ್ತಮ ಬಾಂಧವ್ಯ ಆರಂಭಿಸುವುದಕ್ಕಾಗಿ ಅಂಕಿಅಂಶಗಳ ಪಾತ್ರ ಮತ್ತು ಮಹತ್ವವನ್ನು ವ್ಯಾಖ್ಯಾನಿಸುವ ಉದ್ದೇಶದಿಂದ ಉದ್ದೇಶಿತ ಸಮರ್ಥನೀಯ ಸಾಮಗ್ರಿಗಳ ಮೂಲಕ ಮತ್ತು ಸಂಬಂಧಿಸಿದ ಇಲಾಖೆಗಳೊಂದಿಗೆ ಕಾರ್ಯಗಾರಗಳನ್ನು ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಗುರಿ–1ರ ಉದ್ದೇಶವಾಗಿದೆ.

| **ಗುರಿ–1: ರಾಜ್ಯದಲ್ಲಿನ ಆಡಳಿತದಲ್ಲಿ ಅಂಕಿಅಂಶಗಳ ಪಾತ್ರದ ಮಹತ್ವ ಹೆಚ್ಚಿಸುವುದು.** | |
|---|---|
| ಗುರಿ 1ರ ಅಡಿಯಲ್ಲಿ ಕಾರ್ಯನೀತಿಗಳು | |
| ಹಿರಿಯ ಆಡಳಿತಗಾರರಿಗಾಗಿ **'ಆಡಳಿತದಲ್ಲಿ ಅಂಕಿಅಂಶಗಳ ಪಾತ್ರ'**ದ ಕುರಿತು ವಿಚಾರ ಸಂಕಿರಣ ಏರ್ಪಡಿಸುವುದು. | ✓ |
| ರಾಜ್ಯದ ಸಂಬಂಧಿಸಿದ ಇಲಾಖೆಗಳಲ್ಲಿ ಸಂಖ್ಯಾಶಾಸ್ತ್ರಜ್ಞರ ನಡುವೆ ಸಂವಹನ ಸಾಕ್ಷಿಗಳನ್ನು ಏರ್ಪಡಿಸುವುದು. | ✓ |

**ಗುರಿ–1ರ ಅಡಿಯಲ್ಲಿ ಸಾಧನೆಗಳು:**

- ಸಾಂಖ್ಯಿಕ ದತಾಂಶ ಗುಣಮಟ್ಟದ ಮತ್ತು ಪ್ರಸಾರದಲ್ಲಿ ಸುಧಾರಣೆಗಾಗಿ ಪೂರಕವಾದ ಸಾಂಖ್ಯಿಕ ಕಾರ್ಯಾಚರಣೆಗಳನ್ನು ಸುಧಾರಿಸುವ ಉದ್ದೇಶದಿಂದ ಹಲವಾರು ವಿಚಾರ ಸಂಕಿರಣಗಳು, ಕಾರ್ಯಾಗಾರಗಳನ್ನು ಮತ್ತು ಸಭೆಗಳನ್ನು ಆರಂಭದಿಂದಲೂ ವಿವಿಧ ಇಲಾಖಾ ಮುಖ್ಯಸ್ಥರೊಂದಿಗೆ ಆಯೋಜಿಸಲಾಯಿತು.

**ಗುರಿ–2**

**ಗುರಿ–2ರ ಉದ್ದೇಶಗಳು:** ಸಾಂಖ್ಯಿಕ ಶಾಸನವು ಪರಿಣಾಮಕಾರಿ ಸಾಂಖ್ಯಿಕ ವ್ಯವಸ್ಥೆಗಾಗಿ ಮೂಲಭೂತವಾದ ಪೂರ್ವಾಗತ್ಯವಾಗಿದೆ. ಸಾಂಖ್ಯಿಕ ಶಾಸನವು ಸಾಂಖ್ಯಿಕ ವ್ಯವಸ್ಥೆಯಲ್ಲಿನ ವಿವಿಧ ಕಾರ್ಯನಿರ್ವಾಹಕರು ನಿರ್ವಹಿಸಬೇಕಾದ ಪಾತ್ರಗಳನ್ನು ವ್ಯಾಖ್ಯಾನಿಸುತ್ತದೆ. ಮತ್ತು ಆ ವ್ಯವಸ್ಥೆಯನ್ನು ಕಾಪಾಡುತ್ತದೆ ಮತ್ತು ಅಧಿಕೃತ ಅಂಕಿಅಂಶಗಳ ಸಂಗ್ರಹಣೆ ಮತ್ತು ನಿರ್ವಹಣೆಯನ್ನು ವಿಧಿಬದ್ಧಗೊಳಿಸುತ್ತದೆ. ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಅಂಕಿಅಂಶಗಳ ಸಂಗ್ರಹಣಾ ಅಧಿನಿಯಮ, 2008 ಮತ್ತು ಅಂಕಿಅಂಶಗಳ ನಿಯಮಗಳು, 2011– ಇವುಗಳು ದೇಶದಲ್ಲಿನ ಸಾಂಖ್ಯಿಕ ಚಟುವಟಿಕೆಗಳ ಆಡಳಿತಕ್ಕಾಗಿ ಅತ್ಯಂತ ಅಗತ್ಯವಾದ ಶಾಸನಾತ್ಮಕ ಬೆಂಬಲವನ್ನು ಒದಗಿಸುತ್ತವೆ. ಆದ್ದರಿಂದ ಅಂಕಿಅಂಶಗಳ ಸಂಗ್ರಹಣ ಅಧಿನಿಯಮ, 2008ರ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಗೊಳಿಸುವುದು ಗುರಿ 2ರ ಉದ್ದೇಶವಾಗಿದೆ.

| **ಗುರಿ–2: 'ಅಂಕಿಅಂಶಗಳ ಸಂಗ್ರಹಣಾ ಅಧಿನಿಯಮ 2008ರ ಪರಿಣಾಮಕಾರಿ ಅನುಷ್ಟಾನ'** | |
|---|---|
| ಗುರಿ–2ರ ಅಡಿಯಲ್ಲಿ ಕಾರ್ಯನೀತಿಗಳು | |
| ಈ ಅಧಿನಿಯಮದ ಬಗ್ಗೆ ಸರ್ಕಾರದ ಎಲ್ಲ ವಿಭಾಗಗಳಿಗೆ ವ್ಯಾಪಕ ಸುತ್ತೋಲೆ ಕಳಿಸುವುದು. | ✓ |
| ಈ ಅಧಿನಿಯಮದ ಉಪಬಂಧಗಳು ಮತ್ತು ಇಲಾಖೆಗಳ ಪಾತ್ರದ ಬಗ್ಗೆ ಕಾರ್ಯದರ್ಶಿಗಳಿಗೆ ಎಲ್ಲ ಇಲಾಖಾ ಮುಖ್ಯಸ್ಥರಿಗೆ ಮತ್ತು ಅಕಾಡಮಿ ಸದಸ್ಯರಿಗೆ ತಿಳಿಸಲು. ಅವರಿಗಾಗಿ ಕಾರ್ಯಾಗಾರಗಳನ್ನು ಏರ್ಪಡಿಸುವುದು. | ✓ |
| ಸಾಂಖ್ಯಿಕ ಸಿಬ್ಬಂದಿಗಾಗಿ ಈ ಅಧಿನಿಯಮಗಳ ನಿಬಂಧನೆಗಳ ಬಗ್ಗೆ ತರಬೇತಿ ಕಾರ್ಯಕ್ರಮ ಆಯೋಜಿಸುವುದು. | ✓ |

**ಗುರಿ–2 ರ ಅಡಿಯಲ್ಲಿ ಸಾಧನೆಗಳು:**

- ಸಾಂಖ್ಯಿಕ ವಿಷಯಗಳಲ್ಲಿ ಎಲ್ಲ ಸರ್ಕಾರಿ ಇಲಾಖೆಗಳಿಗೆ ಒದಗಿಸಲು ಮತ್ತು ಸಲಹೆ ನೀಡಲು ರಾಜ್ಯದ ಎಲ್ಲ ಸಾಂಖ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಅಧಿನಿಯಮ ಮತ್ತು ನಿಯಮಗಳಲ್ಲಿ ನಮೂದಿಸಿದ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸುವ ಉದ್ದೇಶದಿಂದ 'ಅಂಕಿ ಅಂಶಗಳ' ಸಂಗ್ರಹಣೆ ನಿಯಮಗಳು 2011 ರ ನಿಯಮ 2 ರ ಉಪನಿಯಮ (1) ರ ಅನ್ವಯ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು ಸಂಪರ್ಕ ಇಲಾಖೆಯಾಗಿ ಮಾಡಲಾಗಿದೆ,

- ಅಂಕಿ ಅಂಶಗಳ  ಸಂಗ್ರಹಣೆ ಅಧಿನಿಯಮ, 2003 ರ ಬಗ್ಗೆ ಕೈಪಿಡಿಯ ಮಹತ್ವ ಮತ್ತು ಅಗತ್ಯತೆಯನ್ನು  ಮನಗಂಡು ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ಜನವರಿ 2012 ರಂದು  'ಅಂಕಿ ಅಂಶಗಳ ಸಂಗ್ರಹಣಾ ಅಧಿನಿಯಮ, 2008 ಎಂಬ ಹೊತ್ತಿಗೆಯನ್ನು ಹೊರತಂದಿದೆ, ಈ ಕಿರು ಹೊತ್ತಿಗೆಯು ಅಂಕಿ ಅಂಶಗಳ ಸಂಗ್ರಹಣಾ ಅಧಿನಿಯಮ, 2008 ರ ನಿಬಂಧನೆಗಳು ಮತ್ತು  ಅದರಡಿ ರಚಿಸಿದ ನಿಯಮಗಳು, ಸಾಮಾನ್ಯ ಪ್ರಶ್ನೆಗಳು ಮತ್ತು ಅವುಗಳಿಗೆ ಉತ್ತರಗಳು ಇವುಗಳನ್ನು ಒಳಗೊಂಡಿದೆ. ಈ ಅಧಿನಿಯಮವನ್ನು ನೈಜ ಕ್ರಿಯಾಶೀಲತೆಯಿಂದ ಅನುಷ್ಠಾನಗೊಳಿಸಲು ಸಾಂಖ್ಯಿಕ ಚಟುವಟಿಕೆಗಳಲ್ಲಿ ತೊಡಗಿದ ಎಲ್ಲಾ ಸಂಬಂಧಿಸಿದ ಇಲಾಖೆಗಳಿಗೆ ಅಂಕಿಅಂಶಗಳ ಸಂಗ್ರಹಣ ಅಧಿನಿಯಮ, 2008 ಮತ್ತು ನಿಯಮಗಳು 2011 ರ ಪ್ರತಿಗಳನ್ನು ವಿತರಿಸಲಾಗಿದೆ.
- ಜಿಲ್ಲಾ ಮಟ್ಟದಲ್ಲಿಯ ಮುಖ್ಯ ಯೋಜನಾಧಿಕಾರಿಗಳು ಜಿಲ್ಲಾ ಅಧಿಕಾರಿಗಳೊಂದಿಗೆ ಸಭೆಗಳನ್ನು ಕೈಗೊಂಡರು ಮತ್ತು ಗುಣಮಟ್ಟ ದತ್ತಾಂಶ ಮಾಹಿತಿಯನ್ನು ಸಂಗ್ರಹಿಸುವಲ್ಲಿ ಈ ಅಧಿನಿಯಮದ ಉಪಯೋಗ ಮಾಡಿಕೊಳ್ಳುವ ಬಗ್ಗೆ ಅವರನ್ನು ಜಾಗೃತಗೊಳಿಸಿದರು. ಈ ಅಧಿನಿಯಮದ ಬಗ್ಗೆ ಜಾಗೃತಿ ಮೂಡಿಸಲು ಸಂಬಂಧಿಸಿದ ಇಲಾಖೆಗಳೊಂದಿಗೆ ರಾಜ್ಯ ಮಟ್ಟದ ಸಭೆಯನ್ನು ಸಹ ನಡೆಸಲಾಯಿತು.

- ದತ್ತಾಂಶ ಸಂಗ್ರಹಣೆ ಮತ್ತು ಪ್ರಸಾರದಲ್ಲಿ ಸುಧಾರಣೆಗಾಗಿ ಈ ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ ಮಾಡಲಾದ ಉಪಬಂಧಗಳ ಬಗ್ಗೆ ತಿಳುವಳಿಕೆ ಮತ್ತು ಜಾಗೃತಿ ಮೂಡಿಸುವ ಉದ್ದೇಶಕ್ಕಾಗಿ ಸಾಂಖ್ಯಿಕ ಸಿಬ್ಬಂದಿಗೆ ದಿನಾಂಕ:19–02–2013 ರಂದು  ಕಾರ್ಯಾಗಾರವನ್ನು  ಏರ್ಪಡಿಸಲಾಯಿತು

ವಿವಿಧ ಸಂಬಂಧಿಸಿದ ಇಲಾಖೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದು ರಾಜ್ಯದಲ್ಲಿ ಸಂವೇದನಾಶೀಲ ತರಬೇತಿಯನ್ನು ಆಯೋಜಿಸಲಾಗಿದೆ.

- ನೇಮಕವಾದ ಸಹಾಯಕ ನಿರ್ದೇಶಕರಿಗೆ ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳಿಗೆ ಸಾಮಾನ್ಯ ಬುನಾದಿ ಕೋರ್ಸ್‌ನ್ನು

**ಈ ಕೆಳಗಿನ ಇಲಾಖೆಗಳು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದವು.**

- ಉಪ ನಿರ್ದೇಶಕರು, ಕೇಂದ್ರ ಅಂಕಿಅಂಶಗಳ ಕಛೇರಿ, ನವದೆಹಲಿ
- ಉಪ ಮಹಾನಿರ್ದೇಶಕರು, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ (ಕ್ಷೇತ್ರ ಕಾರ್ಯಾಚರಣೆಗಳ ವಿಭಾಗ), ಬೆಂಗಳೂರು
- ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ. ಬೆಂಗಳೂರು
- ರಾಜ್ಯ ಆದಾಯ, ಉದ್ದಿಮೆಗಳು ಮತ್ತು ಬೆಲೆಗಳು ವಿಭಾಗ
- ರಾಜ್ಯ ಆದಾಯ, ಉದ್ದಿಮೆಗಳು ಮತ್ತು ಬೆಲೆಗಳು ವಿಭಾಗಕ್ಕೆ ಸೇರಿದ ಸಂಯೋಜನೆ ಮತ್ತು ಯೋಜನೆ
- ಪ್ರಕಟಣೆ ವಿಭಾಗ
- ಕೃಷಿ ಗಣತಿ, ಮಳೆ ಮತ್ತು ಕಂಪ್ಯೂಟರ್ ವಿಭಾಗ ಕೃಷಿ ಅಂಕಿಅಂಶಗಳು ವಿಭಾಗ
- ಹಣಕಾಸು ಮತ್ತು ಲೆಕ್ಕಪತ್ರಗಳು, ಕರ್ನಾಟಕ ಸರ್ಕಾರ
- ನಾಗರಿಕ ನೋಂದಣಿ, ನ್ಯಾಶನಲ್ ಮಾದರಿ ಸರ್ವೇ ಮತ್ತು ಸ್ಥಳೀಯ ಸಂಸ್ಥೆ ಅಂಕಿಅಂಶಗಳ ವಿಭಾಗ
- ವಸತಿ ಮತ್ತು ನಗರಪ್ರದೇಶ ಅಭಿವೃದ್ಧಿ ಇಲಾಖೆ
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
- ಪಶುಸಂಗೋಪನೆ ಇಲಾಖೆ
- ಉದ್ದಿಮೆಗಳು ಮತ್ತು ವಾಣಿಜ್ಯ ನಿರ್ದೇಶನಾಲಯ
- ಪ್ರವಾಸೋದ್ಯಮ ಇಲಾಖೆ
- ತಾಂತ್ರಿಕ ಶಿಕ್ಷಣ ಇಲಾಖೆ
- ಜಲ ಸಂಪನ್ಮೂಲ ಇಲಾಖೆ
- ಶಿಕ್ಷಣ ಇಲಾಖೆ
- ಕೃಷಿ ನಿರ್ದೇಶನಾಲಯ
- ಜಿಲ್ಲಾ ಪಂಚಾಯತ್

ನಡೆಸುವ ಮೈಸೂರಿನ ಆಡಳಿತಾತ್ಮಕ ತರಬೇತಿ ಸಂಸ್ಥೆಯು 'ಎ' ದರ್ಜೆ ಅಧಿಕಾರಿಗಳಿಗೆ ತರಬೇತಿ ನೀಡುತ್ತಿದ್ದು, ಅದರ ತರಬೇತಿ ಕಾರ್ಯಕ್ರಮದಲ್ಲಿ 'ಅಂಕಿಅಂಶಗಳ ಸಂಗ್ರಹಣೆ ಅಧಿನಿಯಮ, 2008 ಮತ್ತು ನಿಯಮಗಳು, 2011' ನ್ನು ಕಡ್ಡಾಯ ವಿಷಯವಾಗಿ ಸೇರಿಸಲು ಸೂಚಿಸಲಾಗಿದೆ.

**ಗುರಿ–3:**

**ಗುರಿ 3 ಉದ್ದೇಶ:**

ಸಂಗ್ರಹಿಸಿದ ದತ್ತಾಂಶದ ಗುಣಮಟ್ಟವನ್ನು ಸುಧಾರಿಸಿದ್ದರಿಂದ ರಾಜ್ಯ ಸಾಂಖ್ಯಿಕ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ಉಂಟುಮಾಡುವುದು ಮತ್ತು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ದತ್ತಾಂಶದ ಒಂದು ಸೆಟ್‌ನ್ನು ನಿರ್ವಹಿಸಲಾಗುತ್ತದೆ ಎಂದು

ಸಹ ಖಚಿತಪಡಿಸುವುದು. ದತ್ತಾಂಶ ನಿರ್ಮಾತೃಗಳು, ಬಳಕೆದಾರರು ಮತ್ತು ಒದಗಿಸುವವರ ನಡುವೆ ಉತ್ತಮ ಸಂಯೋಜನೆ, ಸಹಯೋಗ, ನೆಟ್ ವರ್ಕಿಂಗ್ ಮತ್ತು ಮಾಹಿತಿ ಹಂಚಿಕೆ. ಸರ್ಕಾರದ ಎಲ್ಲಾ ಅಂಗಗಳಲ್ಲೂ ವ್ಯವಸ್ಥಿತ ಸಾಂಖ್ಯಿಕ ಚಟುವಟಿಕೆಗಳನ್ನು ಕೈಗೊಳ್ಳುವುದು.

| **ಗುರಿ 3: ದತ್ತಾಂಶ ನಿರ್ಮಾತೃಗಳಲ್ಲಿ ಉತ್ತಮ ಸಂಯೋಜನೆ ತರುವುದು.** | |
|---|---|
| **ಗುರಿ–3ರ ಅಡಿಯಲ್ಲಿ ಕಾರ್ಯನೀತಿಗಳು** | |
| ಎ) ಅಂಕಿಅಂಶಗಳ ಸಂಗ್ರಹಣೆ ಅಧಿನಿಯಮ,2008; ಬಿ) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನೋಡಲ್ ಕಾರ್ಯಗಳು; ಸಿ) ರಾಜ್ಯ ಸಾಂಖ್ಯಿಕ ವ್ಯವಸ್ಥೆಯ ಚಟುವಟಿಕೆಗಳನ್ನು ಮತ್ತು ನೆರವೇರಿಕೆಯನ್ನು ಪರಿಶೀಲಿಸಲು ಎಲ್ಲ ಇಲಾಖಾ ಸಂಖ್ಯಾಶಾಸ್ತ್ರಜ್ಞರ ರಚನಾತ್ಮಕ ಸಭೆಗಳನ್ನು ನಡೆಸುವುದು–ಇವುಗಳನ್ನು ಮೇಲ್ವಿಚಾರಣೆ ಮಾಡಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ಪ್ರತ್ಯೇಕ ಸಂಯೋಜನಾ ವಿಭಾಗವನ್ನು ಸ್ಥಾಪಿಸುವುದು. | ✓ |
| ಸಾಂಖ್ಯಿಕ ಚಟುವಟಿಕೆಗಳನ್ನು ಸಂಯೋಜಿಸಲು ಮತ್ತು ದತ್ತಾಂಶ ತಯಾರಿಕಾ ಪ್ರಕ್ರಿಯೆಯನ್ನು ಸುಧಾರಿಸಲು ಜಿಲ್ಲಾ ಸಾಂಖ್ಯಿಕ ಅಧಿಕಾರಿಯನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ಮಾಡಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಅಡಿಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸುವುದು. | ✓ |

**ಗುರಿ 3ರ ಅಡಿಯಲ್ಲಿ ಸಾಧನೆಗಳು:**

- ರಾಜ್ಯ ಸಾಂಖ್ಯಿಕ ವ್ಯವಸ್ಥೆಯಲ್ಲಿ ಸುಧಾರಣೆ ತರುವುದಕ್ಕಾಗಿ, ಎಲ್ಲ ಸಾಂಖ್ಯಿಕ ವಿಷಯಗಳಿಗೆ ಸಂಬಂಧಿಸಿದಂತೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು 'ಸಂಪರ್ಕ ಸಂಸ್ಥೆ' ಎಂದು ಘೋಷಿಸಲಾಗಿದೆ. ಅದರ ಜಾರಿಗಾಗಿ ದಿನಾಂಕ: 25–01–2011ರಂದು ಮುಖ್ಯಕಾರ್ಯದರ್ಶಿಯಿಂದ ಸರ್ಕಾರಕ್ಕೆ ಆದೇಶಗಳನ್ನು ನೀಡಲಾಗಿದೆ ಮತ್ತು ರಾಜ್ಯಮಟ್ಟದ ಹಾಗು ಜಿಲ್ಲಾ ಮಟ್ಟದ ಸಂಯೋಜನಾ ಸಮಿತಿಗಳನ್ನು ರಚಿಸಲಾಯಿತು.
- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಸಂಪರ್ಕ–ಏಜೆನ್ಸಿಯಾಗಿ ಕಾರ್ಯ ನೆರವೇರಿಸಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ನಿರ್ದೇಶಕರಿಗೆ ಸಹಾಯ ಮಾಡಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ಜಂಟಿ ನಿರ್ದೇಶಕರು, ಪ್ರಕಾಶನ, ತರಬೇತಿ ಮತ್ತು ಸಂಯೋಜನೆ–ಎಂಬ ಹುದ್ದೆಯನ್ನು ಸೃಷ್ಟಿಸಲಾಯಿತು.
- ನೋಡಲ್ ಏಜೆನ್ಸಿಯ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ವಿಶ್ವಾಸಾರ್ಹ, ನಂಬಲರ್ಹ ಮತ್ತು ಸಕಾಲಿಕ ಅಂಕಿಅಂಶಗಳನ್ನು ಎಲ್ಲ ಸಂಬಂಧಿಸಿದ ಇಲಾಖೆಗಳಿಂದ ತಯಾರಿಸಲು ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಂಯೋಜನ ಸಮಿತಿಯನ್ನು ಮತ್ತು

ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾ ಅಧಿಕಾರಿಯ ಅಧ್ಯಕ್ಷತೆಯ ಅಡಿಯಲ್ಲಿ ಜಿಲ್ಲಾ ಮಟ್ಟದ ಸಂಯೋಜನಾ ಸಮಿತಿಯನ್ನು ರಚಿಸಲಾಯಿತು.

- ಸಂಗ್ರಹಿಸಿದ ದತ್ತಾಂಶದ ಗುಣಮಟ್ಟವನ್ನು ಸುಧಾರಿಸಲು ಮತ್ತು ರಾಜ್ಯ ಹಾಗು ಜಿಲ್ಲಾ ಮಟ್ಟದಲ್ಲಿ ಒಂದು ಸೆಟ್ ದತ್ತಾಂಶವನ್ನು ನಿರ್ವಹಿಸಲಾಗುತ್ತದೆ ಹಾಗು ಅದರ ವರದಿಗಳನ್ನು ಸಾರ್ವಜನಿಕ ಕ್ಷೇತ್ರದ ಮೂಲಕ ಪ್ರಸಾರ ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ಪ್ರಮುಖ 21 ಇಲಾಖೆಗಳ ಸಾಂಖ್ಯಿಕ ಚಟುವಟಿಕೆಗಳನ್ನು ಪರಿಶೀಲಿಸುವ ಉದ್ಧೇಶದಿಂದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಜಂಟಿ ನಿರ್ದೇಶಕರ/ ಉಪನಿರ್ದೇಶಕರ ಅಧ್ಯಕ್ಷತೆಯ ಅಡಿಯಲ್ಲಿ 12 ಕೋರ್ ಸಮಿತಿಗಳನ್ನು ರಚಿಸಲಾಗಿದೆ.

**ಗುರಿ–4:**

**ಗುರಿ4– ಉದ್ದೇಶ:**

ದತ್ತಾಂಶದ ನಿರ್ಧಾರಣೆ ತಂತ್ರಗಳು ಮತ್ತು ದತ್ತಾಂಶ ಸಂಗ್ರಹಣ ತಂತ್ರಗಳ ಬಗ್ಗೆ ತರಬೇತಿಗಳ ಮೂಲಕ ಕುಶಲ ಸಾಂಖ್ಯಿಕ ಸಿಬ್ಬಂದಿಯೊಂದಿಗೆ ಉತ್ತಮ ಸಾಂಖ್ಯಿಕ ಮೂಲಸೌಕರ್ಯವನ್ನು ಒದಗಿಸುವುದು. ಅಲ್ಲದೆ, ಗುಣಮಟ್ಟದ ಮಾನದಂಡಗಳನ್ನು ಪೂರೈಸುವ ಅಂಕಿಅಂಶಗಳನ್ನು ತಯಾರಿಸಲು ಮಧ್ಯಸ್ಥಗಾರರಲ್ಲಿ ಪರಿಣಾಮಕಾರಿ ಸಂಯೋಜನೆಯನ್ನು ಸಹ ಖಚಿತಪಡಿಸುವುದು.

| **ಗುರಿ–4: ಅಂಕಿ ಅಂಶಗಳ ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು.** | |
|---|---|
| **ಗುರಿ–4 ರ ಅಡಿಯಲ್ಲಿ ಕಾರ್ಯನೀತಿಗಳು** | |
| ಅವರ ಜವಾಬ್ದಾರಿಗಳ ಸೂಕ್ತ ಮಟ್ಟಕ್ಕೆ ಕೇಂದ್ರೀಯ ಸಾಂಖ್ಯಿಕ ಸಂಸ್ಥೆಯ ತಾಂತ್ರಿಕ ವಿಶಿಷ್ಟತೆಗಳು, ದತ್ತಾಂಶ ನಿರ್ಧಾರಣಾ ತಂತ್ರಗಳು ಮತ್ತು ದತ್ತಾಂಶದ ಸಂಗ್ರಹಣ ಮಟ್ಟ–ಇವುಗಳ ಬಗ್ಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಸಂಬಂಧಿಸಿದ ಇಲಾಖೆಗಳ ಸಿಬ್ಬಂದಿಗೆ ತರಬೇತಿ ನೀಡುವುದು. | ✓ |
| ಉತ್ತಮ ಆರ್ಥಿಕ ಮತ್ತು ಸಾಮಾಜಿಕ ಅಂಕಿಅಂಶಗಳನ್ನು ತಯಾರಿಸಲು ಅಗತ್ಯವಿರುವ ಸಾಂಖ್ಯಿಕ ಮೂಲಸೌಕರ್ಯವನ್ನು ಸ್ಥಾಪಿಸುವುದು. | × |
| ಪ್ರಾಥಮಿಕ ಕಾರ್ಯಕರ್ತರಲ್ಲಿ ಖಾಲಿ ಹುದ್ದೆಗಳನ್ನು ಭರ್ತಿಮಾಡುವುದು ಮತ್ತು ಅಗತ್ಯವಾದಲ್ಲಿ ಕೆಲಸವನ್ನು ಹೊರಗುತ್ತಿಗೆ ನೀಡುವುದು. | × |
| ಮೊದಲ ಹಂತದಲ್ಲಿ ವಿಶ್ವಾಸಾರ್ಹ, ನಂಬಲರ್ಹ ಮತ್ತು ಸಕಾಲಿಕ ದತ್ತಾಂಶಗಳನ್ನು ಒದಗಿಸಲು, 20–ಸಾಂಖ್ಯಿಕ ಚಟುವಟಿಕೆಗಳ ಬಗ್ಗೆ ಗಮನ ಹರಿಸುವುದು. | ✓ |
| ಅಗತ್ಯವಾದಾಗ ತಳಮಟ್ಟದ ದತ್ತಾಂಶವನ್ನು ಸುಧಾರಿಸಲು ಮಾದರಿ ಅಧ್ಯಯನಗಳನ್ನು ಕೈಗೊಳ್ಳುವುದು. | ✓ |

**ಗುರಿ–4ರ ಅಡಿಯಲ್ಲಿ ಸಾಧನೆಗಳು:**

- 2011–12 ರಿಂದ 2014–15ರ ಅವಧಿಯಲ್ಲಿ 2,22,314 ಅಭ್ಯರ್ಥಿಗಳನ್ನು ತರಬೇತಿಗೊಳಿಸಲಾಯಿತು.ಅವರಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು, ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಜಿಲ್ಲಾ ಮತ್ತು ಉಪ– ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮಾಲೋಚಕರು, ಜಿಲ್ಲಾ ಪಂಚಾಯತಿ ಅಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು (ತಾಲೂಕು ಮಟ್ಟ) ಮತ್ತು ಸಾಂಖ್ಯಿಕ ನಿರೀಕ್ಷಕರು ಹಾಗೂ ಗಣತಿದಾರರು– ಒಳಗೊಳ್ಳುತ್ತಾರೆ.
- ಸಾಂಖ್ಯಿಕ ಇಲಾಖೆಯಲ್ಲಿ ಮೊದಲ ಬಾರಿಗೆ, ಬೆಳೆ ಕತ್ತರಿಸುವ ಪ್ರಯೋಗಗಳಿಗಾಗಿ ದೃಶ್ಯ–ಶ್ರವಣ ತರಬೇತಿ ಸಾಮಗ್ರಿಗಳನ್ನು 2014–15ರ ಅವಧಿಯಲ್ಲಿ ತಯಾರಿಸಲಾಯಿತು.
- ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯಿಂದ ಅನುದಾನಿತವಾದ ಅಂಕಿಅಂಶಗಳನ್ನು ಗುಣಮಟ್ಟವನ್ನು ಸುಧಾರಿಸಲು, ಅಂಕಿಅಂಶಗಳನ್ನು ತಯಾರಕರಿಗಾಗಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ಜಾಗೃತಿ ಕಾರ್ಯಗಾರವನ್ನು ಏರ್ಪಡಿಸಲಾಯಿತು.

- ಪ್ರಾಯೋಗಿಕ ಯೋಜನೆಯನ್ನು ಆಧರಿಸಿ, ದತ್ತಾಂಶ ಸಂಗ್ರಹ, ವರದಿ ಮಾಡುವಿಕೆಗಾಗಿ ಈ ವಿಧಾನವನ್ನು ಉಪಯೋಗಿಸುವಲ್ಲಿನ ಸಾಧಕ–ಭಾಧಕಗಳನ್ನು ಪರೀಕ್ಷಿಸುವುದು ಮತ್ತು ಸರ್ಕಾರಕ್ಕೆ ಸೂಕ್ತ ಕ್ರಮಗಳನ್ನು ಸೂಚಿಸುವುದು ಶ್ರೀ ಡಾ॥ ಪಿ.ವಿ. ನಾಗೇಶ್ವರಾವ್ ರವರ (ಇಸ್ರೋ ನಿವೃತ್ತ ವಿಜ್ಞಾನಿ) ಅಧ್ಯಕ್ಷತೆಯ ಅಡಿಯಲ್ಲಿ ತಾಂತ್ರಿಕ ತಜ್ಞರ ಸಮಿತಿಯ ನಿರ್ಣಯಗಳ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

- ಬೆಳೆ ಸೂಚಿ ಪಟ್ಟಿ ಮತ್ತು ನವೀಕರಣ ವ್ಯವಸ್ಥೆಯ ಬಗ್ಗೆ ತಾಂತ್ರಿಕ ತಜ್ಞರ ಸಮಿತಿಯ ನಿರ್ಣಯಗಳ ಅನ್ವಯ ಪ್ರದೇಶ ಮತ್ತು ವಿವಿಧ ಬೆಳೆಗಳ ಇಳುವರಿಯನ್ನು ಕಂಡುಕೊಳ್ಳಲು ಸ್ಪೇಸ್ ಅಪ್ಲಿಕೇಶನ್ ಉಪಯೋಗಿಸಿಕೊಂಡು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ 'ಭೂಪ್ರದೇಶ ತಂತ್ರಜ್ಞಾನ ಸೆಲ್' ಆರಂಭಿಸಲಾಯಿತು. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ 15 ಸಿಬ್ಬಂದಿಗೆ ಭೌಗೋಳಿಕ ಮಾಹಿತಿ ಪದ್ಧತಿ ಮತ್ತು ಜಾಗತೀಕರಣ ಸ್ಥಾನೀಕರಣ ವ್ಯವಸ್ಥೆ ಬಗ್ಗೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯ ಕೇಂದ್ರ ಸಂಸ್ಥೆಯಲ್ಲಿ ತರಬೇತಿ ನೀಡಲಾಯಿತು. ಅವರಲ್ಲಿ 5 ಸಿಬ್ಬಂದಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯಿಂದ ಅನುದಾನಿತವಾದ 'ಬೆಳೆ ವಿಸ್ತೀರ್ಣ ಮತ್ತು ಉತ್ಪಾದನೆ ಅಂದಾಜು'. ಮೈಸೂರು ಜಿಲ್ಲೆ ಬಗ್ಗೆ ಪ್ರಾಯೋಗಿಕ ಅಧ್ಯಯನದಲ್ಲಿ ಕಾರ್ಯನಿರ್ವಹಿಸಿದರು.

- ಆಸ್ತಿ ಮತ್ತು ಫಲಾನುಭವಿ ಭೂಪಟ ರಚನೆ ಎಂಬ ಭೌಗೋಳಿಕ ಮಾಹಿತಿ ಪದ್ಧತಿ ಮತ್ತು ಗ್ಲೋಬಲ್ ಪ್ರೊಸೆಸಿಂಗ್ ಸಿಸ್ಟಮ್ ಬಳಸುವ ಪ್ರಾಯೋಗಿಕ ಯೋಜನೆಯನ್ನು 'ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯ ಕೇಂದ್ರ'ದ ಸಹಯೋಗದೊಂದಿಗೆ ಶಿವಮೊಗ್ಗ, ಧಾರವಾಡ ಮತ್ತು ತುಮಕೂರು ಜಿಲ್ಲೆಗಳಲ್ಲಿ ಆರಂಭಿಸಲು ಚಿಂತಿಸಲಾಗಿದೆ. ಅದರಿಂದಾಗಿ ವಿವಿಧ ಯೋಜನೆಗಳ ಪರಿಣಾಮಕಾರಿ ಹಾಗೂ ದಕ್ಷ ನಿರೂಪಣೆ, ಅನುಷ್ಠಾನ ಮತ್ತು ಮೇಲ್ವಿಚಾರಣೆ ರಾಜ್ಯ ಸರ್ಕಾರಕ್ಕೆ ಸಹಾಯಕವಾಗುವುವು. ಇಂತಹದೇ ವಿಧದ ಯೋಜನೆಯನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯ ಕೇಂದ್ರವು ಕರ್ನಾಟಕ–ಭೌಗೋಳಿಕ ಮಾಹಿತಿ ಪದ್ಧತಿ. ಕಾರ್ಯಕ್ರಮದ ಅಡಿಯಲ್ಲಿ ಆರಂಭಿಸಿದರು,

ಸರ್ಕಾರದ ನಿರ್ದೇಶನಗಳ ಅನ್ವಯ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಸಾರ್ವಜನಿಕ ಆಸ್ತಿ ಭೂಪಟರಚನೆ ಕಾರ್ಯಕ್ರಮವನ್ನು ಸ್ಥಗಿತಗೊಳಿಸಿದೆ.

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ನಿರ್ಣಯಗಳ ಅನ್ವಯ, ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮವಾಗಿ–19 ಸಹಾಯಕ ನಿರ್ದೇಶಕರು, 225 ಸಾಂಖ್ಯಿಕ ನಿರೀಕ್ಷಕರು, 30 ಗಣತಿದಾರರನ್ನು ನೇಮಿಸಲಾಗಿದೆ ಹಾಗೂ ಅವರನ್ನು ವಿವಿಧ ಹುದ್ದೆಗಳಲ್ಲಿ ನಿಯೋಜಿಸಲಾಗಿದೆ.

- 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳ ಅಡಿಯಲ್ಲಿ ಕೈಗೊಂಡ ಕ್ರಮದ ಸ್ಥಿತಿಗತಿಯು ಈ ವರದಿಯ ದತ್ತಾಂಶ ವಿಶ್ಲೇಷಣೆ ವಿಭಾಗವನ್ನು ಒಳಗೊಳ್ಳುತ್ತದೆ.

**ಗುರಿ–5**

**ಗುರಿ–5 ರ ಉದ್ದೇಶಗಳು:** ಅಗತ್ಯವಿರುವ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಮೂಲಸೌಕರ್ಯಗಳೊಂದಿಗೆ ಸೂಕ್ತ ಸ್ಥಾನದಲ್ಲಿ ಸಾಂಖ್ಯಿಕ ಸಾಮರ್ಥ್ಯಗಳನ್ನು ಮತ್ತು ಸಂಶೋಧನೆಯನ್ನು ಬಲಪಡಿಸುವುದು. ಉತ್ತಮವಾದ ಸಂಯೋಜನೆ, ಸಹಯೋಗ ಹಾಗೂ ಸಾಂಸ್ಥಿಕ ವ್ಯವಸ್ಥಾಪನೆಯ ಮೂಲಕ ದತ್ತಾಂಶ ಸಂಗ್ರಹಣ ವ್ಯವಸ್ಥೆಯನ್ನು ಬಲಪಡಿಸುವುದು.

| **ಗುರಿ–5 ರಾಜ್ಯ ಅಂಕಿ ಅಂಶಗಳ ಉಪಯುಕ್ತತೆ ಮತ್ತು ಪ್ರಸ್ತುತತೆಯನ್ನು ಹೆಚ್ಚಿಸಿರಿ.** | |
|---|---|
| ಗುರಿ–5 ರ ಅಡಿಯಲ್ಲಿ ಕಾರ್ಯನೀತಿಗಳು. | |
| ಲಭ್ಯವಿರುವ ದತ್ತಾಂಶ ಸೆಟ್‌ಗಳ ನಿಯತಕಾಲಿಕತೆ ಮತ್ತು ಸಕಾಲಿಕತೆಗಳನ್ನು ಉದ್ದೇಶಿತ, ಉತ್ಕೃಷ್ಟತೆಯ ಮಟ್ಟವನ್ನು ಪೂರೈಸಲು ಸೂಕ್ತ ಹಾಗೂ ಸಮರ್ಪಕ ಅತ್ಯಾಧುನಿಕ ಉಪಕರಣಗಳನ್ನು ಪಡೆಯಿರಿ ಮತ್ತು ಎಲ್ಲ ಸಿಬ್ಬಂದಿಗಳಿಗಾಗಿ ಮಾಹಿತಿ ಸಂವಹನ ತಂತ್ರಜ್ಞಾನ ಅಪ್ಲಿಕೇಷನ್‌ಗಳಲ್ಲಿ ಅಗತ್ಯವಿರುವ ತರಬೇತಿಯನ್ನು ಪಡೆಯಿರಿ. | ✓ |
| ಆಡಳಿತಾತ್ಮಕ ದಾಖಲೆಗಳಿಂದ ಲಭ್ಯವಾಗುವ ದತ್ತಾಂಶಗಳ ನಿರಂತರ ಹರಿವಿನ ಸಂಗ್ರಹಣೆ ಮತ್ತು ಸಂಕಲನಕ್ಕಾಗಿ ಪರಿಣಾಮಕಾರಿ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಿ ಇವುಗಳು ನಿಯತಕಾಲಿಕ ಗಣತಿಗಳು ಮತ್ತು ಸಮೀಕ್ಷೆಗಳಿಂದ ತಯಾರಿಸಿದ ದತ್ತಾಂಶಕ್ಕೆ ಪೂರಕವಾಗಿರಬೇಕು. | × |
| ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಆಧುನಿಕ ಉಪಕರಣಗಳುನ್ನು ಉಪಯೋಗಿಸಿಕೊಂಡು ಆಡಳಿತಾತ್ಮಕ ದತ್ತಾಂಶದ ಪರಿಣಾಮಕಾರಿ ಸಿಂಧುತ್ವ, ಸಂಗ್ರಹಣೆ, ಪುನಸ್ಸಂಪಾದನೆ, ಪ್ರಕರಣಗಳಿಗಾಗಿ ಕಾರ್ಯವಿಧಾನವನ್ನು ಕ್ರಮವಾಗಿ ನಿರೂಪಿಸಿರಿ. | ✓ |
| ಸಮೀಕ್ಷಿತ ದತ್ತಾಂಶದಿಂದ ಜಿಲ್ಲಾ ಮತ್ತು ಉಪ–ಜಿಲ್ಲಾ ಮಟ್ಟಗಳಲ್ಲಿ ಅಂದಾಜುಗಳನ್ನು ತಲುಪಿಸಲು ಸಣ್ಣ ಕ್ಷೇತ್ರ ಅಂದಾಜಿನ ಪ್ರಮಾಣೀಕೃತ ವಿಧಾನಗಳನ್ನು ಹೊಂದಿರಿ. | × |

**ಗುರಿ-5 ರ ಅಡಿಯಲ್ಲಿ ಸಾಧನೆಗಳು**

- 1ನೇ ಹಂತದ ಅಡಿಯಲ್ಲಿ ಪೂರೈಸಿದ ಹಾರ್ಡ್‌ವೇರ್‌ನ್ನು ಉಪಯೋಗಿಸಲಾಗುತ್ತಿದೆ ಮತ್ತು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಖಾಸಗಿ ಏಜೆನ್ಸಿಯವರಿಂದ ಮೂರನೇ ಪಕ್ಷದಿಂದ ಪರೀಕ್ಷೆಯನ್ನು ಮಾಡಲಾಗಿದೆ.
- 176 ತಾಲ್ಲೂಕುಗಳ ಪೈಕಿ 120 ತಾಲೂಕುಗಳು ಮಿನಿ ಲ್ಯಾಪ್‌ಟಾಪ್‌ಗಳನ್ನು ಸುರಕ್ಷಿತವಾಗಿಡಲು ವಿಶೇಷವಾಗಿ ವಿನ್ಯಾಸಗೊಳಿಸಿದ ಲ್ಯಾಪ್‌ಟಾಪ್ ಚಾರ್ಜರ್ ಮತ್ತು ಅಲ್‌ಮೇರವನ್ನು ಸಿದ್ದಪಡಿಸಿದ್ದಾರೆ. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳು ತಾಲ್ಲೂಕು ಕಛೇರಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಒಳಗೊಂಡು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗಳಿಗೆ 425 ಡೆಸ್ಕ್‌ಟಾಪ್‌ಗಳನ್ನು ಒದಗಿಸಲಾಗಿದೆ. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳಿಗೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಕಛೇರಿಗಳಿಗೆ 34 ಲ್ಯಾಪ್‌ಟಾಪ್‌ಗಳನ್ನು ಒದಗಿಸಲಾಗಿದೆ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳಿಗೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗಳಿಗೆ 32 ಪ್ರೊಜೆಕ್ಟರ್‌ಗಳನ್ನು ಮತ್ತು ಸ್ಕ್ರೀನ್‌ಗಳನ್ನು; 172 ಪ್ರಿಂಟರ್‌ಗಳನ್ನು ತಾಲ್ಲೂಕು ಕಛೇರಿಗಳ ಸಾಂಖ್ಯಿಕ ನಿರೀಕ್ಷಕರಿಗೆ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗಳಿಗೆ 36 ಎಂಎಫ್‌ಡಿ ಪ್ರಿಂಟರ್‌ಗಳನ್ನು ತಾಲ್ಲೂಕು ಕಛೇರಿಗಳ ಮತ್ತು ಜಿಲ್ಲಾ ಪಂಚಾಯತ್‌ನ ಸಾಂಖ್ಯಿಕ ಪರೀಕ್ಷಕರಿಗೆ 236 ಯುಪಿಎಸ್‌ಗಳನ್ನು; 176 ತಾಲೂಕಾ ಕಛೇರಿಗಳಿಗೆ 4153 ಮಿನಿ ಲ್ಯಾಪ್‌ಟಾಪ್‌ಗಳನ್ನು; ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗೆ 22 ಡೆಸ್ಕ್‌ಟಾಪ್‌ಗಳು, 3 ಲ್ಯಾಪ್‌ಟಾಪ್‌ಗಳು ಮತ್ತು 10 ಪ್ರಿಂಟರ್‌ಗಳನ್ನು; ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗಳಿಗೆ 16 ಡೆಸ್ಕ್‌ಟಾಪ್‌ಗಳು ಮತ್ತು 5 ಪ್ರಿಂಟರ್‌ಗಳನ್ನು-ಒದಗಿಸಲಾಗಿದೆ.
- ಸ್ಥಳೀಯ ಸಂಸ್ಥೆಗಳ ವಂತಿಗೆಯ ಅಂದಾಜುಗಳು: ಸ್ಥಳೀಯ ಸಂಸ್ಥೆಗಳ ವಾರ್ಷಿಕ ಲೆಕ್ಕಪತ್ರಗಳ ಆರ್ಥಿಕ ವಿಶ್ಲೇಷಣೆಗಾಗಿ ವೆಬ್ ಆಧಾರಿತ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಎಲ್ಲ ಅಧಿಕಾರಿಗಳಿಗೆ ಮತ್ತು ಸಿಬ್ಬಂಧಿಗೆ ರಾಜ್ಯಪಟ್ಟದ, ಜಿಲ್ಲಾ ಮತ್ತು ತಾಲೂಕು ಮಟ್ಟದ ತರಬೇತಿಯನ್ನು ಪೂರ್ಣಗೊಳಿಸಲಾಗಿದೆ.
- ಸ್ಥಳೀಯ ಕ್ಷೇತ್ರದ ಯೋಜನೆಗಾಗಿ ಅಂಕಿ-ಅಂಶಗಳು: 'ಸಾಮಾನ್ಯ ಮಾಹಿತಿ'ಯ ಸಂಗ್ರಹಣೆ, ಸಂಕಲನ ಮತ್ತು ಪ್ರಸಾರಕ್ಕೆ ಸಂಬಂಧಿಸಿದಂತೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ವೆಬ್ ಆಧಾರಿತ ಅಪ್ಲಿಕೇಶನ್‌ನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇಲಾಖೆಯು ಅಭಿವೃದ್ಧಿಪಡಿಸುತ್ತದೆ.
- ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯ ನೊಂದಣಿ ಮತ್ತು ರಿಟರ್ನ್‌ಗಳಿಗಾಗಿ ವೆಬ್ ಪೋರ್ಟಲ್‌ನ್ನು 2012-13 ರ ಅವಧಿಯಲ್ಲಿ ಪೂರ್ಣಗೊಳಿಸಲಾಯಿತು. ಈ ವೆಬ್ ಪೋರ್ಟಲ್‌ನ ಮರು ಹೊಂದಾಣಿಕೆಯನ್ನು 2014-15 ರಲ್ಲಿ ಮಾಡಲಾಯಿತು.
- ಕರ್ನಾಟಕ ಫಾರೆಸ್ಟ್ ಕೋಡ್, 1963ರ ಅಡಿಯಲ್ಲಿ ಅರವತ್ತು ಫಾರ್ಮ್ಯಾಟ್‌ಗಳಲ್ಲಿ ಸಂಗ್ರಹಿಸಲಾಗುತ್ತಿರುವ ಅಂಕಿ-ಅಂಶಗಳಿಗೆ ಸಂಬಂಧಿಸಿದ ತಮ್ಮ ಕಂಪ್ಯೂಟರ್‌ನಲ್ಲಿಯ ದತ್ತಾಂಶದ ಸಂಗ್ರಹಣ ಮತ್ತು ಸಂಕಲನದ ಬಗ್ಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಾಫ್ಟ್‌ವೇರ್ ಅಭಿವೃದ್ಧಿ ತಂಡದ ನಡುವೆ ಚರ್ಚೆ ನಡೆದಿದೆ.
- 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳಿಗಾಗಿ ಸೂಕ್ತ ವೆಬ್ ಚಾಲಿತ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲು ನ್ಯಾಶನಲ್ ಇನಫಾರ್ಮೆಟಿಕ್ ಸೆಂಟರ್ ಸಂಸ್ಥೆಯ ಸೇವೆಗಳನ್ನು ಪಡೆಯಲಾಗಿದೆ. ಬೆಳೆ ಅಂದಾಜು ಸಮೀಕ್ಷೆ, ಬೆಳೆ

ಕ್ಷೇತ್ರ ಗಣತಿ, ಗ್ರಾಹಕ ಬೆಲೆ ಸೂಚ್ಯಂಕ, ಸಗಟು ಮಾರಾಟ ಬೆಲೆ ಸೂಚ್ಯಂಕ ಮತ್ತು ಔದ್ಯಮಿಕ ಉತ್ಪಾದನೆಯ ಸೂಚ್ಯಂಕ ಇವುಗಳಿಗೆ ಸಂಬಂಧಿಸಿದಂತೆ ಅಪ್ಲಿಕೇಶನ್‌ನ್ನು 2010–11 ರ ಅವಧಿಯಲ್ಲಿ ಕಾರ್ಯಾಚರಣೆಗೆ ಸಿದ್ಧಗೊಳಿಸಲಾಯಿತು.

- ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮೂರು ಪ್ರೋಗ್ರಾಮರ್‌ಗಳನ್ನು ನಿಯೋಜಿಸಲಾಯಿತು. ಹಾಗಾಗಿ ಈ ಕೆಳಗಿನ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲಾಯಿತು ಮತ್ತು ಈ ಅಪ್ಲಿಕೇಶನ್‌ಗಳ ಮೂಲಕ ದತ್ತಾಂಶವನ್ನು ನಮೂದಿಸಲಾಗುತ್ತದೆ.
  - ಗ್ರಾಹಕ ಬೆಲೆ ಸೂಚ್ಯಂಕ
  - ಸಗಟು ಮಾರಾಟ ಬೆಲೆ ಸೂಚ್ಯಂಕ
  - ನಗರ ಪ್ರದೇಶ ಚಿಲ್ಲರೆ ಮಾರಾಟ ಬೆಲೆ ಸೂಚ್ಯಂಕ
  - ಗ್ರಾಮೀಣ ಪ್ರದೇಶ ಚಿಲ್ಲರೆ ಮಾರಾಟ ಬೆಲೆ ಸೂಚ್ಯಂಕ
  - ಕ್ಷೇತ್ರ ಗಣತಿ
  - ಬೆಳೆ ಕಟಾವು ಪ್ರಯೋಗಗಳು
  - ಔದ್ಯಮಿಕ ಉತ್ಪಾದನಾ ಸೂಚ್ಯಂಕ
  - ಸ್ಥಳೀಯ ಸಂಸ್ಥೆ ಲೆಕ್ಕ ಪತ್ರಗಳು (ಆರ್ಥಿಕ ಮತ್ತು ಉದ್ದೇಶ ವರ್ಗೀಕರಣ)
  - ಕರ್ನಾಟಕ–ಪಕ್ಷಿನೋಟ
- 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳಿಗಾಗಿ ಸೂಕ್ತ ವೆಬ್ ಚಾಲಿತ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲು ನ್ಯಾಶನಲ್ ಇನಫಾರ್ಮೆಟಿಕ್ ಸೆಂಟರ್ ಸಂಸ್ಥೆಯ, ಸೇವೆಗಳನ್ನು ಪಡೆಯಲಾಗಿದೆ. ಈ ಉದ್ದೇಶಕ್ಕಾಗಿ, ಈ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲು ಹೊರಗುತ್ತಿಗೆ ಆಧಾರದಲ್ಲಿ ನಿಯೋಜಿತವಾದ 2 ಪ್ರೋಗ್ರಾಮರ್‌ಗಳಿಗೆ ನ್ಯಾಶನಲ್ ಇನಫಾರ್ಮೆಟಿಕ್ ಸೆಂಟರ್ ಯಿಂದ ಒಬ್ಬರು ಸಿಸ್ಟಮ್ ಅನಲಿಸ್ಟ್ ಹಾಗೂ ಇಬ್ಬರು ತಾಂತ್ರಿಕ ನಿರ್ದೇಶಕರು ಮಾರ್ಗದರ್ಶನ ನೀಡುತ್ತಿದ್ದಾರೆ.
- ನೂತನ ಮಾಹಿತಿ ಸಂವಹನ ತಂತ್ರಜ್ಞಾನ ಅಪ್ಲಿಕೇಶನ್‌ಗಳನ್ನು ಉಪಯೋಗಿಸುವಲ್ಲಿ ಉಪ–ಜಿಲ್ಲೆ ಮಟ್ಟದಲ್ಲಿ ಸಿಬ್ಬಂದಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಲು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗೆ 30 ಪ್ರೋಗ್ರಾಮರ್ ಸಮಾಲೋಚಕರನ್ನು ಒದಗಿಸಲಾಯಿತು.
- ಜಿಲ್ಲೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಮತ್ತು ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಕೆಲಸ ಮಾಡಲು 2014–15 ರ ಅವಧಿಯಲ್ಲಿ ಇ–ಟೆಂಡರ್ ಪ್ರಕ್ರಿಯೆಯ ಮೂಲಕ 60 ಕಾರ್ಯಕ್ರಮ ಸಮಾಲೋಚಕರನ್ನು ನೇಮಿಸಲಾಗಿದೆ. ಈ ಕಾರ್ಯಕ್ರಮ ಸಮಾಲೋಚಕರು, ಅಪ್ಲಿಕೇಶನ್‌ಗಳನ್ನು ಮತ್ತು ಮಿನಿ ಲ್ಯಾಪ್‌ಟಾಪ್‌ಗಳನ್ನು ಉಪಯೋಗಿಸುವಲ್ಲಿ ಇದುವರೆಗೆ ಸುಮಾರು 14,100 ಪ್ರಾಥಮಿಕ ಕಾರ್ಯಕರ್ತರಿಗೆ ತರಬೇತಿ ನೀಡಲಾಗಿದೆ.

**ಗುರಿ–6**

**ಗುರಿ–6 ರ ಉದ್ದೇಶ:** ತಳಮಟ್ಟದಿಂದ ನೈಜ ಸಮಯ ದತ್ತಾಂಶವನ್ನು ಸಂಗ್ರಹಿಸುವ ಉದ್ದೇಶದಿಂದ ರಾಜ್ಯದಲ್ಲಿ ದತ್ತಾಂಶ ಸಂಗ್ರಹಣ ವ್ಯವಸ್ಥೆಯನ್ನು ಬಲಪಡಿಸುವುದು.

| **ಗುರಿ–6 : ರಾಜ್ಯ ಅಂಕಿ ಅಂಶಗಳ ಉಪಯುಕ್ತತೆ ಮತ್ತು ಪ್ರಸ್ತುತತೆಯನ್ನು ಹೆಚ್ಚಿಸುವುದು.** | |
|---|---|
| **ಗುರಿ–6 ರ ಅಡಿಯಲ್ಲಿ ಕಾರ್ಯನೀತಿಗಳು.** | |
| ಗ್ರಾಹಕರ ಅಗತ್ಯತೆಗಳನ್ನು ತಿಳಿದುಕೊಳ್ಳಲು ಅವರನ್ನು ಸಂಪರ್ಕಿಸುವ ಸಾಮರ್ಥ್ಯವನ್ನು ಸ್ಥಾಪಿಸುವುದು. | ✓ |
| ಬಳಕೆದಾರರ ಅಗತ್ಯತೆಗಳು ಮತ್ತು ಆ ಅಗತ್ಯತೆಗಳನ್ನು ಲಭ್ಯವಿರುವ ಮಾಹಿತಿಯು ಪೂರೈಸುವ ಪ್ರಮಾಣದ ಬಗ್ಗೆ ಬಳಕೆದಾರರಿಂದ ನಿರಂತವಾಗಿ ಸಲಹೆಪಡೆಯುವುದು. | ✓ |
| ವಿಶ್ಲೇಷಣಾತ್ಮಕ ದತ್ತಾಂಶವನ್ನೊಳಗೊಂಡ ವಾರ್ಷಿಕ ವರದಿಯನ್ನು ಪ್ರಕಟಿಸುವುದು ಮತ್ತು ಬಳಕೆದಾರರಿಗೆ ಸುಲಭ ಹಾಗೂ ಅತ್ಯುತ್ತಮ ಪ್ರವೇಶಾತಿಗಾಗಿ ಇಲಾಖಾ ವೆಬ್ ಸೈಟ್‌ಗಳ ಮೂಲಕ ಪ್ರಸಾರವನ್ನು ಸಹ ಮಾಡುವುದು. | ✓ |
| ಮೆಟಾಡಾಟಾವನ್ನು ಸಿದ್ದಪಡಿಸಲಾಗುತ್ತದೆ ಮತ್ತು ದತ್ತಾಂಶದೊಂದಿಗೆ ಲಭ್ಯವಾಗಿಸಲಾಗುತ್ತದೆ ಎಂಬುದನ್ನು ಖಚಿತಪಡಿಸುವುದು. | ✓ |
| ಇಲಾಖೆಯ ವಿವಿಧ ಉದ್ದೇಶಗಳನ್ನು ಯೋಜನೆಯ ಅನುಷ್ಠಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲನೆ ಮತ್ತು ಸುಧಾರಣೆಗಾಗಿ ಸೂಕ್ತ ಮೇಲ್ವಿಚಾರಣಾರ್ಹವಾದ ದಾಖಲೆ ಸೂಚಕಗಳನ್ನು | ✓ |

**ಗುರಿ–6ರ ಅಡಿಯಲ್ಲಿ ಸಾಧನೆಗಳು:**

- ಬಳಕೆದಾರರ ಅಗತ್ಯತೆಗಳನ್ನು ತಿಳಿದುಕೊಳ್ಳುವುದಕ್ಕಾಗಿ, ಎಲ್ಲ ಲೈನ್ ಇಲಾಖೆಗಳೊಂದಿಗೆ 2 ಸಭೆಗಳನ್ನು ನಡೆಸಲಾಗಿದೆ ಮತ್ತು ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆ ಹಾಗೂ 13ನೇ ಹಣಕಾಸು ಆಯೋಗದಿಂದ ಉಂಟಾದ ಸುಧಾರಣೆಗಳನ್ನು ಒಳಗೊಂಡು ರಾಜ್ಯದಲ್ಲಿನ ಪ್ರಸ್ತುತ ಸಾಂಖ್ಯಿಕ ವ್ಯವಸ್ಥೆಯನ್ನು ಕುರಿತು ಅಧ್ಯಯನವನ್ನು ಕೈಗೊಳ್ಳಲು ಡೆಲೊಟ್ಟೆರವರನ್ನು ಕೇಳಿಕೊಳ್ಳಲಾಯಿತು. ಅಲ್ಲದೆ ಅವುಗಳು ಅಸ್ತಿತ್ವದಲ್ಲಿರುವ ಅಂತರಗಳನ್ನು ಮತ್ತು ತಾಂತ್ರಿಕ ಹಾಗೂ ಹಣಕಾಸು ತೊಡಕುಗಳೊಂದಿಗೆ ಆ ಅಂತರಗಳನ್ನು ಕಡಿಮೆ ಮಾಡುವುದಕ್ಕಾಗಿ ಲಭ್ಯವಿರುವ ಕಾರ್ಯನೀತಿಯುಕ್ತ ಆಯ್ಕೆಗಳನ್ನು ಸಹ ಅವು ಗುರುತಿಸಿದೆ ಮತ್ತು ರಾಜ್ಯದಲ್ಲಿನ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸಲು 308 ಸಲಹೆಗಳನ್ನು ಅವು ಶಿಫಾರಸ್ಸು ಮಾಡಿದೆ.
- ಬಳಕೆದಾರರಿಗೆ ಸುಲಭ ಹಾಗೂ ಉತ್ತಮ ಪ್ರವೇಶಾತಿಗಾಗಿ ಇಲಾಖಾ ವೆಬ್‌ಸೈಟ್ ಮೂಲಕ ವಿಶ್ಲೇಷಿತ ದತ್ತಾಂಶವನ್ನು ಒಳಗೊಂಡ ವಾರ್ಷಿಕ ವರದಿಗಳು ಲಭ್ಯವಿರುತ್ತವೆ.
- 13ನೇ ಹಣಕಾಸು ಆಯೋಗ ನಿಧಿ ಅಡಿಯಲ್ಲಿ ಇ–ಲೈಬ್ರರಿಯನ್ನು ಉಪಯೋಗಿಸಿಕೊಂಡು ಮೆಟಾಡೇಟಾವನ್ನು ಸಿದ್ಧಪಡಿಸಲಾಯಿತು.

**ಗುರಿ 7**

**ಗುರಿ–7ರ ಉದ್ದೇಶಗಳು:**

ಈ ವರದಿಗಳು ವೈಜ್ಞಾನಿಕ ಮತ್ತು ವಸ್ತುನಿಷ್ಠ ಆಧಾರದಲ್ಲಿ ಪ್ರಕಟವಾಗಬೇಕಾದ್ದರಿಂದ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ಮತ್ತು ಸಂಬಂಧಿಸಿದ ಇಲಾಖೆಗಳಲ್ಲಿ ಅಧಿಕಾರಿಗಳಿಗೆ ತರಬೇತಿಯನ್ನು ಒದಗಿಸುವುದು.

| **ಗುರಿ 7: ರಾಜ್ಯ ಅಂಕಿಅಂಶಗಳ ಉಪಯುಕ್ತತೆ ಮತ್ತು ಪ್ರಸ್ತುತತೆ ಹೆಚ್ಚಿಸುವುದು.** | |
|---|---|
| ಗುರಿ–7 ರ ಅಡಿಯಲ್ಲಿ ಕಾರ್ಯನೀತಿಗಳು. | |
| ಸಂಶೋಧನೆ, ತರಬೇತಿ ಮತ್ತು ವಿಶ್ಲೇಷಣಾ ಘಟಕವಾಗಿ ಸಹ ಕಾರ್ಯನಿರ್ವಹಿಸುವ ಸಂಪೂರ್ಣ ಸುಸಜ್ಜಿತ ತರಬೇತಿ ಕೇಂದ್ರವನ್ನು ಸ್ಥಾಪಿಸುವುದು. | X |
| ಸೂಕ್ತವಾಗಿ ರಚಿಸಿದ ಪಠ್ಯ ವಿಷಯದ' ಮೂಲಕ ಸಂಖ್ಯಾಶಾಸ್ತ್ರ, ಅರ್ಥಶಾಸ್ತ್ರ, ವ್ಯವಸ್ಥಾಪನೆ, ಮೌಲ್ಯಮಾಪನ, ಅಂಕಿಅಂಶಗಳ ಅನುಷ್ಠಾನ ಅಧಿನಿಯಮ, 2008, ಯೋಜನೆ–ಇವುಗಳ ಬಗ್ಗೆ ಸಾಂಖ್ಯಿಕ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು. | ✓ |
| ಸಮಾಲೋಚಕರನ್ನು ನಿಯೋಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಪಠ್ಯವಿಷಯವನ್ನು/ತರಬೇತಿ ಪಠ್ಯವನ್ನು ಅಭಿವೃದ್ಧಿಪಡಿಸುವುದು. | X |
| ಸಾಂಖ್ಯಿಕ ಸಂಸ್ಥೆಯ ಅಧುನಿಕ ನಿರ್ವಹಣೆ ಮತ್ತು ಮಾಹಿತಿ ಸಂವಹನ ತಂತ್ರಜ್ಞಾನ ಬಗ್ಗೆ ಎಲ್ಲ ಸಾಂಖ್ಯಿಕ ಸಿಬ್ಬಂದಿಗೆ ತರಬೇತಿಯನ್ನು ನೀಡುವುದು. | ✓ |
| ತಳಮಟ್ಟದಲ್ಲಿ ಸಂಗ್ರಹಿಸಿದ ಅಧಿಕೃತ ಅಂಕಿಅಂಶಗಳ ಬಗ್ಗೆ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ವಿಮರ್ಶಾತ್ಮಕ ವರದಿಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ವಿವಿಧ ವಿಭಾಗಗಳ ಮುಖ್ಯಸ್ಥರು, ಇಲಾಖಾ ಸಾಂಖ್ಯಿಕ ವಿಭಾಗಗಳ ಮುಖ್ಯಸ್ಥರು, ಮುಖ್ಯ ಯೋಜನಾ ಅಧಿಕಾರಿಗಳು ಮತ್ತು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು ಪ್ರಕಟಿಸಬೇಕು. | ✓ |

**ಗುರಿ–7 ರ ಅಡಿಯಲ್ಲಿ ಸಾಧನೆಗಳು :**

- ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳಿಗೆ ಸಾಂಖ್ಯಿಕ ಚಟುವಟಿಕೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಲಿದೆ ಮತ್ತು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಲಿದೆ.
- 11 ಕೇಂದ್ರಗಳ ಮೇಲ್ವಿಚಾರಕ ಹಾಗೂ ಬೆಲೆ ಸಂಗ್ರಾಹಕ ಸಿಬ್ಬಂದಿಯನ್ನು ತರಬೇತಿಗೆ ಒಳಪಡಿಸಲಾಯಿತು. ಔದ್ಯಮಿಕ ಕಾರ್ಮಿಕರ ಔದ್ಯಮಿಕ ಉತ್ಪನ್ನ ಸೂಚ್ಯಂಕವನ್ನು ಅಳಡಿಸಲಾಗಿರುತ್ತದೆ.
- 2011–12 ರಿಂದ 2014–15 ರ ಅವಧಿಯಲ್ಲಿ 2,22,314 ಅಭ್ಯರ್ಥಿಗಳನ್ನು ತರಬೇತುಗೊಳಿಸಲಾಯಿತು, ಅದರಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು, ಸಂಬಂಧಿಸಿದ ಇಲಾಖಾ ಅಧಿಕಾರಿಗಳು, ಜಿಲ್ಲಾ ಮತ್ತು ಉಪ–ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮಾಲೋಚಕರು, ಜಿಲ್ಲಾ ಪಂಚಾಯತ್ ಅಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು (ತಾಲೂಕು ಮಟ್ಟ) ಮತ್ತು ಸಾಂಖ್ಯಿಕ ನಿರೀಕ್ಷಕರು ಹಾಗೂ ಗಣತಿದಾರರು ಒಳಗೊಳ್ಳುತ್ತಾರೆ.
- ಸಾಂಖ್ಯಿಕ ಇಲಾಖೆಯಲ್ಲಿ ಮೊದಲ ಬಾರಿಗೆ, ಬೆಳೆ ಕಟಾವು ಪ್ರಯೋಗಗಳಿಗಾಗಿ ದೃಶ್ಯ–ಶ್ರವಣ ತರಬೇತಿ ಸಾಮಗ್ರಿಗಳನ್ನು 2014–15 ರ ಅವಧಿಯಲ್ಲಿ ತಯಾರಿಸಲಾಯಿತು.

- ಅಂಕಿಅಂಶಗಳ ಗುಣಮಟ್ಟವನ್ನು ಸುಧಾರಿಸಲು ಅಂಕಿಅಂಶಗಳ ತಯಾರಕರಿಗಾಗಿ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯಿಂದ ಅನುದಾನಿತವಾದ ಜಾಗೃತಿ ಕಾರ್ಯಾಗಾರವನ್ನು ಏರ್ಪಡಿಸಲಾಯಿತು.
- ಬೆಳೆ ಕ್ಷೇತ್ರ ಮತ್ತು ಉತಾದನಾ ಅಂಕಿ ಅಂಶಗಳು: ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಗಳನ್ನು ಹೊರತುಪಡಿಸಿ ಎಲ್ಲ ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸದಸ್ಯರಿಗಾಗಿ ಹೋಬಳಿ ಮಟ್ಟದ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು ಮತ್ತು ದಕ್ಷಿಣ ಕನ್ನಡ, ಗುಲ್ಬರ್ಗಾ, ಕಾರವಾರ, ಉಡುಪಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ತರಬೇತಿಯನ್ನು ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಅಂದಾಜು 45491 ಅಭ್ಯರ್ಥಿಗಳು ಹಾಜರಿದ್ದರು.
- ರಾಜ್ಯದಲ್ಲಿ ವಿವಿಧ ಸಂಬಂಧಿಸಿದ ಇಲಾಖೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ ಸಂವೇದನಾಶೀಲ ತರಬೇತಿಯನ್ನು ಆಯೋಜಿಸಲಾಗಿದೆ.
- ನೇಮಕವಾದ ಸಹಾಯಕ ನಿರ್ದೇಶಕರಿಗೆ ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳಿಗೆ ಸಾಮಾನ್ಯ ಬುನಾದಿ ಕೋರ್ಸನ್ನು ನಡೆಸುವ ಮತ್ತು ಆಡಳಿತಾತ್ಮಕ ತರಬೇತಿ ಸಂಸ್ಥೆ 'ಎ' ದರ್ಜೆ ಅಧಿಕಾರಿಗಳಿಗೆ ತರಬೇತಿ ನೀಡುತ್ತಿದ್ದು, ಅದರ ತರಬೇತಿ ಕಾರ್ಯಕ್ರಮದಲ್ಲಿ 'ಅಂಕಿಅಂಶಗಳ ಸಂಗ್ರಹಣ ಅಧಿನಿಯಮ, 2008 ಮತ್ತು ನಿಯಮಗಳು 2011' ನ್ನು ಕಡ್ಡಾಯ ವಿಷಯವಾಗಿ ಸೇರಿಸಲು ಸೂಚಿಸಲಾಗಿದೆ.
- ನೂತನ ಮಾಹಿತಿ ಸಂವಹನ ತಂತ್ರಜ್ಞಾನದ ಅಪ್ಲಿಕೇಶನ್‌ಗಳನ್ನು ಉಪಯೋಗಿಸುವಲ್ಲಿ ಉಪ–ಜಿಲ್ಲಾ ಮಟ್ಟದಲ್ಲಿಯ ಸಿಬ್ಬಂದಿಗೆ ತರಬೇತಿ ನೀಡಲು, ಮಾರ್ಗದರ್ಶನ ನೀಡಲು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗೆ 30 ಪ್ರೋಗ್ರಾಮರ್ ಸಮಾಲೋಚಕರನ್ನು ಒದಗಿಸಲಾಯಿತು.
- ಜಿಲ್ಲೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಿಕ್ಕೆ, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಮತ್ತು ಜಿಲ್ಲಾ ಪಂಚಾಯಿತಿಗಳ ಕಛೇರಿಗಳಲ್ಲಿ ಕೆಲಸ ಮಾಡಲು 60 ಪ್ರೋಗ್ರಾಮ್ ಸಮಾಲೋಚಕರನ್ನು ಟೆಂಡರ ಪ್ರಕ್ರಿಯೆಯ ಮೂಲಕ 2014–15 ರ ಅವಧಿಯಲ್ಲಿ ನೇಮಿಸಲಾಯಿತು. ಪ್ರೋಗ್ರಾಮ್ ಸಮಾಲೋಚಕರು ಅಪ್ಲಿಕೇಶನ್‌ಗಳು ಹಾಗೂ ಮಿನಿ ಲ್ಯಾಪ್‌ಟಾಪ್‌ಗಳನ್ನು ಉಪಯೋಗಿಸುವಲ್ಲಿ ಸುಮಾರು 14,100 ಪ್ರಾಥಮಿಕ ಕಾರ್ಯಕರ್ತರನ್ನು ತರಬೇತುಗೊಳಿಸಿದ್ದಾರೆ.
- ವಿಶ್ವಾಸಾರ್ಹ ಹಾಗೂ ಸಕಾಲಿಕ ಅಂಕಿಅಂಶಗಳ ವಿಶ್ಲೇಷಣೆಯೊಂದಿಗೆ 'ಇಲಾಖೆಗಳ ವಾರ್ಷಿಕ ಆಡಳಿತ ವರದಿಯ ಮರುವಿನ್ಯಾಸಗೊಳಿಸುವುದು' ಕುರಿತು ವಿವಿಧ ಇಲಾಖಾ ಪ್ರತಿನಿಧಿಗಳ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಯಿತು.
- ಆರ್ಥಿಕ ಸಮೀಕ್ಷಾ ವರದಿಯ ವಿಷಯವಸ್ತು ಮತ್ತು ವ್ಯಾಪ್ತತೆಯನ್ನು–ವಿವಿಧ ಪ್ರತಿಷ್ಠಿತ ಸಂಸ್ಥೆಗಳಿಂದ ಪಡೆದ ವಿವಿಧ ವಿಷಯ ತಜ್ಞರಿಂದ 2010–11 ರಿಂದ ಪರಿಷ್ಕರಿಸಲಾಗಿದೆ.

**ಗುರಿ–8 :**

**ಗುರಿ–8ರ ಉದ್ದೇಶಗಳು:** ಕರ್ನಾಟಕ ರಾಜ್ಯ ಸಾಂಖ್ಯಿಕ ವ್ಯವಸ್ಥೆಯ ಸಾಂಖ್ಯಿಕ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಪಾತ್ರ ಮತ್ತು ಕಾರ್ಯಗಳನ್ನು ಹೆಚ್ಚಿಸುವುದು.

| ಗುರಿ–8ರ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸ್ಥಿತಿಗತಿಯನ್ನು ಹೆಚ್ಚಿಸುವುದು | |
|---|---|
| ಗುರಿ–8ರ ಕಾರ್ಯತಂತ್ರಗಳು | |
| ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿರ್ದೇಶಕರನ್ನು ಸರ್ಕಾರದ ಕಾರ್ಯದರ್ಶಿ ಮಟ್ಟಕ್ಕೆ ಉನ್ನತೀಕರಿಸುವುದು. | x |
| ಸರ್ಕಾರದ ಸದ್ಯದ ನೇಮಕಾತಿ ನೀತಿಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಸಾಧಿಸಲು ಸೂಕ್ತ ಮಾನವ ಸಂಪನ್ಮೂಲವನ್ನು ಒದಗಿಸುವುದು. | x |
| ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನಕ್ಕಾಗಿ ಸೂಕ್ತ ಸಂಪನ್ಮೂಲವನ್ನು ಒದಗಿಸುವುದು. | x |
| ಜಿಲ್ಲಾ ಸಾಂಖ್ಯಿಕ ಕಛೇರಿಗಳನ್ನು ಸ್ವಂತದ ಕಟ್ಟಡದಲ್ಲಿ ಅಥವಾ ಸರ್ಕಾರದ ಕಟ್ಟಡಗಳಲ್ಲಿ ನಿರ್ವಹಿಸುವುದು. | √ |
| ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳನ್ನು ಆಧುನಿಕ ಕಛೇರಿ ಮತ್ತು ಕಂಪ್ಯೂಟರ್ ಸಲಕರಣೆಗಳೊಂದಿಗೆ ಸಂಪೂರ್ಣವಾಗಿ ಸಜ್ಜುಗೊಳಿಸುವುದು. | x |
| ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್, ಎಲ್ಲ ಕೇಂದ್ರ ಸಚಿವಾಲಯಗಳ, ಇತರ ರಾಜ್ಯ ಸಾಂಖ್ಯಿಕ ಸಂಸ್ಥೆಗಳ ಜಿಲ್ಲಾ ಸಾಂಖ್ಯಿಕ ವಿಭಾಗಗಳು ಮತ್ತು ಖಾಸಗಿ ಬಳಕೆದಾರರ ನಡುವೆ ಅಂತರ್ ಸಂವಹನ ಸಂಪರ್ಕವನ್ನು ಸಬಲವಾಗಿ ಏರ್ಪಡಿಸುವುದು. | x |

**ಗುರಿ–8ರ ಅಡಿಯಲ್ಲಿ ಸಾಧನೆಗಳು:**

- ಹಾಸನ, ದಕ್ಷಿಣ ಕನ್ನಡ ಮತ್ತು ಮೈಸೂರುಗಳಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಕಛೇರಿ ಕಟ್ಟಡಗಳನ್ನು ನಿರ್ಮಿಸಲು ಖಾಲಿ ನಿವೇಶನಗಳನ್ನು ಖರೀದಿಸಲಾಗಿದೆ.
- ಬೆಂಗಳೂರು (ನಗರ) ಮತ್ತು ಬೆಂಗಳೂರು (ಗ್ರಾಮಾಂತರ)ಗಳಲ್ಲಿನ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಕಟ್ಟಡಗಳ ನಿರ್ಮಾಣವನ್ನು 2012–13 ರಲ್ಲಿ ಪೂರ್ಣಗೊಳಿಸಲಾಯಿತು.
- ಹಾಸನ ಮತ್ತು ಚಿಕ್ಕಮಗಳೂರಿನಲ್ಲಿ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಕಟ್ಟಡಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಈ ಎರಡು ಕಛೇರಿ ಕಟ್ಟಡಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಈ ಎರಡು ಕಛೇರಿ ಕಟ್ಟಡಗಳ ನಿರ್ಮಾಣವನ್ನು 2014–15 ರಲ್ಲಿ ಕೈಗೊಳ್ಳಲಾಯಿತು.
- ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಕಟ್ಟಡಗಳ ನಿರ್ಮಾಣಕ್ಕಾಗಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗಾಗಿ ಕ್ರಮವಾಗಿ, ರೂ.132.00 ಲಕ್ಷ ಮತ್ತು ರೂ.168.00 ಲಕ್ಷ ಮೊತ್ತಗಳಿಗಾಗಿ ಆಡಳಿತಾತ್ಮಕ ಅನುಮೋದನೆಯನ್ನು 2014–15ರಲ್ಲಿ ಕೊಡಲಾಯಿತು. ಪ್ರಥಮ ಕಂತನ್ನು ಅನುಷ್ಠಾನಗೊಳಿಸುತ್ತಿರುವ ಏಜೆನ್ಸಿಗಳಿಗೆ ಬಿಡುಗಡೆ ಮಾಡಲಾಯಿತು.
- ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ/ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಕಛೇರಿಗೆ ಗೋಡೌನ್‌ನ ನಿರ್ಮಾಣಕ್ಕಾಗಿ ರೂ.99.50 ಲಕ್ಷ ಮೊತ್ತಕ್ಕಾಗಿ ಆಡಳಿತಾತ್ಮಕ ಅನುಮೋದನೆಯನ್ನು 2014–15ರ ಅವಧಿಯಲ್ಲಿ ಕೊಡಲಾಯಿತು. ಪ್ರಥಮ ಕಂತನ್ನು ಅನುಷ್ಠಾನಗೊಳಿಸುತ್ತಿರುವ ಏಜೆನ್ಸಿಗೆ ಬಿಡುಗಡೆ ಮಾಡಲಾಯಿತು.

- 2014–15ರಲ್ಲಿ ರೂ5.24 ಲಕ್ಷಗಳ ವೆಚ್ಚದಲ್ಲಿ ಉತ್ತಮ ಕೆಲಸ ನಿರ್ವಹಣಾ ಪರಿಸರಕ್ಕಾಗಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಅಧಿಕಾರಿಗಳ ಕೊಠಡಿಗಳ ನವೀಕರಣ.

**ಗುರಿ–9**

**ಗುರಿ–9 ರ ಉದ್ದೇಶ :** ವಿಶ್ವಾಸಾರ್ಹ, ನಂಬಲರ್ಹ ಮತ್ತು ಸಕಾಲಿಕ ದತ್ತಾಂಶಕ್ಕಾಗಿ 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳ ಬಗ್ಗೆ ಒತ್ತುನೀಡುವುದು ಮತ್ತು ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಪಟ್ಟಿಮಾಡಿದ ಆ 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಕನಿಷ್ಠ ಗುಣಮಟ್ಟಗಳನ್ನು ಪರಿಣಾಮಕಾರಿಯಾಗಿ, ಸಮರ್ಪಕವಾಗಿ ಮತ್ತು ವ್ಯವಸ್ಥಿತವಾಗಿ ಪೂರೈಸಲು ರಾಜ್ಯ ಸರ್ಕಾರವು ಸಮರ್ಥವಾಗುವ ಪ್ರಮಾಣವನ್ನು ನಿರ್ಧರಿಸುವುದು.

**ಕೋಷ್ಟಕ 11: 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳ ಅಡಿಯಲ್ಲಿ ತೆಗೆದುಕೊಂಡ ಕ್ರಮಗಳು**

| ಕ್ರ. ಸಂ. | ಸಾಂಖ್ಯಿಕ ಚಟುವಟಿಕೆ | ಕೈಗೊಂಡ ಕ್ರಮ |
|---|---|---|
| 1. | **ರಾಜ್ಯ ಆಂತರಿಕ ಉತ್ಪನ್ನ ಅಂದಾಜುಗಳು** | ▸ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ರಾಜ್ಯ ಸ್ಥಳೀಯ ಉತ್ಪಾದನಾ ಅಂದಾಜುಗಳನ್ನು ಪ್ರತಿವರ್ಷ ಸಂಗ್ರಹಿಸಿತು ಮತ್ತು ಸಂಕಲ್ಪಿಸಿತು. |
| 2. | **ಬಂಡವಾಳ ನಿರ್ಮಾಣ ಮತ್ತು ಉಳಿತಾಯದ ಅಂದಾಜುಗಳು** | ▸ ಸಾಮಾಜಿಕ–ಆರ್ಥಿಕ ಬದಲಾವಣೆ ಸಂಸ್ಥೆ ಬೆಂಗಳೂರು–ಸಹಯೋಗದಲ್ಲಿ 1999–2000 ದಿಂದ 2008–09 ರವರೆಗೆ 1999–2000 ಮೂಲ ವರ್ಷಕ್ಕಾಗಿ ಬಂಡವಾಳ ಸೃಷ್ಟಿ ಮತ್ತು ಸರಕು ಮತ್ತು ಸೇವೆಗಳ ಉಪಭೋಗದ ಅಂದಾಜುಗಳನ್ನು ಸಂಕಲ್ಪಿಸಲಾಗಿದೆ.<br>▸ ಬಂಡವಾಳ ಸೃಷ್ಟಿ ಮತ್ತು ಉಳಿತಾಯಗಳ ಅಂದಾಜುಗಳ ಸಂಕಲನದ ಬಗ್ಗೆ ಸಿಬ್ಬಂದಿಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ವತಿಯಿಂದ ಸಾಮಾಜಿಕ–ಆರ್ಥಿಕ ಬದಲಾವಣೆ ಸಂಸ್ಥೆಯು ತರಬೇತಿಯನ್ನು ಏರ್ಪಡಿಸಲಾಗಿತ್ತು.<br>▸ ಹೊಸ ಮೂಲ ವರ್ಷವನ್ನು ಪರಿಷ್ಕರಿಸಿದೆ. ಆದ್ದರಿಂದ ತರಬೇತಿಯು ಅಗತ್ಯವಾಗಿರುತ್ತದೆ. ಗ್ರಾಮ ಪಂಚಾಯತ್‌ನ ಪ್ರಾಯೋಗಿಕ ಲೆಕ್ಕಾಚಾರವಾಗಿ ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಆಂತರಿಕ ಉತ್ಪನ್ನ ಕೈಗೊಳ್ಳಲಾಗಿತ್ತು. |
| 3. | **ಜಿಲ್ಲಾ ಆಂತರಿಕ ಉತ್ಪನ್ನ ಅಂದಾಜುಗಳು** | ▸ ಜಿಲ್ಲಾ ಆಂತರಿಕ ಉತ್ಪನ್ನ ಅಂದಾಜುಗಳ ಸಂಕಲನ, ಗ್ರಾಮೀಣ ಮತ್ತು ನಗರ ಪ್ರದೇಶಗಳಿಗಾಗಿ ಸ್ಥಳೀಯ ಸಂಸ್ಥೆ 0 ಅಂದಾಜುಗಳು ಮತ್ತು ಗ್ರಾಹಕ ಬೆಲೆ ಸೂಚ್ಯಂಕ– ಇವುಗಳ ಸಂಕಲನಕ್ಕಾಗಿ ಅನುಸರಿಸಿದ ಮೂಲಗಳನ್ನು ಮತ್ತು ವಿಧಾನಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ತಯಾರಿಸಿದೆ.<br>▸ ಈ ಅಂದಾಜುಗಳ ಸಂಕಲನದಲ್ಲಿ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಯೋಜನಾಧಿಕಾರಿಗಳಿಗೆ ತರಬೇತಿಯನ್ನು ಏರ್ಪಡಿಸಲಾಗಿದೆ. ಅಲ್ಲದೇ ಜಿಲ್ಲಾ ಮತ್ತು ಉಪ ಜಿಲ್ಲಾ ಮಟ್ಟದ ಅಧಿಕಾರಿಗಳಿಗೂ ಸಹ ಈ ಅಂದಾಜುಗಳ ಸಂಕಲನದ ತರಬೇತಿ ಏರ್ಪಡಿಸಲಾಗಿದೆ.<br>▸ ಈ ಅಂದಾಜುಗಳ ಸಂಕಲನದಲ್ಲಿ ಮುಖ್ಯ ಯೋಜನಾಧಿಕಾರಿಗೆ ಸಹಾಯ ಮಾಡಲು ಜಿಲ್ಲಾ ಪಂಚಾಯತಿಗಳಿಗೆ ಇಬ್ಬರು ಸಮಾಲೋಚಕರನ್ನು ಒದಗಿಸಲಾಯಿತು.<br>▸ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗಾಗಿ 25 ಜುಲೈ 2011 ರಂದು ಸಂವೇದಕ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಹೆಚ್ಚುವರಿ ಮಹಾ ನಿರ್ದೇಶಕ, ರಾಷ್ಟ್ರೀಯ ಲೆಕ್ಕಪತ್ರ ವಿಭಾಗ ಕೇಂದ್ರೀಯ ಸಾಂಖ್ಯಿಕ ಸಂಸ್ಥೆ ಮತ್ತು ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ, ಹಣಕಾಸು ಸಚಿವಾಲಯ ಮತ್ತು ಪಂಚಾಯತ್ ರಾಜ್ಯ ಸಚಿವಾಲಯಗಳ ಹಿರಿಯ ಅಧಿಕಾರಿಗಳು, ಈ ಕ್ಷೇತ್ರಗಳ ತಜ್ಞರು, ಪಶ್ಚಿಮ ಬಂಗಾಳ, |

| | | |
|---|---|---|
| | | ಮಧ್ಯಪ್ರದೇಶ, ಅರುಣಾಚಲ ಪ್ರದೇಶ, ಹಿಮಾಚಲ ಪ್ರದೇಶಗಳ ಪ್ರಕಾಶನ, ತರಬೇತಿ ಮತ್ತು ಸಂಯೋಜನೆಯ ಅಧಿಕಾರಿಗಳು ಹಾಗೂ ಕರ್ನಾಟಕ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು–ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. |
| 4. | **ಸ್ಥಳೀಯ ಸಂಸ್ಥೆಗಳ ಕೊಡುಗೆಗಳ ಅಂದಾಜುಗಳು** | ▸ ಕರ್ನಾಟಕ ಸರ್ಕಾರವು ಸ್ಥಳೀಯ ಸಂಸ್ಥೆಗಳ ಕೊಡುಗೆಯ ಬಗ್ಗೆ ಸಮೀಕ್ಷೆ ಕೈಗೊಂಡಿದೆ. 2003–04 ರಿಂದ 2008–09 ರ ವರೆಗೆ ಎಲ್ಲ ಜಿಲ್ಲಾ ಪಂಚಾಯತಿಗಳು ಮತ್ತು ತಾಲೂಕು ಪಂಚಾಯಿತಿಗಳಿಂದ, ಪ್ರತಿ ತಾಲೂಕಿನಲ್ಲಿ 3 ಗ್ರಾಮ ಪಂಚಾಯಿತಿಗಳಿಂದ ಮತ್ತು ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಂದ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ವರದಿಗಳ ಸಂಕಲನವನ್ನು ಪೂರ್ಣಗೊಳಿಸಲಾಗಿದೆ. ಇವು ಜಿಲ್ಲಾ ಪಂಚಾಯತಿಗಳಿಗೆ ಆಧಾರವಾಗುತ್ತದೆ. ಅವುಗಳು ಪಂಚಾಯತ್ ರಾಜ್ ಸಂಸ್ಥೆಗಳಿಂದ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಂದ 2009–10 ರ ನಂತರ ದತ್ತಾಂಶ ಸಂಗ್ರಹಣೆ ಕೈಗೊಳ್ಳುವುದು.<br>▸ ಮಾಹಿತಿ ಸಂಗ್ರಹಿಸಲು ವೆಬ್ ಅಪ್ಲಿಕೇಶನ್ನು ತಯಾರಿಸಲಾಗಿದೆ ಮತ್ತು ಅದರ ಫಲಿತಾಂಶಗಳನ್ನು 2011–12 ನೇ ಮೂಲ ಪರಿಷ್ಕರಣೆಯಲ್ಲಿ ಸಂಯೋಜಿಸಲಾಗಿದೆ. |
| 5. | **ಪ್ರಧಾನ ವಿತ್ತೀಯ ಏರಿಳಿತಗಳ ಬಗ್ಗೆ ದತ್ತಾಂಶ** | ▸ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಪ್ರತಿವರ್ಷ ರಾಜ್ಯ ಆಯವ್ಯಯದ ಆರ್ಥಿಕ ಮತ್ತು ಸಂಕಲ್ಪ ವರ್ಗೀಕರಣವನ್ನು ಪ್ರಕಟಿಸುತ್ತಿದೆ. ಆರ್ಥಿಕ ಏರಿಳಿತಗಳ ಬಗೆಗಿನ ರಾಷ್ಟ್ರೀಯ ಸಾಂಖ್ಯಿಕ ಆಯೋಗದ ಶಿಫಾರಸ್ಸುಗಳನ್ನು ಹಣಕಾಸು ಮತ್ತು ತೆರಿಗೆ ಹೆಚ್ಚಿಸುವ ಇಲಾಖೆಗಳೂ ಸಹ ಅನುಷ್ಠಾನಗೊಳಿಸುತ್ತಿವೆ. ಅದನ್ನು ಹಣಕಾಸು ಇಲಾಖೆಯ ವೆಬ್‌ಸೈಟ್‌ನಲ್ಲಿ ಸಲ್ಲಿಸಲಾಗುತ್ತದೆ. |
| 6. | **ಉದ್ದಿಮೆಗಳ ವಾರ್ಷಿಕ ಸಮೀಕ್ಷೆ** | ▸ ನಿರ್ದೇಶನಾಲಯವು ಉಳಿದ ಮಾದರಿ ಸಮೀಕ್ಷೆಯಲ್ಲಿ 2010–11 ರಿಂದ ಪಾಲ್ಗೊಳ್ಳುತ್ತಿದೆ.<br>▸ ದತ್ತಾಂಶದ ಸಂಗ್ರಹಣೆ ಮತ್ತು ಸಂಚಯಿತ ಅಂದಾಜುಗಳ ತಯಾರಿಕೆಗಾಗಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯ ಸಹಕಾರದೊಂದಿಗೆ ವೆಬ್ ಅಪ್ಲಿಕೇಶನ್ನು ಸಿದ್ಧಪಡಿಸಿದೆ. ಈ ವೆಬ್ ಅಪ್ಲಿಕೇಶನ್ ಪೂರ್ಣಗೊಂಡಿದ್ದು, ಇಷ್ಟರಲ್ಲೇ ಬಿಡುಗಡೆಯಾಗಲಿದೆ. |
| 7. | **ಔದ್ಯಮಿಕ ಉತ್ಪಾದನೆಯ ಸೂಚ್ಯಂಕ** | ▸ ನಿರ್ದೇಶನಾಲಯವು 2004–05 ಮೂಲ ವರ್ಷವಾಗಿ ಔದ್ಯಮಿಕ ಉತ್ಪಾದನೆಯ ಸೂಚ್ಯಂಕವನ್ನು ಸಿದ್ಧಪಡಿಸುತ್ತಿದೆ ಮತ್ತು ಬಿಡುಗಡೆ ಮಾಡುತ್ತಿದೆ.<br>▸ ಘಟಕಗಳ ಅಸ್ತಿತ್ವವನ್ನು ತಿಳಿಯಲು ಸಮೀಕ್ಷೆಗಳನ್ನು ಕೈಗೊಂಡ ನಂತರ ಸ್ಪಂದನ ಪ್ರಮಾಣವು ಹೆಚ್ಚಾಗಿದೆ.<br>▸ ದತ್ತಾಂಶದ ಸಂಗ್ರಹಣೆ ಮತ್ತು ಸೂಚ್ಯಂಕದ ತಯಾರಿಕೆಗಾಗಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯ ಸಹಕಾರದೊಂದಿಗೆ ವೆಬ್ ಅಪ್ಲಿಕೇಶನ್‌ಗಳನ್ನು ಸಿದ್ಧಪಡಿಸಲಾಗಿದೆ. ಈ ವೆಬ್ ಅಪ್ಲಿಕೇಶನ್ ಪೂರ್ಣಗೊಂಡಿದ್ದು, ಇಷ್ಟರಲ್ಲೆ ಬಿಡುಗಡೆಯಾಗಲಿದೆ. |
| 8. | **ಬೆಳೆ ಕ್ಷೇತ್ರ ಮತ್ತು ಉತ್ಪಾದನಾ ಅಂಕಿ ಅಂಶಗಳು** | ▸ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಪ್ರದೇಶ ಮತ್ತು ಇಳುವರಿಯನ್ನು ಅಂದಾಜಿಸಲು ಮುಖ್ಯವಾದ ಪ್ರದೇಶವಾಗಿದೆ. ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್‌ನೊಂದಿಗೆ ತಾಂತ್ರಿಕ ಪಾಲುದಾರನಾಗಿ, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ತಳಮಟ್ಟದಿಂದ ದತ್ತಾಂಶದ ಹರಿವಿಗಾಗಿ ನೈಜ ಸಮಯ ವೆಬ್ ಅಪ್ಲಿಕೇಶನ್ನು ಅಭಿವೃದ್ಧಿಪಡಿಸಿತು. ಈ ಅಪ್ಲಿಕೇಶನ್ನು ರಾಜ್ಯದ ಅಗತ್ಯತೆಗಳಿಗೆ ಅನುಗುಣವಾಗಿ ಹೊಂದಾಣಿಕೆ ಮಾಡಲಾಗುತ್ತದೆ ಮತ್ತು ದತ್ತಾಂಶವನ್ನು ಪರಿಷ್ಕರಿಸಲು ತಳಮಟ್ಟದ ಕಾರ್ಯಕರ್ತರಿಗೆ ಲ್ಯಾಪ್ ಟಾಪ್‌ಗಳನ್ನು ಒದಗಿಸಲಾಯಿತು.<br>▸ ಬಳಕೆದಾರ ಪ್ರಯೋಜನಕ್ಕಾಗಿ ಆಫ್‌ಲೈನ್ ಮತ್ತು ಆನ್‌ಲೈನ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲಾಯಿತು. |
| 9. | **ಸಗಟು ಮಾರಾಟ ಬೆಲೆ ಸೂಚ್ಯಂಕ** | ▸ ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ಕಾರ್ಯಕ್ರಮದ ಅನುಷ್ಠಾನದ ನಂತರ ಈ ವಿಭಾಗದಲ್ಲಿ ಅಪಾರ ಬದಲಾವಣೆಗಳು ಉಂಟಾಗುತ್ತವೆ. |

| | | |
|---|---|---|
| 10. | **ಗ್ರಾಹಕ ಬೆಲೆ ಸೂಚ್ಯಂಕ** | ▸ ಸಾಪ್ತಾಹಿಕ ಮತ್ತು ಮಾಸಿಕ ಪತ್ರಿಕೆಗಳನ್ನು ನಿಯಮಿತವಾಗಿ ಪ್ರಕಟಿಸಲಾಯಿತು.<br>▸ ತಾಂತ್ರಿಕ ಪಾಲುದಾರನಾದ ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್‌ನ ಸಹಾಯದಿಂದ ನೈಜ ಸಮಯ ದತ್ತಾಂಶ ಕಣಜವನ್ನು ಅಭಿವೃದ್ಧಿ ಪಡಿಸಲಾಯಿತು ಮತ್ತು ಅದನ್ನು ರಾಜ್ಯಾದಾಯ, ಕೈಗಾರಿಕೆಗಳು ಮತ್ತು ಬೆಲೆ ವಿಭಾಗವು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಿದೆ. ಕಾಲಾಂತರವನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ |
| 11. | **ಆರೋಗ್ಯ, ರೋಗ ವ್ಯಾಪನೆ, ಮರಣ ಪ್ರಮಾಣ ಮತ್ತು ಕುಟುಂಬ ಕಲ್ಯಾಣ ಅಂಕಿಅಂಶಗಳು.** | ▸ ರಾಷ್ಟ್ರೀಯ ಗ್ರಾಮೀಣ ಸ್ವಸ್ಥ ಅಭಿಯಾನದ ಅಡಿಯಲ್ಲಿ ಕೇಂದ್ರ ಸರ್ಕಾರವು ಅಭಿವೃದ್ಧಿಪಡಿಸಿದ ದೃಢವಾದ ಅಪ್ಲಿಕೇಶನ್ ಆದ ಆರೋಗ್ಯ ನಿರ್ವಹಣಾ ಮಾಹಿತಿ ವ್ಯವಸ್ಥೆ ಮೂಲಕ ಆರೋಗ್ಯ ಇಲಾಖೆಯ ಅಂಕಿ ಅಂಶಗಳನ್ನು ನಿರ್ವಹಿಸುತ್ತಿದೆ. |
| 12. | **ಶಿಕ್ಷಣ ಮತ್ತು ಸಾಕ್ಷರತೆ ಅಂಕಿ ಅಂಶಗಳು**<br>**ಶೈಕ್ಷಣಿಕ ಸಂಸ್ಥೆಗಳ ಬಗ್ಗೆ ಅಂಕಿಅಂಶಗಳು**<br>**ಶಾಲಾ ದಾಖಲಾತಿ ದತ್ತಾಂಶ** | ▸ ಶಿಕ್ಷಣ ಇಲಾಖೆಯ ಶಿಕ್ಷಣ ನಿರ್ವಹಣಾ ಮಾಹಿತಿ ವ್ಯವಸ್ಥೆ ಮೂಲಕ ಸರ್ವ ಶಿಕ್ಷಾ ಅಭಿಯಾನದ ಅಡಿಯಲ್ಲಿ ತನ್ನ ಅಂಕಿ ಅಂಶಗಳನ್ನು ನಿರ್ವಹಿಸುತ್ತಿದೆ. ಆದ್ದರಿಂದ ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆ ವಿಭಾಗದ ಅಡಿಯಲ್ಲಿ ಈ ಇಲಾಖೆಗೆ ಬಹಳಷ್ಟು ಬೆಂಬಲವನ್ನು ವಿಸ್ತರಿಸಿಲ್ಲ. |
| 13. | **ಕಾರ್ಮಿಕ ಮತ್ತು ಉದ್ಯೋಗ ಅಂಕಿ ಅಂಶಗಳು**<br>**ಕಾರ್ಮಿಕ ಅಂಕಿಅಂಶಗಳು**<br>**ಉದ್ಯೋಗ ಅಂಕಿಅಂಶಗಳು**<br>**ಬಾಲಕಾರ್ಮಿಕ ಅಂಕಿಅಂಶಗಳು** | ▸ ಮಾನವಿಕವಾಗಿ ಮಾಡಿದ ಹಳೆಯ ದತ್ತಾಂಶ ಸಂಗ್ರಹಣ ವಿಧಾನವನ್ನು ಸ್ಥಗಿತಗೊಳಿಸಲಾಯಿತು.<br>▸ ಇಲಾಖೆಯ ಪ್ರಯೋಜನಕ್ಕಾಗಿ ಆನ್‌ಲೈನ್ ಅಪ್ಲಿಕೇಶನ್‌ನ್ನು ಅಭಿವೃದ್ಧಿ ಪಡಿಸಲು ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯನ್ನು ಇಲಾಖೆಯನ್ನು ಬೆಂಬಲಿಸಿತು.<br>▸ ಇ-ಕಾರ್ಮಿಕ್ ಬ್ಯಾನರ್ ಅಡಿಯಲ್ಲಿ ಅಭಿವೃದ್ಧಿಪಡಿಸಿದ ವೆಬ್ ಪೋರ್ಟಲ್‌ನ್ನು ಒಂದು ವರ್ಷದ ಹಿಂದೆಯೆ ಘೋಷಿಸಲಾಯಿತು ಮತ್ತು ಈ ಇಲಾಖೆಯು ದೃಢವಾದ ಸಾಂಖ್ಯಿಕ ವ್ಯವಸ್ಥೆಯನ್ನು ಹೊಂದಿದೆ ಮತ್ತು ಇಲಾಖೆಯು ದೃಢವಾದ ಸಾಂಖ್ಯಿಕ ವ್ಯವಸ್ಥೆಯನ್ನು ಹೊಂದಿಗೆ ಮತ್ತು ಇಲಾಖೆಯ ಬಹಳಷ್ಟು ಚಟುವಟಿಕೆಗಳು ಬಳಕೆದಾರ ಸ್ನೇಹಿಯಾಗಿವೆ. |
| 14. | **ವಸತಿಗಳು** | ▸ ರಾಜೀವ ಗಾಂಧಿ ರೂರಲ್ ಹೌಸಿಂಗ್ ಕಾರ್ಪೋರೇಶನ್, ಕರ್ನಾಟಕ ಹೌಸಿಂಗ್ ಬೋರ್ಡ್, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ-ಇವರು ತಮ್ಮ ಸ್ವಂತದ ಅಪ್ಲಿಕೇಶನ್‌ಗಳನ್ನು ಬಳಸಿ ತಮ್ಮ ಹೌಸಿಂಗ್ ಅಂಕಿ ಅಂಶಗಳನ್ನು ನಿರ್ವಹಿಸುತ್ತಾರೆ. ಆದ್ದರಿಂದ ಅವರಿಗೆ ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯನ್ನುಯಿಂದ ಹೆಚ್ಚಿನ ಬೆಂಬಲವನ್ನು ಒದಗಿಸಿಲ್ಲ. |
| 15ಎ | **ಜನನ ಮತ್ತು ಮರಣ ನೋದಣಿ ಅಂಕಿಅಂಶಗಳು ಮತ್ತು ಜನಸಂಖ್ಯೆ** | ▸ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಾಗರಿಕ ನೋಂದಣಿ, ರಾಷ್ಟ್ರೀಯ ಮಾದರಿ ಸಮೀಕ್ಷೆ, ಸ್ಥಳೀಯ ಸಂಸ್ಥೆಗಳ ಸಾಂಖ್ಯಿಕ ವಿಭಾಗವು ಇ-ಜನ್ಮ ಎಂಬ ಜನನ ಮತ್ತು ಮರಣಗಳನ್ನು ಆನ್‌ಲೈನ್‌ನಲ್ಲಿ ನೊಂದಾಯಿಸುವ ಏಕಮೇವ ಆನ್‌ಲೈನ್ ಅಪ್ಲಿಕೇಶನ್‌ನಿಂದ ಜನನ ಮತ್ತು ಮರಣದ ಅಂಕಿಅಂಶಗಳನ್ನು ನಿರ್ವಹಿಸುತ್ತಿದೆ. ಆನನ ಮತ್ತು ಮರಣದ ಅಂಕಿಅಂಶಗಳನ್ನು ಸುಧಾರಿಸಲು ಎಲ್ಲ ಮಾಧ್ಯಮಗಳ ಮೂಲಕ ಪ್ರಚಾರ ಮಾಡಲಾಗಿದೆ. |
| 15ಬಿ | **ಮದುವೆಯ ನೋದಣಿಯ ಅಂಕಿಅಂಶಗಳು (ನೂತನ)** | ▸ ಮುಖ್ಯ ನೋಂದಣಾಧಿಕಾರಿಯವರ ಕಛೇರಿಯಲ್ಲಿ ತನ್ನ ಸೆಲ್ ಆರಂಭಿಸಲು ಮತ್ತು ಅಂಕಿ ಅಂಶಗಳನ್ನು ಸಂಗ್ರಹಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕ್ರಮ ಕೈಗೊಳ್ಳುತ್ತಿದೆ. |
| 16 | **ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ವಿತರಣೆ ಅಂಕಿಅಂಶಗಳು** | ▸ ಈ ಇಲಾಖೆಯು ಅಂಕಿ-ಅಂಶಗಳ ಸಂಗ್ರಹಣ ಮತ್ತು ಸಂಕಲನದ ಸ್ವಂತದ ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅವು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಒಳಗೊಂಡಿರುವುದಿಲ್ಲ. |

| | | |
|---|---|---|
| 17 | **ಪರಿಸರ ಮತ್ತು ಅರಣ್ಯ ಅಂಕಿಅಂಶಗಳು** | ▸ ಈ ಇಲಾಖೆಯು ಅಂಕಿ–ಅಂಶಗಳ ಸಂಗ್ರಹಣ ಮತ್ತು ಸಂಕಲನದ ಸ್ವಂತದ ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅವು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಒಳಗೊಂಡಿರುವುದಿಲ್ಲ.<br>▸ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಯು ತರಬೇತಿಯನ್ನು ಬೆಂಬಲಿಸುತ್ತದೆ. |
| | **ಅರಣ್ಯ ಅಂಕಿಅಂಶಗಳು** | ▸ ಈ ಇಲಾಖೆಯು ಅಂಕಿ–ಅಂಶಗಳ ಸಂಗ್ರಹಣ ಮತ್ತು ಸಂಕಲನದ ಸ್ವಂತದ ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅವು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಒಳಗೊಂಡಿರುವುದಿಲ್ಲ.<br>▸ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ತರಬೇತಿಯನ್ನು ಬೆಂಬಲಿಸುತ್ತದೆ. |
| | **ನೀರುಪೂರೈಕೆ ಮತ್ತು ನೈರ್ಮಲ್ಯ ಅಂಕಿಅಂಶಗಳು** | ▸ ಈ ಇಲಾಖೆಯು ಅಂಕಿ–ಅಂಶಗಳ ಸಂಗ್ರಹಣ ಮತ್ತು ಸಂಕಲನದ ಸ್ವಂತದ ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅವು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಒಳಗೊಂಡಿರುವುದಿಲ್ಲ.<br>▸ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ತರಬೇತಿಯನ್ನು ಬೆಂಬಲಿಸುತ್ತದೆ. |
| 18 | **ರಾಷ್ಟ್ರೀಯ ಶಾಂಪಲ್ ಸಮೀಕ್ಷಾ ಸಂಸ್ಥೆ ಸಮೀಕ್ಷೆಗಳಲ್ಲಿ ಭಾಗವಹಿಸುವುದು.** | ▸ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ತರಬೇತಿಯನ್ನು ಬೆಂಬಲಿಸುತ್ತದೆ.<br>▸ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಆಶ್ರಯದಡಿಯಲ್ಲಿ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯಂತಹ ಸಾಲುಗಳ ಮೇಲೆ ರಾಜ್ಯ ಮಾದರಿ ಸಮೀಕ್ಷಾ ಸಂಸ್ಥೆಯನ್ನು ಸ್ಥಾಪಿಸಲು ಕರ್ನಾಟಕ ಸರ್ಕಾರವು ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. |
| 19 | **ಸಾರಿಗೆ ಅಂಕಿಅಂಶಗಳು**<br>**ಮೋಟಾರು ವಾಹನ ನೋಂದಣಿ ಅಂಕಿಅಂಶಗಳು**<br>**ರಸ್ತೆ ಅಂಕಿಅಂಶಗಳು**<br>**ವಾಹನದಟ್ಟಣೆ ಅಪಘಾತ**<br>**ಪ್ರಯಾಣಿಕರ ದಟ್ಟಣೆಯ ಅಂಕಿಅಂಶಗಳು** | ▸ ಈ ಇಲಾಖೆಯು ಅಂಕಿ–ಅಂಶಗಳ ಸಂಗ್ರಹಣ ಮತ್ತು ಸಂಕಲನದ ಸ್ವಂತದ ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅವು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಒಳಗೊಂಡಿರುವುದಿಲ್ಲ. |
| 20ಎ | **ಸ್ಥಳೀಯ ಪ್ರದೇಶ ಯೋಜನೆಗಾಗಿ ಅಂಕಿಅಂಶಗಳು** | ▸ ಸ್ಥಳೀಯ ಪ್ರದೇಶಗಳ ಅಂಕಿ ಅಂಶಗಳನ್ನು ಬಲಪಡಿಸಲು ಚಾಲನೆ ನೀಡಲಾಯಿತು. ಸ್ಥಳೀಯ ಪ್ರದೇಶಗಳ ಅಂಕಿಅಂಶಗಳ ಅಗತ್ಯತೆಗಳನ್ನು ಗುರುತಿಸಲಾಯಿತು ಮತ್ತು ಸ್ಥಳೀಯ ಪ್ರದೇಶ ಅಂಕಿಅಂಶಗಳನ್ನು ಸಂಗ್ರಹಿಸಲು ಮಾದರಿಯನ್ನು ವಿನ್ಯಾಸಗೊಳಿಸಲಾಯಿತು ಮತ್ತು ಅದರಂತೆ ಅಂಕಿ ಅಂಶಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಒಪ್ಪಿಸಲಾಯಿತು. |
| 20ಬಿ | **ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ(ನೂತನ)** | ▸ ಯೋಜನಾ ಇಲಾಖೆಯ ಯೋಜನಾ ಮೇಲ್ವಿಚಾರಣೆ ಮತ್ತು ಮಾಹಿತಿ ವಿಭಾಗ ಮತ್ತು ಮೌಲ್ಯ ಮಾಪನ ವಿಭಾಗ (ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ)–ಇವುಗಳು ಈ ಕುರಿತಂತೆ ಕ್ರಮ ಕೈಗೊಂಡಿವೆ ಮತ್ತು ಅದರಂತೆ ರಾಷ್ಟ್ರೀಯ ಕನಿಷ್ಠ ಗುಣಮಟ್ಟಗಳಿಗೆ ಅನುಗುಣವಾಗಿ ವಿಶ್ವಾಸಾರ್ಹ, ನಂಬಲರ್ಹ ಹಾಗೂ ಸಕಾಲಿಕ ದತ್ತಾಂಶವನ್ನು ಒದಗಿಸಲಾಗಿದೆ. |

### 9.1.3 ಮೆ॥ ಡೆಲೊಟ್ಟೆ ಅವರಿಂದ ಮಾಡಲ್ಪಟ್ಟ ಶಿಫಾರಸ್ಸುಗಳ ಬಗ್ಗೆ ತೆಗೆದುಕೊಂಡ ಕ್ರಮಗಳು

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಚಟುವಟಿಕೆಗಳನ್ನು ಮುನ್ನಡೆಸಲು, ಅದರ ಅಧ್ಯಯನವನ್ನು ಮೆ॥ ಡೆಲೊಟ್ಟೆ ರವರಿಗೆ ನಿಯೋಜಿಸಲಾಗಿದ್ದು, ಅದರಲ್ಲಿ ಈ ಕೆಳಗಿನ ವಿಷಯಗಳು ಒಳಗೊಳ್ಳುತ್ತವೆ:

- ಕೃಷಿ ಮತ್ತು ಸಂಬಂಧಿತ ಸೆಕ್ಟರ್ ಅಂಕಿಅಂಶಗಳು.
- ಮಾನವ ಸಂಪನ್ಮೂಲ ಸಂಬಂಧಿತ ಅಂಕಿಅಂಶಗಳು.
- ಪ್ರಾದೇಶಿಕ ಲೆಕ್ಕಪತ್ರಗಳ ಅಂಕಿಅಂಶಗಳು.
- ಮೂಲ ಸೌಕರ್ಯ ಅಂಕಿಅಂಶಗಳು
- ಜಿಲ್ಲಾ ಮತ್ತು ರಾಜ್ಯ ಸಾಂಖ್ಯಿಕ ವ್ಯವಸ್ಥೆಗಳ ಸುಧಾರಣೆ

ಡೆಲೊಟ್ಟೆ ವರದಿಯನ್ನು ಜನವರಿ 2013 ರಲ್ಲಿ ಸಲ್ಲಿಸಲಾಯಿತು. ಈ ಅಧ್ಯಯನವು ರಾಜ್ಯದಲ್ಲಿನ ಅಸ್ತಿತ್ವದಲ್ಲಿರುವ ಸಾಂಖ್ಯಿಕ ವ್ಯವಸ್ಥೆಯ ಸಾಂದರ್ಭಿಕ ಅಧ್ಯಯನ/ ನಿರ್ಧಾರಣೆಯನ್ನು ಮಾಡಿತು. ಅದರಲ್ಲಿ ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯಡಿ ಮತ್ತು 13 ನೇ ಹಣಕಾಸು ಆಯೋಗದ ಅಡಿಯಲ್ಲಿ ಉಂಟಾದ ಸುಧಾರಣೆಗಳೂ ಒಳಗೊಂಡಿದ್ದವು. ಅವು ಸದ್ಯದ ಅಂತರಗಳು ಹಾಗೂ ಆ ಅಂತರಗಳನ್ನು ಕಿರಿದಾಗಿಸುವ ಲಭ್ಯವಿರುವ ಕಾರ್ಯನೀತಿಯುಕ್ತ ಆಯ್ಕೆಗಳನ್ನು ಮತ್ತು ತಾಂತ್ರಿಕ ಹಾಗೂ ಹಣಕಾಸು ತೊಡಕುಗಳನ್ನು ಗುರುತಿಸಿದೆ. ಅವು ರಾಜ್ಯದಲ್ಲಿನ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸಲು 308 ಸಲಹೆಗಳ್ನು ಶಿಫಾರಸ್ಸು ಮಾಡಿದೆ. ಈ ಮೇಲ್ಕಂಡ 5 ವಿಷಯಗಳಿಗೆ ಸಂಬಂಧಿಸಿದ 308 ಶಿಫಾರಸ್ಸುಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಡೆಲೊಟ್ಟೆ ವರದಿಯ ಅನುಷ್ಠಾನದ ಬಗ್ಗೆ ಅವರ ಅಭಿಪ್ರಾಯ ಕೋರಿ ಕಳಿಸಲಾಗಿದೆ, ಒಟ್ಟಿನಲ್ಲಿ ಉದ್ದೇಶಿತ ಶಿಫಾರಸ್ಸುಗಳಲ್ಲಿ ಬಹಳಷ್ಟು ಶಿಫಾರಸ್ಸುಗಳನ್ನು ಸರ್ಕಾರವು ತಾತ್ವಿಕವಾಗಿ ಒಪ್ಪಿಕೊಂಡಿದೆ, ಆದರೆ ಈ ಶಿಫಾರಸ್ಸುಗಳ ಅನುಷ್ಠಾನದ ಬಗ್ಗೆ ಅತ್ಯಂತ ಕಡಿಮೆ ಕ್ರಮಕೈಗೊಳ್ಳಲಾಗಿದೆ. ಸಂಬಂಧಿಸಿದ ಇಲಾಖೆಗಳು ತೆಗೆದುಕೊಂಡ ಕ್ರಮಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಒದಗಿಸಲಾಗುತ್ತದೆ:

**ಕೋಷ್ಟಕ 12: ಮೆ॥ ಡೆಲೊಟ್ಟೆ ಅವರಿಂದ ಮಾಡಲ್ಪಟ್ಟ ಶಿಫಾರಸ್ಸುಗಳ ಬಗ್ಗೆ ತೆಗೆದುಕೊಂಡ ಕ್ರಮಗಳು**

| ಕ್ರ..ಸಂ. | ಶಿಫಾರಸ್ಸುಗಳು | ಇಲಾಖೆಯೊಂದಿಗೆ ಚರ್ಚೆಯಂತೆ ಕ್ರಮ ಕೈಗೊಂಡ ಅಂಶ ಅಂಶ |
|---|---|---|
| ನೋಡಲ್ ಏಜೆನ್ಸಿಯಾಗಿ ಆಇಖ | | |
| 1. | ಸಂಬಂಧಿಸಿದ ಇಲಾಖೆಗಳೊಂದಿಗೆ ಜರುಗಿದ ಚರ್ಚೆಗಳು ಮತ್ತು ಸಭೆಗಳು ಸಂಬಂಧಿಸಿದ ಇಲಾಖೆಗಳೊಂದಿಗೆ ತಮ್ಮ ದತ್ತಾಂಶ ಅಗತ್ಯತೆಗಳನ್ನು ಪೂರೈಸಿಕೊಳ್ಳುವಂತೆ ಶಿಫಾರಸ್ಸು ಮಾಡಿದವು. ರಚಿಸಿದ ಸಂಯೋಜನಾ ಸಮಿತಿಗಳು ಪ್ರತ್ಯೇಕ ಸಂಬಂಧಿಸಿದ ಇಲಾಖೆಗಳೊಂದಿಗೆ ನಿಯತಕಾಲಿಕವಾಗಿ (ಅರ್ಧವಾರ್ಷಿಕ/ವಾರ್ಷಿಕ) ಪರಿಶೀಲನಾ ಸಭೆಗಳನ್ನು ನಡೆಸುವುದನ್ನು ಖಚಿತಪಡಿಸಬೇಕು. | ಸಂಯೋಜನಾ ಸಮೀತಿಯ ರಚನೆಯ ಪೂರ್ಣಗೊಂಡಿದೆ ಮತ್ತು ಸಭೆಯು 2014–15ನೇ ವರ್ಷದಲ್ಲಿ ಆಗಿತ್ತು. ಕಳೆದ 2 ವರ್ಷಗಳಲ್ಲಿ ಯಾವುದೇ ಸಭೆಯನ್ನು ನಡೆಸಲಾಗಿಲ್ಲ. |
| 2. | ಸಂಬಂಧಿಸಿದ ಜಂಟಿ ನಿರ್ದೇಶಕರ ಅಡಿಯಲ್ಲಿನ ಸಂಯೋಜನಾ | ಸಂಯೋಜನಾ ಸಮಿತಿಯ ರಚನೆಯು |

| | | |
|---|---|---|
| | ಸಮಿತಿಗಳು– ದತ್ತಾಂಶ ಸಂಗ್ರಹಣೆಗಾಗಿ ವಿವಿಧ ಸಂಬಂಧಿಸಿದ ಇಲಾಖೆಗಳಿಂದ ಅಳವಡಿಸಲ್ಪಟ್ಟ ಶೆಡ್ಯೂಲ್‌ನ್ನು–ಮುಂಚಿತವಾಗಿ ಚರ್ಚಿಸಲೇಬೇಕು. ಅದು ದತ್ತಾಂಶ ಸಂಗ್ರಹಣಾ ಕಾರ್ಯಕ್ರಮವನ್ನು ಸುಧಾರಿಸುತ್ತದೆ ಮತ್ತು ಪ್ರಯತ್ನದ ಪುನರಾವರ್ತನೆಯನ್ನು ನಿವಾರಿಸುತ್ತದೆ ಮತ್ತು ಅಗತ್ಯವಿರುವ ದತ್ತಾಂಶ ಸೆಟ್‌ನ ಸಂಗ್ರಹಣೆಯಲ್ಲಿ ಸಹಾಯಮಾಡುತ್ತದೆ. | ಪೂರ್ಣಗೊಂಡಿದೆ ಮತ್ತು ಕೊನೆಯ ಸಭೆಯನ್ನು ಎಲ್ಲ ಇಲಾಖೆಗಳೊಂದಿಗೆ 2014–15 ನೇ ವರ್ಷದಲ್ಲಿ ನಡೆಸಲಾಯಿತು. |
| 3. | ರಾಜ್ಯ ಸಾಂಖ್ಯಿಕ ವ್ಯವಸ್ಥೆಯ ಪ್ರಮುಖ ನ್ಯೂನ್ಯತೆಯೆಂದರೆ– ಸಂಗ್ರಹಿಸಿದ ದತ್ತಾಂಶವನ್ನು ಅಪರೂಪವಾಗಿ ವಿಮರ್ಶಿಸಲಾಗುತ್ತದೆ. ಈ ಕೊರತೆಯನ್ನು ಹೇಳಬೇಕಾಗಿದೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಹಾಗೂ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ವರದಿಗಳನ್ನು ವೈಜ್ಞಾನಿಕವಾಗಿ ಹಾಗೂ ವಸ್ತುನಿಷ್ಠವಾಗಿ ಪ್ರಕಟಿಸಲು ದತ್ತಾಂಶ ವಿಶ್ಲೇಷಣೆಯಲ್ಲಿ ತರಬೇತಿ ನೀಡಬೇಕು. | ಅದನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ತರಬೇತಿ ನೀತಿಯಲ್ಲಿ ಹೇಳಲಾಗುತ್ತದೆ. |
| 4. | ಮುಖ್ಯ ಇಲಾಖೆಗಳಲ್ಲಿ ಒಂದು–ಬಾರಿ ಆಚರಣೆಯಂತೆ, ಸೂಕ್ತ ಸಾಂಖ್ಯಿಕ ವಿಶ್ಲೇಷಣೆ ಹೊಂದಿದ ಬಾಹ್ಯ ತಜ್ಞರ ಮೂಲಕ ಇಲಾಖಾ ಸಾಂಖ್ಯಿಕ ಪ್ರಕಟಣೆಗಳ ವಿನ್ಯಾಸ ಮತ್ತು ಅಭಿವೃದ್ಧಿಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಸಂಯೋಜಿಸಬಹುದು ಮತ್ತು ಅನುದಾನ ನೀಡಬಹುದಾಗಿದೆ ಮತ್ತು ಅವರನ್ನು ಸಾರ್ವಜನಿಕರಿಗೆ ಲಭ್ಯವಾಗಿಸಬಹುದು. ಈ ವಿಶ್ಲೇಷಿತ ವರದಿಯನ್ನು ಇಲಾಖೆಗಳು ಮುಂದೆ ವಾರ್ಷಿಕ ಪರಿಷ್ಕರಣೆಗಾಗಿ ಮಾದರಿಯಾಗಿ ಉಪಯೋಗಿಸಬಹುದು. | ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ವಿಶ್ಲೇಷಿತ ವರದಿಯನ್ನು ಪ್ರಕಟಿಸುವುದಕ್ಕಾಗಿ ಎಲ್ಲ ಇಲಾಖೆಗಳನ್ನು ಸಂಪರ್ಕಿಸಿತ್ತು. ಅದುವರೆಗೆ ಯಾವುದೇ ಪ್ರಸ್ತಾವನೆ ಮತ್ತು ಪ್ರಕಟಣೆಯನ್ನು ಇಲಾಖೆಯಿಂದ ಪಡೆದಿಲ್ಲ. |
| 5. | ಪ್ರಶ್ನಾವಳಿಗಳು ಮತ್ತು ದತ್ತಾಂಶ ಸಂಗ್ರಹಣೆಯ ವಿನ್ಯಾಸವನ್ನು ಸುಧಾರಿಸುವುದಕ್ಕಾಗಿ ಬಳಕೆದಾರ–ನಿರ್ಮಾಪಕ ಸಭೆಗಳನ್ನು ನಡೆಸಲು ಸಂಬಂಧಿಸಿದ ಇಲಾಖೆಗಳಿಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಸಹಾಯ ಮಾಡಬೇಕು. ತನ್ನ ನೋಡಲ್ ಏಜೆನ್ಸಿ ಸಭೆಗಳಲ್ಲಿ ಅಕಾಡೆಮಿ ಸದಸ್ಯರನ್ನು ಒಳಪಡಿಸುವುದರಿಂದ, ಅದರಲ್ಲಿ 'ಅಸೋಸಿಯೇಶನ್ ಆಫ್ ರಿಸರ್ಚ್ ಆಫಿಸಿಯಲ್ಸ್", ವಿಶ್ಲೇಷಕರು ಮತ್ತು ನೀತಿ ಯೋಜಕರಿಗೆ ಇನ್ನಷ್ಟು ಖಚಿತಪಡಿಸಬೇಕು. | ದತ್ತಾಂಶ ಸಂಗ್ರಹಣ, ಸಮೀಕ್ಷೆಯ ಫಲಶೃತಿ, ಫಲಾನುಭವಿಗಳ ಉದ್ದೇಶವನ್ನು ಪರಿಗಣಿಸಿ ಪ್ರಶ್ನಾವಳಿಗಳು ಮತ್ತು ಶೆಡ್ಯೂಲ್‌ಗಳನ್ನು ತಯಾರಿಸಲಾಗಿದೆ. ಆದ್ದರಿಂದ ವಿಷಯ ತಜ್ಞರಿಂದ ಸಲಹೆ ಪಡೆದು ಶೆಡ್ಯೂಲ್‌ಗಳ ವಿನ್ಯಾಸಕ್ಕೆ ಬಹಳಷ್ಟು ಒತ್ತು ನೀಡಲಾಗಿದೆ. ಉದಾಹರಣೆಗಳು: 'ಮಡಿಲು ಯೋಜನೆ', 'ಕ್ಷೀರಭಾಗ್ಯ' ಮತ್ತು 'ಅನ್ನಭಾಗ್ಯ' ಯೋಜನೆ. |
| 6. | ರಾಜ್ಯದಲ್ಲಿನ ಸಾಂಖ್ಯಿಕ ವಾತಾವರಣಕ್ಕೆ ಪ್ರಸ್ತುತವಾದ ವಿಷಯಗಳನ್ನು ಸಾದರಪಡಿಸುವ ಲಘು ವಿಷಯಾಧಾರಿತ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ವರ್ಷದಲ್ಲಿ ಎರಡು ಬಾರಿ ಮುಖ್ಯ ಬಳಕೆದಾರರನ್ನು ಆಹ್ವಾನಿಸುವುದರಿಂದ ಸರಳ ಆರಂಭ ಮಾಡಬಹುದು. ದತ್ತಾಂಶ ಬಳಕೆದಾರರನ್ನು ತಲುಪಲು ಗಮನದ ಅಗತ್ಯವಿದೆ. ಬಳಕೆದಾರರೊಂದಿಗೆ ಆತ್ಮೀಯ ಸಂಬಂಧಗಳನ್ನು ಏರ್ಪಡಿಸಲು ಸಹಾಯ ಮಾಡಲು ಮುಖ್ಯ ದತ್ತಾಂಶ | ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಮತ್ತು ಹೆಚ್ಚಿನ ಮಾರ್ಗದರ್ಶನಕ್ಕಾಗಿ ಪರಿಶೀಲಿಸ ಲಾಗುವುದು |

| | | |
|---|---|---|
| | ಬಳಕೆದಾರರನ್ನು ಆಹ್ವಾನಿಸಿ ಸಣ್ಣ ವಿಚಾರ ಸಂಕಿರಣಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಆಯೋಜಿಸಬಹುದು; ಅವರ ಪ್ರತಿಕ್ರಿಯೆ ಪಡೆಯಬಹುದು ಮತ್ತು ಭವಿಷ್ಯದಲ್ಲಿ ಅವರ ಸಹಯೋಗವನ್ನು ಸಂಯೋಜಿಸಲು ಸಹಾಯ ಮಾಡಬಹುದು. | |
| 7. | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಎಲ್ಲ ಇಲಾಖೆಗಳು ವಾರ್ಷಿಕ ಆಡಳಿತ ವರದಿಗಳನ್ನು ಸಂಗ್ರಹಿಸುವ, ಗಣಕೀಕರಿಸುವ ದಾಖಲೆಗಳನ್ನಿಡುವ ಸಂಪರ್ಕ ಏಜೆನ್ಸಿಯಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು ನೇಮಕಮಾಡಬಹುದು. ಅದರಿಂದಾಗಿ ಅಂತಹ ವರದಿಗಳು ಪ್ರತಿಯೊಬ್ಬರಿಗೂ ಲಭ್ಯವಾಗುತ್ತವೆ.' | ಕ್ರಮವನ್ನು ಕೈಗೊಳ್ಳಲಾಗಿದೆ ಮತ್ತು ಈ ಕುರಿತಾಗಿ ಸರ್ಕಾರಿ ಆದೇಶವನ್ನು ನೀಡಲಾಗಿದೆ. |
| 8. | ಕರ್ನಾಟಕದ ಸಾಂಖ್ಯಿಕ ಸಂಗ್ರಹದ ವ್ಯಾಪ್ತಿಯನ್ನು ಹೆಚ್ಚಿಸುತ್ತ ಇನ್ನಷ್ಟು ವಿವರವಾದ ಸಾಂಖ್ಯಿಕ ವಿಮರ್ಶೆ ಮತ್ತು ಲಿಖಿತ ವರದಿಗಳನ್ನು ಒಳಗೊಳ್ಳಲಿಕ್ಕೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಪರಿಗಣಿಸಬಹುದು. ರಾಜ್ಯದಲ್ಲಿ ಸಂಕಲ್ಪಿತ ಅಭಿವೃದ್ಧಿ ಯೋಜನೆಗೆ ಅನುವಾಗಲು ಮಾನವ ಅಭಿವೃದ್ಧಿ ಸೂಚ್ಯಂಕ/ಸಂಯೋಜಿತ ಅಭಿವೃದ್ಧಿ ಸೂಚ್ಯಂಕದಂತಹ ಜಿಲ್ಲಾ/ ತಾಲೂಕು ಮಟ್ಟದ ಸೂಚ್ಯಂಕಗಳ ನಿಯತಕಾಲಿಕ ಪರಿಷ್ಕರಣೆಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಸಿದ್ಧಪಡಿಸಲೇಬೇಕು. | ಕ್ರಮವನ್ನು ಕೈಗೊಳ್ಳಲಾಗಿದೆ. ನಂಜುಂಡಪ್ಪ ಸಮಿತಿ ವರದಿಯ 35 ಸಂಯೋಜಿತ ಸಮಗ್ರ ಅಭಿವೃದ್ಧಿ ಸೂಚ್ಯಂಕ ತಿಳಿಸಲು ನಿಯತಾಂಕಗಳನ್ನು ಜಿಲ್ಲೆಯಲ್ಲಿ ಸೇರಿಸಲಾಗಿದೆ. |
| 9. | ಸಾಮಾಜಿಕ–ಆರ್ಥಿಕ ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಪ್ರಸಕ್ತ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಗಳ ಸುತ್ತುಗಳೊಂದಿಗೆ ರಾಜ್ಯಗಳೊಂದಿಗೆ ರಾಜ್ಯ ಮಟ್ಟದ ರಾಷ್ಟ್ರೀಯ ಮಾದರಿ ಸಮೀಕ್ಷಾ ವರದಿಗಳನ್ನು ಶೀಘ್ರವಾಗಿ ಪ್ರಕಟಿಸುವುದಾಗಿ ಸಹ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಖಚಿತಪಡಿಸಬೇಕು. | ಜಂಟಿ ನಿರ್ದೇಶಕರು, ನಾಗರಿಕ ನೋಂದಣಿ, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಗಳ ಅಂಕಿಅಂಶಗಳ ವಿಭಾಗ ಉತ್ತರ ನೀಡಬಹುದು. |
| 10. | ವಿವಿಧ ಇಲಾಖೆಗಳಲ್ಲಿ ಪ್ರಮಾಣೀಕರಣ ತರುವ ಉದ್ದೇಶಕ್ಕಾಗಿ ಸಾಂಖ್ಯಿಕ ಪದಗಳು, ಪರಿಕಲ್ಪನೆ ಮತ್ತು ವ್ಯಾಖ್ಯೆಗಳ ಪದಕೋಶವನ್ನು ಪ್ರಕಟಿಸಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಒಂದು–ಬಾರಿ ಆಚರಣೆಯನ್ನು ಕೈಗೊಳ್ಳಬಹುದು. ಆ ಪದಕೋಶವನ್ನು ವೆಬ್‌ಸೈಟ್‌ನಲ್ಲಿ ಸಾಧ್ಯವಾಗಿಸಬೇಕು. ಅದನ್ನು ಕಾಲಕಾಲಕ್ಕೆ ಪರಿಷ್ಕರಿಸಬೇಕು. | ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಮತ್ತು ಹೆಚ್ಚಿನ ಮಾರ್ಗದರ್ಶನಕ್ಕಾಗಿ ಪರಿಶೀಲಿಸಲಾಗುವುದು |
| 11. | ಅಂಕಿಅಂಶಗಳ ಸಂಗ್ರಹಣ ಅಧಿನಿಯಮ, 2008 ಮತ್ತು ಅಂಕಿಅಂಶಗಳ ಸಂಗ್ರಹಣ ನಿಯಮಗಳು, 2011 ರ ಉಪಬಂಧಗಳ ಬಗ್ಗೆ ವಿವಿಧ ಮಟ್ಟಗಳ ಸ್ಕ್ಯಾನಿಂಗ್ ಇಲಾಖೆಗಳಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಕಾರ್ಯಾಗಾರ ಶ್ರೇಣಿಗಳನ್ನು ಏರ್ಪಡಿಸಬೇಕು | ಈ ಶಿಫಾರಸ್ಸನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ತರಬೇತಿ ನೀತಿಯಲ್ಲಿ ಹೇಳಲಾಗುತ್ತದೆ. |
| 12. | ಈ ಕ್ಷೇತ್ರದಲ್ಲಿ ತಿಳುವಳಿಕೆ ಮತ್ತು ಬಳಕೆಯ ಆಳವನ್ನು ಹೆಚ್ಚಿಸಲು | ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಮತ್ತು |

| | | |
|---|---|---|
| | ಕೇಂದ್ರೀಯ ಸಾಂಖ್ಯಿಕ ಸಂಸ್ಥೆ / ಭಾರತೀಯ ಕೃಷಿ ಅಂಕಿಅಂಶ ಸಂಶೋಧನಾ ಸಂಸ್ಥೆಯಿಂದ ಪೂರೈಸಲ್ಪಟ್ಟ 'ಸಣ್ಣ ಕ್ಷೇತ್ರ ಅಂದಾಜು' ವಿಧಾನಗಳನ್ನು ಅನುಸರಿಸಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಸಮೀಕ್ಷಾ ದತ್ತಾಂಶ ಉಪಯೋಗಿಸಿಕೊಂಡು ಪ್ರತಿವರ್ಷ ಕನಿಷ್ಠ ಎರಡು ಪ್ರಾಯೋಗಿಕ ಅಧ್ಯಯನಗಳನ್ನು ಆರಂಭಿಸಲು ಆಇಖ ರಾಜ್ಯ ಕೃಷಿ ವಿಶ್ವವಿದ್ಯಾಲಯ, ಭಾರತೀಯ ಸಾಂಖ್ಯಿಕ ಸಂಸ್ಥೆ ಇತ್ಯಾದಿಗಳನ್ನು ಒಳಗೊಳ್ಳಬೇಕು. | ಹೆಚ್ಚಿನ ಮಾರ್ಗದರ್ಶನಕ್ಕಾಗಿ ಪರಿಶೀಲಿಸಲಾಗುವುದು |
| 13. | ಹೌಸಿಂಗ್,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ, ಸಾರಿಗೆ ಇತ್ಯಾದಿ ವಿವಿಧ ಸಂಬಂಧಿಸಿದ ಇಲಾಖೆಗಳಿಗಾಗಿ ಶಿಫಾರಸ್ಸು ಮಾಡಲ್ಪಟ್ಟ ವಿಶ್ಲೇಷಿತ ವರದಿಗಳಿಗಾಗಿ ಮಾದರಿಗಳನ್ನು ವಿನ್ಯಾಸಗೊಳಿಸುವ ಕಾರ್ಯವನ್ನು ಕೈಗೊಳ್ಳಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಸೂಕ್ತ ಏಜೆನ್ಸಿಗಳನ್ನು ನಿಯೋಜಿಸಬಹುದು | ಯಾವುದೇ ಕ್ರಮವನ್ನು ಜರುಗಿಸಿಲ್ಲ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಪರಿಶೀಲಿಸಲಾಗುವುದು. |
| **ಸುಧಾರಿಸುತ್ತಿರುವ ಸಾಂಖ್ಯಿಕ ವಾತಾವರಣ** | | |
| 1 | ರಾಜ್ಯದಲ್ಲಿ ಸಾಂಖ್ಯಿಕ ವಾತಾವರಣವನ್ನು ಸುಧಾರಿಸುವುದಕ್ಕಾಗಿ, ರಾಜ್ಯದಲ್ಲಿನ ಎಲ್ಲ ದತ್ತಾಂಶದ ಸಂಗ್ರಹವಾಗಬೇಕು ಮತ್ತು ಯೋಜನಾ ನಿರ್ಮಾತೃಗಳು, ಸಂಶೋಧಕರು, ಶೈಕ್ಷಣಿಕ ಸಂಸ್ಥೆಗಳು ಮತ್ತು ನಾಗರಿಕ ಸಮಾಜದ ಸದಸ್ಯರ ಉಪಯೋಗಕ್ಕಾಗಿ 'ದತ್ತಾಂಶ ಬ್ಯಾಂಕ್'ನ್ನು ಹೊಂದಿರಬೇಕು. | ಯಾವುದೇ ಕ್ರಮವನ್ನು ಜರುಗಿಸಿಲ್ಲ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಪರಿಶೀಲಿಸಲಾಗುವುದು. |
| 2 | ಭವಿಷ್ಯದಲ್ಲಿ ಸರಿಪಡಿಸಬಹುದಾದ ಯಾವುದೇ ಅಚಿತರವನ್ನು ಗುರ್ತಿಸುವುದರೊಂದಿಗೆ ದಾಖಲೆ ಸೂಚಕಗಳು, ವಸ್ತುವಿಷಯ, ಅವಧಿ, ರೀತಿ ಮತ್ತು ಹೊಣೆಗಾರಿಕೆಯನ್ನು ಗುರುತಿಸಲಿಕ್ಕೆ ತನ್ನ ಸದ್ಯದ ಪ್ರಕಟಣೆಗಳನ್ನು ಪರಿಶೀಲಿಸಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಒಂದು ಆಚರಣೆಯನ್ನು ಕೈಗೊಳ್ಳಲೇಬೇಕು. (ಉದಾ: ಮಾನವ ಅಭಿವೃದ್ಧಿ ಸೂಚ್ಯಂಕ ಅಂದಾಜುಗಳಿಗಾಗಿ ಅಗತ್ಯವಿರುವ ಶಾಲಾ ಶಿಕ್ಷಣದ ಸರಾಸರಿ ವರ್ಷಗಳು, ಶಾಲಾ ಶಿಕ್ಷಣದ ನಿರೀಕ್ಷಿತ ವರ್ಷಗಳು–ಇಂತಹ ದಾಖಲೆ ಸೂಚಕಗಳನ್ನು ಸದ್ಯಕ್ಕೆ ಲೆಕ್ಕಾಚಾರ ಮಾಡುತ್ತಿಲ್ಲ) ಅಲ್ಲದೆ, ಮಹತ್ವದ ದಾಖಲೆ ಸೂಚಕಗಳಾದ ಮಾನವ ಅಭಿವೃದ್ಧಿ ಸೂಚ್ಯಂಕ ನಿರ್ಧಾರಣೆಗಾಗಿ ಅಗತ್ಯವಿರುವ ಜೀವಿತಾವಧಿ, ಆಸ್ಪತ್ರೆ ಪ್ರಮಾಣಿತ ಮರಣ ಅನುಪಾತ, ತಾಯಿಯ ಮರಣ ಅನುಪಾತ, ಒಟ್ಟು ಫಲವತ್ತತೆ ದರ ಮತ್ತು ಜೀವನ ಗುಣಮಟ್ಟ– ಇವುಗಳನ್ನು ಸದ್ಯದ ದತ್ತಾಂಶ ಸೆಟ್‌ನ್ನು ವಿಶ್ಲೇಷಿಸುವುದರಿಂದ ಸೃಷ್ಟಿಸಬಹುದಾಗಿದೆ. | ಯಾವುದೇ ಕ್ರಮವನ್ನು ಜರುಗಿಸಿಲ್ಲ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಪರಿಶೀಲಿಸಲಾಗುವುದು. |
| 3 | ತಳಮಟ್ಟದಲ್ಲಿ ದತ್ತಾಂಶ ಸಂಗ್ರಹಣೆಯನ್ನು ಬಲಪಡಿಸಲು, ಸದ್ಯದ 107 ತಾಲೂಕಾ ಯೋಜನಾ ಘಟಕಗಳನ್ನು ಬಲಪಡಿಸಬೇಕು ಮತ್ತು | ಸರ್ಕಾರೀ ಮಟ್ಟದಲ್ಲಿ ಕ್ರಮ ಜರುಗಿಸಬೇಕು. |

| | | |
|---|---|---|
| | ಇನ್ನುಳಿದ 69 ತಾಲೂಕುಗಳಲ್ಲಿ ಸೂಕ್ತ ಮೂಲ ಸೌಕರ್ಯದೊಂದಿಗೆ ಮತ್ತು ಇನ್ನುಳಿದ 69 ತಾಲೂಕುಗಳಲ್ಲಿ ಸೂಕ್ತ ಮೂಲ ಸೌಕರ್ಯದೊಂದಿಗೆ ಘಟಕಗಳನ್ನು ನಿರ್ಮಿಸಬೇಕು. | |
| 4 | ವಿಶೇಷ ದತ್ತಾಂಶ ಪ್ರಸಾರ ಅಗತ್ಯತೆಗಳನ್ನು ಪೂರೈಸಲು ರಾಷ್ಟ್ರೀಯ ಪ್ರಯತ್ನಗಳೊಂದಿಗೆ DES ನ ದತ್ತಾಂಶ ಪ್ರಸಾರವನ್ನು ಮುಖ್ಯ ವಾಹಿನಿಗೆ ತರಲಾಗುವಂತೆ, ಅನುಕೂಲಕರ ಪ್ರಮಾಣಕ್ಕೆ ಐಎಂಎಫ್‌ನ ವಿಶೇಷ ದತ್ತಾಂಶ ಪ್ರಸಾರ ವ್ಯವಸ್ಥೆಯ ವಿಶಿಷ್ಟತೆಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ದೀರ್ಘಾವಧಿಯಲ್ಲಿ ಅನುಸರಿಸಬೇಕು ಮತ್ತು ಜಾರಿಗೆ ತರಬೇಕು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಹಾಗೂ ಸಂಬಂಧಿಸಿದ ಇಲಾಖೆಗಳ ಎಲ್ಲ ಎ ಮತ್ತು ಬಿ ಗ್ರೂಪ್ ಸಿಬ್ಬಂದಿಗಾಗಿ ವಿಶೇಷ ದತ್ತಾಂಶ ಪ್ರಸಾರ ಕುರಿತು 2 ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಬೇಕು.<br>• ದತ್ತಾಂಶ ಗುಣಮಟ್ಟವನ್ನು ಸುಧಾರಿಸಲು ವಿಶೇಷ ದತ್ತಾಂಶ ಪ್ರಸಾರವನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಅನುಸರಿಸಲೇಬೇಕು ಮತ್ತು ಅಂಕಿಅಂಶಗಳನ್ನು ತಯಾರಿಸುವಲ್ಲಿ ಉಪಯೋಗಿಸಿದ ಮೂಲಾಂಶಗಳೊಂದಿಗೆ ಸಾಂಖ್ಯಿಕ ವಿಧಿವಿಧಾನದ ಬಗ್ಗೆ ಡಾಕ್ಯೂಮೆಂಟೇಶನ್‌ನ್ನು ಪ್ರಸಾರ ಮಾಡಬೇಕು.<br>• ವಿಶೇಷ ದತ್ತಾಂಶ ಪ್ರಸಾರ ಅನ್ವಯ, ಎಲ್ಲ ಬಳಕೆದಾರರಿಗೆ ದತ್ತಾಂಶ ಸಮಗ್ರತೆಯನ್ನು ಖಚಿತಪಡಿಸಲು, ಅಂಕಿಅಂಶಗಳನ್ನು ತಯಾರಿಸಿಸುವ ಮತ್ತು ಪ್ರಸಾರ ಮಾಡುವ ನಿಯಮ ಮತ್ತು ಷರತ್ತುಗಳನ್ನು ತಾನು ಪ್ರಕಟಿಸುತ್ತದೆ, ಬಿಡುಗಡೆಗಿಂತ ಮೊದಲು ಆಂತರಿಕ ಸರ್ಕಾರ ಮತ್ತು ದತ್ತಾಂಶಕ್ಕೆ ಬಾಹ್ಯ ಪ್ರವೇಶವನ್ನು ಗುರುತಿಸುತ್ತದೆ; ಸಾಂಖ್ಯಿಕ ಪ್ರಸಾರ ಇತ್ಯಾದಿ ಇದ್ದಾಗ ಇಲಾಖಾ ಸಹಭಾಗಿತ್ವವನ್ನು ಗುರುತಿಸುತ್ತದೆ; ಇತ್ಯಾದಿ. | ಯಾವುದೇ ಕ್ರಮವನ್ನು ಜರುಗಿಸಿಲ್ಲ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಪರಿಶೀಲಿಸಲಾಗುವುದು.<br>ಯಾವುದೇ ಕ್ರಮವನ್ನು ಜರುಗಿಸಿಲ್ಲ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಪರಿಶೀಲಿಸಲಾಗುವುದು.<br>ಯಾವುದೇ ಕ್ರಮವನ್ನು ಜರುಗಿಸಿಲ್ಲ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಪರಿಶೀಲಿಸಲಾಗುವುದು. |
| 5 | ಎಲ್ಲ ಬಳಕೆದಾರರಿಗೆ ಏಕಕಾಲಕ್ಕೆ ದಿನಾಂಕದ ಬಿಡುಗಡೆಯ ಜೊತೆಗೆ ಅಂದಾಜು ಬಿಡುಗಡೆ ದಿನಾಂಕದ ಕನಿಷ್ಟ ಮೂರು ತಿಂಗಳ ಮುಂಚೆ ನೋಟೀಸು ನೀಡಿ ಮುಂಗಡ ಬಿಡುಗಡೆ ಕ್ಯಾಲೆಂಡರ್‌ನ್ನು ಪ್ರಸಾರ ಮಾಡುವುದರಿಂದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಎಲ್ಲ ಬಳಕೆದಾರರಿಗೆ ದತ್ತಾಂಶದ ಪ್ರವೇಶವನ್ನು ಸುಧಾರಿಸಬಹುದು. ಒಮ್ಮೆ ಪ್ರಕಟಣೆಯು ಲಭ್ಯವಾದರೆ, ಅದರ ಸಾರಾಂಶ/ಮುಖ್ಯಾಂಶಗಳನ್ನು ವ್ಯಾಪಕ ವೀಕ್ಷಕರಿಗೆ ತಲುಪಲು ಅನುವಾಗುವ ಉದ್ದೇಶದಿಂದ ಅದನ್ನು ಮಾಧ್ಯಮಕ್ಕೆ ಬಿಡುಗಡೆ ಮಾಡಬಹುದು. | ಕಾಮಗಾರಿಯು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯುತ್ತಿದ್ದಂತೆಯೆ, ದತ್ತಾಂಶವನ್ನು ಸರ್ಕಾರದ ಅಧಿಕೃತ ವೆಬ್ ಸೈಟ್ www.des.kar.nic.in ಇದಕ್ಕೆ ಸಂಪರ್ಕಿಸಿದರೆ ಸಾರ್ವಜನಿಕರಿಗೆ ಲಭ್ಯವಾಗಿಸಲಾಗುವುದು. |
| 6 | ಬಳಕೆದಾರರಿಗೆ ಸೂಚ್ಯಂಕಗಳ ಮತ್ತು ಪ್ರಕಟಣೆಗಳ ಆರಂಭ/ ಮುಕ್ತಾಯದ ಬಗ್ಗೆ ಮುಂಚಿತವಾಗಿ ಅಧಿಸೂಚಿಸಲೇಬೇಕು ಮತ್ತು ಪರ್ಯಾಯಗಳ ಬಗ್ಗೆ ಮಾರ್ಗದರ್ಶನ ನೀಡಬೇಕು. | ಸಲಹೆಯನ್ನು ಸ್ವೀಕರಿಸಲಾಗಿದೆ ಮತ್ತು ಈ ಕುರಿತಂತೆ ಕ್ರಮವನ್ನು ಕೈಗೊಳ್ಳಲಾಗುವುದು. |

| | | |
|---|---|---|
| 7 | ಐಎಂಎಫ್‌ರವರ ದತ್ತಾಂಶ ಗುಣಮಟ್ಟ ನಿರ್ಧಾರಣ ಚೌಕಟ್ಟು ಅನುಸರಿಸುವುದರಿಂದ; ಮೂಲ ದತ್ತಾಂಶವನ್ನು ವ್ಯಾಪಕ ದತ್ತಾಂಶ ಸಂಗ್ರಹಣ ಕಾರ್ಯಕ್ರಮಗಳಿಂದ ಪಡೆಯಲಾಗುತ್ತದೆ ಮತ್ತು ಪ್ರತಿಕ್ರಯಿಸದ ದೋಷ, ಮಾದರಿ ಮತ್ತು ಮಾದರಿಯೇತರ ದೋಷ, ಸಾಂಖ್ಯಿಕ ನ್ಯೂನತೆಗಳ ರೂಪದಲ್ಲಿ ಮಧ್ಯಂತರ ದತ್ತಾಂಶದ ನಿರ್ಧಾರಣೆ ಮತ್ತು ಸಿಂಧುತ್ವ–ಇವುಗಳನ್ನು ಒಳಗೊಳ್ಳುವುದಕ್ಕಾಗಿ ಮೂಲ ದತ್ತಾಂಶದ ನಿರಂತರ ನಿರ್ಧಾರಣೆ ಮಾಡಲಾಗುತ್ತಿದೆ ಎಂದು ಖಚಿತ ಪಡಿಸುವುದರಿಂದ ಮತ್ತು ನಿಯತ ಕಾಲಿಕವಾಗಿ ಮತ್ತು ಸಕಾಲಿಕವಾಗಿ ವಿಶೇಷ ದತ್ತಾಂಶ ಪ್ರಸರಣ ಮಾನದಂಡಗಳನ್ನು ಅನುಸರಿಸಲಾಗುತ್ತದೆ ಎಂದು ಖಚಿತಪಡಿಸುವುದರಿಂದ– ಅಂಕಿಅಂಶಗಳ ಗುಣಮಟ್ಟವನ್ನು ಸಹ ಸುಧಾರಿಸ ಬಹುದು. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಸಂಬಂಧಿಸಿದ ಇಲಾಖೆಗಳ ಎಲ್ಲ ಗ್ರೂಪ್ ಎ ಮತ್ತು ಗ್ರೂಪ್ ಬಿ ಸಿಬ್ಬಂದಿಗಳಿಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಬಗ್ಗೆ 2 ದಿನಗಳ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಬೇಕು. | ಈ ಸಲಹೆಯು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ತರಬೇತಿ ನೀತಿಯ ಭಾಗವಾಗಿದೆ. |
| 8 | ಸರ್ಕಾರ, ಖಾಸಗಿ ಮತ್ತು ನಾಗರಿಕ ಸಮಾಜದ ವಲಯಗಳಲ್ಲಿನ ವಿವಿಧ ಮಟ್ಟಗಳಲ್ಲಿನ ಉನ್ನತ ಮಟ್ಟದ ಯೋಜನಾ ನಿರ್ಮಾತೃಗಳು, ದತ್ತಾಂಶ ವಿಶ್ಲೇಷಕರು, ದತ್ತಾಂಶ ನಿರ್ಮಾತೃಗಳು ಮತ್ತು ಬಳಕೆದಾರರ ಸಂವೇದನೆಗಾಗಿ ಸಾಂಖ್ಯಿಕ ಸಮರ್ಥಕ ಚಟುವಟಿಕೆಗಳನ್ನು (ಬಳಕೆದಾರರು, ಅಕಾಡೆಮಿ ಸದಸ್ಯರು, ನೀತಿ ನಿರೂಪಕರು, ಹಿರಿಯ ಆಡಳಿತಗಾರರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಿಬ್ಬಂದಿ–ಇವರೊಂದಿಗೆ ವಿಚಾರ ಸಂಕಿರಣಗಳನ್ನು, ಕಾರ್ಯಾಗಾರಗಳನ್ನು ಏರ್ಪಡಿಸುವುದು) ಕೈಗೊಳ್ಳಲೇಬೇಕು. ಇವುಗಳಲ್ಲಿ–ಪ್ರಾಸಂಗಿಕ ವಿವಾದಾಂಶಗಳನ್ನು ಮತ್ತು ಆಡಳಿತದಲ್ಲಿ ಅಂಕಿ ಅಂಶಗಳ ಪಾತ್ರ ಮತ್ತು ಮಹತ್ವ–ಇವುಗಳನ್ನು ಒಳಗೊಳ್ಳಬೇಕು ಮತ್ತು ಅಂಕಿಅಂಶಗಳು ರಾಜ್ಯದಲ್ಲಿನ ಯೋಜನೆ, ನಿರ್ಣಯ ಕೈಗೊಳ್ಳುವಿಕೆ, ಮೇಲ್ವಿಚಾರಣೆ ಮಾಡುವುದು, ಮೌಲ್ಯ ಮಾಪನ ಮತ್ತು ಉತ್ತಮ ವ್ಯವಸ್ಥಾಪನೆ ಇವುಗಳಿದ್ದು ಅದರ ಫಲಿತಾಂಶವಾಗಬೇಕು. | ಭಾರತ ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳುವ ಅಗತ್ಯವಿದೆ. |
| **ಸಾಂಖ್ಯಿಕ ಶಾಸನ** | | |
| 1 | ಕಾರ್ಯದರ್ಶಿಗಳಿಗೆ, ವಿಭಾಗೀಯ ಮುಖ್ಯಸ್ಥರಿಗೆ ಹಾಗೂ ಅಕಾಡೆಮಿ ಸದಸ್ಯರಿಗೆ–ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳನ್ನು ಹಾಗೂ ಅದರ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ನಿರೀಕ್ಷಿತ ಪಾತ್ರದ ಬಗ್ಗೆ–ತಿಳಿಸಲು ಅವರಿಗಾಗಿ ಕಾರ್ಯಾಗಾರವನ್ನು ಆಯೋಜಿಸಬೇಕು. ಅಂಕಿ ಅಂಶಗಳ ಅಧಿನಿಯಮ ಮತ್ತು ನಿಯಮಗಳ ಪರಿಣಾಮಕಾರಿ ಅನುಷ್ಠಾನದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಗ್ರೂಪ್ ಎ ಮತ್ತು ಗ್ರೂಪ್ ಬಿ ಸಿಬ್ಬಂದಿಗೂ ಸಹ ತರಬೇತಿ ನೀಡಬೇಕು. ಅಂಕಿಅಂಶಗಳ | ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮ & ನಿಯಮಗಳು–ಕರ್ನಾಟಕ ಎಲ್ಲ ಸರ್ಕಾರಿ ಕಛೇರಿಗಳಿಗೆ ಸರ್ಕಾರಿ ಆದೇಶಗಳನ್ನು ಹೊರಡಿಸಲಾಗಿದೆ. |

| | | |
|---|---|---|
| | ಸಂಗ್ರಹಣ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲು ಮತ್ತು ಏರ್ಪಡಿಸಲು ಆಇಖ ತನ್ನ ಸ್ವಂತದ ಸಿಬ್ಬಂದಿಯನ್ನು ಉಪಯೋಗಿಸಬಹುದು ಅಥವಾ ಸೂಕ್ತ ತರಬೇತಿ ಸಂಸ್ಥೆಯನ್ನು ನಿಯೋಜಿಸಬೇಕು. | |
| 2 | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಉದ್ದೇಶಿತ ಸಾಂಸ್ಥಿಕ ರಚನೆಯಲ್ಲಿ, ರಾಜ್ಯ ಮಟ್ಟದಲ್ಲಿ ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮ, 2008 ಮತ್ತು ಅಂಕಿ ಅಂಶಗಳ ಸಂಗ್ರಹಣ ನಿಯಮಗಳು, 2011–ಇವುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಂಯೋಜನೆಯ ಕಾರ್ಯಭಾರವನ್ನು ಸೂಕ್ತ ಸರ್ಕಾರಿ ಆದೇಶವನ್ನು ನೀಡುವುದರಿಂದ ನೋಡಲ್ ಅಧಿಕಾರಿಯಾಗಿ ನೇಮಕವಾದ ಜಂಟಿ ನಿರ್ದೇಶಕನನ್ನು ಒಳಗೊಂಡ ಉದ್ದೇಶಿತ ಆಡಳಿತ ಮತ್ತು ಸಂಯೋಜನಾ ವಿಭಾಗ, ಆಡಳಿತ ಮತ್ತು ಸಂಯೋಜನಾ ವಿಭಾಗಕ್ಕೆ ನೀಡಬಹುದು. | ಸಲಹೆಯನ್ನು ಸ್ವೀಕರಿಸಲಾಗಿದೆ. |
| 3 | ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮ ಮತ್ತು ನಿಯಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಲು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳಿಗೆ ಹೆಚ್ಚಿನ ಕಾರ್ಯಭಾರ ನಿಯೋಜಿಸಬಹುದು. ಈ ಅಧಿಕಾರಿಗಳು ಅಂಕಿಅಂಶಗಳ ಸಂಗ್ರಹಣ ಕಾರ್ಯದ ಪುನರಾವರ್ತನೆಯನ್ನು ತಪ್ಪಿಸಲು ಉದ್ದೇಶಿತ ಆಡಳಿತ ಮತ್ತು ಸಂಯೋಜನೆ ವಿಭಾಗದೊಂದಿಗೆ ಸಂಯೋಜಿಸುವರು. | ಸಲಹೆಯನ್ನು ಸ್ವೀಕರಿಸಲಾಗಿದೆ. |
| 4 | ವಿಶ್ವಸಂಸ್ಥೆಯ ಅಧಿಕೃತ ಅಂಕಿಅಂಶಗಳ ಮೂಲಭೂತ ತತ್ವಗಳೊಂದಿಗೆ ರಚಿತವಾದ ಅಧಿಕೃತ ಅಂಕಿಅಂಶಗಳ ಔಪಚಾರಿಕ ಆಚರಣೆ ಸಂಹಿತೆಯು–ರಾಜ್ಯ ಮತ್ತು ಉಪ–ರಾಜ್ಯ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸಲು ಅಗತ್ಯವಾಗಿದೆ. ರಾಜ್ಯವು ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸಲು ಅಗತ್ಯವಾಗಿದೆ. ರಾಜ್ಯವು ಸಾಂಖ್ಯಿಕ ನೀತಿಯನ್ನು ಪ್ರಕಟಿಸಬೇಕು. ಅಂದರೆ ಯುಕೆ ಅಂಕಿ ಅಂಶಗಳ ಪ್ರಾಧಿಕಾರದ ಅಧಿಕೃತ ಅಂಕಿಅಂಶಗಳಿಗಾಗಿ ಆಚರಣೆ ಸಂಹಿತೆಯೊಂದಿಗೆ ಕರ್ನಾಟಕ ರಾಜ್ಯದ ಅಧಿಕೃತ ಅಂಕಿ ಅಂಶಗಳಿಗಾಗಿ ಆಚರಣೆ ಸಂಹಿತೆ & ಸಾಂಖ್ಯಿಕ ಆಚರಣೆ ಮಾರ್ಗಸೂಚಿಗಳ ಸಂಹಿತೆ ಮತ್ತು ರಾಷ್ಟ್ರೀಯ ಸಾಂಖ್ಯಿಕ ಆಯೋಗದಿಂದ ರೂಪಿಸಲ್ಪಟ್ಟ ಸಾಂಖ್ಯಿಕ ಚಟುವಟಿಕೆಗಳ ಹೊರಗುತ್ತಿಗೆ. | ದತ್ತಾಂಶ ಸಂಗ್ರಹಣೆಯ ಸದ್ಯದ ವ್ಯವಸ್ಥೆ ಮತ್ತು ಭವಿಷ್ಯದ ಸಂಗ್ರಹಣಾ ರೀತಿ–ಇವುಗಳಬಗ್ಗೆ ಆಳವಾಗಿ ಅಧ್ಯಯನ 'ಮಾಡಲು ಅಧಿಕೃತ ಅಂಕಿಅಂಶಗಳಿಗಾಗಿ ಆಚರಣೆಯ ಸಂಹಿತೆಗಾಗಿ ಸಮೀತಿಯ ಅಗತ್ಯವಿದೆ. |
| ಮಾನವ ಸಂಪನ್ಮೂಲ | | |
| 1. | ಸದ್ಯದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿರ್ದೇಶಕ | ಭಾರತ ಸರ್ಕಾರದ ಮಟ್ಟದಲ್ಲಿ ಕ್ರಮವನ್ನು |

| | | |
|---|---|---|
| | ಹುದ್ದೆಯನ್ನು ಮಹಾ–ನಿರ್ದೇಶಕನ ಶ್ರೇಣಿಗೆ (ಸರ್ಕಾರದ ಕಾರ್ಯದರ್ಶಿ ಮಟ್ಟದ ಹುದ್ದೆಗೆ ಸಮನಾದ (ಶ್ರೇಣಿಗೆ) ಮೇಲ್ದರ್ಜೆಗೇರಿಸುವ ಓಖಿ ರವರ ಶಿಫಾರಸ್ಸನ್ನು ಅನುಷ್ಠಾನಗೊಳಿಸಬೇಕು. ಇವು ಆಇಖವರಿಂದ ಮಾಡಲ್ಪಟ್ಟ ಕಾರ್ಯದ ದೃಶ್ಯತೆ, ಔನ್ನತ್ಯ ಹಾಗೂ ಪರಿಣಾಮವನ್ನು ಹೆಚ್ಚಿಸುತ್ತದೆ. | ಆರಂಭಿಸಲಾಗಿದೆ. |
| 2. | ಮುಖ್ಯ ಕಾರ್ಯದರ್ಶಿಗೆ ವರದಿ ಮಾಡುವ ಮಹಾ–ನಿರ್ದೇಶಕನೊಂದಿಗೆ ಯೋಜನಾ, ಕಾರ್ಯಕ್ರಮ ಮೇಲ್ವಿಚಾರಣೆ ಮತ್ತು ಅಂಕಿ ಅಂಶಗಳು ಇಲಾಖೆಯಲ್ಲಿ ನಿರ್ದೇಶನಾಲಯವಾಗಿ ಆಇಖ ಮುಂದುವರಿಯಬಹುದು. | ಸಲಹೆಯನ್ನು ಸ್ವೀಕರಿಸಲಾಗಿದೆ |
| 3. | ▸ ಹೊಣೆಗಾರಿಕೆಗಳೊಂದಿಗೆ, ಉತ್ತಮ ಸಮತೋಲನ, ಕಾರ್ಯ ವಿತರಣೆ, ಕಾರ್ಯಭಾರದ ಏಕರೂಪತೆ, ಹೆಚ್ಚಿನ ಉತ್ತರದಾಯಿತ್ವ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಒಳಗೆ ಕಾರ್ಯಭಾರದ ನಿಖರತೆ ಇವುಗಳ ಬಗ್ಗೆ ಖಚಿತಪಡಿಸಲು ಆಇಖನ ವಿಭಾಗಗಳನ್ನು ಮರುಸಂಘಟನೆ ಮಾಡಬೇಕೆಂದು ಶಿಫಾರಸ್ಸು ಮಾಡಲಾಗುತ್ತದೆ. ನೂತನವಾಗಿ ರಚಿಸಿದ ಈ ಪ್ರತಿಯೊಂದು ಸಾಂಖ್ಯಿಕ ವಿಭಾಗಗಳ ಅಡಿಯಲ್ಲಿ ಸಂಬಂಧಿಸಿದ ಇಲಾಖೆಗಳೊಂದಿಗೆ ಅಗತ್ಯವಿರುವ ಅಧಿಕ ಸಂಯೋಜನೆಯ ಅಗತ್ಯತೆಯನ್ನು ಪರಿಗಣಿಸಿ, ಈ ಪ್ರತಿಯೊಂದು ವಿಭಾಗಗಳಿಗೆ ನಿರ್ದೇಶಕ ಮಟ್ಟದ ಸಿಬ್ಬಂದಿಯ ನೇತೃತ್ವ ಇರಬೇಕೆಂದು ಪ್ರಸ್ತಾಪಿಸಲಾಗುತ್ತದೆ. ಆ ವಿಭಾಗಗಳ ಪ್ರಸ್ತಾವನೆಗಳು ಹೀಗಿವೆ: | ಸರ್ಕಾರದ ಮಟ್ಟದಲ್ಲಿ ಕ್ರಮ ಆರಂಭಿಸಬೇಕಾಗಿದೆ.<br>----- |
| | ▸ **ಕೃಷಿ ಅಂಕಿಅಂಶಗಳ ವಿಭಾಗ:** ಕೃಷಿ ಅಂಶಗಳು ಬೆಳೆ ವಿಮಾ ಯೋಜನೆ ಮತ್ತು ಕೃಷಿ ಗಣತಿ ಈ ವಿಭಾಗಗಳನ್ನು ವಿಲೀನಗೊಳಿಸಿ ಎಲ್ಲ ಕೃಷಿ ಅಂಕಿ ಅಂಶ ಸಂಬಂಧಿತ ಪ್ರದೇಶಗಳ ಉಸ್ತುವಾರಿ ವಹಿಸಿಕೊಂಡು ಈ ವಿಭಾಗ ಕಾರ್ಯ ನಿರ್ವಹಿಸುವುದು. ಕೃಷಿ ಅಂಕಿ ಅಂಶಗಳು ನಿರ್ದೇಶಕರು ಈ ವಿಭಾಗಕ್ಕೆ ಮುಖ್ಯಸ್ಥರಾಗುವರು. | ----- |
| | ▸ **ಪ್ರಾದೇಶಿಕ ಲೆಕ್ಕ ಪತ್ರಗಳ ವಿಭಾಗ:** ಈ ವಿಭಾಗವು ಉದ್ದಿಮೆಗಳು, ಸೇವೆಗಳು, ಬೆಲೆಗಳು ಮತ್ತು ರಾಜ್ಯ ಆದಾಯ, ಬಂಡವಾಳ ನಿರ್ಮಾಣ & ಸ್ಥಳೀಯ ಸಂಸ್ಥೆಗಳ ಲೆಕ್ಕ ಪತ್ರಗಳು–ಇವುಗಳ ಉಸ್ತುವಾರಿ ವಹಿಸುವುದು ವಿಶೇಷ ಅಭಿವೃದ್ಧಿ ಕಾರ್ಯಕ್ರಮ, ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮ, ಒಟ್ಟು ದೇಶೀಯ ಬಂಡವಾಳ ರಚನೆ, ಸಗಟು ಬೆಲೆ ಸೂಚ್ಯಂಕ, ಗ್ರಾಹಕ ಬೆಲೆ ಸೂಚ್ಯಂಕ, ಗ್ರಾಮೀಣ ಮತ್ತು ನಗರ ಚಿಲ್ಲರೆಬೆಲೆಸೂಚ್ಯಂಕಇತ್ಯಾದಿಗಳ ಅಂದಾಜುಗಳ ತಯಾರಿಕೆಯಲ್ಲಿ ಒಳಗೊಳ್ಳುವ ಕಾರ್ಯದ ಸಂಕೀರ್ಣತೆಯಿಂದ ಮತ್ತು ಏಕರೂಪತೆಗಳಿಂದಾಗಿ ಈ ಎಲ್ಲ ಕಾರ್ಯಭಾರಗಳನ್ನು 'ಪ್ರಾದೇಶಿಕ ಲೆಕ್ಕ ಪತ್ರಗಳ ವಿಭಾಗ' ದ ಅಡಿಯಲ್ಲಿ ವ್ಯಾಪಕವಾಗಿ | ----- |

| | | |
|---|---|---|
| | ವರ್ಗೀಕರಿಸಬಹುದು. ಈ ವಿಭಾಗಕ್ಕೆ ಪ್ರಾದೇಶಿಕ ಲೆಕ್ಕ ಪತ್ರಗಳ ನಿರ್ದೇಶಕರು ಮುಖ್ಯಸ್ಥರಾಗುವರು.<br><br>▸ **ಗಣತಿ, ಸಮೀಕ್ಷೆಗಳು ಮತ್ತು ಸಂಶೋಧನೆ ವಿಭಾಗ:** ರಾಜ್ಯದಲ್ಲಿನ ಸಾಂಖ್ಯಿಕ ಚಟುವಟಿಕೆಗಳ ಮತ್ತು ಪರಿಸರದ ಸುಧಾರಣೆಗಾಗಿ ಸದ್ಯಕ್ಕೆ ಏಖಙಆಂ ಯಿಂದ ನಿರ್ವಹಿಸಲ್ಪಡುತ್ತಿರುವ ಮುಖ್ಯ ಚಟುವಟಿಕೆಗಳ ಮಾನ್ಯತೆಯಲ್ಲಿ, ಅದರ ಈಗಿನ ಅವಧಿ ಮುಗಿದ ನಂತರ ಏಖಙಆಂ ಅನ್ನು ಆಇಖನಲ್ಲಿನ ಖಾಯಂ ವಿಭಾಗದಂತೆ ಪರಿಗಣಿಸಲು ಶಿಫಾರಸ್ಸು ಮಾಡಲಾಗುತ್ತದೆ. ಅಲ್ಲದೆ ಅಂಕಿ ಅಂಶಗಳ ಗುಣಮಟ್ಟ, ಸಾಂಖ್ಯಿಕ ಪರಿಶೋಧನೆ ಮತ್ತು ಗಣತಿ, ಸಮೀಕ್ಷೆಗಳು, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ ಮತ್ತು ಪಿಟಿಸಿ ಘಟಕ–ಇವುಗಳ ಬಗ್ಗೆ ಖಚಿತಪಡಿಸುವ ಸಮಗ್ರ ಹೊಣೆಗಾರಿಕೆಯೊಂದಿಗೆ ಯೋಜನಾಧಿಕಾರಿ, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಹುದ್ದೆಯನ್ನು ನಿರ್ದೇಶಕ ಮಟ್ಟದ ಹುದ್ದೆಗೆ ಉನ್ನತೀಕರಿಸಲು ಸಹ ಶಿಫಾರಸ್ಸು ಮಾಡಲಾಗುತ್ತದೆ. ಪರಿಸರ ಅಂಕಿಅಂಶಗಳು, ಹವಾಮಾನ ಬದಲಾವಣೆಗೆ ಸಂಬಂಧಿಸಿದ ಅಂಕಿಅಂಶಗಳು–ಇತ್ಯಾದಿ ಅಂಕಿಅಂಶಗಳ ತುರ್ತು ಕ್ಷೇತ್ರಗಳನ್ನು ಈ ವಿಭಾಗದ ಅಡಿಯಲ್ಲಿ ತರಬಹುದು.<br><br>▸ **ನಾಗರೀಕ ನೋಂದಣಿಗಳ ವಿಭಾಗ:** ಈ ವಿಭಾಗವು ಜನನ, ಮರಣ ಮತ್ತು ಮದುವೆಗಳ ಉಸ್ತುವಾರಿಯ ಕಾರ್ಯ ನಿರ್ವಹಿಸುತ್ತದೆ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಅನ್ವಯ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ನಿರ್ದೇಶಕನ ಮಟ್ಟದಲ್ಲಿ ತನ್ನ ಹೊಣೆಗಾರಿಕೆಗಳಿಗೆ ನ್ಯಾಯ ಒದಗಿಸಲು ಸಂಪೂರ್ಣ ಉಸ್ತುವಾರಿ ಹೊಂದುವುದು ಮುಖ್ಯ ನೋಂದಣಿಯೊಂದಿಗೆ, ಮದುವೆಗಳ ನೋಂದಣಿಯ ಹೊಣೆಗಾರಿಕೆಯನ್ನು ಅದರೊಂದಿಗೆ ಸಂಯೋಗಗೊಳಿಸಬಹುದು ಮತ್ತು ಅವೆರಡೂ ವಿಭಾಗಗಳಿಗೂ ಒಟ್ಟಿಗೆ 1 ನಿರ್ದೇಶಕರ ಹುದ್ದೆಯನ್ನು ಸೃಷ್ಟಿಸಬಹುದು.<br><br>▸ **ಆಡಳಿತ ಮತ್ತು ಸಂಯೋಜನೆ ವಿಭಾಗ:** ಉಪನಿರ್ದೇಶಕನನ್ನು ಒಳಗೊಂಡು ಜಂಟಿ ನಿರ್ದೇಶಕರು, ಆಡಳಿತ & ಸಂಯೋಜನೆ ವಿಭಾಗರವರು ಈ ವಿಭಾಗಕ್ಕೆ ಮುಖ್ಯಸ್ಥರಾಗುವರು. ಇಲ್ಲಿ ಆಡಳಿತದ ಉಸ್ತುವಾರಿ ವಹಿಸಲಾಗುವುದು. ವಿವಿಧ ಆಇಖ ವಿಭಾಗಗಳಲ್ಲಿನ ಆಂತರಿಕ ಸಂಯೋಜನೆಗಾಗಿ ಜಂಟಿ ನಿರ್ದೇಶಕರು, ಆಡಳಿತ ಮತ್ತು ಸಂಯೋಜನೆ ವಿಭಾಗರವರು ಹೊಣೆಗಾರರಾಗುವರು.ಈ ವಿಭಾಗದ ಖಅಖಿಸೆಲ್ ಸಹ ಇದ್ದು, ಅವು ಆಇಖ ನ ಕಂಪ್ಯೂಟರ್ ಹಾರ್ಡ್‌ವೇರ್/ಸಾಫ್ಟ್‌ವೇರ್ ಅಗತ್ಯತೆಗಳಿಗೆ ಜವಾಬ್ದಾರನಾಗಿರುತ್ತದೆ.<br><br>▸ **ಕಾನೂನು ಅಧಿಕಾರಿ:** ನ್ಯಾಯಾಲಯಗಳು/ ನ್ಯಾಯಾಧಿಕರಣಗಳಲ್ಲಿನ ಕಾನೂನು ಮತ್ತು ಆಡಳಿತಾತ್ಮಕ ಪ್ರಕರಣಗಳಲ್ಲಿ ಈ ಕಾನೂನು | -----<br><br>-----<br><br>ಈ ಶಿಫಾರಸ್ಸಿನ ಬಗ್ಗೆ ಇನ್ನೂ ಕ್ರಮವನ್ನು ಕೈಗೊಳ್ಳಬೇಕಾಗಿದೆ. |

| | | |
|---|---|---|
| | ಅಧಿಕಾರಿಯು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು ಪ್ರತಿನಿಧಿಸುವುದು, ಕಾನೂನುಗಳು ಮತ್ತು ನಿಯಮಗಳ ಪಾಲನೆಯಲ್ಲಿ ಸಂಯೋಜಿಸುವುದು & ನೆರವಾಗುವುದು ಹಾಗೂ ವಿವಿಧ ಇಲಾಖೆಗಳಿಗೆ ಕಾನೂನು ವಿಷಯಗಳಲ್ಲಿ ಮಾರ್ಗದರ್ಶನ ಮಾಡುವುದು–ಇವರ ಕಾರ್ಯಗಳು. | |
| 4. | ಪ್ರಸ್ತಾಪಿಸಿದ ಇಡೀ ಸಂಘಟನೆಯ ಮರುನಿರ್ಮಾಣವನ್ನು ಗಮನದಲ್ಲಿ ಇಟ್ಟುಕೊಂಡು, ಆಇಖ ಮುಖ್ಯ ಕಛೇರಿಯಲ್ಲಿನ ಈ ಕೆಳಗಿನ ಹುದ್ದೆಗಳನ್ನು ಮಂಜೂರು ಮಾಡುವ/ಮೇಲ್ದರ್ಜೆಗೇರಿಸುವ ಅಗತ್ಯವಿದೆ;<br>▸ ಸದ್ಯದ ನಿರ್ದೇಶಕ ಹುದ್ದೆಯಿಂದ ಮೇಲ್ದರ್ಜೆಗೇರಿಸಿದ ಮತ್ತು ಮುಕ್ತ ನೇಮಕಾತಿ ಪ್ರಕ್ರಿಯೆಯ ಮೂಲ ನೇಮಿಸಲ್ಪಟ್ಟ ಮಹಾ ನಿರ್ದೇಶಕರ ಹುದ್ದೆ 1.<br>▸ 4 ನಿರ್ದೇಶಕರ ಮಟ್ಟದ ಹುದ್ದೆಗಳು :<br>  ▸ ಸದ್ಯದ 2 ಜಂಟಿ ನಿರ್ದೇಶಕರ ಹುದ್ದೆಗಳಿಂದ ನಿರ್ದೇಶಕರ ಮಟ್ಟದ ಹುದ್ದೆಗೆ ಮೇಲ್ದರ್ಜೆ.<br>  ▸ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಯೋಜನಾ ನಿರ್ದೇಶಕರ ಹುದ್ದೆಯಿಂದ ನಿರ್ದೇಶಕರ ಹುದ್ದೆಗೆ ಮೇಲ್ದರ್ಜೆ.<br>  ▸ ನಾಗರಿಕ ನೋಂದಣಿಗಾಗಿ 1 ಹೊಸ ನಿರ್ದೇಶಕರ ಹುದ್ದೆ ಸೃಷ್ಟಿ.<br>▸ ನಿರ್ದೇಶಕ ಮಟ್ಟದ ಹುದ್ದೆಗಳು ಪ್ರತಿ ಎರಡು ವರ್ಷಕ್ಕೊಮ್ಮೆ ಆವರ್ತನವಾಗಬಹುದು. ಹೊಸದಾಗಿ ಮಂಜೂರಾದ ಹುದ್ದೆಗಳನ್ನು ಆಂತರಿಕ ಬಡ್ತಿಗಳ ಮೂಲಕ ಭರ್ತಿ ಮಾಡಬಹುದು. | ಇನ್ನೂ ಕ್ರಮವನ್ನು ಕೈಗೊಳ್ಳಬೇಕಾಗಿದೆ. |
| 5. | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಎಲ್ಲ ಸಮೂಹ, ಎ,ಬಿ,ಸಿ ಮತ್ತು ಡಿ ಸಿಬ್ಬಂದಿ–ತಾಂತ್ರಿಕ ಸಿಬ್ಬಂದಿಯ ವಿವರವಾದ ಸಿಬ್ಬಂದಿ ಅಧ್ಯಯನವನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಕೈಗೊಳ್ಳಬೇಕು ಎಂದು ಕಡ್ಡಾಯವಾಗಿ ಶಿಫಾರಸ್ಸು ಮಾಡಲಾಗುತ್ತದೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಿಬ್ಬಂದಿಯನ್ನು ಸಂಬಂಧಿಸಿದ ಇಲಾಖೆಗಳಿಗೆ ನಿಯೋಜಿಸಲಾಯಿತು. ಅದರಿಂದಾಗಿ ಅಗತ್ಯತೆಗಳೊಂದಿಗೆ ಹೊಂದಿಕೆಯಾಗುವಂತೆ ಆಇಖ ಸಿಬ್ಬಂದಿಯ ಸರಿಯಾದ ಗಾತ್ರ ಹಾಗೂ ಸೂಕ್ತ ಹಂಚಿಕೆಯಲ್ಲಿ ನೆರವಾಗುವುದು, ಅವು ಸದ್ಯದ ಮತ್ತು ಭವಿಷ್ಯದ ಅಗತ್ಯತೆಗಳ ಸರಿಯಾದ ಅಂದಾಜನ್ನು ಒದಗಿಸುವುದು, ವಿವಿಧ ಮಟ್ಟಗಳಲ್ಲಿ ನಿಯೋಜಿತ ಕಾರ್ಯದ ವ್ಯಾಖ್ಯೆಗಳನ್ನು ನಿಗದಿಪಡಿಸುವುದು ಮತ್ತು ಉತ್ತಮತರ ಯೋಜನೆ ಮತ್ತು ನೇಮಕಾತಿಗೆ ಅನುವಾಗುವುದು. ಅಲ್ಲದೆ ಅಧ್ಯಯನದ ಅವಧಿಯಲ್ಲಿ ಲೈನ್ ಇಲಾಖೆಗಳು ಕೋರಿದ ಹೆಚ್ಚುವರಿ ಸಿಬ್ಬಂದಿಗಾಗಿ ಅವು ಕೆಲವು ಅಗತ್ಯತೆಗಳನ್ನು ಸಹ ಸಿಂಧುಗೊಳಿಸುವುವು. | ಇನ್ನೂ ಕ್ರಮವನ್ನು ಕೈಗೊಳ್ಳಬೇಕಾಗಿದೆ. |

| | | |
|---|---|---|
| 6. | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಸಂಬಂಧಿಸಿದ ಲೈನ್ ಇಲಾಖೆಗಳಲ್ಲಿ ಕ್ರಮವಾಗಿ ಅಂದಾಜು ಶೇಕಡಾ 41ರಷ್ಟು ಮತ್ತು ಶೇಕಡಾ 45ರಷ್ಟು ಹುದ್ದೆಗಳು ಖಾಲಿ ಇರುವುದರಿಂದ, ಆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಶಿಫಾರಸ್ಸು ಮಾಡಲಾಗುತ್ತದೆ. ಈ ಮೇಲ್ಕಂಡಂತೆ ಪ್ರಸ್ತಾಪಿಸಿದ ಸಿಬ್ಬಂದಿ ಅಧ್ಯಯನದಲ್ಲಿ ಭವಿಷ್ಯದ ಅಗತ್ಯತೆಗಳಿಂದ ಮಾಹಿತಿ ದತ್ತಾಂಶಗಳನ್ನು ತೆಗೆದುಕೊಂಡು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿಯ ಮತ್ತು ಬಡ್ತಿಯ ಅನುಪಾತವನ್ನು ಸೂಕ್ತವಾಗಿ ತಿದ್ದುಪಡಿ ಮಾಡಬೇಕೆಂದು ಸಲಹೆ ನೀಡಲಾಗುತ್ತದೆ. | ಜಂಟಿ ನಿರ್ದೇಶಕರು, ಆಡಳಿತ ರವರಿಂದ ಇನ್ನೂ ಕ್ರಮವನ್ನು ಕೈಗೊಳ್ಳಬೇಕಾಗಿದೆ. |
| 7. | ಕ್ಷೇತ್ರ ಮಟ್ಟದಲ್ಲಿ ಕಾರ್ಯದ ಭಾರವು ಹೆಚ್ಚಾಗುತ್ತಲಿದೆ ಮತ್ತು ಬದಲಾಗುತ್ತಿರುವ ಸಿಬ್ಬಂದಿ ಮಟ್ಟಗಳಿಂದ ಕೆಲಸಕ್ಕೆ ಪರಿಣಾಮ ಉಂಟಾಗುತ್ತದೆ. ಪ್ರತಿ ಜಿಲ್ಲಾ ಕಛೇರಿಗೆ ಕ್ಷೇತ್ರ ಮಟ್ಟದ ಸಿಬ್ಬಂದಿಗಳ ಕನಿಷ್ಟ ಸಂಖ್ಯೆಯನ್ನು ಆಇಖ ಖಚಿತಪಡಿಸಬೇಕು. ಪ್ರತಿಯೊಂದೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಯಲ್ಲಿ 1ಸಹಾಯಕ ಸಾಂಖ್ಯಿಕ ಅಧಿಕಾರಿ1ಸಾಂಖ್ಯಿಕ ನಿರೀಕ್ಷಕ ಮತ್ತು 1 ಗಣತಿದಾರರು ಇರಲೇಬೇಕು ಮತ್ತು ಅವು ಈ ಮೇಲ್ಕಂಡಂತೆ ಪ್ರಸ್ತಾಪಿಸಿದ ಸಿಬ್ಬಂದಿ ಅಧ್ಯಯನದ ಮೂಲಕ ಸಿಂಧುಗೊಳಿಸಬಹುದು ಮತ್ತು ಮರು ಸಂಘಟಿಸಬಹುದು. | ಜಂಟಿ ನಿರ್ದೇಶಕರು, ಆಡಳಿತ ರವರಿಂದ ಇನ್ನೂ ಕ್ರಮವನ್ನು ಕೈಗೊಳ್ಳಬೇಕಾಗಿದೆ. |
| 8. | ತನ್ನ ಸಾಂಖ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾನವ ಶಕ್ತಿಯ ಕೌಶಲ್ಯ ಮತ್ತು ಅರ್ಹತೆಯನ್ನು ಆಇಖ ಅಳವಡಿಸಬೇಕು.<br>▸ ಎಲ್ಲ ಶ್ರೇಣಿಯ ಸಿಬ್ಬಂದಿಗಾಗಿ ಸಾಮಾನ್ಯ ತರಬೇತಿ ಕಾರ್ಯಕ್ರಮ.<br>▸ ಆಯ್ದ ಸಿಬ್ಬಂದಿಗಾಗಿ ವಿಶಿಷ್ಟ ತರಬೇತಿ ಕಾರ್ಯಕ್ರಮ<br>▸ ತರಬೇತಿ ಸಂಸ್ಥೆಯ ಸ್ಥಾಪನೆ. | 'ತರಬೇತಿ ನೀತಿ' ಅಡಿಯಲ್ಲಿ ಎಲ್ಲ ಶ್ರೇಣಿಯ ಹುದ್ದೆಗಳಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಹಂತ–ಹಂತವಾಗಿ ಕೈಗೊಳ್ಳಲಾಗುತ್ತದೆ. |
| 9. | ವಿಶ್ವಾಸಾರ್ಹ, ನಂಬಲರ್ಹ, ಸಕಾಲಿಕ ದತ್ತಾಂಶವನ್ನು ಒದಗಿಸಲು ಎಲ್ಲಾ ಮಟ್ಟಗಳಲ್ಲಿ ಸಿಬ್ಬಂದಿಯ ಕೌಶಲ್ಯಗಳನ್ನು ಉನ್ನತೀಕರಿಸಲು ಸುವ್ಯವಸ್ಥಿತ ತರಬೇತಿ ಕಾರ್ಯದೊಂದಿಗೆ ಸಮರ್ಪಿತ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವುದು ಅಗತ್ಯವಿದೆ. ಉದ್ದೇಶಿತ 'ಡಾ॥ ವಿ. ಎಸ್. ಆಚಾರ್ಯ ಇನ್ಸ್ಟಿಟ್ಯೂಟ್ ಆಫ್ ಪ್ಲಾನಿಂಗ್ ಅಂಡ್ ಡೆವಲಪ್‌ಮೆಂಟ್' ಸಂಸ್ಥೆಯನ್ನು ರೂ. 44.9 ಕೋಟಿ ಬಂಡವಾಳ ಮೌಲ್ಯದಲ್ಲಿ ಪ್ರಸ್ತಾಪಿಸಲಾಗಿದೆ. ಈ ಸಂಸ್ಥೆಯ ಶಿಕ್ಷಣ & ತರಬೇತಿ, ಸಂಶೋಧನೆ, ದತ್ತಾಂಶ ವಿಶ್ಲೇಷಣೆ, ಮಾಹಿತಿ ಸಂವಹನ ತಂತ್ರಜ್ಞಾನ ಮತ್ತು ಪ್ರಕಾಶನ ವಿಭಾಗ ಮತ್ತು ಆಡಳಿತಕ್ಕಾಗಿ ಪ್ರತ್ಯೇಕ ವಿಭಾಗಗಳನ್ನು ಹೊಂದಿರುವುದು ಮತ್ತು ಆ ಪ್ರತಿಯೊಂದೂ ವಿಭಾಗಕ್ಕೂ ನಿರ್ದೇಶಕನು ಮುಖ್ಯಸ್ಥನಾಗಿರುವನು. | ಸಂಸ್ಥೆಯ ಹೆಸರು 'ಡಾ॥ ವಿ. ಎಸ್. ಆಚಾರ್ಯ ಇನ್ಸ್ಟಿಟ್ಯೂಟ್ ಆಫ್ ಪ್ಲಾನಿಂಗ್ ಅಂಡ್ ಸ್ಟ್ಯಾಟಿಸ್ಟಿಕ್ಸ್' ಆಗಿರಬೇಕು. ಅಲ್ಲಿ ಯೋಜನಾ ಚಟುವಟಿಕೆಗಳಿಗಾಗಿ ಪ್ರತ್ಯೇಕ ವಿಭಾಗಗಳಿರಬೇಕು. |
| 10. | | ಸಲಹೆಗಳು ಇಲಾಖೆಯಿಂದ ಸ್ವೀಕೃತವಾಗಿವೆ. |

| | | |
|---|---|---|
| | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ತನ್ನ ಸ್ವಂತದ ಸಿಬ್ಬಂದಿಯ ಜೊತೆಗೆ ಎಲ್ಲ ಸಂಬಂಧಿಸಿದ ಇಲಾಖೆಗಳಿಗಾಗಿ ಸಾಂಖ್ಯಿಕ ತರಬೇತಿಯನ್ನು ಸಂಯೋಜಿಸುವಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಸಂಪರ್ಕ ಪಾತ್ರವನ್ನು ವಹಿಸಲೇಬೇಕು. ಸಾಂಖ್ಯಿಕ ಜ್ಞಾನಕಣಜವನ್ನು ಬಲಪಡಿಸಲು ವಿವಿಧ ತರಬೇತಿ ಅಗತ್ಯತೆಗಳನ್ನು ಈ ಅಧ್ಯಯನವು ಗುರುತಿಸಿದೆ. ಅದಕ್ಕಾಗಿ, 'ಡಾ॥ ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಪ್ಲಾನಿಂಗ್ ಮತ್ತು ಡೆವಲಪ್‌ಮೆಂಟ್' ಆರಂಭಿಸುವವರೆಗೆ, ತರಬೇತಿ ಅಗತ್ಯತೆಗಳ ನಿರ್ಧಾರಣೆಯನ್ನು ಕೈಗೊಳ್ಳಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ತರಬೇತಿ ಏಜೆನ್ಸಿಗಳನ್ನು ನಿಯೋಜಿಸಬಹುದು ಮತ್ತು ಹೊಂದಿಕೆಯ ತರಬೇತಿ ಸಾಮಗ್ರಿಯನ್ನು ರಚಿಸಬಹುದು ಮತ್ತು ಅವುಗಳನ್ನು ವಿತರಿಸಬಹುದು. | |
| 11. | ತಳಮಟ್ಟದ ಸಿಬ್ಬಂದಿಗಳ ದಕ್ಷತೆಯನ್ನು ಸುಧಾರಿಸಲು & ಅವರಿಂದ ಸಂಗ್ರಹಿಸಲ್ಪಟ್ಟ ಅಂಕಿಅಂಶಗಳ ಗುಣಮಟ್ಟವನ್ನು ಸುಧಾರಿಸಲು, ಸಹಾಯಕ ಸಾಂಖ್ಯಿಕ ಅಧಿಕಾರಿ ಮತ್ತು ಸಾಂಖ್ಯಿಕ ನಿರೀಕ್ಷಕರು ಹಾಗೂ ಗಣತಿದಾರ ಮಟ್ಟಗಳ ಸಾಂಖ್ಯಿಕ ಸಿಬ್ಬಂದಿಗಳನ್ನು ನೇಮಕ ಮಾಡುವುದಕ್ಕಾಗಿ ಮೂಲ ಕಂಪ್ಯೂಟರ್ ಸಾಕ್ಷರತೆಯು ಅಗತ್ಯವಾದ ಪೂರ್ವಾರ್ಹತೆಯಾಗಬೇಕು. | ಜಂಟಿ ನಿರ್ದೇಶಕರು ಆಡಳಿತ, ರವರಿಂದ ಇನ್ನೂ ಕ್ರಮ ಜರುಗಿಸಬೇಕಾಗಿದೆ. |
| 12. | ಸದ್ಯದ ಸಾಂಖ್ಯಿಕ ಸಿಬ್ಬಂದಿಗಳ ಮಟ್ಟಕ್ಕೆ ಸೂಕತವಾಗಬಹುದಾದ ನಿರಂತರ ಪ್ರಮಾಣೀಕರಣ ಕೋರ್ಸುಗಳನ್ನು ನಡೆಸುವುದರ ಮೂಲಕ ಅವರ ತಜ್ಞತೆಯನ್ನು ಸುಧಾರಿಸಬಹುದು. ಅದರಿಂದಾಗಿ ನೌಕರರ ಸದ್ಯದ ಕೌಶಲ್ಯ ಮಟ್ಟವನ್ನು ಸುಧಾರಿಸುವಲ್ಲಿ ನೆರವಾಗುವುದು. ಇದನ್ನು ವಾರ್ಷಿಕ ವಿಶ್ವಾಸಾರ್ಹ ವರದಿಗಳಲ್ಲಿ ವಾರ್ಷಿಕ ಬೆಳೆ ವರದಿ ನಿಯತಾಂಕಗಳಂತೆ ಸೇರ್ಪಡೆ ಮಾಡುವುದನ್ನು ಚಾಲನೆಗೊಳಿಸಲೇಬೇಕು. | ಸಲಹೆಯು ಇಲಾಖೆಯಿಂದ ಸ್ವೀಕೃತವಾಗಿವೆ. |
| **ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ** | | |
| 1. | ಸಿಬ್ಬಂದಿಯ ಕಳಪೆ ಮಾಹಿತಿ ಸಂವಹನ ತಂತ್ರಜ್ಞಾನದ ಸೌಲಭ್ಯಗಳನ್ನು ಸುಧಾರಿಸಲು, ಮೂಲ ಮಾಹಿತಿ ತಂತ್ರಜ್ಞಾನ ಕೌಶಲಗಳಾದ ಸಾಮಾನ್ಯ ಕೋರ್ಸ್ ಕೋರ್ಸ್‌ಗಳಿಗಾಗಿ ಇ–ಆಡಳಿತ ಇಲಾಖೆಯಿಂದ ಪ್ರಸ್ತಾಪಿಸಿದ ತರಬೇತಿ ಸೌಲಭ್ಯಗಳನ್ನು ಆಇಖ ಆರಂಭಿಸಬಹುದು. | ಸಲಹೆಗಳು ಇಲಾಖೆಯಿಂದ ಸ್ವೀಕೃತವಾಗಬೇಕು. |
| 2. | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ ಮಾಹಿತಿ ತಂತ್ರಜ್ಞಾನ ಕೇಂದ್ರದ ಸೆಲ್‌ನ್ನು ನಿರ್ಮಿಸಬೇಕು. ಅದಕ್ಕೆ ಮಾಹಿತಿ ತಂತ್ರಜ್ಞಾನ ವ್ಯವಸ್ಥಾಪಕನು ಮುಖ್ಯಸ್ಥನಾಗಬೇಕು; ಅವರಿಗೆ 2 ಪ್ರೋಗ್ರಾಮರ್‌ಗಳು, ಸಹಾಯಕರಾಗಿರಬೇಕು; ಒಬ್ಬರು ಮುಖ್ಯವಾದ ಸಾಫ್ಟ್‌ವೇರ್ ಅಭಿವೃದ್ಧಿ ತಜ್ಞನಿರಬೇಕು ಮತ್ತು ಒಬ್ಬರು ಸಾಮಾನ್ಯ ವ್ಯವಹಾರ ನೋಂದಣಿಗೆ ಸಂಬಂದಿತ ಚಟುವಟಿಕೆಗಳನ್ನು ನಿರ್ವಹಿಸಬೇಕು. ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಸಂಸ್ಥೆಗೆ ಅಪ್ಲಿಕೇಶನ್‌ಗಳ ಅಭಿವೃದ್ಧಿಗಾಗಿ ಹೊರಗುತ್ತಿಗೆ ನೀಡುತ್ತಿರುವ ಸದ್ಯದ ಸ್ಥಿತಿಯನ್ನು ಮುಂದುವರಿಸಬಹುದು. | ಸಲಹೆಗಳು ಇಲಾಖೆಯಿಂದ ಸ್ವೀಕೃತವಾಗಬೇಕು. |

| | | |
|---|---|---|
| | ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಸಂಸ್ಥೆಯೊಂದಿಗೆ ಹಾಗೂ ಇತರ ಹೊರಗುತ್ತಿಗೆ ಏಜೆನ್ಸಿಗಳೊಂದಿಗಿನ ಸಮಗ್ರ ಸಂಯೋಜನಾ ಹೊಣೆಗಾರಿಕೆಯನ್ನು ಮಾಹಿತಿ ಸಂವಹನ ತಂತ್ರಜ್ಞಾನದ ಸೆಲ್ ನಿಭಾಯಿಸಬೇಕು. | |
| 3. | ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳ ಸ್ಥಿರತೆ ಮತ್ತು ಅಂತರ್ ಕಾರ್ಯನಿರ್ವಹಣೆಯನ್ನು ಖಚಿತಪಡಿಸುವುದಕ್ಕಾಗಿ, ಅಲ್ಲಿನ ಸಾಫ್ಟ್‌ವೇರ್ ಸಮಗ್ರೀಕೃತ ಚೌಕಟ್ಟಿನಲ್ಲಿ ಅಭಿವೃದ್ಧಿ ಪಡಿಸುವಂತಿರಬೇಕು. ಪ್ರತ್ಯೇಕ ಇಲಾಖೆಗಳು ವಿವಿದ ಮಾಡ್ಯೂಲ್‌ಗಳನ್ನು ಅಭಿವೃದ್ಧಿ ಪಡಿಸಬಹುದು. ಆದರೆ ಅವುಗಳು ಸಾಮಾನ್ಯ ವ್ಯಾಖ್ಯೆಗಳು ಗುಣಮಟ್ಟಗಳು ಮತ್ತು ಮಾದರಿಗಳಿಗೆ ಬದ್ಧವಾಗಿರಬೇಕು. ಇ – ಆಡಳಿತ ಇಲಾಖೆಯ ಬೆಂಬಲದೊಂದಿಗೆ ಅಧ್ಯಯನ ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿದೆ. | ಸಲಹೆಗಳು ಇಲಾಖೆಯಿಂದ ಸ್ವೀಕೃತವಾಗಿವೆ. |
| 4. | ಅಭಿವೃದ್ಧಿಪರ ಆಸ್ತಿಗಳಿಗಾಗಿ ಭೌಗೋಳಿಕ ಮಾಹಿತಿ ಪದ್ಧತಿ ಆಧಾರಿತ ಆಸ್ತಿ–ಫಲಾನುಭವಿ ದತ್ತಾಂಶ ಕಣಜವನ್ನು ನಿರ್ಮಿಸುವ ಯೋಜನೆಯನ್ನು ಈಗಾಗಲೇ 5 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿದ್ದು, ಆ ಪ್ರಾಯೋಗಿಕ ಯೋಜನೆಯ ಫಲಿತಾಂಶಗಳನ್ನು ಆಧರಿಸಿ, ಅದನ್ನು ಇಡೀ ರಾಜ್ಯಾದ್ಯಂತ ವಿಸ್ತರಿಸಬಹುದು. ಇವು ನೀತಿ ನಿರೂಪಕರಿಗೆ ಮತ್ತು ಯೋಜಕರಿಗೆ ಅಭಿವೃದ್ಧಿ ಯೋಜನೆಗಳಲ್ಲಿ ದತ್ತಾಂಶವನ್ನು ಉಪಯೋಗಿಸಲು ದತ್ತಾಂಶ ಕಣಜವನ್ನು ನಿರ್ಮಿಸುವುದು. | ----- |
| 5. | ವ್ಯವಹಾರ ಕೌಶಲ್ಯ ಪರಿಹಾರ ಘೋಷಣೆಯು ಆದ್ಯತೆಯದಾಗಬೇಕು. ಅದರಿಂದಾಗಿ ವಿಭಾಗೀಯ ದತ್ತಾಂಶ ಮಾರಾಟಗಳಲ್ಲಿ ಏಕ ದತ್ತಾಂಶ ಸಂಗ್ರಾಹಕ/ದಾಸ್ತಾನು ಘಟಕ ಒದಗುತ್ತದೆ. ಆದರೆ ಅವು ಸದ್ಯಕ್ಕೆ ಲಭ್ಯವಿರುವುದಿಲ್ಲ. ಇವು ಕೇಂದ್ರ ಸ್ಥಾನದಲ್ಲಿ ಲಭ್ಯವಿರುವ ಎಲ್ಲ ದತ್ತಾಂಶಗಳಿಗೆ ಬಳಕೆದಾರರಿಗಾಗಿ ಪ್ರವೇಶ ಒದಗಿಸುವುದು. | ಜಂಟಿ ನಿರ್ದೇಶಕರು, ರಾಜ್ಯಾದಾಯ, ಕೈಗಾರಿಕೆಗಳು ಮತ್ತು ಬೆಲೆ ವಿಭಾಗ ರವರಿಂದ ಇನ್ನೂ ಕ್ರಮ ಜರುಗಿಸಬೇಕಾಗಿದೆ. |
| 6. | ಪ್ರಕೋಪ ಚೇತನ ವ್ಯವಸ್ಥಾಪನೆ ಹಾಗೂ ದತ್ತಾಂಶ ಬ್ಯಾಕ್‌ಅಪ್ ಅವಕಾಶಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ನ ಮಾಹಿತಿ ಸಂವಹನ ತಂತ್ರಜ್ಞಾನ ಪದ್ಧತಿಗಳಲ್ಲಿ ಅಳವಡಿಸಬೇಕು. ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್‌ನ ದತ್ತಾಂಶ ಕೇಂದ್ರದಲ್ಲಿ ನಿರ್ಮಿಸುವ ಅಪ್ಲಿಕೇಶನ್‌ಗಳು ಮತ್ತು ದತ್ತಾಂಶಗಳಿಗಾಗಿ ಇ–ಆಡಳಿತದ ರಾಜ್ಯ ದತ್ತಾಂಶ ಕೇಂದ್ರವನ್ನು ಡಿಆರ್ ಸೈಟ್‌ನಂತೆ ಉಪಯೋಗಿಸಬಹುದು. ವಿಶೇಷ ಅಭಿವೃದ್ಧಿ ಕೋಶದ ಡಿಆರ್ ವ್ಯವಸ್ಥೆಗಳನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ವಿಶೇಷ ಅಭಿವೃದ್ಧಿ ಕೋಶದ ಯು ಅಪ್ಲಿಕೇಶನ್‌ಗಳ ಹಾಸ್ಟಿಂಗ್‌ನ್ನು ವರ್ಗಾಯಿಸುವ ಆಯ್ಕೆಯನ್ನು ಸಹ ಚಾಲನೆಗೊಳಿಸಬಹುದು. | ಸಲಹೆಗಳು ಇಲಾಖೆಯಿಂದ ಸ್ವೀಕೃತವಾಗಿವೆ. |
| 7. | ಈಗ ಹಾರ್ಡ್‌ಡಿಸ್ಕ್‌ಗಳು, ಪೆನ್‌ಡ್ರೈವ್‌ಗಳು ಇತ್ಯಾದಿಗಳಲ್ಲಿ ಸಂಗ್ರಹಿಸಿಡುವ ವಿವಿಧ ಆಇಖ ವಿಭಾಗಗಳಿಂದ ನಿರ್ವಹಿಸಲ್ಪಡುತ್ತಿರುವ ಆಫ್‌ಲೈನ್ ದತ್ತಾಂಶವನ್ನು ಸಂಗ್ರಹಿಸಿಡುವುದಕ್ಕಾಗಿ, ಸರ್ವರ್ ಹಾರ್ಡ್‌ಡಿಸ್ಕ್‌ಗಳ ಬಳಕೆಯನ್ನು ಆರಂಭಿಸಬಹುದು. ಇದರಿಂದಾಗಿ ಡಿಸ್ಕ್‌ಡ್ರೈವ್ ವಿಫಲತೆ, | ಜಂಟಿ ನಿರ್ದೇಶಕರು, ಎಆರ್‌ಸಿ ರವರಿಂದ ಇನ್ನೂ ಕ್ರಮ ಜರುಗಿಸಬೇಕಾಗಿದೆ. |

| | | |
|---|---|---|
| | ಪಾವರ್ ಔಟೇಜ್‌ಗಳು, ವೈರಸ್ ಸೋಂಕು ಮತ್ತು ಇತರ ಬಲಿಷ್ಠ ನೆಟ್‌ವರ್ಕ್ ಪ್ರಕೋಪಗಳು ಇತ್ಯಾದಿ ಅಂಶಗಳು ಮೌಲ್ಯಯುತ ದತ್ತಾಂಶಕ್ಕೆ ಪರಿಣಾಮ ಉಂಟು ಮಾಡುತ್ತಿಲ್ಲ ಎಂಬುದನ್ನು–ಇವು ಖಚಿತಪಡಿಸುವುದು. | |
| 8. | 20 ಪ್ರಮುಖ ಸಾಂಖ್ಯಿಕ ಕ್ಷೇತ್ರಗಳಲ್ಲಿ, ಬಹಳಷ್ಟು ಕ್ಷೇತ್ರಗಳಲ್ಲಿ ಅಭಿವೃದ್ಧಿಗಾಗಿ ಮಾಹಿತಿ ಮತ್ತು ಸಂವಹನ ಅಪ್ಲಿಕೇಶನ್‌ಗಳು ಅಭಿವೃದ್ಧಿಯಾಗಿವೆ ಮತ್ತು ಕೆಲವು ಕ್ಷೇತ್ರಗಳಲ್ಲಿ ಅಭಿವೃದ್ಧಿಯ ಹಂತದಲ್ಲಿವೆ (ಅದರ ಸ್ಥಿತಿಗತಿಯನ್ನು 5.2.1 ವಿಭಾಗದಲ್ಲಿ ಕೊಡಲಾಗಿದೆ). ಇಶೇಷ ಅಭಿವೃದ್ಧಿ ಕಾರ್ಯಕ್ರಮ ಅಂದಾಜುಗಳು, ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮ ಅಂದಾಜುಗಳು, ಬಂಡವಾಳ ನಿರ್ಮಾಣದ ಮತ್ತು ಉಳಿತಾಯದ ಅಂದಾಜುಗಳು, ಅರಣ್ಯದ ಅಂಕಿ ಅಂಶಗಳು ಮತ್ತು ವಿವಾಹಗಳ ನೋಂದಣಿ ಇತ್ಯಾದಿ ಬಾಕಿಯಲ್ಲಿರುವ ಸಾಂಖ್ಯಿಕ ಕ್ಷೇತ್ರಗಳಿಗಾಗಿ ಅಪ್ಲಿಕೇಶನ್‌ಗಳನ್ನು ಅಧಿಕ ಪ್ರಾಶಸ್ತ್ಯದೊಂದಿಗೆ ಪೂರ್ಣಗೊಳಿಸಬೇಕು. | ಜಂಟಿ ನಿರ್ದೇಶಕರು, ರಾಜ್ಯಾದಾಯ, ಕೈಗಾರಿಕೆಗಳು ಮತ್ತು ಬೆಲೆ ವಿಭಾಗ ರವರಿಂದ ಇನ್ನೂ ಕ್ರಮ ಜರುಗಿಸಬೇಕಾದೆ. |
| 9. | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಸಿಬ್ಬಂದಿಗಳಲ್ಲಿ, ಉತ್ತಮತರ ಸಂಯೋಜನೆ ಮತ್ತು ಸಂಪರ್ಕವನ್ನು ಖಚಿತಪಡಿಸಲು, ಸಾಂಖ್ಯಿಕ ಪರೀಕ್ಷಕರಿಗಿಂತ ಮೇಲ್ದರ್ಜೆಯ ಕ್ಷೇತ್ರ ಸಿಬ್ಬಂದಿಗೆ ಕ್ಲೋಸ್ಡ್ ಯೂಜರ್ ಗ್ರೂಪ್ ಸೌಲಭ್ಯವಿರುವ ಮೋಬೈಲ್ ಫೋನ್‌ಗಳನ್ನು ಒದಗಿಸಬೇಕು. ಇದರಿಂದಾಗಿ ಕಡಿಮೆ ವೆಚ್ಚದಲ್ಲಿ ಸಕಾಲಿಕ ಸಂಪರ್ಕ ಸಾಧ್ಯವಾಗುವುದು. | ಜಂಟಿ ನಿರ್ದೇಶಕರು, ಎಅರ್‌ಸಿ ರವರಿಂದ ಇನ್ನೂ ಕ್ರಮ ಜರುಗಿಸಬೇಕಾಗಿದೆ. |
| ಸಾಮಾನ್ಯ ವ್ಯವಹಾರ ರಿಜಿಸ್ಟರ್ | | |
| 1. | ಸಾಮಾನ್ಯ ವ್ಯವಹಾರ ನೋಂದಣಿಯಲ್ಲಿನ ನಮೂದುಗಳ ಆವರ್ತನೆಯನ್ನು ಮಾನವಿಕವಾಗಿ ಗುರುತಿಸುವುದರಿಂದ ದೋಷಗಳು ಉಂಟಾಗುತ್ತವೆ. (ವಿವಿಧ ಮೂಲಗಳಿರುವ ಅದೇ ಸಂಸ್ಥೆ) ಮತ್ತು ಆ ವ್ಯವಸ್ಥೆಯನ್ನು ಯಂತ್ರಚಾಲಿತ ಆವರ್ತನ ವ್ಯವಸ್ಥೆಗೆ ಬದಲಾಯಿಸಬೇಕು. ಇದಕ್ಕಾಗಿ ಏಕರೂಪದ ಸಂಸ್ಥೆಯ ಗುರುತಿಸುವಿಕೆ ಅಗತ್ಯವಿದೆ ಮತ್ತು ಶೀಘ್ರವಾಗಿ ಮಾಡಬೇಕು. | ಸಂಸ್ಥೆಗಳು ತಮ್ಮ ಚಟುವಟಿಕೆಗಳು, ಮಾಲೀಕತ್ವದ ವಿಧ, ಸ್ಥಳ ಇತ್ಯಾದಿ, ಬದಲಾಯಿಸಿದಾಗ, ಆ ಸಂಸ್ಥೆಗಳ ಅಸ್ತಿತ್ವವನ್ನು ಕಳೆದುಕೊಳ್ಳುವುದಿಲ್ಲ ಎಂಬುದನ್ನು ಖಚಿತಪಡಿಸಬೇಕು. |
| 2. | ಏಕರೂಪ ಸಂಸ್ಥಾ ಪರಿಶೀಲಕನಿಗೆ ಸಂಬಂಧಿಸಿದಂತೆ, ನೂತನ ಪರಿಶೀಲಕ ಮಾದರಿಯನ್ನು ನಿರ್ಮಿಸಬೇಕು ಅಥವಾ ಬಹಳಷಟು ಆಡಳಿತಾತ್ಮಕ ದತ್ತಾಂಶ ಕಣಜಗಳಲ್ಲಿ ಇರುವ ಸದ್ಯದ ಪರಿಶೀಲಕವನ್ನು ಏಕರೂಪದ ಪರಿಶೀಲಕ ಎಂದು ತೆಗೆದುಕೊಳ್ಳಬಹುದು. ಸಂಸ್ಥೆಗಳಿಗಾಗಿ ಬಳಕೆದಾರರ ಗುರುತಿಸುವಿಕೆಯ ರಚನೆಯನ್ನು ಪಡೆಯಲು ಸಮಿತಿಯನ್ನು ರಚಿಸಬೇಕು ಮತ್ತು ಅದಕ್ಕೆ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದಿಂದ ಒಪ್ಪಿಗೆ ಪಡೆಯಬಹುದು. ಅನಾವರ್ತನವನ್ನು ಮತ್ತು ವಿವಿಧ ಮೂಲಗಳಿಂದ ಪಡೆದ ದತ್ತಾಂಶವನ್ನು ಆರ್ಥಿಕ ಸಮೀಕ್ಷೆಯ ದತ್ತಾಂಶದೊಂದಿಗೆ ವಿಲೀನಗೊಳಿಸುವುದರಿಂದ, ಅದನ್ನು ಆರ್ಥಿಕ ಗಣತಿಗಿಂತ ಮೊದಲೇ ಅಂತಿಮಗೊಳಿಸಬೇಕು. | ಎಲ್ಲ ತೆರಿಗೆಗಳನ್ನು ಸಂದಾಯಿಸುವುದು ಮತ್ತು ಬ್ಯಾಂಕ್ ಸಾಲಗಳು, ಸಹಾಯಧನಗಳು ಇತ್ಯಾದಿ ಯಾವುದೇ ಸೌಲಭ್ಯಗಳನ್ನು ಪಡೆಯುವ ಉದ್ದೇಶಗಳಿಗಾಗಿ ಏಕರೂಪ ಸಂಸ್ಥಾ ಪರಿಶೀಲಕ ವರದಿಗಾರಿಕೆಯನ್ನು ಕಡ್ಡಾಯಗೊಳಿಸಬೇಕು. |
| 3. | ಆರ್ಥಿಕ ಗಣತಿಯ ಅಂತರ್ ಗಣತಿಯ ವರ್ಷಗಳಲ್ಲಿ ಸಾಮಾನ್ಯ ವ್ಯವಹಾರ ನೋಂದಣಿ ಪರಿಷ್ಕರಣ ಪ್ರಕ್ರಿಯೆಯನ್ನು ವಿನ್ಯಾಸಗೊಳಿಸಬೇಕು ಮತ್ತು | ಅಃಖ ಈ ಕೆಳಗಿನ ಪ್ರಯೋಜನಗಳನ್ನು ಖಚಿತಪಡಿಸಬೇಕು : |

| | | |
|---|---|---|
| | ಅಂತಿಮಗೊಳಿಸಬೇಕು. ಮುಂದುವರಿದ ಪರಿಷ್ಕರಣೆಗಾಗಿ ಸೂಕ್ತವಾದ ಆಡಳಿತಾತ್ಮಕ ಮೂಲಗಳನ್ನು ಗುರ್ತಿಸಬೇಕು. | (i) ಆಡಳಿತಾತ್ಮಕ ಹೊರೆಯನ್ನು ತಗ್ಗಿಸುವುದು.<br>(ii) ನೋಂದಣಿ ವ್ಯವಸ್ಥೆಯಲ್ಲಿ ದಕ್ಷತೆಯನ್ನು ಸುಧಾರಿಸುವುದು.<br>(iii) ಸ್ಪಂದನದ ಹೊರೆಯನ್ನು ತಗ್ಗಿಸುವುದು. |
| 4. | ಮಾಗರಿ ಚೌಕಟ್ಟಿನಂತೆ ಸಾಮಾನ್ಯ ವ್ಯವಹಾರ ನೋಂದಣಿ ನೊಂದಿಗೆ ಪ್ರಾಯೋಗಿಕ ಸಮೀಕ್ಷೆಗಳನ್ನು ಕೈಗೊಳ್ಳಬೇಕು. ಜಿಲ್ಲಾ ಮಟ್ಟಗಳಲ್ಲಿ ಪ್ರಾಯೋಗಿಕ ಆಧಾರದಲ್ಲಿ ಅನುತ್ಪಾದಕ ಉದ್ದಿಮೆಗಳ ಸಮೀಕ್ಷೆ, ಸೇವೆಗಳ ವಲಯದ ಸಮೀಕ್ಷೆ – ಇತ್ಯಾದಿ ಸಮೀಕ್ಷೆಗಳನ್ನು ಆರಂಭಿಸಬಹುದು. ಸಾಮಾನ್ಯ ವ್ಯವಹಾರ ನೋಂದಣಿ ಮುಗಿದ ಕೂಡಲೇ ಆರನೇ ಆರ್ಥಿಕ ಗಣತಿಯನ್ನು ಕಳಿಸಿರಿ. | ಜಂಟಿ ನಿರ್ದೇಶಕರು, ಆರ್ಥಿಕ ಗಣತಿಯವರಿಂದ ಇನ್ನೂ ಕ್ರಮ ಜರುಗಿಸಬೇಕಾಗಿದೆ. |
| 5. | ಆರ್ಥಿಕ ಗಣತಿಗಳು, ಉದ್ದಿಮೆಗಳ ವಾರ್ಷಿಕ ಸಮೀಕ್ಷೆ, ಉದ್ದೇಶಿತ ಅನುತ್ಪಾದಕ ಉದ್ದಿಮೆಗಳ ವಾರ್ಷಿಕ ಸಮೀಕ್ಷೆ – ಇವುಗಳನ್ನು ಕೈಗೊಳ್ಳುವ ತಂಡಗಳ ನಡುವೆ ನಿಕಟ ಸಂಯೋಜನೆ ಇರಬೇಕು. | ಜಂಟಿ ನಿರ್ದೇಶಕರು, ಆರ್ಥಿಕ ಗಣತಿ & ಜಂಟಿ ನಿರ್ದೇಶಕರು, ರಾಜ್ಯ ಆದಾಯ, ಉದ್ದಿಮೆಗಳು ಮತ್ತು ಬೆಲೆಗಳು ವಿಭಾಗ ಕ್ರಮ ಕೈಗೊಳ್ಳಬೇಕಾಗಿದೆ. |
| 6. | ಕೆಲವು ನೋಂದಾಯಿಸುವ ಪ್ರಾಧಿಕಾರಗಳಿಂದ ಪಡೆದ ದತ್ತಾಂಶದಲ್ಲಿ ಸದ್ಯಕ್ಕೆ ಇರುವ ಅಂತರಗಳನ್ನು ಆರ್ಥಿಕ ಗಣತಿಯ ಅವಧಿಯಲ್ಲಿ ಸರಿಪಡಿಸಲಾಗುವುದು. ಸಮೀಕ್ಷೆಯ ಅವಧಿಯಲ್ಲಿ ತಿದ್ದುಪಡಿಗಳನ್ನು ದಾಖಲಿಸುವಂತೆ ಸಂಸ್ಥೆಗಳ ಚಾಲ್ತಿ ವಿವರಗಳನ್ನು ಗಣತಿಕಾರರಿಗೆ ಒದಗಿಸಬೇಕು. | ಜಂಟಿ ನಿರ್ದೇಶಕರು, ಆರ್ಥಿಕ ಗಣತಿ ರವರಿಂದ ಇನ್ನೂ ಕ್ರಮ ಜರುಗಿಸಬೇಕಾಗಿದೆ. |
| 7. | ಅಸಂಘಟಿತ ವಲಯದಲ್ಲಿನ ಸಂಸ್ಥೆಗಳ ಅಧಿಕ ಅನುಪಾತವನ್ನು ಒಳಗೊಳ್ಳುವ ವ್ಯಾಪಾರಿ ಲೈಸನ್ಸ್‌ಗಳ ನೀಡಿಕೆಗಾಗಿ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಮಾನವಿಕ ಕೈಪಿಡಿ ನೋಂದಣಿಯನ್ನು ಅನುಸರಿಸುತ್ತಾರೆ. ಐಅಖಿ ಸಿಸ್ಟಮ್‌ಗಳನ್ನು ನೋಂದಣಿ, ಲೈಸನ್ಸ್‌ಗಳ ನೀಡಿಕೆ ಮತ್ತು ನವೀಕರಣ ಇವುಗಳಿಗಾಗಿ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್‌ಸಂಸ್ಥೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಪದ್ಧತಿಗಳನ್ನು ಅಳವಡಿಸಬೇಕು. ಅಲ್ಲದೆ ಇವು ಚಾಲ್ತಿಯಿರುವ ಸಾಮಾನ್ಯ ವ್ಯವಹಾರ ರಜಿಸ್ಟರ್‌ನ ಪರಿಷ್ಕರಣೆಗೂ ನೆರವಾಗುವುದು. | ಜಂಟಿ ನಿರ್ದೇಶಕರು, ಆರ್ಥಿಕ ಗಣತಿ ರವರಿಂದ ಇನ್ನೂ ಕ್ರಮ ಜರುಗಿಸಬೇಕಾಗಿದೆ. |
| 8. | ಆರ್ಥಿಕ ಗಣತಿಯನ್ನು ಒಳಗೊಂಡಂತೆ ಹಲವು ಉಸ್ತುವಾರಿಗಳನ್ನು ವಹಿಸಿಕೊಂಡಿರುವ ಅಧಿಕಾರಿಗಳನ್ನು ಸಾಮಾನ್ಯ ವ್ಯವಹಾರ ನೋಂದಣಿ ಸೆಲ್‌ಗೆ ನಿಯೋಜಿಸಲಾಗಿದೆ. ಅದರಿಂದಾಗಿ ಆರ್ಥಿಕ ಗಣತಿಯ ಅವಧಿಯಲ್ಲಿ ಈ ಸೆಲ್‌ನ ದೈನಂದಿನ ಕಾರ್ಯಾಚರಣೆಗೆ ಪರಿಣಾಮ ಉಂಟಾಗುತ್ತದೆ. ಅದರಂತೆ, ಸಾಮಾನ್ಯ ವ್ಯವಹಾರ ನೋಂದಣಿ ಸೆಲ್‌ನಲ್ಲಿಯ ಸಿಬ್ಬಂದಿಯನ್ನು ವ್ಯಾಪಕವಾಗಿ ಹೆಚ್ಚಿಸಿ ಅದಕ್ಕಾಗಿಯೆ ಆ ಸಿಬ್ಬಂದಿಯು ಕಾರ್ಯ ನಿರ್ವಹಿಸುವಂತಾಗಬೇಕು. | ಜಂಟಿ ನಿರ್ದೇಶಕರು, ಆರ್ಥಿಕ ಗಣತಿ ರವರಿಂದ ಇನ್ನೂ ಕ್ರಮ ಜರುಗಿಸಬೇಕಾಗಿದೆ. |

| | | |
|---|---|---|
| 9. | ಸಾಮಾನ್ಯ ವ್ಯವಹಾರ ನೋಂದಣಿ ಸೆಲ್‌ನಲ್ಲಿಯ ಮಾಹಿತಿ ಸಂವಹನ ತಂತ್ರಜ್ಞಾನದ ಕಾರ್ಯಗಳನ್ನು ಈಗ ಹೊರಗುತ್ತಿಗೆಯ ಸಿಬ್ಬಂದಿಯವರೇ ನಿರ್ವಹಿಸುತ್ತಿದ್ದಾರೆ (ಒಬ್ಬರು ಮಾಹಿತಿ ತಂತ್ರಜ್ಞಾನ ಸಮಾಲೋಚಕರು ಮತ್ತು 2 ಸಹಾಯಕರು). ಸಾಮಾನ್ಯ ವ್ಯವಹಾರ ನೋಂದಣಿ ಸೆಲ್‌ನೊಳಗೇ ಮಾಹಿತಿ ಸಂವಹನ ತಂತ್ರಜ್ಞಾನ ತಜ್ಞರ ಹುದ್ದೆಯನ್ನು ಸೃಷ್ಟಿಸುವುದರಿಂದ ಸೆಲ್‌ನಲ್ಲಿಯ ಮಾಹಿತಿ ಸಂವಹನ ತಂತ್ರಜ್ಞಾನ ಸಾಮರ್ಥ್ಯಗಳಿಗೆ ಅಗತ್ಯವಿರುವಂತೆ ಸಿಬ್ಬಂದಿಯನ್ನು ಹೆಚ್ಚಿಸಬೇಕು. | ಜಂಟಿ ನಿರ್ದೇಶಕರು, ಆರ್ಥಿಕ ಗಣತಿ ರವರಿಂದ ಇನ್ನೂ ಕ್ರಮ ಜರುಗಿಸಬೇಕಾಗಿದೆ. |

## 9.2 ದತ್ತಾಂಶ ವಿಶ್ಲೇಷಣೆ: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಫಲಶೃತಿ

### 9.2.1 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಸಾಂಖ್ಯಿಕ ಚಟುವಟಿಕೆಗಳ ಬಗ್ಗೆ ದತ್ತಾಂಶ ಸಂಗ್ರಹ

ಸಾಂಖ್ಯಿಕ ಚಟುವಟಿಕೆಗಳಿಗಾಗಿ ದತ್ತಾಂಶ ಸಂಗ್ರಹಣೆಯ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ **ಯ** ಅಡಿಯಲ್ಲಿನ ವಿಧಗಳು ಮಾನವಿಕವಾಗಿದ್ದವು ಮತ್ತು ಲ್ಯಾಪ್‌ಟಾಪ್‌ಗಳ ಮೂಲಕ ಆನ್‌ಲೈನ್ ಆಗಿದ್ದವು. ಈ ಕೆಳಕಂಡ ಚಟುವಟಿಕೆಗಳಿಗಾಗಿ ದತ್ತಾಂಶ ಸಂಗ್ರಹಣೆಯನ್ನು ಲ್ಯಾಪ್‌ಟಾಪ್‌ಗಳ ಉಪಯೋಗದ ಮೂಲಕ ಕೈಗೊಳ್ಳಲಾಯಿತು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಅನುಷ್ಠಾನಗೊಳಿಸಿದ ದತ್ತಾಂಶ ಸಂಗ್ರಹಣ ಕಾರ್ಯಕ್ರಮಗಳಲ್ಲಿ ಕೆಲವನ್ನು ಈ ಕೆಳಗೆ ನಮೂದಿಸಲಾಗುತ್ತೆ.

**ಕೋಷ್ಟಕ 13: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಅನುಷ್ಠಾನಗೊಳಿಸಿದ ದತ್ತಾಂಶ ಸಂಗ್ರಹಣ ಕಾರ್ಯಕ್ರಮಗಳು**

| ಕ್ರ. ಸಂ | ದತ್ತಾಂಶ ಸಂಗ್ರಹಣ ಕಾರ್ಯಕ್ರಮ | ವ್ಯಾಪನೆ | ಪ್ರಾಥಮಿಕ ಕಾರ್ಯಕರ್ತರು | ಪ್ರಾಥಮಿಕ ಕಾರ್ಯಕರ್ತರ ಸಂಖ್ಯೆ | ದತ್ತಾಂಶ ಸಂಗ್ರಹಣ ವಿಧಾನ |
|---|---|---|---|---|---|
| 1. | ಕ್ಷೇತ್ರ ಗಣತಿ | ಗ್ರಾಮವಾರು ಬೆಳೆ ಸಂಗ್ರಹ– 29,000ಗ್ರಾಮಗಳು (ಪ್ರತಿಯೊಂದಕ್ಕೂ ಮೂರು ಋತುಮಾನಗಳು (ಎಲ್ಲಾ ಸಮೀಕ್ಷೆ, ಉಪಸಮೀಕ್ಷೆ ಸಂಖ್ಯೆಗಳ ಬೆಳೆಗಳ ಗಣತಿಯನ್ನು ಆನಂತರ ಕೈಗೊಳ್ಳಲಾಗುವುದು) | ಕಂದಾಯ ಇಲಾಖೆಯ ಗ್ರಾಮಲೆಕ್ಕಿಗರು | 8000 | ಆನ್‌ಲೈನ್ |
| 2. | ಬೆಳೆ ಕಟಾವು ಪ್ರಯೋಗಗಳು | ಎಲ್ಲ ತಾಲೂಕುಗಳು– 1,00,000 ಪ್ರಯೋಗಗಳು (3 ಋತುಮಾನಗಳಲ್ಲೂ ಒಟ್ಟಾಗಿ) | ಕೃಷಿ ಇಲಾಖೆಯ ಕೃಷಿ ಸಹಾಯಕರು/ ಕೃಷಿ ವಿಸ್ತರ್ಣಾಧಿಕಾರಿಗಳು | 2500 | ಆನ್‌ಲೈನ್ |
| | | | ಜಲಾನಯನ ಇಲಾಖೆಯ ಕೃಷಿ ಸಹಾಯಕರು/ ಕೃಷಿ ವಿಸ್ತರ್ಣಾಧಿಕಾರಿಗಳು | 1000 | |
| | | | ಕಂದಾಯ ಇಲಾಖೆಯ ಗ್ರಾಮಲೆಕ್ಕಿಗರು | 8000 | |
| | | | ತೋಟಗಾರಿಕಾ ಇಲಾಖೆಯ ತೋಟಗಾರಿಕಾ ಸಹಾಯಕರು | 500 | |

| | | | | | |
|---|---|---|---|---|---|
| | | | ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು | 5628 | |
| 3. | ರಾಷ್ಟ್ರೀಯ ಮಾದರಿ ಸಮೀಕ್ಷೆಗಳು | ಎಲ್ಲಾ ತಾಲೂಕುಗಳು –325 ಗ್ರಾಮೀಣ ಮಾದರಿಗಳು ಮತ್ತು 325 ನಗರ ಮಾದರಿಗಳು | ಸಾಂಖ್ಯಿಕ ನಿರೀಕ್ಷಕರು | 70 | ಆನ್‌ಲೈನ್ |
| 4. | ಗ್ರಾಹಕ ಬೆಲೆ ಸೂಚ್ಯಂಕ, ಗ್ರಾಮಾಂತರ ಚಿಲ್ಲರೆ ಬೆಲೆ ಸೂಚ್ಯಂಕ ನಗರ ಚಿಲ್ಲರೆ ಬೆಲೆ ಸೂಚ್ಯಂಕ ಇತ್ಯಾದಿಗಳಿಗಾಗಿ ಬೆಲೆಗಳ ಸಂಗ್ರಹಣೆ | ಆಯ್ದ ಗ್ರಾಮಗಳು(325)/ ನಗರಗಳು(20)– ವಾರಕ್ಕೆ ಮತ್ತು ತಿಂಗಳಿಗೆ ದತ್ತಾಂಶ ಸಂಗ್ರಹ | ಸಾಂಖ್ಯಿಕ ನಿರೀಕ್ಷಕರು | 176 | ಆನ್‌ಲೈನ್ |

### 9.2.1.1 ಎಲ್ಲ ಮುಖ್ಯ ಸಾಂಖ್ಯಿಕ ಚಟುವಟಿಕೆಗಳ ಬಗ್ಗೆ ದತ್ತಾಂಶ ಸಂಗ್ರಹದ ಸ್ಥಿತಿಗತಿ

**ಕೋಷ್ಟಕ 14: ಎಲ್ಲ ಮುಖ್ಯ ಸಾಂಖ್ಯಿಕ ಚಟುವಟಿಕೆಗಳ ಬಗ್ಗೆ ದತ್ತಾಂಶ ಸಂಗ್ರಹದ ಸ್ಥಿತಿಗತಿ**

| ಮುಖ್ಯ ಸಾಂಖ್ಯಿಕ ಚಟುವಟಿಕೆಗಳು | 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳ ಅಡಿಯಲ್ಲಿ ಕಾರ್ಯನೀತಿಗಳು | 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳಿಗಾಗಿ ಅನುಷ್ಠಾನ ಯೋಜನೆ | 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳ ಅಡಿಯಲ್ಲಿ ಕೈಗೊಂಡ ಕ್ರಮ | ದತ್ತಾಂಶ ಸಂಗ್ರಹಣೆಯ ವಿಧ |
|---|---|---|---|---|
| **ರಾಜ್ಯ ಆಂತರಿಕ ಉತ್ಪನ್ನ ಅಂದಾಜುಗಳು** | ▸ ಅಂದಾಜುಗಳ ವಿಶ್ವಾಸಾರ್ಹತೆಯನ್ನು ಸಾಧಿಸುವುದು<br>▸ ಅಂದಾಜುಗಳ ನೆಚ್ಚಿಕೆಯನ್ನು ಸಾಧಿಸುವದು<br>▸ ಅಂದಾಜುಗಳನ್ನು ಪ್ರಕಟಿಸಲು ಸಕಾಲಿಕತೆಯನ್ನು ಸಾಧಿಸುವುದು<br>▸ ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ | ▸ ಯೋಜನೆ–1: ದತ್ತಾಂಶ ಕಣಜದ ಗುಣಮವುವನ್ನು ಬಲಪಡಿಸುವುದು ಮತ್ತು ಸುಧಾರಿಸುವುದು<br>▸ ಯೋಜನೆ–2: ಆಂತರಿಕ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯ ಮತ್ತು ಸಾಫ್ಟ್ ವೇರ್<br>▸ ಯೋಜನೆ–3: ಅಂದಾಜುಗಳ<br>▸ ಯೋಜನೆ–4: ತರಬೇತಿ<br>▸ ಯೋಜನೆ–5 ದತ್ತಾಂಕ ಪ್ರಸರಣ | ▸ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ರಾಜ್ಯ ಆಂತರಿಕ ಉತ್ಪದನೆ ಅಂದಾಜುಗಳನ್ನು ಸಂಗ್ರಹಿಸಿ ಮತ್ತು ಸಂಕಲಿಸಿತು | ▸ ಆನಲೈನ್ |
| **ಬಂಡವಾಳ ನಿರ್ಮಾಣ ಮತ್ತು ಉಳಿತಾಯದ ಅಂದಾಜುಗಳು** | ▸ ಸರ್ಕಾರ ಮತ್ತು ಖಾಸಗಿ ಭಾಗಗಳಿಗಾಗಿ ಅಂದಾಜುಗಳ ಸಿದ್ಧತೆ<br>▸ ದತ್ತಾಂಶ ಪ್ರಸಾರ | ▸ ಯೋಜನೆ–1: ಸರ್ಕಾರಿ ಮತ್ತು ಖಾಸಗಿ ಭಾಗಗಳ ಸಿದ್ಧತೆ<br>▸ ಯೋಜನೆ–2: ದತ್ತಾಂಶ ಪ್ರಸರಣ | ▸ ಸಾಮಾಜಿಕ ಆರ್ಥಿಕ ಬದಲಾಣಾ ಸಂಸ್ಥೆ, ಬೆಂಗಳೂರು ಸಂಸ್ಥೆಯೊಂದಿಗಿನ ಸಹಯೋಗದಲ್ಲಿ 1999–2000 ರಿಂದ 2008–09ರ ವರೆಗೆ 1999–2000 ಆಧಾರ ವರ್ಷಕ್ಕಾಗಿ ಬಂಡವಾಳ ನಿರ್ಮಾಣ ಮತ್ತು ಸರಕುಗಳ ಮತ್ತು ಸೇವೆಗಳ ಬಳಕೆಯು ಆಂದಾಜುಗಳನ್ನು ಸಂಕಲಿಸಲಾಗಿದೆ.<br>▸ ಬಂಡವಾಳ ಸೃಷ್ಟಿ ಮತ್ತು ಉಳಿತಾಯಗಳ ಅಂದಾಜುಗಳ ಸಂಕಲನದ ಬಗ್ಗೆ ಸಿಬ್ಬಂದಿಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ | ▸ ಖಋಾಅ ಸಂಸ್ಥೆಯು ಸಮೀಕ್ಷೆ ಸಿದ್ಧಪಡಿಸಲಾಯಿತು ಮತ್ತು ಆಇಖ ದಿಂದ ಉಪಯೋಗಕ್ಕಾಗಿ ವರದಿಯನ್ನು ಸಲ್ಲಿಸಲಾಯಿತು. |

| | | | | |
|---|---|---|---|---|
| | | | ವತಿಯಿಂದ ಸಾಮಾಜಿಕ–ಆರ್ಥಿಕ ಬದಲಾವಣಾ ಸಂಸ್ಥೆಯು ತರಬೇತಿಯನ್ನು ಏರ್ಪಡಿಸಲಾಗಿತ್ತು.<br>▸ ಹೊಸದಾದ ಆಧಾರ ವರ್ಷವನ್ನು ಪರಿಷ್ಕರಿಸಿದೆ. ಆದ್ದರಿಂದ ತರಬೇತಿಯು ಅಗತ್ಯವಾಗಿರುತ್ತದೆ. ಗ್ರಾಮ ಪಂಚಾಯತ್‌ನ ಪ್ರಾಯೋಗಿಕ ಲೆಕ್ಕಾಚಾರವಾಗಿ ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲಾಗಿತ್ತು. | |
| **ಜಿಲ್ಲಾ ಆಂತರಿಕ ಉತ್ಪನ್ನ ಅಂದಾಜುಗಳು** | ▸ ಅಂದಾಜುಗಳ ವಿಶ್ವಾಸಾರ್ಹತೆಯನ್ನು ಸಾಧಿಸುವುದು<br>▸ ಅಂದಾಜುಗಳ ನೆಚ್ಚಿಕೆಯನ್ನು ಸಾಧಿಸುವದು<br>▸ ಅಂದಾಜುಗಳನ್ನು ಪ್ರಕಟಿಸಲು ಸಕಾಲಿಕತೆಯನ್ನು ಸಾಧಿಸುವುದು<br>▸ ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ | ▸ ಯೋಜನೆ–1: ಜಿಲ್ಲಾ ಪಂಚಾಯತೆಗಳಿಂದ ಜಿಲ್ಲಾ ಆಭಿವೃದ್ಧಿ ಯೋಜನೆ ಅಂದಾಜುಗಳ<br>▸ ಯೋಜನೆ–2: ದತ್ತಾಂಶ ಪ್ರಸರಣ | ▸ ಜಿಲ್ಲಾ ಅಭಿವೃದ್ಧಿ ಯೋಜನೆಯ ಅಂದಾಜುಗಳ ಸಂಕಲನ, ಗ್ರಾಮೀಣ ಮತ್ತು ನಗರ ಪ್ರದೇಶಗಳಿಗಾಗಿ ಸ್ಥಳೀಯ ಸಂಸ್ಥೆಯ ಅಂದಾಜುಗಳು ಮತ್ತು ಗ್ರಾಹಕ ಬೆಲೆ ಸೂಚ್ಯಂಕ–ಇವುಗಳ ಸಂಕಲನಕ್ಕಾಗಿ ಅನುಸರಿಸಿದ ಮೂಲಗಳನ್ನು ಮತ್ತು ವಿಧಾನಗಳನ್ನು ಜಿಲ್ಲಾ ಆಭಿವೃದ್ಧಿ ಯೋಜನೆಯನ್ನು ತಯಾರಿಸಿದೆ.<br>▸ ಈ ಅಂದಾಜುಗಳ ಸಂಕಲನದಲ್ಲಿ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಯೋಜನಾಧಿಕಾರಿಗಳಿಗೆ ತರಬೇತಿಯನ್ನು ಏರ್ಪಡಿಸಲಾಗಿದೆ. ಅಲ್ಲದೇ ಜಿಲ್ಲಾ ಮತ್ತು ಉಪ ಜಿಲ್ಲಾ ಮಟ್ಟದ ಅಧಿಕಾರಿಗಳಿಗೂ ಸಹ ಈ ಅಂದಾಜುಗಳ ಸಂಕಲನದಲ್ಲಿ ತರಬೇತಿ ಏರ್ಪಡಿಸಲಾಗಿದೆ.<br>▸ ಈ ಅಂದಾಜುಗಳ ಸಂಕಲನದಲ್ಲಿ ಮುಖ್ಯ ಯೋಜನಾಧಿಕಾರಿಗೆ ಸಹಾಯ ಮಾಡಲು ಜಿಲ್ಲಾ ಪಂಚಾಯತಿಗಳಿಗೆ | ▸ ಆನಲೈನ್ |

| | | | | |
|---|---|---|---|---|
| | | | ಇಬ್ಬರು ಸಮಾಲೋಚಕರನ್ನು ಒದಗಿಸಲಾಯಿತು.<br>▸ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗಾಗಿ 25 ಜುಲೈ 2011 ರಂದು ಸಂವೇದಕ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಹೆಚ್ಚುವರಿ ಮಹಾ ನಿರ್ದೇಶಕ, ರಾಷ್ಟ್ರೀಯ ಲೆಕ್ಕಪತ್ರ ವಿಭಾಗ, ಕೇಂದ್ರೀಯ ಸಾಂಖ್ಯಿಕ ಸಂಸ್ಥೆ ಮತ್ತು ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ, ಹಣಕಾಸು ಸಚಿವಾಲಯ ಮತ್ತು ಪಂಚಾಯತ್ ರಾಜ್ಯ ಸಚಿವಾಲಯಗಳ ಹಿರಿಯ ಅಧಿಕಾರಿಗಳು, ಈ ಕ್ಷೇತ್ರಗಳ ತಜ್ಞರು, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಅರುಣಾಚಲ ಪ್ರದೇಶ, ಹಿಮಾಚಲ ಪ್ರದೇಶಗಳ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಅಧಿಕಾರಿಗಳು ಹಾಗೂ ಕರ್ನಾಟಕ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು –ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. | |
| **ಸ್ಥಳೀಯ ಸಂಸ್ಥೆಗಳ ಕೊಡುಗೆಯ ಅಂದಾಜುಗಳು** | ▸ 2003–04 ರಿಂದ 2008–09 ವರೆಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದವರಿಂದ ಕೈಗೊಳ್ಳಲಾದ ಸಮೀಕ್ಷೆಯ ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳ ಕೊಡುಗೆಗಳ ಆಂದಾಜುಗಳ ಸಂಬಳವನ್ನು ಎಲ್ಲ ಜಿಲ್ಲಾ ಪಂಚಾಯಿತಿಗಳು ಆರಂಭಿಸಬೇಕು | ▸ ಯೋಜನೆ 1: ಜಿಲ್ಲಾ ಪಂಚಾಯತಿಗಳಿಗೆ ಸ್ಥಳೀಯ ಸಂಸ್ಥೆಗಳ ಕೊಡುಗೆಗಳ ಅಂದಾಜುಗಳ ಸಂಕಲನ<br>▸ ಯೋಜನೆ 2: ಸ್ಥಳೀಯ ಸಂಸ್ಥೆಗಳ ಮುಗಡಪತ್ರ ಮತ್ತು ಲೆಕ್ಕಪತ್ರಗಳ ಗಣಕೀಕಣ<br>▸ ಯೋಜನೆ 3: ದತ್ತಾಂಶ ಪ್ರಸಾರ | ▸ ಕರ್ನಾಟಕ ಸರ್ಕಾರವು ಸ್ಥಳೀಯ ಸಂಸ್ಥೆಗಳ ಕೊಡುಗೆಯ ಬಗ್ಗೆ ಸಮೀಕ್ಷೆ ಕೈಗೊಂಡಿದೆ. 2003–04 ರಿಂದ 2008–09 ರ ವರೆಗೆ ಎಲ್ಲ ಜಿಲ್ಲಾ ಪಂಚಾಯತಿಗಳು ಮತ್ತು ತಾಲೂಕು ಪಂಚಾಯಿತಿಗಳಿಂದ, ಪ್ರತಿ ತಾಲೂಕಿನಲ್ಲಿ 3 ಗ್ರಾಮ ಪಂಚಾಯಿತಿಗಳಿಂದ ಮತ್ತು ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಂದ ದತ್ತಾಂಶವನ್ನು ಸಂಗ್ರಹಿಸಲಾಗಿದೆ. | ▸ ಆನ್ ಲೈನ್–ಸ್ಥಳೀಯ ಸಂಸ್ಥೆ ಲೆಕ್ಕಪತ್ರಗಳ ವೆಬ್ ಅಪ್ಲಿಕೇಶನ್. |

| | | | | |
|---|---|---|---|---|
| | ‣ ಸ್ಥಳೀಯ ಸಂಸ್ಥೆಗಳ ಮುಂಗಡ ಪತ್ರ ಮತ್ತು ಲೈಕ ಪತ್ರಗಳನ್ನು ಗಣಕೀಕಣಗೊಳಿಸಬೇಕು<br>‣ ವಿಶೇಷ ಅಭಿವೃದ್ಧಿ ಕಾರ್ಯಕ್ರಮ ಮತ್ತು ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಸಂಕಲನಕ್ಕಿಂತ ಮೊದಲು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ವರದಿಗಳನ್ನು ರಚಿಸಲಾಗುವದು. | | ‣ ವರದಿಗಳ ಸಂಕಲನವನ್ನು ಪೂರ್ಣಗೊಳಿಸಲಾಗಿದೆ. ಇವು ಜಿಲ್ಲಾ ಪಂಚಾಯತಿಗಳಿಗೆ ಆಧಾರವಾಗುತ್ತದೆ. ಅವುಗಳು ಪಂಚಾಯತ್ ರಾಜ್ ಸಂಸ್ಥೆಗಳಿಂದ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಂದ 2009–10 ರ ನಂತರ ದತ್ತಾಂಶ ಸಂಗ್ರಹಣೆ ಕೈಗೊಳ್ಳುವುದು.<br>‣ ಮಾಹಿತಿ ಸಂಗ್ರಹಿಸಲು ವೆಬ್ ಅಪ್ಲಿಕೇಶನ್‌ನ್ನು ತಯಾರಿಸಲಾಗಿದೆ ಮತ್ತು ಅದರ ಫಲಿತಾಂಶಗಳನ್ನು 2011–12 ನೇ ಮೂಲ ಪರಿಷ್ಕರಣೆಯಲ್ಲಿ ಸಂಯೋಜಿಸಲಾಗಿದೆ. | |
| **ಉದ್ದಿಮೆಗಳ ವಾರ್ಷಿಕ ಸಮೀಕ್ಷೆ** | ಉದ್ಧಿಮೆಗಳ ದತ್ತಾಂಶದ ವಾರ್ಷಿಕ ಸಮೀಕ್ಷೆಯ ಸಕಾಲಿಕ ಪ್ರಸಾರ | ಯೋಜನೆ–1: ಉದ್ಧಿಮೆಗಳ ದತ್ತಾಂಶದ ವಾರ್ಷಿಕ ಸಮೀಕ್ಷೆಯ ಸಕಾಲಿಕ ಪ್ರಸಾರ | ‣ ನಿರ್ದೇಶನಾಲಯವು ಉಳಿದ ಮಾದರಿ ಸಮೀಕ್ಷೆಯಲ್ಲಿ 2010–11 ರಿಂದ ಪಾಲ್ಗೊಳ್ಳುತ್ತಿದೆ.<br>‣ ದತ್ತಾಂಶದ ಸಂಗ್ರಹಣೆ ಮತ್ತು ಸಂಚಯಿತ ಅಂದಾಜುಗಳ ತಯಾರಿಕೆಗಾಗಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯ ಸಹಕಾರದೊಂದಿಗೆ ವೆಬ್ ಅಪ್ಲಿಕೇಶನ್‌ನ್ನು ಸಿದ್ಧಪಡಿಸಿದೆ. ಈ ವೆಬ್ ಅಪ್ಲಿಕೇಶನ್ ಪೂರ್ಣಗೊಂಡಿದೆ, ಇಷ್ಟರಲ್ಲೇ ಬಿಡುಗಡೆಯಾಗಲಿದೆ. | ‣ ಫ್ಯಾಕ್ಟರಿಗಳು ಮುತ್ತು ಬಾಯ್ಲರ್‌ಗಳ ಇಲಾಖೆಯಿಂದ ನಿರ್ಮಿಸಲ್ಪಟ್ಟ ವೆಬ್ ಪೋರ್ಟಲ್ ಮೂಲಕ ಆಇಮಾಹಿತಿಯನ್ನು ಸಂಗ್ರಹಿಸುತ್ತದೆ |

| | | | | |
|---|---|---|---|---|
| **ಔದ್ಯಮಿಕ ಉತ್ಪಾದನೆಯ ಸೂಚ್ಯಂಕ** | ▸ ವಿಶ್ವಾಸಾರ್ಹ ಹಾಗೂ ನೆಚ್ಚಿಗೆಯ ದತ್ತಾಂಶವನ್ನು ಸಕಾಲದಲ್ಲಿ ವರದಿಮಾಡುವುದು ಮುಖ್ಯ ಗುರಿಯಾಗಿದೆ<br>▸ ಆದನ್ನು ಸಾಧಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು<br>▸ ಐಟಮ್ ಬಾಸ್ಕೆಟ್‌ನ ಸಕಾಲಿಕ ಪರಿಶೀಲನೆ<br>▸ ಚಾಲ್ತಿ ವ್ಯವಹಾರ ರಜಿಸ್ಟರ್‌ನ್ನು ನಿರ್ವಹಿಸೂವುದು<br>▸ 80% ರಷ್ಟು ಸಕಾಲಿಕ ಸ್ಪಂದನೆಗೆ ಉದ್ದೇಶಿಸುವುದು | ▸ ಯೋಜನೆ–1: ಔದ್ಯಮಿಕ ಉತ್ಪಾದನೆಯ ಸೂಚ್ಯಂಕವನ್ನು ಅಂದಾಜಿಸುವುದಕ್ಕಾಗಿ ಉತ್ಪಾದನಾ ಘಟಕಗಳಿಂದ 80% ರಷ್ಟು ಸ್ಪಂದನೆಯ ಸಾಧನೆ<br>▸ ಯೋಜನೆ–2: ಕಾರ್ಖಾನೆಗಳು ಮತ್ತು ಬ್ಯಾಂಕರ್‌ಗಳು ಇಲಾಖೆ. ಉದ್ದಿಮೆಗಳು ಮತ್ತು ವಾಣಿಜ್ಯ ಇಲಾಖೆ ಕಾರ್ಮಿಕ ಇಲಾಖೆ. ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ ಇವರೊಂದಿಗೆ ಸಂಯೋಜನಾ ಸಭೆಗಳನ್ನು ನಡೆಸುವುದು.<br>▸ ಔದ್ಯಮಿಕ ಉತ್ಪಾದನೆಯ ಸೂಚ್ಯಂಕವನ್ನು ಅಂದಾಜಿಸುವುದಕ್ಕಾಗಿ ವಿಷಯದ ಬಾಸ್ಕೆಟ್‌ನ ಗುಣಮಟ್ಟವನ್ನು ಸುಧಾರಿಸುವುದಕ್ಕಾಗಿ ವಿಷಯದ ಸೂಕ್ತ ಆಯ್ಕೆ. | ▸ 2004–05 ಆಧಾರ ವರ್ಷವಾಗಿ ನಿರ್ದೇಶನಾಲಯವು ಔದ್ಯಮಿಕ ಉತ್ಪಾದನೆಯ ಸೂಚ್ಯಂಕವನ್ನು ಸಿದ್ಧಪಡಿಸುತ್ತಿದೆ ಮತ್ತು ಬಿಡುಗಡೆ ಮಾಡುತ್ತಿದೆ.<br>▸ ಘಟಕಗಳ ಅಸ್ತಿತ್ವವನ್ನು ತಿಳಿದುಕೊಳ್ಳಲು ಸಮೀಕ್ಷೆಯನ್ನು ಕೈಗೊಂಡ ನಂತರ ಸ್ಪಂದನಾ ಪ್ರಮಾಣವು ಹೆಚ್ಚಾಗಿದೆ.<br>▸ ದತ್ತಾಂಶದ ಸಂಗ್ರಹಣೆಗಾಗಿ ಮತ್ತು ಸೂಚ್ಯಂಕದ ತಯಾರಿಕೆಗಾಗಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯ ಸಹಕಾರದೊಂದಿಗೆ ವೆಬ್ ಅಪ್ಲಿಕೇಶನ್‌ನ್ನು ಸಿದ್ಧಪಡಿಸಲಾಗಿದೆ. ಆ ವೆಬ್ ಅಪ್ಲಿಕೇಶನ್ ಪೂರ್ಣಗೊಂಡಿದ್ದು, ಅದನ್ನು ಇಷ್ಟರಲ್ಲೇ ಬಿಡುಗಡೆ ಮಾಡಲಾಗುತ್ತದೆ. | ▸ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯಿಂದ ನಿರ್ಮಿಸಲಾದ ವೆಬ್ ಪೋರ್ಟಲ್ ಮೂಲಕ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಮಾಹಿತಿಯನ್ನು ಸಂಗ್ರಹಿಸುತ್ತದೆ. |
| **ಬೆಳೆ ಕ್ಷೇತ್ರ ಮತ್ತು ಉತ್ಪಾದನಾ ಅಂದಾಜುಗಳು** | ▸ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು.<br>▸ ಅಂಕಿಅಂಶಗಳ ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು.<br>▸ ಉತ್ತಮ ಅಂದಾಜುಗಳ ಕಾರ್ಯನೀತಿಗಾಗಿ ಹೆಚ್ಚು ಬೆಳೆಗಳನ್ನು ಒಳಗೊಳ್ಳಲು ವೈಜ್ಞಾನಿಕ, ಬಲು ಸರಳ ವಿಧಾನ. | ▸ ಯೋಜನೆ–1: ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ಚಟುವಟಿಕೆಗಳು.<br>▸ ಯೋಜನೆ–2: ಬೆಳೆ ಕ್ಷೇತ್ರ ಅಂಕಿ ಅಂಶಗಳ ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಸುಧಾರಿಸುವುದು.<br>▸ ಯೋಜನೆ–3: ಇಳುವರಿ ದತ್ತಾಂಶದ ಗುಣಮಟ್ಟವನ್ನು ಸುಧಾರಿಸುವುದು. | ▸ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ಪ್ರದೇಶ ಮತ್ತು ಇಳುವರಿಯನ್ನು ಅಂದಾಜಿಸಲು ಮುಖ್ಯವಾದ ಪ್ರದೇಶವಾಗಿದೆ. ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್‌ನೊಂದಿಗೆ ತಾಂತ್ರಿಕ ಪಾಲುದಾರನಾಗಿ, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ತಳಮಟ್ಟದಿಂದ ದತ್ತಾಂಶದ ಹರಿವಿಗಾಗಿ ನೈಜ ಸಮಯ ವೆಬ್ ಅಪ್ಲಿಕೇಶನ್‌ನ್ನು ಅಭಿವೃದ್ಧಿಪಡಿಸಿತು. ಈ | ▸ ಬೆಳೆ ಕ್ಷೇತ್ರ ವೆಬ್ ಅಪ್ಲಿಕೇಶನ್ |

| | | | | |
|---|---|---|---|---|
| | ▸ ಸಿಬ್ಬಂದಿಯ ಕೌಶಲ್ಯ ಮತ್ತು ಸಾಮರ್ಥ್ಯದ ಅಭಿವೃದ್ಧಿ.<br>▸ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು.<br>▸ ಸಕಾಲಿಕತೆಯನ್ನು ಸುಧಾರಿಸುವುದು.<br>▸ ವಿಶಾಸಾರ್ಹ, ನೆಚ್ಚಿಗೆಯ ಹಾಗೂ ಸಕಾಲಿಕ ಪ್ರದೇಶ ಮತ್ತು ಉತ್ಪಾದನಾ ಅಂಕಿಅಂಶಗಳನ್ನು ಹೊಂದಲು ಬಹು ಉತ್ತಮ ಸಮರ್ಥನೀಯ ವ್ಯವಸ್ಥೆಯ ಬೆಳವಣಿಗೆ. | ▸ ಯೋಜನೆ–4: ನಿಯತಕಾಲಿಕಗಳ ಸಕಾಲಿಕ ಪ್ರಕಟಣೆ.<br>▸ ಯೋಜನೆ–5: ತೋಟಗಾರಿಕೆ ಅಡಿಯಲ್ಲಿ ಹೆಚ್ಚು ಬೆಳೆಗಳನ್ನು ಒಳಗೊಳ್ಳಲು ವೈಜ್ಞಾನಿಕ, ಬಲುಸರಳ ವಿಧಾನದ ಅಳವಡಿಕೆ.<br>▸ ಯೋಜನೆ–6: ಇಳುವರಿ ಅಂದಾಜುಗಳ ಪ್ರದೇಶ ಗಣತಿ ಮತ್ತು ಸಂಕಲನ. | ಅಪ್ಲಿಕೇಶನ್‌ನ್ನು ರಾಜ್ಯದ ಅಗತ್ಯತೆಗಳಿಗೆ ಅನುಗುಣವಾಗಿ ಹೊಂದಾಣಿಕೆ ಮಾಡಲಾಗುತ್ತದೆ ಮತ್ತು ದತ್ತಾಂಶವನ್ನು ಪರಿಷ್ಕರಿಸಲು ತಳಮಟ್ಟದ ಕಾರ್ಯಕರ್ತರಿಗೆ ಲ್ಯಾಪ್ ಟಾಪ್‌ಗಳನ್ನು ಒದಗಿಸಲಾಯಿತು.<br>▸ ಬಳಕೆದಾರ ಪ್ರಯೋಜನಕ್ಕಾಗಿ ಆಫ್‌ಲೈನ್ ಮತ್ತು ಆನ್‌ಲೈನ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲಾಯಿತು. | |
| **ಸಗಟು ಮಾರಾಟ ಬೆಲೆ ಸೂಚ್ಯಂಕ** | ▸ ವಿಶ್ವಾಸಾರ್ಹತೆಯನ್ನು ಸಾಧಿಸುವುದು<br>▸ ನೆಚ್ಚಿಕೆಯನ್ನು ಸಾಧಿಸುವುದು<br>▸ ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ | ▸ ಯೋಜನೆ–1: ದತ್ತಾಂಶ ಕಣಜದ ಗುಣಮಟ್ಟವನ್ನು ಬಲಪಡಿಸುವುದು, ಸುಧಾರಿಸುವುದು ಮತ್ತು ಕಾರ್ಯಕೇಂದ್ರವನ್ನು ಬದಲಾಯಿಸುವುದು. | ▸ ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಯೋಜನೆಯ ಅನುಷ್ಠಾನದ ನಂತರ ಈ ವಿಭಾಗದಲ್ಲಿ ಗಮನಾರ್ಹವಾದ ಬದಲಾವಣೆಯನ್ನು ಕಾಣಲಾಗುತ್ತದೆ.<br>▸ ಸಾಪ್ತಾಹಿಕ ಮತ್ತು ಮಾಸಿಕ ಪತ್ರಿಕೆಗಳನ್ನು ನಿಯಮಿತವಾಗಿ ಪ್ರಕಟಿಸಲಾಯಿತು. | ▸ ಸಾಪ್ತಾಹಿಕ ಮತ್ತು ಮಾಸಿಕ ಪತ್ರಿಕೆಗಳನ್ನು ನಿಯಮಿತವಾಗಿ ಪ್ರಕಟಿಸಲಾಯಿತು. |
| **ಗ್ರಾಹಕ ಬೆಲೆ ಸೂಚ್ಯಂಕ** | ▸ ಗ್ರಾಮೀಣ ಮತ್ತು ನಗರ ಪ್ರದೇಶಗಳ ಬೆಲೆ ಸೂಚ್ಯಂಕದ ನಿರ್ಮಾಣ.<br>▸ ಅಧಿಕಾನುಕೂಲ ನಕ್ಷೆ ಮತ್ತು ಐಟಮ್ ಬಾಸ್ಕೆಟ್‌ಗೆ ಬರಲು ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ 66 ನೇ ಸುತ್ತಿನ ಸಮೀಕ್ಷೆಯನ್ನು ಉಪಯೋಗಿಸಿಕೊಳ್ಳುವುದು.<br>▸ ಮಾಹಿತಿಯನ್ನು ಪ್ರಸಾರ ಮಾಡುವುದಕ್ಕೆ ಮತ್ತು ಹೆಚ್ಚಿನ ಸುಧಾರಣೆಗಾಗಿ ಪ್ರತಿಸ್ಪಂದನ ಪಡೆಯಲು ದತ್ತಾಂಶ ತಯಾರಕರ, | ▸ ಯೋಜನೆ–1: ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶ ಜನಸಂಖ್ಯೆಯನ್ನು ಪ್ರತಿನಿಧಿಸುವ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಕಲನ. | ▸ ತಾಂತ್ರಿಕ ಪಾಲುದಾರನಾದ ಓಖಅಯ ಸಹಾಯದಿಂದ ನೈಜ ಸಮಯ ದತ್ತಾಂಶ ಕಣಜವನ್ನು ಅಭಿವೃದ್ಧಿ ಪಡಿಸಲಾಯಿತು ಮತ್ತು ಅದನ್ನು ರಾಜ್ಯಾದಾಯ, ಕೈಗಾರಿಕೆಗಳು ಮತ್ತು ಬೆಲೆ ವಿಭಾಗವು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಿದೆ. ಕಾಲಾಂತರವನ್ನು ಗಣನೀಯವಾಗಿ ಕಡಿಮೆ ಮಾಡಲಾಗಿದೆ. | ▸ ಆನ್‌ಲೈನ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಲಾಗಿದೆ. |

| | | | | |
|---|---|---|---|---|
| | ಸಂಕಲನಕಾರರ ಹಾಗೂ ಬಳಕೆದಾರರ ಕಾರ್ಯಾಗಾರವನ್ನು ನಡೆಸುವುದು.<br>▸ ಸದ್ಯದಲ್ಲಿ, ಕರ್ನಾಟಕದಲ್ಲಿ ಬೆಲೆ ಸೂಚ್ಯಂಕಪ್ರವೃತ್ತಿಗಳನ್ನು 5 ವರ್ಷಗಳಿಗೆ ಪ್ರಕಟಿಸಲಾಗುತ್ತದೆ. ಅವುಗಳನ್ನು ಭವಿಷ್ಯದಲ್ಲಿ ಪ್ರತಿವರ್ಷ ಪ್ರಕಟಿಸಲಾಗುವುದು. ಅಲ್ಲದೆ, ಪ್ರತಿವರ್ಷ ಮುಂಗಡಪತ್ರ ಅಧಿವೇಶನದ ಎದುರು ವಿಧಾನಸಭೆಯಲ್ಲಿ ಮಂಡಿಸಲಾಗುವ ಆರ್ಥಿಕ ಸಮೀಕ್ಷೆಗಳಲ್ಲಿ ಕೇಂದ್ರವಾರು ಬೆಲೆಪ್ರವೃತ್ತಿಗಳು ಪ್ರತಿಫಲಿಸಲ್ಪಡುತ್ತವೆ. | | | |
| **ಜನನ ಮತ್ತು ಮರಣ ನೋಂದಣಿ ಅಂಕಿಅಂಶಗಳು ಮತ್ತು ಜನಸಂಖ್ಯೆ** | ▸ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿನ ಎಲ್ಲ ಸರ್ಕಾರಿ ಆಸ್ಪತ್ರೆಗಳು/ ನರ್ಸಿಂಗ್ ಹೋಂಗಳು/ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ನೋದಣಿ ಕೇಂದ್ರಗಳನ್ನು ತೆರೆಯುವುದು.<br>▸ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ನೋಂದಣಿ ಕಾರ್ಯನಿರ್ವಾಹಕರ ಸಾಮರ್ಥ್ಯ ನಿರ್ಮಾಣ.<br>▸ ಜಾಗೃತಿ ಮೂಡಿಸಲು ಪ್ರಚಾರದ ಕ್ರಮಗಳು.<br>▸ ಇನ್ನುಳಿದ (ಸುಮಾರು 80) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆನ್‌ಲೈನ್ ನೋಂದಣಿಯನ್ನು ಪೂರ್ಣಗೊಳಿಸುವುದು.<br>▸ ಸಾಂಖ್ಯಿಕ ವರದಿಗಳ ಗಣಕೀಕರಣ. | ▸ ಯೋಜನೆ–1: ಸಿವಿಲ್ ರೆಜಿಸ್ಟ್ರೇಶನ್ ಸಿಸ್ಟಮ್‌ನ ಗಣಕೀಕರಣ (ಕಾನೂನಾತ್ಮಕ ಹಾಗೂ ಸಾಂಖ್ಯಿಕ ಭಾಗಗಳೆರಡೂ)<br>▸ ಯೋಜನೆ–2: ಸಾರ್ವಜನಿಕ ಜಾಗೃತಿಯನ್ನು ಮೂಡಿಸುವುದು.<br>▸ ಯೋಜನೆ–3: ತರಬೇತಿಯ ಅಗತ್ಯತೆಗಳು.<br>▸ ಯೋಜನೆ–4: ಮರಣದ ಕಾರಣದ ವೈದ್ಯಕೀಯ ಪ್ರಮಾಣಪತ್ರದ ಸ್ಕೀಮ್<br>▸ ಯೋಜನೆ–5: ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿನೋದಣಿ ಘಟಕಗಳನ್ನು ತೆರೆಯುವುದು.<br>▸ ಯೋಜನೆ–6: ಜನನದಲ್ಲಿ ಲಿಂಗ ಅನುಪಾತದ ಬಗ್ಗೆ ಮತ್ತು | ▸ ಜನನ ಮತ್ತು ಮರಣಗಳನ್ನು ನೋಂದಾಯಿಸುವ ಏಕೈಕ ಆನ್‌ಲೈನ್ ಅಪ್ಲಿಕೇಶನ್ ಜನನ ಮತ್ತು ಮರಣ,ಇ–ಜನ್ಮವನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಸಿಎನ್‌ಎಲ್ ವಿಭಾಗವು ನಿರ್ವಹಿಸುತ್ತಿದೆ. | ▸ ಆನ್‌ಲೈನ್ ಅಪ್ಲಿಕೇಶನ್ ಅಭಿವೃದ್ಧಿಪಡಿಸಲಾಗಿದೆ. |

| | | | | |
|---|---|---|---|---|
| | • ಆಡಳಿತಾತ್ಮಕ ದಾಖಲೆಗಳಿಂದ ರೂಪುಗೊಂಡ ಅಂಕಿಅಂಶಗಳ ವಿಶ್ವಾಸಾರ್ಹತೆಯನ್ನು ತಪಾಸಣೆ ಮಾಡುವುದಕ್ಕಾಗಿ ವರದಿ ಮಾಡಿದ ಅಂಕಿಅಂಶಗಳ ನೋಂದಣಿ ಬಗ್ಗೆ ಅಧ್ಯಯನಗಳನ್ನು ಮತ್ತು ವಿಶ್ಲೇಷಣೆಗಳನ್ನು ಕೈಗೊಳ್ಳುವುದು.<br>• ವರದಿಯು ಸಂಬಂಧಿಸುವ ವರ್ಷದ ಮುಂಬರುವ ವರ್ಷದ ಜುಲೈ 31ರಿಂದ ಪ್ರತಿವರ್ಷ 53 ಸಾಂಖ್ಯಿಕ ಕೋಷ್ಟಕಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ಪ್ರಕಟಿಸುವುದು. | ನೋಂದಣಿಯ ಬಗ್ಗೆ ಪ್ರಾಯೋಗಿಕ ಅಧ್ಯಯನಗಳು ಮತ್ತು ಜನನ ಮತ್ತು ಮರಣಗಳನ್ನು ವರದಿಮಾಡುವುದು.<br>• ಯೋಜನೆ–7: 53 ಸಾಂಖ್ಯಿಕ ಕೋಷ್ಟಕಗಳನ್ನು ಒಳಗೊಂಡವಾರ್ಷಿಕ ವರದಿಯನ್ನು ಹೊರತರುವುದು.. | | |
| **ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ ಸಮೀಕ್ಷೆಗಳಲ್ಲಿ ಭಾಗವಹಿಸುವುದು.** | • ಪ್ರತಿ ಸುತ್ತು ಪೂರ್ಣಗೊಂಡ ವರ್ಷದ ಒಳಗಾಗಿ ಪ್ರತಿ ಸುತ್ತಿನ ವರದಿ ಮತ್ತು ಸಾಂಖ್ಯಿಕ ಕೋಷ್ಟಕಗಳನ್ನು ಪ್ರಕಟಿಸುವುದು.<br>• ಮಾದರಿ ಗಾತ್ರಗಳನ್ನು ವಿಸ್ತರಿಸುವುದರಿಂದ ಕನಿಷ್ಟ ಕೆಲವು ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ಅಧ್ಯಯನಗಳ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ವರದಿ ಮತ್ತು ಸಾಂಖ್ಯಿಕ ಕೋಷ್ಟಕಗಳನ್ನು ಹೊರತರುವುದು.<br>• ಮಾಹಿತಿಯನ್ನು ಪ್ರಸಾರ ಮಾಡುವ ಉದ್ದೇಶಕ್ಕಾಗಿ ರಾಜ್ಯ ಮಾದರಿ ಫಲಿತಾಂಶಗಳ ಬಗ್ಗೆ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸುವುದು. | • ಯೋಜನೆ–1: ತರಬೇತಿ ಅಗತ್ಯತೆಗಳು<br>• ಯೋಜನೆ–2: ರಾಜ್ಯ ಮಾದರಿ ಫಲಿತಾಂಶಗಳ ಬಗ್ಗೆ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸುವುದು.<br>• ಯೋಜನೆ–3: ಮರಣದ ಕಾರಣದ ವೈದ್ಯಕೀಯ ಪ್ರಮಾಣಪತ್ರದ ಸ್ಕೀಮ್ | • ತರಬೇತಿಗೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯಿಂದ ಬೆಂಬಲಿಸಲಾಯಿತು.<br>• ಏಖಜಿಂ ಛತ್ರದ ಅಡಿಯಲ್ಲಿ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ರೀತಿಯಲ್ಲಿಯೇ ರಾಜ್ಯ ಮಾದರಿ ಸಮೀಕ್ಷಾ ಸಂಸ್ಥೆಯನ್ನು ಸ್ಥಾಪಿಸಲು ಕರ್ನಾಟಕ ಸರ್ಕಾರವು ಆರಂಭಿಸಿದೆ. | • ಸಮೀಕ್ಷೆ–ಆಇಷು ಅಓಐವಿಭಾಗ |
| **ಆರೋಗ್ಯ, ರೋಗ ವ್ಯಾಪನೆ, ಮರಣ–ಪ್ರಮಾಣ** | • ಜಿಲ್ಲಾ ಜನಸಂಖ್ಯಾ ಘಟಕ ಮತ್ತು ಜಿಲ್ಲಾ ಮಟ್ಟದ ಸಾಂಖ್ಯಿಕ | • ಯೋಜನೆ–1: ಇಲಾಖೆಯಲ್ಲಿ ಸಾಂಕ್ಯಿಕ ವ್ಯವಸ್ಥೆಯನ್ನು | • ರಾಷ್ಟ್ರೀಯ ಗ್ರಾಮೀಣ ಸ್ವಸ್ಥ ಅಭಿಯಾನದ ಅಡಿಯಲ್ಲಿ ಕೇಂದ್ರ ಸರ್ಕಾರವು ಅಭಿವೃದ್ಧಿಪಡಿಸಿದ | • ಆನ್‌ಲೈನ್ ಊಒಋಖ ಅಪ್ಲಿಕೇಶನ್‌ನ್ನು ಓಖಊಒ |

| | | | | |
|---|---|---|---|---|
| **ಮತ್ತು ಕುಟುಂಬ ಕಲ್ಯಾಣ ಅಂಕಿಅಂಶಗಳು.** | ಕಾರ್ಯನಿರ್ವಾಹಕರ ರಚನಾತ್ಮಕ ಮತ್ತು ಕ್ರಿಯಾತ್ಮಕ ಮರುಸಂಘಟನೆ.<br>▸ ತಾಲ್ಲೂಕು ಆರೋಗ್ಯ ಅಧಿಕಾರಿಗೆ ಸಹಾಯ ಮಾಡಲು ಸಾಂಖ್ಯಿಕ ನಿರೀಕ್ಷಕರ ಹುದ್ದೆಯ ಸೃಷ್ಟಿ.<br>▸ ದತ್ತಾಂಶದ ನಿಖರತೆ ಮತ್ತು ವಿಶ್ವಾಸಾರ್ಹತೆ. | ಬಲಪಡಿಸುವುದು ಮತ್ತು ಪುನರ್ ಸಂಘಟಿಸುವುದು.<br>▸ ಯೋಜನೆ–2: ವಿಶ್ವಾಸಾರ್ಹ, ನೆಚ್ಚಿಗೆಯ ಮತ್ತು ಸಕಾಲಿಕ ದತ್ತಾಂಶವನ್ನು ಒದಗಿಸುವುದು.<br>▸ ಯೋಜನೆ–3: ದತ್ತಾಂಶದ ಪ್ರಸಾರ. | ದೃಢವಾದ ಅಪ್ಲಿಕೇಶನ್ ಆದ ಆರೋಗ್ಯ ನಿರ್ವಹಣಾ ಮಾಹಿತಿ ವ್ಯವಸ್ಥೆ–ಮೂಲಕ ಆರೋಗ್ಯ ಇಲಾಖೆಯ ಅಂಕಿ ಅಂಶಗಳನ್ನು ನಿರ್ವಹಿಸುತ್ತಿದೆ. | ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. |
| **ಶಿಕ್ಷಣ ಮತ್ತು ಸಾಕ್ಷರತೆ ಅಂಕಿ ಅಂಶಗಳು** | ▸ **ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ**<br>▸ ಸಕಾಲದಲ್ಲಿ ಮಾಹಿತಿಯನ್ನು ಒದಗಿಸಲು ಕೆಲವು ಖಾಸಗಿ ಅನುದಾನರಹಿತ ವ್ಯವಸ್ಥಾಪನೆಗಳಿಂದ ಸ್ವಲ್ಪ ಸ್ಪಂದನೆ ಬಂದಿದೆ. ಆದ್ದರಿಂದ ಅವುಗಳನ್ನು ಅಂಕಿಅಂಶಗಳ ಸಂಗ್ರಹಣ ಅಧಿನಿಯಮ, 2008ರ ಜಾರಿಯ ಮೂಲಕ ಸಾಂಖ್ಯಿಕ ವ್ಯವಸ್ಥೆಯ ಅಡಿಯಲ್ಲಿ ತರಬೇಕಾಗಿದೆ.<br>▸ ವಿವಿಧ ವ್ಯವಸ್ಥಾಪನೆಗಳಿಗಾಗಿ ವಿವಿಧ ಮಾದರಿಗಳನ್ನು ವಿನ್ಯಾಸಗೊಳಿಸುವುದು.<br>▸ ಜಿಲ್ಲಾ ಮಟ್ಟದ ವರದಿಗಳ ತಯಾರಿಕೆ ಮತ್ತು ಪ್ರಕಟಣೆಯನ್ನು ಆರಂಭಿಸುವುದು.<br>▸ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗೆ ಬಿಡುಗಡೆ ಮಾಡಿದ ಮೊತ್ತ ಮತ್ತು ವೆಚ್ಚಮಾಡಿದ ಉದ್ದೇಶವಾರು ಮೊತ್ತದ ಬಗ್ಗೆ ದತ್ತಾಂಶವನ್ನು ನಿರ್ವಹಿಸುವುದು ಮತ್ತು ಅದನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟಗಳಲ್ಲಿನ | ▸ ಯೋಜನೆ–2: ವಿಶ್ವಾಸಾರ್ಹ, ನೆಚ್ಚಿಗೆಯ ಮತ್ತು ಸಕಾಲಿಕ ದತ್ತಾಂಶವನ್ನು ಒದಗಿಸುವುದು.<br>▸ ಯೋಜನೆ–3: ದತ್ತಾಂಶದ ಪ್ರಸಾರ | ▸ ಶಿಕ್ಷಣ ಇಲಾಖೆಯ ಶಿಕ್ಷಣ ನಿರ್ವಹಣಾ ಮಾಹಿತಿ ವ್ಯವಸ್ಥೆ ಮೂಲಕ ಸರ್ವ ಶಿಕ್ಷಾ ಅಭಿಯಾನದ ಅಡಿಯಲ್ಲಿ ತನ್ನ ಅಂಕಿ ಅಂಶಗಳನ್ನು ನಿರ್ವಹಿಸುತ್ತಿದೆ. ಆದ್ದರಿಂದ ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆ ವಿಭಾಗದ ಅಡಿಯಲ್ಲಿ ಈ ಇಲಾಖೆಗೆ ಬಹಳಷ್ಟು ಬೆಂಬಲವನ್ನು ವಿಸ್ತರಿಸಿಲ್ಲ. | ▸ ಸರ್ವ ಶಿಕ್ಷಾ ಅಭಿಯಾನದ ಅಡಿಯಲ್ಲಿ ಅಭಿವೃದ್ಧಿಪಡಿಸಿದ ಆನ್‌ಲೈನ್– ಅಪ್ಲಿಕೇಶನ್. |

| | | | | |
|---|---|---|---|---|
| | ವಾರ್ಷಿಕ ಪ್ರಕಟಣೆಯಲ್ಲಿ ಸೇರಿಸುವುದು.<br>▸ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣದ ಬಗ್ಗೆ ಹೆಚ್ಚುತ್ತಿರುವ ಒತ್ತಾಯದ ಸಂದರ್ಭದಲ್ಲಿ ದತ್ತಾಂಶ ಅಗತ್ಯತೆಗಳನ್ನು ನಿರ್ಧಾರಣೆ ಮಾಡಲು ಮತ್ತು ಪ್ರಾದೇಶಿಕ, ಜಾತಿ ಮತ್ತು ಲಿಂಗ–ಇವುಗಳ ಬಗ್ಗೆಯೂ ಸಹ ಕಾರ್ಯಾಗಾರಗಳನ್ನು ಏರ್ಪಡಿಸಲಾಗುವುದು.<br>▸ **ಪದವಿಪೂರ್ವ ಶಿಕ್ಷಣ**<br>▸ ಪದವಿಪೂರ್ವ ಶಿಕ್ಷಣದ ದತ್ತಾಂಶಕಣಜವನ್ನು ಬಲಪಡಿಸಲು ಪ್ರೌಢಶಿಕ್ಷಣ ವ್ಯವಸ್ಥಾಪನಾ ಮಾಹಿತಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವುದು.<br>▸ ದತ್ತಾಂಶವನ್ನು ವಿಶ್ಲೇಷಿಸಲು ಮತ್ತು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ವರದಿಗಳನ್ನು ಪ್ರಕಟಿಸಲು ಅಧಿಕಾರಿಗಳಿಗೆ ಸಾಮರ್ಥ್ಯನಿರ್ಮಾಣ.<br>▸ 12 ನೇ ತರಗತಿಯ ಪರೀಕ್ಷೆಯನ್ನು ಉತ್ತೀರ್ಣರಾದವರ ವೃತ್ತಿಜೀವನವನ್ನು ಗುರುತಿಸಲು, ಅವರು 11 ನೇ ತರಗತಿಗೆ ಪ್ರವೇಶ ಪಡೆಯುವಾಗಲೇ ಗುರುತಿನ ಚೀಟಿ ಉಪಯೋಗಿಸುವುದು.<br>▸ ಸಕಾಲಿಕ ದತ್ತಾಂಶದ ವಿವರವಾದ ವಿಶ್ಲೇಷಣೆಯೊಂದಿಗೆ ಜಿಲ್ಲಾ ಮತ್ತು | | | |

| | | | | |
|---|---|---|---|---|
| | ರಾಜ್ಯ ಮಟ್ಟದಲ್ಲಿ ಪ್ರಕಟಣೆಗಳನ್ನು ತರುವುದು.<br>• ಇಲಾಖಾ ವೆಬ್‌ಸೈಟ್‌ನಲ್ಲಿ ಮಹತ್ವದ ದತ್ತಾಂಶವನ್ನು ಸೇರ್ಪಡೆಮಾಡುವುದು.<br>• ಬಳಕೆದಾರರ ಅಭಿಪ್ರಾಯವನ್ನು ಪಡೆಯಲು ಅವರೊಂದಿಗೆ ಸಮಾಲೋಚನಾ ಸಭೆಗಳನ್ನು ನಡೆಸುವುದು.<br>• ಬಳಕೆದಾರರ ಅಗತ್ಯತೆಗಳಿಗೆ ಹೊಂದುವಂತೆ ಪ್ರಕಟಣೆಗಳನ್ನು ಮಾರ್ಪಾಡುಮಾಡುವುದು. | | | |

| | | | | |
|---|---|---|---|---|
| **ಮದುವೆಯ ನೋಂದಣಿಯ ಅಂಕಿಅಂಶಗಳು** | ▸ ಸಾಂಖ್ಯಿಕ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವುದು<br>▸ ಮದುವೆಗಳ ಅಧಿಸೂಚಕರನ್ನು ನೇಮಕಮಾಡುವುದು.<br>▸ ಮದುವೆ ನೋಂದಣಿ ಅಂಕಿಅಂಶಗಳ ಸೆಲ್ ಸ್ಥಾಪಿಸುವುದು.<br>▸ ದತ್ತಾಂಶದ ವೆಬ್ ಆಧಾರಿತ ಪ್ರಸರಣ, ಸಮಗ್ರೀಕರಣ ಮತ್ತು ಇತರ ಎಲ್ಲ ಪ್ರಕ್ರಿಯೆಗಳಿಗಾಗಿ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ಮೂಲಸೌಕರ್ಯವನ್ನು ಒದಗಿಸುವುದು.<br>▸ ಮದುವೆ ನೋಂದಣಿಯ ಅಗತ್ಯತೆಯ ಬಗ್ಗೆ ಸಾರ್ವಜನಿಕ ಜಾಗೃತಿಯನ್ನು ಮೂಡಿಸುವುದಕ್ಕಾಗಿ ಹಾಗೂ ಅದನ್ನು ವರ್ದಿಸುವುದಕ್ಕಾಗಿ ವ್ಯಾಪಕ ಹಾಗೂ ತೀವ್ರವಾದ ಪ್ರಚಾರಕಾರ್ಯಗಳನ್ನು ಕೈಗೊಳ್ಳುವುದು.<br>▸ ಎಲ್ಲ ಮಧ್ಯಸ್ಥಗಾರರಿಗೂ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮ. | ▸ ಯೋಜನೆ–1: ಮದುವೆಗಳ ನೋಂದಣಿ ಅಧಿನಿಯಮ ಮತ್ತು ನಿಯಮಗಳ ಜಾರಿ.<br>▸ ಯೋಜನೆ–2: ವಿಶ್ವಾಸಾರ್ಹ, ನೆಚ್ಚಿಗೆಯ ಮತ್ತು ಸಕಾಲಿಕ ದತ್ತಾಂಶವನ್ನು ಒದಗಿಸುವುದು.<br>▸ ಯೋಜನೆ–3: ದತ್ತಾಂಶದ ಪ್ರಸಾರ | ▸ ಮುಖ್ಯ ನೋಂದಣಾಧಿಕಾರಿಯವರ ಕಛೇರಿಯಲ್ಲಿ ತನ್ನ ಸೆಲ್ ಆರಂಭಿಸಲು ಮತ್ತು ಅಂಕಿ ಅಂಶಗಳನ್ನು ಸಂಗ್ರಹಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕ್ರಮ ಕೈಗೊಳ್ಳುತ್ತಿದೆ. | ▸ ಆನ್‌ಲೈನ್ |
| **ಕಾರ್ಮಿಕ ಮತ್ತು ಉದ್ಯೋಗ ಅಂಕಿ ಅಂಶಗಳು** | ▸ **ಕಾರ್ಮಿಕ ಅಂಕಿಅಂಶಗಳು–ಕಾರ್ಮಿಕ ಇಲಾಖೆ ಮತ್ತು ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆ:**<br>▸ ಜಾರಿ ಅಧಿಕಾರಿಗಳಿಂದ–ವ್ಯವಹಾರ ರೆಜಿಸ್ಟರ್, ಆನ್‌ಲೈನ್ ನೋಂದಣಿ, ರಿಟರ್ನ್‌ಗಳ ಆನ್‌ಲೈನ್ ನಮೂದು ಮತ್ತು ವೆಬ್ ಆಧಾರಿತ ದತ್ತಾಂಶ ಸಂಗ್ರಹಣೆ– ಇವುಗಳ ಸೃಷ್ಟಿ.<br>▸ ಎಲ್ಲ ಉದ್ಯೋಗದಾತರಿಗಾಗಿ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳಲು | ▸ ಯೋಜನೆ–1: ಕಾರ್ಮಿಕ ಸಂಬಂಧಿತ ಸಬಲವಾದ ದತ್ತ ಕಣಜವನ್ನು ನಿರ್ಮಿಸುವುದು.<br>▸ ಯೋಜನೆ–2: ವಿಶ್ವಾಸಾರ್ಹ, ನೆಚ್ಚಿಗೆಯ ಮತ್ತು ಸಕಾಲಿಕ ದತ್ತಾಂಶವನ್ನು ಒದಗಿಸುವುದು. | ▸ ಮಾನವಿಕವಾಗಿ ಮಾಡಿದ ಹಳೆಯ ದತ್ತಾಂಶ ಸಂಗ್ರಹಣ ವಿಧಾನವನ್ನು ಸ್ಥಗಿತಗೊಳಿಸಲಾಯಿತು.<br>▸ ಇಲಾಖೆಯ ಪ್ರಯೋಜನಕ್ಕಾಗಿ ಆನ್‌ಲೈನ್ ಅಪ್ಲಿಕೇಶನ್‌ನ್ನು ಅಭಿವೃದ್ಧಿ ಪಡಿಸಲು ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯು ಇಲಾಖೆಯನ್ನು ಬೆಂಬಲಿಸಿತು. | ▸ ಇ–ಕಾರ್ಮಿಕ್ ಅಡಿಯಲ್ಲಿ ಅಭಿವೃದ್ಧಿಪಡಿಸಿದ ಆನ್‌ಲೈನ್ ವೆಬ್ ಪೋರ್ಟಲ್ |

| | | | | |
|---|---|---|---|---|
| | ಸಹಾಯಕವಾಗುವಂತೆ ಪ್ರಾದೇಶಿಕ ಮಟ್ಟದಲ್ಲಿ ಜಾರಿ ಅಧಿಕಾರಿಗಳೊಂದಿಗೆ ದಕ್ಷವಾದ ಅಧಿವೇಶನಗಳನ್ನು ಕೈಗೊಳ್ಳುವುದು.<br>▸ ಸಾಮರ್ಥ್ಯ ನಿರ್ಮಾಣ<br>▸ ಎಲ್ಲ ವಿಧದ ಸಂಸ್ಥೆಗಳ ವ್ಯವಹಾರ ರಜಿಸ್ಟರ್‌ನ ರಚನೆ.<br>▸ ವಿಶ್ಲೇಣಾತ್ಮಕ ದತ್ತಾಂಶಗಳೊಂದಿಗೆ ಸಂಕ್ಷಿಪ್ತವಾದ ಕಾರ್ಮಿಕ ಅಂಕಿಅಂಶಗಳ ತಯಾರಿಕೆ.<br>**ಬಾಲಕಾರ್ಮಿಕ ಅಂಕಿಅಂಶಗಳು–**<br>▸ ಕಾರ್ಮಿಕ ಇಲಾಖೆಯ ರಾಜ್ಯ ಮಟ್ಟದ ಸಂಪನ್ಮೂಲ ಕೇಂದ್ರವು ಈ ಚಟುವಟಿಕೆಯ ಬಗ್ಗೆ ವ್ಯವಸ್ಥಾಪನಾ ಮಾಹಿತಿ ಪದ್ಧತಿಯನ್ನು ಅನ್ನು ಅಭಿವೃದ್ಧಿಪಡಿಸುವುದು.<br>▸ ಈ ಕೇಂದ್ರವು ಬಾಲಕಾರ್ಮಿಕರ ಸಂಖ್ಯೆ, ಹೊರಗುಳಿಯುವುದರ ಪ್ರಮಾಣ ಮತ್ತು ಪುನರ್ವಸತಿ ಇತ್ಯಾದಿ ಬಾಲಕಾರ್ಮಿಕರ ಬಗೆಗಿನ ಎಲ್ಲ ಮಾಹಿತಿಯನ್ನು ತಯಾರಿಸುವುದು.<br>**ಉದ್ಯೋಗ ಅಂಕಿಅಂಶಗಳು– ಉದ್ಯೋಗ ಮತ್ತು ತರಬೇತಿ ಇಲಾಖೆ:**<br>▸ ಖಾಸಗಿ ಸಂಸ್ಥೆಗಳಿಂದ ಉದ್ಯೋಗ ಅಂಕಿಅಂಶಗಳನ್ನು ಸಂಗ್ರಹಿಸುವುದಕ್ಕಾಗಿ ಕಾರ್ಮಿಕ ಇಲಾಖೆ ಮತ್ತು ಕಾರ್ಖಾನೆಗಳು ಹಾಗೂ ಬಾಯ್ಲರ್‌ಇಲಾಖೆಗಳಿಂದ ತಯಾರಿಸಲ್ಪಟ್ಟ ವ್ಯವಹಾರ ರಜಿಸ್ಟರ್‌ನ್ನು ಉಪಯೋಗಿಸುವುದು. | | ▸ ಇ–ಕಾರ್ಮಿಕ್ ಬ್ಯಾನರ್ ಅಡಿಯಲ್ಲಿ ಅಭಿವೃದ್ಧಿಪಡಿಸಿದ ವೆಬ್ ಪೋರ್ಟಲ್‌ನ್ನು ಒಂದು ವರ್ಷದ ಹಿಂದೆಯೆ ಪೋಷಿಸಲಾಯಿತು ಮತ್ತು ಈ ಇಲಾಖೆಯು ದೃಢವಾದ ಸಾಂಖ್ಯಿಕ ವ್ಯವಸ್ಥೆಯನ್ನು ಹೊಂದಿದೆ ಮತ್ತು ಇಲಾಖೆಯ ಬಹಳಷ್ಟು ಚಟುವಟಿಕೆಗಳು ಬಳಕೆದಾರ ಸ್ನೇಹಿಯಾಗಿವೆ.<br>▸ ಕಾರ್ಮಿಕ ಇಲಾಖೆಯ ರಾಜ್ಯ ಮಟ್ಟದ ಸಂಪನ್ಮೂಲ ಕೇಂದ್ರವು ಈ ಬಗ್ಗೆ ಕ್ರಮ ಕೈಗೊಳ್ಳುತ್ತಿದೆ. | |

| | | | | |
|---|---|---|---|---|
| | ▸ ಸಾರ್ವಜನಿಕ ವಲಯದ ದತ್ತಾಂಶ ಸಂಗ್ರಹಣೆಯನ್ನು ಸುಧಾರಿಸುವುದು.<br>▸ ಸಾಮರ್ಥ್ಯ ನಿರ್ಮಾಣ.<br>▸ ಇತರ ಚಟುವಟಿಕೆಗಳನ್ನು ಒಳಗೊಂಡು ಖಾಸಗಿ ಮತ್ತು ಸಾರ್ವಜನಿಕ ವಲಯಗಳಿಗಾಗಿ ಉದ್ಯೋಗ ದತ್ತಾಂಶದ ವಾರ್ಷಿಕ ಪ್ರಕಟಣೆಯನ್ನು ಪ್ರಕಟಿಸುವುದು. | | | |
| **ವಸತಿಗಳ ಅಂಕಿಅಂಶಗಳು** | ▸ ಹೌಸಿಂಗ್ ಸ್ಟಾಕ್ ಬಿಜಿನೆಸ್‌ನ ರಿಜಿಸ್ಟರ್‌ನ್ನು ರಚಿಸುವುದು ಮತ್ತು 2011 ರ ಜನಗಣತಿಯ ಅವಧಿಯ ಸಂಸ್ಥೆಗಳಾದ– ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆಸ್ತಿ ರೆಜಿಸ್ಟರ್‌ನೊಂದಿಗೆ ಜೋಡಣೆ ಮಾಡುವುದು.<br>▸ ಸ್ಥಳೀಯ ಸಂಸ್ಥೆಗಳಿಂದ ಕಟ್ಟಡಗಳಿಗೆ ಮತ್ತು ಮನೆಗಳಿಗೆ ವ್ಯವಸ್ಥಿತ ಸಂಖ್ಯೆ ಹಾಕುವಿಕೆ.<br>▸ ಸಾಮರ್ಥ್ಯ ನಿರ್ಮಾಣ<br>▸ ಸ್ಥಳೀಯ ಸಮಸ್ಥೆಗಳಿಂದ ನೂತನ ಗೃಹ ಸ್ಟಾಕ್ ಬಗ್ಗೆ ದತ್ತಾಂಶ ನಿರ್ವಹಣೆ.<br>▸ ಸಾರ್ವಜನಿಕರಿಗಾಗಿ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. | ▸ ಯೋಜನೆ–1: ಕಾರ್ಮಿಕ ಸಂಬಂಧಿತ ಸಬಲವಾದ ದತ್ತ ಕಣಜವನ್ನು ನಿರ್ಮಿಸುವುದು.<br>▸ ಯೋಜನೆ–2: ವಿಶ್ವಾಸಾರ್ಹ, ನೆಚ್ಚಿಗೆಯ ಮತ್ತು ಸಕಾಲಿಕ ದತ್ತಾಂಶವನ್ನು ಒದಗಿಸುವುದು.<br>▸ ಯೋಜನೆ–3: ದತ್ತಾಂಶದ ಪ್ರಸಾರ | ▸ ರಾಜೀವ ಗಾಂಧಿ ರೂರಲ್ ಹೌಸಿಂಗ್ ಕಾರ್ಪೋರೇಶನ್, ಕರ್ನಾಟಕ ಹೌಸಿಂಗ್ ಬೋರ್ಡ್, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ–ಇವರು ತಮ್ಮ ಸ್ವಂತದ ಅಪ್ಲಿಕೇಶನ್‌ಗಳನ್ನು ಬಳಸಿ ತಮ್ಮ ಹೌಸಿಂಗ್ ಅಂಕಿ ಅಂಶಗಳನ್ನು ನಿರ್ವಹಿಸುತ್ತಾರೆ. ಆದ್ದರಿಂದ ಅವರಿಗೆ ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯಿಂದ ಹೆಚ್ಚಿನ ಬೆಂಬಲವನ್ನು ಒದಗಿಸಿಲ್ಲ. | ▸ ಆನ್‌ಲೈನ್– ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯು ತನ್ನ ಸ್ವಂತದ ಅಪ್ಲಿಕೇಶನ್‌ಗಳನ್ನು ಉಪಯೋಗಿಸಿಕೊಂಡು ವಸತಿ ಅಂಕಿಅಂಶಗಳನ್ನು ನಿರ್ವಹಿಸುತ್ತಿದೆ. |
| **ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ವಿತರಣೆ ಅಂಕಿಅಂಶಗಳು** | ▸ ಸೆಂಟ್ರಲ್ ಪವರ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಅಥವಾ ಅಂತಹ ಇತರ ಸಂಸ್ಥೆಗಳ ಮೂಲಕ ವಿದ್ಯುಚ್ಛಕ್ತಿ ದತ್ತಾಂಶದ ಸಮಗ್ರೀಕರಣ ಹಾಗೂ | ▸ ಯೋಜನೆ–1: ಸಮಗ್ರ ದತ್ತಾಂಶ ಒದಗಿಸುವುದು. | ▸ ಈ ಇಲಾಖೆಯು ಅಂಕಿ–ಅಂಶಗಳ ಸಂಗ್ರಹಣ ಮತ್ತು ಸಂಕಲನದ ಸ್ವಂತದ ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅವು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ | ▸ ಆನ್‌ಲೈನ್–ಈ ಇಲಾಖೆಯು ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅದನ್ನು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ |

| | | | | |
|---|---|---|---|---|
| | ವಿಶ್ಲೇಷಣ ಕುರಿತು ತರಬೇತಿ ಕೈಗೊಳ್ಳುವುದು.<br>▸ ಮಾಹಿತಿ ಸಂಪರ್ಕ ತಂತ್ರಜ್ಞಾನ ಮೂಲಸೌಕರ್ಯ ಮತ್ತು ಸಾಫ್ಟ್‌ವೇರ್ ಪಡೆಯುವುದು.<br>▸ ಇಂಧನ ಇಲಾಖೆಯ ಮತ್ತು ಮುದ್ರಣ ಮಾಧ್ಯಮದ ವೆಬ್ ಸೈಟ್ ಮೂಲಕವೂ ಸಹ ವಿದ್ಯುಚ್ಛಕ್ತಿ ಉತ್ಪನ್ನ, ಪ್ರಸರಣ ಮತ್ತು ಹಂಚಿಕೆಯ ಬಗ್ಗೆ ಸಮಗ್ರ ದತ್ತಾಂಶವನ್ನು ಪ್ರಸಾರ ಮಾಡುವುದು. | | ಬಲವರ್ಧಕ ಯೋಜನೆಯ ಅಡಿಯಲ್ಲಿ ಒಳಗೊಂಡಿರುವುದಿಲ್ಲ. | ಬಲವರ್ಧಕ ಯೋಜನೆ ಅಡಿಯಲ್ಲಿ ತೆಗೆದುಕೊಂಡಿಲ್ಲ. |
| **ಪರಿಸರ ಮತ್ತು ಅರಣ್ಯ ಅಂಕಿಅಂಶಗಳು** | **ಅರಣ್ಯ ಅಂಕಿಅಂಶಗಳು**<br>▸ ಅಂಕಿಅಂಶಗಳನ್ನು ಅಥವಾ ಹೆಚ್ಚುವರಿ ವಿಷಯಗಳ ಸಂಗ್ರಹಣೆ.<br>▸ ವೈಜ್ಞಾನಿಕ ಮಾದರಿ ಸಮೀಕ್ಷೆಗಳನ್ನು ಕೈಗೊಳ್ಳುವುದು.<br>▸ ಸಾಂಖ್ಯಿಕ ಅಧಿಕಾರಿಗಳ ಖಾಲಿ ಹುದ್ದೆಗಳನ್ನು ಭರ್ತಿಮಾಡುವುದು ಮತ್ತು ಅವರ ಸಾಮರ್ಥ್ಯಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವುದು.<br>▸ ಅರಣ್ಯ ಅಂಕಿ ಅಂಶಗಳ ಸಂಪೂರ್ಣ ಗಣಕೀಕರಣ. | ▸ ಯೋಜನೆ–1: ಇಲಾಖೆಯಲ್ಲಿನ ಸಾಂಖ್ಯಿಕ ವ್ಯವಸ್ಥೆಯನ್ನು ಸಬಲಗೊಳಿಸುವುದು.<br>▸ ಯೋಜನೆ–2: ವಿಶ್ವಾಸಾರ್ಹ, ನೆಚ್ಚಿನ ಮತ್ತು ಸಕಾಲಿಕ ದತ್ತಾಂಶವನ್ನು ಒದಗಿಸುವುದು.<br>▸ ಯೋಜನೆ–3: ದತ್ತಾಂಶದ ಪ್ರಸಾರ | ▸ ಈ ಇಲಾಖೆಯು ಅಂಕಿ–ಅಂಶಗಳ ಸಂಗ್ರಹಣ ಮತ್ತು ಸಂಕಲನದ ಸ್ವಂತದ ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅವು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಒಳಗೊಂಡಿರುವುದಿಲ್ಲ. | ▸ ಆನ್‌ಲೈನ್–ಈ ಇಲಾಖೆಯು ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅದನ್ನು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ತೆಗೆದುಕೊಂಡಿಲ್ಲ. |
| **ನೀರುಪೂರೈಕೆ ಮತ್ತು ನೈರ್ಮಲ್ಯ ಅಂಕಿಅಂಶಗಳು** | **ಗ್ರಾಮೀಣ ನೀರು ಪೂರೈಕೆ**<br>▸ ಸದ್ಯದ ಎಲ್ಲ ಹುದ್ದೆಗಳನ್ನು ಭರ್ತಿ ಮಾಡುವುದು.<br>▸ ನಿಗದಿತ ರೆಜಿಸ್ಟರ್‌ಗಳಲ್ಲಿ ವಿವಿಧ ನೀರು ಪೂರೈಕೆ ಯೋಜನೆಗಳ ಬಗ್ಗೆ ದತ್ತಾಂಶದ ನಿರ್ವಹಣೆ. | ▸ ಯೋಜನೆ–1: ಗ್ರಾಮೀಣ ನೀರು ಪೂರೈಕೆ<br>▸ ಯೋಜನೆ–2: ಗ್ರಾಮೀಣ ನೈರ್ಮಲ್ಯ<br>▸ ಯೋಜನೆ–3: ದತ್ತಾಂಶದ ಪ್ರಸಾರ | ▸ ಈ ಇಲಾಖೆಯು ಅಂಕಿ–ಅಂಶಗಳ ಸಂಗ್ರಹಣ ಮತ್ತು ಸಂಕಲನದ ಸ್ವಂತದ ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅವು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಒಳಗೊಂಡಿರುವುದಿಲ್ಲ. | ▸ ಆನ್‌ಲೈನ್–ಈ ಇಲಾಖೆಯು ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅದನ್ನು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ತೆಗೆದುಕೊಂಡಿಲ್ಲ. |

| | | | | |
|---|---|---|---|---|
| | ▸ ವ್ಯಾಪ್ತತೆ, ಸಾಂಖ್ಯಿಕ ವಿಶ್ಲೇಷಣೆ ಮತ್ತು ಸಾರ್ವಜನಿಕರಿಗೆ ಪ್ರಸಾರಕ್ಕಾಗಿ ಮೂಲ ದತ್ತಾಂಶದ ನಿರಂತರ ನಿರ್ಧಾರಣೆ.<br>▸ ಕಾರ್ಯಕ್ರಮದ ನೆರವೇರಿಕೆಯನ್ನು ಅದರ ಭತಿಕ ಪರಿಶೀಲನೆಯಿಂದ ಮಾಡುವ ಅಗತ್ಯವಿದೆ.<br>▸ ಭೌಗೋಳಿಕ ಮಾಹಿತಿ ವ್ಯವಸ್ಥೆ, ಆನ್‌ಲೈನ್ ಅಸೆಸ್‌ಮೆಂಟ ಪ್ಲ್ಯಾಟ್‌ಫಾರ್ಮ್ ಮತ್ತು ರಚನಾತ್ಮಕ ವಿಶ್ಲೇಷಣೆ ಮತ್ತು ವಿನ್ಯಾಸ– ಇತ್ಯಾದಿ ಕಂಪ್ಯೂಟರ್ ಪ್ಯಾಕೇಜ್‌ಗಳ ವ್ಯಾಪಕ ಬಳಕೆ.<br>▸ "ಗ್ರಾಮೀಣ ನೀರು ಸರಬರಾಜು ಒಂದು ಪಕ್ಷಿನೋಟ' ಎಂಬ ವಾರ್ಷಿಕ ಪ್ರಕಟಣೆಯನ್ನು ಪ್ರಕಟಿಸುವುದು.<br>**ಗ್ರಾಮೀಣ ನೈರ್ಮಲ್ಯ:**<br>ಗ್ರಾಮ ಪಂಚಾಯತಿಯು ಸಂಪೂರ್ಣವಾಗಿ ನೈರ್ಮಲ್ಯ ವ್ಯವಸ್ಥೆ ಹೊಂದಿದೆಯೆ ಎಂದು ನಿರ್ಧಾರಣೆ ಮಾಡುವುದಕ್ಕಾಗಿ ಈ ಕೆಳಕಂಡ ಹೆಚ್ಚುವರಿ ಮಾಹಿತಿಯನ್ನು ಈಗ ಸಂಗ್ರಹಿಸಿರದಿದ್ದರೆ, ಏಜೆನ್ಸಿಯಿಂದ ಸಂಗ್ರಹಿಸುವ ಅಗತ್ಯವಿದೆ.<br>▸ ಬಾಲಕಿಯರಿಗೇ ಪ್ರತ್ಯೇಕವಾಗಿ ಶೌಚಾಲಯ ಹೊಂದಿದ ಶಾಲೆಗಳು.<br>▸ ನೈರ್ಮಲ್ಯದ ಕುರಿತು ಮಕ್ಕಳಿಗಾಗಿ ಏರ್ಪಡಿಸಿದ ಜಾಗೃತಿ ಕಾರ್ಯಕ್ರಮ.<br>▸ ಕಸವನ್ನು ಹಾಕುವುದಕ್ಕಾಗಿ ಸ್ಥಳಾವಕಾಶ ಹೊಂದಿದ ಗ್ರಾಮಗಳ ಸಂಖ್ಯೆ. | | | |

| | | | | |
|---|---|---|---|---|
| | ▸ ಕುಡಿಯುವ ನೀರಿನ ಮೂಲಗಳ ಸುರಕ್ಷಿತ ನಿರ್ವಹಣೆಗಾಗಿ ಗ್ರಾಮಸ್ಥರಿಗೆ ಜಾಗೃತಿ ಕಾರ್ಯಕ್ರಮ.<br>▸ ಹಲ್ಲುಜ್ಜುವುದು, ಪ್ರತಿದಿನ ಸ್ನಾನ ಮಾಡುವುದು, ಕೈತೊಳೆಯುವುದು ಇತ್ಯಾದಿ ಸ್ವಚ್ಛತಾ ಆಚರಣೆಗಳ ಮಹತ್ವದ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.<br><br>**ಬೆಂಗಳೂರು ನಗರ ಹೊರತು ಪಡಿಸಿ ಇತರ ನಗರ ಪ್ರದೇಶಗಳಲ್ಲಿ ನೀರಿನ ಪೂರೈಕೆ**<br>▸ ನಗರಸಭಾ ಆಡಳಿತದ ಇಲಾಖೆಯಲ್ಲಿ ಪ್ರಸ್ತುತ ತೆರವಾದ ಸಾಂಖ್ಯಿಕ ಹುದ್ದೆಗಳನ್ನು ಭರ್ತಿಮಾಡುವುದು.<br>▸ ಎಲ್ಲ ಸ್ಥಳೀಯ ಸಂಸ್ಥೆಗಳಿಂದ ನೀರು ಪೂರೈಕೆ ಮತ್ತು ನೈರ್ಮಲ್ಯದ ಬಗ್ಗೆ ದತ್ತಾಂಶದ ಸಂಗ್ರಹಣಕ್ಕಾಗಿ ಸೂಕ್ತ ಸಾಂಖ್ಯಿಕ ನಮೂನೆಗಳು ಮತ್ತು ಕಾರ್ಯವಿಧಾನಗಳನ್ನು ವಿನ್ಯಾಸಗೊಳಿಸುವುದು.<br>▸ ದತ್ತಾಂಶ ಮತ್ತು ಆನಂತರದ ಪ್ರಕ್ರಿಯೆಗಳ ಸಂಗ್ರಹಣೆಯನ್ನು ಆರಂಭಿಸುವುದು.<br>▸ ನಗರ ಪ್ರದೇಶಗಳು ನೀರುಪೂರೈಕೆ ಮತ್ತು ನೈರ್ಮಲ್ಯದ ಬಗ್ಗೆ ವಾರ್ಷಿಕ ಪ್ರಕಟಣೆಯನ್ನು ಹೊರತರುವುದು. | | | |

| | | | | |
|---|---|---|---|---|
| | ▸ ಇಲಾಖೆಯ ವೆಬ್‌ಸೈಟ್‌ನಲ್ಲಿ ಎಲೆಕ್ಟ್ರಾನಿಕ್ ರೂಪದಲ್ಲಿ ಪ್ರಸಾರ ಮಾಡುವುದು. | | | |
| **ಸಾರಿಗೆ ಅಂಕಿಅಂಶಗಳು** | **ಮೋಟಾರು ವಾಹನ ನೋಂದಣಿ ಅಂಕಿಅಂಶಗಳು**<br>**ರಸ್ತೆ ಅಂಕಿಅಂಶಗಳು**<br>▸ ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆ.<br>▸ ಟ್ರಾಫಿಕ್ ಅಪಘಾತ ಅಂಕಿಅಂಶಗಳು.<br>▸ ಪ್ಯಾಸೆಂಜರ್ ಟ್ರಾಫಿಕ್ ಅಂಕಿಅಂಶಗಳು. | ▸ ಯೋಜನೆ–1: ಸಬಲವಾದ ದತ್ತಕಣಜವನ್ನು ನಿರ್ಮಿಸುವುದು<br>▸ ಯೋಜನೆ–2: ದತ್ತಾಂಶದ ಪ್ರಸಾರ<br>▸ ಯೋಜನೆ–3: ಇಲಾಖೆಯಲ್ಲಿ (ರಸ್ತೆ ಅಂಕಿ ಅಂಶಗಳು) ಸಾಂಖ್ಯಿಕ ವ್ಯವಸ್ಥೆಯನ್ನು ಬಲಪಡಿಸುವುದು.<br>▸ ಯೋಜನೆ–4: ರಾಜ್ಯ ರಸ್ತೆ ನಿಗಮಗಳ ಪ್ರಯಾಣಿಕರ ಅಂಕಿಅಂಶಗಳನ್ನು ಒಗ್ಗೂಡಿಸುವುದು.<br>▸ ಯೋಜನೆ–5: ಖಾಸಗಿ ಸಾರಿಗೆ ನಿರ್ವಾಹಕರ ಪ್ರಯಾಣಿಕರ ಅಂಕಿಅಂಶಗಳ ದತ್ತಾಂಶ ಕಣಜವನ್ನು ನಿರ್ಮಿಸುವುದು. | ▸ ಈ ಇಲಾಖೆಯು ಅಂಕಿ–ಅಂಶಗಳ ಸಂಗ್ರಹಣೆ ಮತ್ತು ಸಂಕಲನದ ಸ್ವಂತದ ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅವು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಒಳಗೊಂಡಿರುವುದಿಲ್ಲ. | ▸ ಆನ್‌ಲೈನ್–ಈ ಇಲಾಖೆಯು ಸದೃಢ ವ್ಯವಸ್ಥೆಯನ್ನು ಹೊಂದಿರುವುದರಿಂದ, ಅದನ್ನು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ತೆಗೆದುಕೊಂಡಿಲ್ಲ. |
| **ಸ್ಥಳೀಯ ಪ್ರದೇಶ ಯೋಜನೆಗಾಗಿ ಅಂಕಿಅಂಶಗಳು** | ▸ 2009–10 ರ ಅವಧಿಯಲ್ಲಿ ಆರಂಭಿಸಲ್ಪಟ್ಟ ಜಿಲ್ಲೆಗಳನ್ನೊಳಗೊಂಡು 10 ಜಿಲ್ಲೆಗಳಲ್ಲಿನ ಊಗಳ ಮೂಲಕ ಕೇಂದ್ರ ಸಾಂಖ್ಯಿಕ ಸಂಸ್ಥೆಯಿಂದ ನಿಗದಿ ಪಡಿಸಲ್ಪಟ್ಟ ಕ್ರಮವಾಗಿ ಶೆಡ್ಯೂಲ್ ಎ ಮತ್ತು ಶೆಡ್ಯೂಲ್ ಬಿ ಎಂಬ ಮಾದರಿಗಳಲ್ಲಿ ಸ್ಥಳೀಯ ಮಟ್ಟದ ಅಭಿವೃದ್ಧಿಗಾಗಿ ಮೂಲ ಅಂಕಿಅಂಶಗಳಿಗೆ ಸಂಬಂಧಿಸಿದ ಸ್ಥಿರ ಮತ್ತು ಕ್ರಿಯಾತ್ಮಕ ದತ್ತಾಂಶ ಸಂಗ್ರಹಣೆ. | ▸ ಯೋಜನೆ–1: ಇಲಾಖೆಯಲ್ಲಿನ ಸಾಂಖ್ಯಿಕ ವ್ಯವಸ್ಥೆಯನ್ನು ಸಬಲಗೊಳಿಸುವುದು.<br>▸ ಯೋಜನೆ–2: ವಿಶ್ವಾಸಾರ್ಹ, ನೆಚ್ಚಿನ ಮತ್ತು ಸಕಾಲಿಕ ದತ್ತಾಂಶವನ್ನು ಒದಗಿಸುವುದು.<br>▸ ಯೋಜನೆ–3: ದತ್ತಾಂಶದ ಪ್ರಸಾರ | ▸ ಸ್ಥಳೀಯ ಪ್ರದೇಶ ಅಂಕಿಅಂಶಗಳನ್ನು ಸಬಲಗೊಳಿಸಲು ಚಾಲನೆ ನೀಡಲಾಯಿತು. ಸ್ಥಳೀಯ ಪ್ರದೇಶ ಅಂಕಿಅಂಶಗಳ ಅಗತ್ಯತೆಯನ್ನು ಕಂಡುಕೊಳ್ಳಲಾಯಿತು ಮತ್ತು ಸ್ಥಳೀಯ ಪ್ರದೇಶ ಅಂಕಿಅಂಶಗಳನ್ನು ಸಂಗ್ರಹಿಸಲು ಮಾದರಿಯನ್ನು ವಿನ್ಯಾಸಗೊಳಿಸಲಾಯಿತು ಮತ್ತು ಅದರನ್ವಯ ಆ ಅಂಕಿಅಂಶಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಗೆ ಒಪ್ಪಿಸಲಾಗುವುದು. | ಆನ್‌ಲೈನ್–ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ |

| | | | | |
|---|---|---|---|---|
| | ▸ ಈ ಕೆಳಕಂಡ ಮೂರು ಮಾದರಿಗಳ ದೃಷ್ಟಿಯಲ್ಲಿ ಮಾದರಿಯನ್ನು ಪ್ರಮಾಣೀಕರಿಸಲು ಮಧ್ಯಸ್ಥಗಾರರೊಂದಿಗೆ ಸಮಾಲೋಚನಾ ಸಭೆಗಳನ್ನು ನಡೆಸಲಾಗುವುದು.<br>▸ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಾಮಾನ್ಯ ಮಾಹಿತಿ.<br>▸ ಸ್ಥಳೀಯ ಮಟ್ಟದ ಅಭಿವೃದ್ಧಿಗಾಗಿ ಮೂಲ ಅಂಕಿಅಂಶಗಳ ಕೇಂದ್ರೀಯ ಸಾಂಖ್ಯಿಕ ಸಂಸ್ಥೆ ಮಾದರಿ.<br>ಮಾದರಿಯನ್ನು ಯೋಜನಾ ಇಲಾಖೆಯವರು ವಿನ್ಯಾಸಗೊಳಿಸದರು.<br>▸ ನಗರ ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸಲು ಅಗತ್ಯವಿರುವ ನಿಯತಾಂಕಗಳನ್ನು ನಿರ್ಧರಿಸುವುದಕ್ಕಾಗಿ ಮಧ್ಯಸ್ಥಗಾರರೊಂದಿಗೆ ಸಮಾಲೋಚನಾ ಸಭೆಗಳು.<br>▸ ದತ್ತಾಂಶದ ಸಂಗ್ರಹಣ, ಸಂಕಲನ ಮತ್ತು ವಿಶ್ಲೇಷಣೆಯಲ್ಲಿ ಮತ್ತು ಮಾಹಿತಿ ಸಂಪರ್ಕ ತಂತ್ರಜ್ಞಾನದಲ್ಲಿಯೂ ಸಹ ಸ್ಥಳೀಯ ಸಂಸ್ಥೆ ಸಿಬ್ಬಂದಿಯ ಸಾಮರ್ಥ್ಯವನ್ನು ನಿರ್ಮಿಸುವುದು ಮತ್ತು ಸ್ಥಳೀಯ ಸಂಸ್ಥೆ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ವರದಿಗಳನ್ನು ಪ್ರಕಟಿಸುವುದು. | | | |

| | | | | |
|---|---|---|---|---|
| | ▸ ದತ್ತಾಂಶದ ವಿವರವಾದ ವಿಶ್ಲೇಷಣೆಯೊಂದಿಗೆ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಪ್ರಕಟಣೆಗಳನ್ನು ಹೊರತರುವುದು. | | | |
| **ಪ್ರಮುಖ ವಿತ್ತೀಯ ಪರಿಳಿತಗಳ ಬಗ್ಗೆ ದತ್ತಾಂಶ** | ▸ ಸಾಮಾನ್ಯ ಮುಂಗಡಪತ್ರದ(ಎ) ರಲ್ಲಿನ ಮತ್ತು ತೆರಿಗೆ ದತ್ತಾಂಶದ (ಎ) ರಲ್ಲಿನ ಈ ಮೇಲ್ಕಂಡ ಶಿಫಾರಸುಗಳಿಗೆ ಸಂಬಂಧಿಸಿದಂತೆ ಇಲಾಖೆಗಳ ದತ್ತಾಂಶವನ್ನು ರಾಜ್ಯ ಆಯವ್ಯಯದಲ್ಲಿ ವಿಂಗಡಿಸಿಲ್ಲ ಮತ್ತು ಒದಗಿಸಿಲ್ಲ. ಈ ಮೇಲ್ಕಂಡಂತೆ ಕೊಟ್ಟ ವಿವರಗಳನ್ನು ಪ್ರಕಟಿಸುವ ಅಗತ್ಯವಿಲ್ಲ.<br>▸ ಹಣಕಾಸು ಇಲಾಖೆಯು 2010–11ರಿಂದ ಈ ದತ್ತಾಂಶವನ್ನು ತಮ್ಮ ವೆಬ್‌ಸೈಟ್ ಮೂಲಕ ಸಾರ್ವಜನಿಕರಿಗೆ ಲಭ್ಯವಾಗಿಸಬೇಕು. | ▸ ಯೋಜನೆ–1: ಬಲಿಷ್ಠವಾದ ಆರ್ಥಿಕ ದತ್ತ ಕಣಜವನ್ನು ನಿರ್ಮಿಸುವುದು ಮತ್ತು ದತ್ತಾಂಶದ ಪ್ರಸಾರ. | ▸ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಪ್ರತಿವರ್ಷ ರಾಜ್ಯ ಮುಂಗಡಪತ್ರದ ಆರ್ಥಿಕ ಮತ್ತು ಉದ್ದೇಶ ವರ್ಗೀಕರಣವನ್ನು ಪ್ರಕಟಿಸುತ್ತಿದೆ. ಆರ್ಥಿಕ ಪರಿಳಿತಗಳ ಬಗ್ಗೆ ರಾಷ್ಟ್ರೀಯ ಸಾಂಖ್ಯಿಕ ಆಯೋಗದ ಶಿಫಾರಸ್ಸುಗಳು ಹಣಕಾಸು ಇಲಾಖೆಯಿಂದ ಅನುಷ್ಠಾನಗೊಳಿಸಲ್ಪಡುತ್ತಿವೆ. ಅದನ್ನು ಹಣಕಾಸು ಇಲಾಖೆಯ ವೆಬ್‌ಸೈಟ್‌ನಲ್ಲಿ ತೋರಿಸಲಾಗುತ್ತದೆ. | ▸ ಆನ್‌ಲೈನ್–ಸ್ವತಂತ್ರ ಅಪ್ಲಿಕೇಶನ್ |
| **ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ** | ▸ ಮೇಲ್ವಿಚಾರಣೆಗಾಗಿ ಮತ್ತು ಮೌಲ್ಯಮಾಪನಕ್ಕಾಗಿ ಅಂಕಿಅಂಶಗಳನ್ನು ನಿರ್ವಹಿಸುವುದು.<br>▸ ಆಸ್ತಿಗಳ ಬಗ್ಗೆ ದತ್ತಾಂಶ ಕಣಜವನ್ನು ನಿರ್ಮಿಸುವುದು. | ▸ ಯೋಜನೆ–1: ಬಲಿಷ್ಠವಾದ ಆರ್ಥಿಕ ದತ್ತ ಕಣಜವನ್ನು ನಿರ್ಮಿಸುವುದು ಮತ್ತು ದತ್ತಾಂಶದ ಪ್ರಸಾರ. | ▸ ಯೋಜನಾ ಇಲಾಖೆಯ ಮೇಲ್ವಿಚಾರಣೆ ಮತ್ತು ಮಾಹಿತಿ ವಿಭಾಗ ಮತ್ತು ಮೌಲ್ಯಮಾಪನ ವಿಭಾಗವು ಈ ಬಗ್ಗೆ ಕ್ರಮಕೈಗೊಳ್ಳುತ್ತದೆ.<br>▸ ರಾಷ್ಟ್ರೀಯ ಕನಿಷ್ಟ ಗುಣಮಟ್ಟಗಳಿಗೆ ಅನುಗುಣವಾಗಿ ವಿಶ್ವಾಸಾರ್ಹ, ನೆಚ್ಚಿಗೆಯ ಮತ್ತು ಸಕಾಲಿಕ ದತ್ತಾಂಶವನ್ನು ಒದಗಿಸಲಿಕ್ಕೆ ಕ್ರಮ ಕೈಗೊಳ್ಳಲಾಗಿದೆ.<br>▸ ಯೋಜನಾ ಇಲಾಖೆಯ ಅಡಿಯಲ್ಲಿ ಪ್ರತ್ಯೇಕವಾದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಎಲ್ಲ ಇಲಾಖೆಗಳ ಮೌಲ್ಯಮಾಪನ ಆಯಾಮಗಳನ್ನು ನೋಡಿಕೊಳ್ಳುತ್ತಿದೆ. | ▸ ಆನ್‌ಲೈನ್– ಯೋಜನಾ ಆಯೋಗವು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಈ ಬಗ್ಗೆ ಕ್ರಮ ಕೈಗೊಂಡಿದೆ ಮತ್ತು ಆ ಮೌಲ್ಯಮಾಪನ ವರದಿಗಳು ಆನ್‌ಲೈನ್‌ನಲ್ಲಿ ಲಭ್ಯವಿರುತ್ತವೆ |

### 9.2.2 ಜಿಲ್ಲಾ ಸಾಂಖ್ಯಿಕ ಕಛೇರಿಗಳು ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಸಮಾಲೋಚಕರ ಪಾತ್ರ

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ, ದತ್ತಾಂಶದ ನೀಡಿಕೆ, ಸಂಕಲನ ಹಾಗೂ ಸಿಂಧುತ್ವಗಳು ಮಾನವಿಕದಿಂದ ವೆಬ್ ಆಧಾರಿತವಾಗಿ ಬದಲಾದಾಗ, ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯಿಂದ ಅಭಿವೃದ್ಧಿಪಡಿಸಿದ ಸಾಫ್ಟ್‌ವೇರ್‌ನಲ್ಲಿ 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳಲ್ಲಿ ತೊಡಗಿದ ಅಧಿಕಾರಿಗಳಿಗೆ/ ಸಿಬ್ಬಂದಿಗೆ ತರಬೇತಿ ನೀಡುವುದು ಮತ್ತು ಆ ಸಾಫ್ಟ್‌ವೇರ್‌ನ್ನು ಕನಿಷ್ಠ ಮೂರು ವರ್ಷಗಳವರೆಗೆ ನಿರ್ವಹಿಸುವ ಅಗತ್ಯವಾಗಿದೆ. ಈ ಉದ್ದೇಶಕ್ಕಾಗಿ, ಪ್ರೋಗ್ರಾಮರ್ ಸಮಾಲೋಚಕರನ್ನು ಜಿಲ್ಲಾ ಮಟ್ಟದಲ್ಲಿರುವ ಜಿಲ್ಲಾ ಮಾಹಿತಿ ಕೇಂದ್ರಕ್ಕೆ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ನಿಯೋಜಿಸಲಾಯಿತು. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಪ್ರೋಗ್ರಾಂ ಸಮಾಲೋಚಕರ ಪಾತ್ರ ಮತ್ತು ಕರ್ತವ್ಯಗಳನ್ನು ಈ ಕೆಳಗೆ ಹೇಳಲಾಗಿದೆ :

#### 9.2.2.1 ಜಿಲ್ಲಾ ಸಾಂಖ್ಯಿಕ ಕಛೇರಿಗಳು ಮತ್ತು ಜಿಲ್ಲಾ ಪಂಚಾಯತಿ ಕಛೇರಿಗಳಲ್ಲಿನ ಪ್ರೋಗ್ರಾಂ ಸಮಾಲೋಚಕರ ಪಾತ್ರ ಮತ್ತು ಕರ್ತವ್ಯಗಳು

ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳಲ್ಲಿ ಪ್ರೋಗ್ರಾಮರ್ ಸಮಾಲೋಚಕರು

- ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳಿಂದ ನಿಯೋಜಿಸಲ್ಪಟ್ಟ ಎಲ್ಲ ವಿಧದ ಕಾರ್ಯಗಳನ್ನು ನೆರವೇರಿಸುವುದು.
- ಸಾಫ್ಟ್‌ವೇರ್ ಉಪಯೋಗಿಸಿ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು, ತರಬೇತಿಯನ್ನು ಕೈಗೊಳ್ಳುವುದು ಮತ್ತು ಸಾಫ್ಟ್‌ವೇರ್‌ನ ಸುಗಮ ನಿರ್ವಹಣೆಗಾಗಿ ವ್ಯವಸ್ಥೆ ಮಾಡುವುದು.
- ವೆಬ್ ಆಧಾರಿತ ಅಪ್ಲಿಕೇಶನ್‌ಗಳ ಉಪಯೋಗದ ಬಗ್ಗೆ ತಿಳಿದುಕೊಳ್ಳಲು ಕಛೇರಿಗಳಿಗೆ ಆಗಾಗ ಭೇಟಿ ನೀಡುವುದು.
- ಹೆಚ್ಚಿನ ಆದ್ಯತೆಯ ಮೇಲೆ ದೂರುಗಳಿಗೆ ಹಾಜರಾಗುವುದು.
- ಕಂಪ್ಯೂಟರ್‌ಗಳ ಮೇಲೆ ಕೆಲಸ ಮಾಡಲು ಸಮರ್ಥನಾಗಿರುವುದು ಮತ್ತು ಸಂದರ್ಭ ಬಂದಾಗ ದತ್ತಾಂಶ ನಮೂದು ಮಾಡುವುದು.
- ತಾನು ಕೆಲಸ ಮಾಡುತ್ತಿರುವ ಜಿಲ್ಲಾ ಅಧಿಕಾರಿಯಿಂದ ನಿಯೋಜಿತವಾದ ಇತರ ಯಾವುದೇ ಕಛೇರಿ ಕಾರ್ಯವನ್ನು ಮಾಡುವುದು.

**ಜಿಲ್ಲಾ ಪಂಚಾಯತಿಯಲ್ಲಿನ ಪ್ರೋಗಾಮರ್ ಸಮಾಲೋಚಕರು**

- ಮುಖ್ಯ ಯೋಜನಾ ಅಧಿಕಾರಿಯಿಂದ ವಹಿಸಲ್ಪಟ್ಟ ಎಲ್ಲ ವಿಧದ ಕಾರ್ಯಗಳನ್ನು ನೆರವೇರಿಸುವುದು, ಅವುಗಳಲ್ಲಿ ಈ ಕೆಳಗಿನವುಗಳು ಒಳಗೊಳ್ಳುತ್ತವೆ.
- ಆ ಮೂರು ಚಟುವಟಿಕೆಗಳಿಗೆ ಸಂಬಂಧಿಸಿದ ದತ್ತಾಂಶದ ಸಂಗ್ರಹಣ ಮತ್ತು ಸಂಕಲನ.
- ದತ್ತಾಂಶ ನಮೂದು ಕಾರ್ಯ
- ದತ್ತಾಂಶದ ಸಿಂಧುತ್ವ
- ಜಿಲ್ಲೆಗಾಗಿ ದತ್ತಾಂಶದ ಸಮಗ್ರೀಕರಣದಲ್ಲಿ ಮುಖ್ಯ ಯೋಜನಾಧಿಕಾರಿಯವರಿಗೆ ನೆರವಾಗುವುದು.

- ಸಂಗ್ರಹಿಸಿದ ದತ್ತಾಂಶವನ್ನು ಮುಖ್ಯ ಯೋಜನಾ ಅಧಿಕಾರಿಯ ಮತ್ತು ಸಂಬಂಧಿಸಿದ ಸಂಸ್ಥೆಯ ಹೊರತಾಗಿ ಇತರ ಯಾರಿಗೂ ತೋರಿಸಬಾರದು.
- ಈ ಮೇಲ್ಕಾಣಿಸಿದ ಕಾರ್ಯಕ್ಕಾಗಿ ಸಂಬಂಧಿಸಿದ ಕಛೇರಿಗಳಿಗೆ/ಸ್ಥಳೀಯ ಸಂಸ್ಥೆಗಳಿಗೆ ಆಗಾಗ ಭೇಟಿಯನ್ನು ನೀಡುವುದು.
- ಮುಖ್ಯ ಯೋಜನಾ ಅಧಿಕಾರಿ ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ನಿಯೋಜಿಸಿದ ಇತರ ಯಾವುದೇ ಕಾರ್ಯ ಮಾಡುವುದು.

### 9.2.2.2 ಜಿಲ್ಲಾ ಸಾಂಖ್ಯಿಕ ಕಛೇರಿಗಳು ಮತ್ತು ಜಿಲ್ಲಾ ಪಂಚಾಯತಿ ಕಛೇರಿಗಳಲ್ಲಿನ ಪ್ರೋಗ್ರಾಮರ್ ಸಮಾಲೋಚಕರ ಅಧಿಕಾರಾವಧಿ

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ನವೆಂಬರ್ 2011 ರಿಂದ ಮಾರ್ಚ್ 2016 ರ ಅವಧಿಯಲ್ಲಿ ಎರವಲು ಪಡೆದ ಪ್ರೋಗ್ರಾಮರ್ ಸಮಾಲೋಚಕರ ವಿವರಗಳು ಈ ಕೆಳಕಂಡ ಕೋಷ್ಟಕ 15 ರಲ್ಲಿ ಕೊಡಲಾಗಿದೆ.

**ಕೋಷ್ಟಕ 15:2011–16 ರ ಅವಧಿಯಲ್ಲಿ ನೇಮಕವಾದ ಪ್ರೋಗ್ರಾಮರ್ ಸಮಾಲೋಚಕರ ವಿವರಗಳು**

| ಕಾರ್ಯದ ಸ್ಥಳ | ಅವಧಿ | ಪ್ರೋಗ್ರಾಮರ್ ಸಮಾಲೋಚಕರ ಸಂಖ್ಯೆ |
|---|---|---|
| **ಜಿಲ್ಲಾ ಪಂಚಾಯತ್** | | |
| ಪ್ರತಿ ಜಿಲ್ಲೆಯ ಜಿಲ್ಲಾ ಪಂಚಾಯತ್ | 2011 (ನವೆಂಬರ್) –2014 (ನವೆಂಬರ್) | 60 |
| ಪ್ರತಿ ಜಿಲ್ಲೆಯ ಜಿಲ್ಲಾ ಪಂಚಾಯತ್ | 2014 (ನವೆಂಬರ್) –2016 (ಮಾರ್ಚ್) | 30 |
| **ಜಿಲ್ಲಾ ಸಾಂಖ್ಯಿಕ ಅಧಿಕಾರಿ** | | |
| ಪ್ರತಿ ಜಿಲ್ಲೆಯ ಜಿಲ್ಲಾ ಸಾಂಖ್ಯಿಕ ಕಛೇರಿ | 2011 (ನವೆಂಬರ್) –2014 (ನವೆಂಬರ್) | 30 |
| ಪ್ರತಿ ಜಿಲ್ಲೆಯ ಜಿಲ್ಲಾ ಸಾಂಖ್ಯಿಕ ಕಛೇರಿ | 2014 (ನವೆಂಬರ್)–2016 (ಮಾರ್ಚ್) | 30 |

**ಟಿಪ್ಪಣಿ:** ಯಾವುದೇ ಪ್ರೋಗ್ರಾಂ ಸಮಾಲೋಚಕರು 2016 ರಿಂದಲೂ  ಜಿಲ್ಲಾ ಸಾಂಖ್ಯಿಕ ಕಛೇರಿಗಳು ಮತ್ತು ಜಿಲ್ಲಾ ಪಂಚಾಯತಿ ಕಛೇರಿಗಳಲ್ಲಿ ಸದ್ಯಕ್ಕೆ ಕ್ಷೇತ್ರದಲ್ಲಿಲ್ಲ.

### 9.2.2.3 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಎರವಲು ಪಡೆದ ಪ್ರೋಗ್ರಾಮರ್ ಸಮಾಲೋಚಕರು ವಹಿಸಿದ ಪಾತ್ರ.

ನವೆಂಬರ್ 2011 ರಿಂದ ಮಾರ್ಚ್ 2016ರ ಅವಧಿಯಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಯೋಜನೆಯ ಅವಧಿಯಲ್ಲಿ ಎರವಲು ಪಡೆದ ಪ್ರೋಗ್ರಾಮರ್ ಸಮಾಲೋಚಕರು ವಹಿಸಿದ ಪಾತ್ರದ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಲಾಗುತ್ತದೆ.

**ಕೋಷ್ಟಕ 16: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಎರವಲು ಪಡೆದ ಪ್ರೋಗ್ರಾಮರ್ ಸಮಾಲೋಚಕರು ವಹಿಸಿದ ಪಾತ್ರ.**

| ಪ್ರೋಗ್ರಾಂ ಸಮಾಲೋಚಕರು/ ಸಮಾಲೋಚಕರು | ಯೋಜನೆಯ ಅನುಷ್ಠಾನದ ಅನ್ವಯ ಸಮಾಲೋಚಕರ ಪಾತ್ರ | ಗುರಿ | ತಮ್ಮ ಅಧಿಕಾರಾವಧಿಯಲ್ಲಿ ಪ್ರೋಗ್ರಾಮರ್ ಸಮಾಲೋಚಕರು ವಹಿಸಿದ ಪಾತ್ರ |
|---|---|---|---|
| **ಪ್ರೋಗ್ರಾಂ ಸಮಾಲೋಚಕರು** | • ಜಿಲ್ಲಾ ಇನ್‌ಫಾರ್ಮ್ಯಾಟಿಕ್ಸ್ ಸೆಂಟರ್‌ನಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರೋಗ್ರಾಮರ್ ಸಮಾಲೋಚಕರನ್ನು ಕಳಿಸುವ ಅಗತ್ಯವಾಗಿರುತ್ತದೆ.<br>• ಸಾಫ್ಟ್‌ವೇರ್ ಉಪಯೋಗಿಸಿ ಸಿಬ್ಬಂದಿಗೆ ಮಾರ್ಗದರ್ಶನ ಮಾಡುವುದು, ನೇರ ತರಬೇತಿಯನ್ನು ಕೈಗೊಳ್ಳುವುದು ಮತ್ತು ಸಾಫ್ಟ್‌ವೇರ್‌ನ ಸುಗಮ ಕಾರ್ಯಾಚರಣೆಗೆ ವ್ಯವಸ್ಥೆ ಮಾಡುವುದು.ಯೂಜರ್ ಐ.ಡಿ. ಪಾಸ್‌ವರ್ಡ್ ಇತ್ಯಾದಿಗಳನ್ನು ಒದಗಿಸುವುದರಿಂದ ಲ್ಯಾಪ್‌ಟಾಪ್‌ಗಳಿಗಾಗಿ ಅಭಿವೃದ್ಧಿ ಪಡಿಸಿದ ಅಪ್ಲಿಕೇಶನ್‌ಗಳನ್ನು ಚಾಲನೆಗೊಳಿಸಲು ಅವರ ಸೇವೆಗಳನ್ನು ಉಪಯೋಗಿಸಲಾಗುವುದು. ಸಾಫ್ಟ್‌ವೇರ್, ಯೂಜರ್ ಐ.ಡಿ. ಪಾಸ್‌ವರ್ಡ್ ಮತ್ತು ಲ್ಯಾಪ್‌ಟಾಪ್‌ನಲ್ಲಿ ಏನಾದರೂ ತೊಂದರೆಯಿದ್ದರೆ ಅವರು ಸ್ವತಃ ತಾನೆ ಅಥವಾ ಜಿಲ್ಲಾ ಇನ್‌ಫಾರ್ಮ್ಯಾಟಿಕ್ಸ್ ಆಫೀಸರ್ ಮತ್ತು ಸಾಫ್ಟ್‌ವೇರ್ ಅಭಿವೃದ್ಧಿ ತಂಡದೊಂದಿಗೆ ಪರಿಹರಿಸುವರು.<br>• ಪ್ರೋಗ್ರಾಮರ್ ಸಮಾಲೋಚಕರು ಅಪ್ಲಿಕೇಶನ್ ಸಾಫ್ಟ್‌ವೇರ್‌ನಲ್ಲಿ | • 2010–11 ರಿಂದ 2012–13 ವರೆಗೆ 3 ವರ್ಷಗಳ ಅವಧಿಗಾಗಿ 30 ಜಿಲ್ಲೆಗಳಿಗಾಗಿ ಪ್ರತಿಯೊಬ್ಬ ಪ್ರೋಗ್ರಾಮರ್ ಸಮಾಲೋಚಕರಿಗೆ ಪ್ರತಿ ತಿಂಗಳೂ ರೂ.25,000/– ರಂತೆ ಅದಕ್ಕಾಗಿ ಅಂದಾಜು ವೆಚ್ಚವು ರೂ.2.70 ಕೋಟಿ ಆಗುವುದು.<br>• ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ತಾತ್ರಿಕ ನಿರ್ದೇಶಕರ ಶ್ರೇಣಿಯ ಅಧಿಕಾರಿಯಾದ 'ಯೋಜನಾ ಸಂಯೋಜಕ'ನು ಮುಖ್ಯಸ್ಥನಾಗಿರುವ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಸಾಫ್ಟ್‌ವೇರ್ ಅಭಿವೃದ್ಧಿ ತಂಡವನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ನಿಯೋಜಿಸಿತು. ಅವರಿಗೆ ಹಿರಿಯ ಸಿಸ್ಟಮ್ ಅನಲಿಸ್ಟ್, ನ್ಯಾಶನಲ್ | • ನೂತನ ಐಸಿಟಿ ಅಪ್ಲಿಕೇಶನ್‌ಗಳ ಬಳಕೆ ಮಾಡುವಲ್ಲಿ ಉಪ–ಜಿಲ್ಲಾ ಮಟ್ಟದಲ್ಲಿ ಸಿಬ್ಬಂದಿಗೆ ತರಬೇತಿ ನೀಡಲು ಮಾರ್ಗದರ್ಶನ ಮಾಡಲು 30 ಪ್ರೋಗ್ರಾಮರ್ ಸಮಾಲೋಚಕರನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗೆ ಒದಗಿಸಲಾಯಿತು.<br>• ಅಪ್ಲಿಕೇಶನ್‌ಗಳ ಹಾಗೂ ಮಿನಿಲ್ಯಾಪ್‌ಟಾಪ್‌ಗಳ ಬಳಕೆ ಮಾಡುವಲ್ಲಿ ಪ್ರೋಗ್ರಾಮ್ ಸಮಾಲೋಚಕರು ಸುಮಾರು 14,100 ಪ್ರಾಥಮಿಕ ಕಾರ್ಯಕರ್ತರನ್ನು ತರಬೇತಿಗೊಳಿಸಿದ್ದಾರೆ.<br>• ಜಿಲ್ಲೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು 60 ಪ್ರೋಗ್ರಾಮರ್ ಸಮಾಲೋಚಕರನ್ನು ಜಿಲ್ಲಾ ಸಾಂಖ್ಯಿಕ ಕಛೇರಿಗಳು ಮತ್ತು ಜಿಲ್ಲಾ ಪಂಚಾಯತಿ ಕಛೇರಿಗಳಲ್ಲಿ ಕೆಲಸ ಮಾಡಲು 2014–15 ಅವಧಿಯಲ್ಲಿ ಇ–ಟೆಂಡರ್ ಪ್ರಕ್ರಿಯೆಯ ಮೂಲಕ ನೇಮಿಸಲಾಯಿತು. |

| | | | |
|---|---|---|---|
| | ಎದುರಿಸುವ ಸಮಸ್ಯೆಗಳನ್ನು ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್‌ಗೆ ಯೋಜನಾ ಸಂಯೋಜಕರಿಗೆ ವರದಿ ಮಾಡುವರು ಮತ್ತು ಇತರ ಸಮಸ್ಯೆಗಳನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ, ಬೆಂಗಳೂರು ಅವರಿಗೆ ವರದಿ ಮಾಡುವರು.<br>‣ ಸಿಬ್ಬಂದಿಯು ಸ್ವತಂತ್ರವಾಗಿ ಸಾಫ್ಟ್‌ವೇರ್‌ನ್ನು ನಿರ್ವಹಿಸಲು ಸಾಧ್ಯವಾಗಿರುವುದಕ್ಕೆ ಪ್ರೋಗ್ರಾಮರ್ ಸಮಾಲೋಚಕರು 2 ರಿಂದ 3 ವರ್ಷಗಳವರೆಗೆ ಜಿಲ್ಲೆಯಲ್ಲಿ ಉಳಿಯುವರು.<br>‣ 30 ಪ್ರೋಗ್ರಾಮರ್ ಸಮಾಲೋಚಕರು (ಪ್ರತಿ ಜಿಲ್ಲೆಗೆ ಒಬ್ಬರು). | ಇನ್‌ಫಾರ್ಮಿಟಿಕ್ ಸೆಂಟರ್ ಮತ್ತು ಇಬ್ಬರು ಹೊರಗುತ್ತಿಗೆ ಪ್ರೋಗ್ರಾಮರ್‌ಗಳು ಸಹಾಯ ಮಾಡಿದರು. | |

**9.2.2.4 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಎರವಲು ಪಡೆದ ಸಮಾಲೋಚಕರ ವಿವರಗಳು**

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ಪ್ರತ್ಯೇಕ ಸಮಾಲೋಚಕರನ್ನು ಮಾರ್ಚ್, 2013 ರಿಂದ ಜೂನ್ 2014 ರ ವರೆಗಿನ ಅವಧಿಯಲ್ಲಿ ಎರವಲು ಪಡೆಯಲಾಯಿತು. ಆ ಪ್ರತ್ಯೇಕ ಸಮಾಲೋಚಕರ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

**ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯಲ್ಲಿ ಪ್ರತ್ಯೇಕ ಸಮಾಲೋಚಕರ ಪಾತ್ರ ಮತ್ತು ಕರ್ತವ್ಯಗಳು**

- ಈ ಸಮಾಲೋಚಕರು–ಕಾರ್ಯಕ್ರಮ ನಿರೂಪಣೆ, ಸಂಬಂಧಿಸಿದ ಏಜೆನ್ಸಿಗಳೊಂದಿಗೆ ಸಂಯೋಜನೆ, ಮೌಲ್ಯ ನಿರ್ಣಯ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯೊಂದಿಗೆ ದೈನಂದಿನ ಪತ್ರ ವ್ಯವಹಾರ ಇತ್ಯಾದಿಗಳಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನದಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಏಜೆನ್ಸಿಯ ಯೋಜನಾ ನಿರ್ದೇಶಕರಿಗೆ–ಬೆಂಬಲ ಸೇವೆಯನ್ನು ಒದಗಿಸುವುದು
- ಬೆಳೆ ದಾಸ್ತಾನು ಉನ್ನತೀಕರಣ, ಸಾರ್ವಜನಿಕ ಆಸ್ತಿ ಮತ್ತು ಫಲಾನುಭವಿ ಮ್ಯಾಪಿಂಗ್ ಮತ್ತು ಸಿಸ್ಟಮ್ ಪ್ರಾಜೆಕ್ಟ್‌ನ ಮೇಲ್ವಿಚಾರಣೆ–ಇತ್ಯಾದಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಗೆ ವಹಿಸಿದ ಹೆಚ್ಚುವರಿ ಕಾರ್ಯಗಳಲ್ಲಿ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಯೋಜನಾ ಅಧಿಕಾರಿಯು ವಹಿಸಿದ ಯಾವುದೇ ಕಾರ್ಯದಲ್ಲಿ ಸಹ ಈ ಸಮಾಲೋಚಕರು ನೆರವಾಗುವುದು.

**ಪ್ರತ್ಯೇಕ ಸಮಾಲೋಚಕರ ಅಧಿಕಾರಾವಧಿ**

**ಪ್ರತ್ಯೇಕ ಸಮಾಲೋಚಕರ ವಿವರ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿವೃತ್ತ ಉಪ-ನಿರ್ದೇಶಕ ಶ್ರೀ ಎಲ್. ಎಸ್. ಶ್ರೀನಿವಾಸರವರನ್ನು ಈ ಕೆಳಗೆ ನಮೂದಿಸಿದ ಅವಧಿಗಾಗಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಬೆಂಗಳೂರು ಅಕಾಡೆಮಿಯಲ್ಲಿ ಸಮಾಲೋಚಕರೆಂದು ನೇಮಿಸಲಾಯಿತು.**

| ಅವಧಿ | ಅಧಿಕಾರಾವಧಿ | ಸಂಬಳ |
|---|---|---|
| 18.03.2013 ರಿಂದ 20.05.2013 | 3 ತಿಂಗಳುಗಳು | ರೂ. 33,000 ಪ್ರತಿ ತಿಂಗಳು |
| 02.9.2013 ರಿಂದ01.12.2013 | 3 ತಿಂಗಳುಗಳು | ರೂ 33,000 ಪ್ರತಿ ತಿಂಗಳು |
| 5.03.2014 ರಿಂದ30.06.2014 | 3 ತಿಂಗಳುಗಳು 27 ದಿನಗಳು | ರೂ 40,000 ಪ್ರತಿ ತಿಂಗಳು |

**ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಎರವಲು ಪಡೆದ ಪ್ರತ್ಯೇಕ ಸಮಾಲೋಚಕರು ವಹಿಸಿದ ಪಾತ್ರ :**

| ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಎರವಲು ಪಡೆದ ಪ್ರತ್ಯೇಕ ಸಮಾಲೋಚಕರು ವಹಿಸಿದ ಪಾತ್ರ | | | |
|---|---|---|---|
| **ಪ್ರೋಗ್ರಾಂ ಸಮಾಲೋಚಕರು / ಸಮಾಲೋಚಕರು** | **ಯೋಜನೆಯ ಅನುಷ್ಠಾನದ ಅನ್ವಯ ಸಮಾಲೋಚಕರ ಪಾತ್ರ** | **ಗುರಿ** | **ತಮ್ಮ ಅಧಿಕಾರಾವಧಿಯಲ್ಲಿ ಪ್ರತ್ಯೇಕ ಸಮಾಲೋಚಕರು ವಹಿಸಿದ ಪಾತ್ರ** |
| **ಸಮಾಲೋಚಕರು** | ‣ ಈ ಸಮಾಲೋಚಕರು ಲೈನ್ ಇಲಾಖೆಗಳಿಗೆ ಸಲಹೆ ನೀಡಬೇಕು ಮತ್ತು ಯೋಜನೆ ಹಾಗೂ ನೀತಿ ನಿರ್ಣಯ ಮಾಡುವುದಕ್ಕಾಗಿ ಅಗತ್ಯವಿರುವ ದತ್ತಾಂಶ ಮತ್ತು ದಾಖಲೆ ಸೂಚಕಗಳ ವಿಧದ ನಿರ್ಧಾರಣೆ ಮಾಡಬೇಕು. | ‣ ಫೆಬ್ರವರಿ 2009ರ ಕೊನೆಗೆ 2 ಅಥವಾ 3 ಅರ್ಹ ಸಮಾಲೋಚಕರನ್ನು ಗುರುತಿಸುವುದು ಮತ್ತು ಪಟ್ಟಿ ಮಾಡುವುದು ಹಾಗೂ ಆ ಬಗ್ಗೆ ಮಾರ್ಚ್ 2009ರ (21-02-2009 ರಂದು) ಮೊದಲನೇ ವಾರದಲ್ಲಿ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯಕ್ಕೆ ಪ್ರಸ್ತಾವನೆ ಕಳಿಸುವುದು. (ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ತಯಾರಿಕೆಗಾಗಿ ಪರಿಶೀಲನಾ/ಸಲಹಾ ಸಭೆ) | ‣ ಈ ಸಮಾಲೋಚಕರು – ಕಾರ್ಯಕ್ರಮ ನಿರೂಪಣೆ, ಸಂಬಂಧಿಸಿದ ಏಜೆನ್ಸಿಗಳೊಂದಿಗೆ ಸಂಯೋಜನೆ, ಮೌಲ್ಯ ನಿರ್ಣಯ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಯೊಂದಿಗೆ ದೈನಂದಿನ ಪತ್ರ ವ್ಯವಹಾರ ಇತ್ಯಾದಿಗಳಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನದಲ್ಲಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಏಜೆನ್ಸಿಯ ಯೋಜನಾ ನಿರ್ದೇಶಕರಿಗೆ-ಬೆಂಬಲ ಸೇವೆಯನ್ನು ಒದಗಿಸಿದರು.<br>‣ ಬೆಳೆ ದಾಸ್ತಾನು ಉನ್ನತೀಕರಣ, ಸಾರ್ವಜನಿಕ ಆಸ್ತಿ ಮತ್ತು ಫಲಾನುಭವಿ ಮ್ಯಾಪ್ಪಿಂಗ್ ಮತ್ತು ಸಿಸ್ಟಮ್ ಪ್ರಾಜೆಕ್ಟ್‌ನ ಮೇಲ್ವಿಚಾರಣೆ-ಇತ್ಯಾದಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಗೆ ವಹಿಸಿದ ಹೆಚ್ಚುವರಿ ಕಾರ್ಯಗಳಲ್ಲಿ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಯೋಜನಾ ಅಧಿಕಾರಿಯು ವಹಿಸಿದ ಯಾವುದೇ ಕಾರ್ಯದಲ್ಲಿ ಸಹ ಈ ಸಮಾಲೋಚಕರು ನೆರವಾದರು. |

**9.2.2.5 ಸಮಾಲೋಚಕರ ಸಾಮರ್ಥ್ಯ ನಿರ್ಮಾಣ:**

ಅಧಿಕಾರಿಗಳೊಂದಿಗೆ, ನ್ಯಾಶನಲ್ ಇನ್‌ಫಾರ್ಮ್ಯಾಟಿಕ್ಸ್ ಸೆಂಟರ್ ಮತ್ತು ಯೋಜನಾ ಅಧಿಕಾರಿ, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ-ಅವರೊಂದಿಗಿನ ನಮ್ಮ ಚರ್ಚೆಯ ಅನ್ವಯ ಸಮಾಲೋಚಕರ ಸೇವೆಗಳನ್ನು ಹಿಂಪಡೆಯುವುದಕ್ಕಿಂತ ಮೊದಲು ಯಾವುದೇ ನವೀನ/ಸಾಮರ್ಥ್ಯ ನಿರ್ಮಾಣದ ಚಟುವಟಿಕೆಯನ್ನು ಮಾಡಲಾಗಿಲ್ಲ. ಅಲ್ಲದೆ ಈ ಸಂಬಂಧವಾಗಿ ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್‌ನ ಅಧಿಕಾರಿಗಳು ಯಾವುದೇ ಹೆಚ್ಚಿನ ಮಾಹಿತಿಯನ್ನು ಸಹ ಒದಗಿಸಿಲ್ಲ.

### 9.2.3 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಅಭಿವೃದ್ಧಿ ಪಡಿಸಿದ ವೆಬ್ ಅಪ್ಲಿಕೇಶನ್‌ಗಳಲ್ಲಿ ಆನ್‌ಲೈನ್ ದತ್ತಾಂಶ ಲಭ್ಯತೆ ಮತ್ತು ದತ್ತಾಂಶ ನವೀಕರಣಕ್ಕಾಗಿ ಪೋರ್ಟಲ್.

#### 9.2.3.1. ಆನ್‌ಲೈನ್ ದತ್ತಾಂಶ ಪ್ರಸಾರಕ್ಕಾಗಿ ಅಭಿವೃದ್ಧಿ ಪಡಿಸಿದ ವೆಬ್ ಪೋರ್ಟಲ್

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ವೆಬ್ ಪಬ್ಲಿಕ್ ಪೋರ್ಟಲ್‌ನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸಾಂಖ್ಯಿಕ ದತ್ತಾಂಶ ವರದಿಯನ್ನು ಪಡೆಯಲು ಸಾರ್ವಜನಿಕರಿಗೆ ಅವು ಲಭ್ಯವಿದೆ. ವಿವಿಧ ಅಧಿಕೃತ ಅಂಕಿಅಂಶಗಳು ಮತ್ತು ಸಮೀಕ್ಷೆಗಳಿಗಾಗಿ ಮಾದರಿಗಳ ಮತ್ತು ಪ್ರಶ್ನಾವಳಿಗಳ ಅಂತರ್‌ನಿರ್ಮಿತ ದತ್ತಾಂಶವನ್ನು ಒಳಗೊಂಡ ವೆಬ್ ಅಪ್ಲಿಕೇಶನ್‌ಗಳನ್ನು ಪ್ರತಿಷ್ಠಾಪಿಸಿದ ನೋಟ್‌ಬುಕ್‌ಗಳು/ ಮಿನಿ ಲ್ಯಾಪ್‌ಗಳ ಮೂಲಕ ದತ್ತಾಂಶವು ಕ್ಷೇತ್ರ ಅಧಿಕಾರಿಗಳಿಂದ ಸಂಗ್ರಹಿಸಲ್ಪಡುತ್ತದೆ. ದತ್ತಾಂಶದ ಸಂಕಲನ ಮತ್ತು ವಿಶ್ಲೇಷಣೆಯನ್ನು ಜಿಲ್ಲಾ ಮಟ್ಟದಲ್ಲಿ ಮಾಡಲಾಗುತ್ತದೆ ಮತ್ತು ಹೆಚ್ಚಿನ ವಿಶ್ಲೇಷಣೆ, ಪ್ರಕಟಣೆ ಮತ್ತು ದತ್ತಾಂಶದ ಪ್ರಸಾರಕ್ಕಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದವರಿಂದ ಅಂತಿಮಗೊಳಿಸಲಾಗುತ್ತದೆ. ಆನಂತರ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದವರು ದತ್ತಾಂಶವನ್ನು ಅಂತಿಮಗೊಳಿಸಿದ ನಂತರ ಆ ದತ್ತಾಂಶವನ್ನು ನಿರಂತರವಾಗಿ ವೆಬ್ ಪೋರ್ಟಲ್‌ನಲ್ಲಿ ಸೇರಿಸಲಾಗುತ್ತದೆ. ಸಾಂಖ್ಯಿಕ ಮೂಲಸೌಕರ್ಯವನ್ನು ಸುಧಾರಿಸುವ ಉದ್ದೇಶದಿಂದ, ವೆಬ್ ಪೋರ್ಟಲ್‌ನ ನಿರ್ಮಾಣದಿಂದಾಗಿ ತಳಹದಿ ಮಟ್ಟದಲ್ಲಿ ದತ್ತಾಂಶ ಸಂಗ್ರಹಣೆಯಲ್ಲಿ ನೆರವಾಗಿದೆ ಮತ್ತು ಕೇಂದ್ರೀಕೃತ ವೆಬ್ ಪೋರ್ಟಲ್‌ಗೆ ದತ್ತಾಂಶ ಸೇರ್ಪಡೆಗೆ ಅನುವಾಗಿದೆ ಮತ್ತು ದತ್ತಾಂಶ ಸಂಗ್ರಹಣೆ, ದತ್ತಾಂಶ ಶೇಖರಣೆ, ಪುನಸ್ಸಂಪಾದನೆ ಮತ್ತು ದತ್ತಾಂಶದ ವಿಶ್ಲೇಷಣೆಯನ್ನು ಸುಗಮಗೊಳಿಸಿದೆ.

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಭಾಗವಾಗಿ ಅಭಿವೃದ್ಧಿ ಪಡಿಸಿದ 7 ವೆಬ್ ಅಪ್ಲಿಕೇಶನ್‌ಗಳಲ್ಲಿ ಪ್ರತಿಯೊಂದರ ಅಡಿಯಲ್ಲಿ ಸೃಷ್ಟಿಸಿದ ವರದಿಗಳ ಪಟ್ಟಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

**ಕೋಷ್ಟಕ 17: ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ವೆಬ್ ಪೋರ್ಟಲ್‌ನಲ್ಲಿ ಲಭ್ಯವಿರುವ ವರದಿಗಳ ಪಟ್ಟಿ.**

| ಕ್ರ. ಸಂ. | ವೆಬ್ ಅಪ್ಲಿಕೇಶನ್ | ಪ್ರತಿಯೊಂದೂ ವೆಬ್ ಅಪ್ಲಿಕೇಶನ್‌ಗಳ ಅಡಿಯಲ್ಲಿ ರಚಿಸಿದ ವರದಿ |
|---|---|---|
| 1 | ಗ್ರಾಹಕ ಬೆಲೆ ಸೂಚ್ಯಂಕ | 1. ಉಪಸಮೂಹ ವಾರು ಮಾಸಿಕ ಸೂಚ್ಯಂಕ<br>2. ಕೇಂದ್ರಗಳ ಮಾಸಿಕ ಸೂಚ್ಯಂಕಗಳನ್ನು ತೋರಿಸುವ ಸಾರಾಂಶ ವರದಿ<br>3. ಸೂಚ್ಯಂಕತುಲನಾ ವರದಿ<br>4. ಮಾಸಿಕ ರಾಜ್ಯ ಸರಾಸರಿ ವರದಿ<br>5. ಎಲ್ಲಾ ಕೇಂದ್ರವಾರು ಮತ್ತು ಸಮೂಹವಾರು ಸೂಚ್ಯಂಕವರದಿ<br>6. ಚಾಲ್ತಿ ಮತ್ತು ಹಿಂದಿನ ತಿಂಗಳ ರಾಜ್ಯ ಸರಾಸರಿ ಸೂಚ್ಯಂಕವರದಿ |
| 2 | ಸಗಟು ಬೆಲೆ ಸೂಚ್ಯಂಕ | 1. ಕೃಷಿ ಸರಕುಗಳ ವಾರದ ಬೆಲೆಗಳು<br>2. ಸರಕುಗಳ ಸಂಬಂಧಿತ ಬೆಲೆಯ ಡಬ್ಲ್ಯೂಎಎಂ<br>3. ಹಿಂದಿನ ತಿಂಗಳ ಮತ್ತು ವರ್ಷದ ಸರಕುಗಳ ಸೂಚ್ಯಂಕತುಲನಾ ವರದಿ |

| | | |
|---|---|---|
| 3 | ಸಾಮಾನ್ಯ ವ್ಯವಹಾರ ರಿಜಿಸ್ಟರ್ | 1. ಕಾರ್ಯಕರ್ತರ ಪಂಗಡ ಆಧಾರಿತ ಅಂಕಿಅಂಶಗಳು<br>2. ಜಿಲ್ಲಾವಾರು ಪರಿಶೀಲನಾ ಅಂಶಗಳು |
| 4 | ಕೃಷಿ ಅಂಕಿಅಂಶಗಳು | 1. ಬೆಳೆ ಸಂಗ್ರಹಣ ವರದಿ–ಅಧಿಕೃತ ಸಾಗುವಳಿ<br>2. ಬೆಳೆ ಸಂಗ್ರಹಣ ವರದಿ–ಅನಧಿಕೃತ ಸಾಗುವಳಿ<br>3. ಪ್ರಾಥಮಿಕ ಕಾರ್ಯಕರ್ತರಿಗಾಗಿ ಪ್ರಯೋಗದ ಯೋಜನೆ<br>4. ಬೆಳೆ ಸಂಗ್ರಹಣ ವರದಿ–ಅಧಿಕೃತ ಮತ್ತು ಅನಧಿಕೃತ ಸಾಗುವಳಿ |
| 5 | ಗ್ರಾಮೀಣ ಮತ್ತು ನಗರಪ್ರದೇಶ ಚಿಲ್ಲರೆ ಬೆಲೆ ಸೂಚ್ಯಂಕ | **ಗ್ರಾಮೀಣ ಚಿಲ್ಲರೆ ಬೆಲೆ ಸೂಚ್ಯಂಕ**<br>1. ಜಿಲ್ಲಾವಾರು ಮಾಸಿಕ ಸೂಚ್ಯಂಕ<br>2. ಬೆಲೆ ಸೂಚ್ಯಂಕದಲ್ಲಿ ಶೇಕಡಾ ಏರಿಳಿತ<br>3. ಜಿಲ್ಲಾ ಸಂಕ್ಷಿಪ್ತ ವರದಿ<br>**ನಗರಪ್ರದೇಶ ಚಿಲ್ಲರೆ ಬೆಲೆ ಸೂಚ್ಯಂಕ**<br>1. ಸಗಟು ಮತ್ತು ಚಿಲ್ಲರೆ ವಾರದ ಬೆಲೆಗಳು<br>2. ವಾರದ ಬೆಲೆಗಳು |
| 6 | ರಾಜ್ಯಕ್ಕೆ ಸ್ಥಳೀಯ ಸಂಸ್ಥೆಗಳ ಕೊಡುಗೆ | 1. ಆಡಳಿತಾತ್ಮಕ ಇಲಾಖೆಗಳ ಆದಾಯ ಹೂಡಿಕೆ ಖಾತೆಗಳು<br>2. ಸಾರ್ವಜನಿಕ ಅಧಿಕಾರಿಗಳ ಬಂಡವಾಳ ಹಣಕಾಸು ಖಾತೆ<br>3. ಸಾರ್ವಜನಿಕ ಆಡಳಿತದಿಂದ ನಿವ್ವಳ ಉತ್ಪನ್ನದ ಅಂದಾಜುಗಳು |

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್‌ರವರಿಂದ ತಯಾರಿಸಲ್ಪಟ್ಟ ವೆಬ್ ಪೋರ್ಟಲ್‌ನ ಸ್ನ್ಯಾಪ್‌ಶಾಟ್‌ನ್ನು ಈ ಕೆಳಗಿನ ಆಕೃತಿಯಲ್ಲಿ ಕೊಡಲಾಗಿದೆ.

**ಚಿತ್ರ 6: ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ವೆಬ್ ಪೋರ್ಟಲ್‌ನ ಸ್ನ್ಯಾಪ್‌ಶಾಟ್**




### 9.2.3.2 ವೆಬ್ ಅಪ್ಲಿಕೇಶನ್‌ಗಳ ಮೇಲೆ ದತ್ತಾಂಶ ಉನ್ನತೀಕರಣದ ಸ್ಥಿತಿಗತಿ

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಅಭಿವೃದ್ಧಿಪಡಿಸಿದ 7 ಅಪ್ಲಿಕೇಶನ್‌ಗಳು ಕಾರ್ಯಾಚರಣೆಯಲ್ಲಿವೆ ಮತ್ತು ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿದಂತೆ ಮಾಸಿಕವಾಗಿ, ಋತುಮಾನಕ್ಕೆ ಅನುಗುಣವಾಗಿ ಮತ್ತು ವಾರ್ಷಿಕವಾಗಿ ನಿರಂತರವಾಗಿ ಉನ್ನತೀಕರಿಸಲಾಗುತ್ತದೆ. ಒಟ್ಟು 7 ಅಪ್ಲಿಕೇಶನ್‌ಗಳಲ್ಲಿ ಎ) ಗ್ರಾಹಕ ಬೆಲೆ ಸೂಚ್ಯಂಕ, ಬಿ) ಸಗಟು ಮಾರಾಟ ಬೆಲೆ ಸೂಚ್ಯಂಕ, ಸಿ) ನಗರ ಪ್ರದೇಶ ಚಿಲ್ಲರೆ ಮಾರಾಟ ಬೆಲೆ ಸೂಚ್ಯಂಕ ಮತ್ತು ಡಿ) ಗ್ರಾಮೀಣ ಪ್ರದೇಶ ಬೆಲೆ ಸೂಚ್ಯಂಕ–ಈ 4 ಅಪ್ಲಿಕೇಶನ್‌ಗಳನ್ನು ತಿಂಗಳ ಆಧಾರದಲ್ಲಿ ಉನ್ನತೀಕರಣಗೊಳಿಸಲಾಗುತ್ತದೆ. ಆದರೆ ಕ್ಷೇತ್ರ ಗಣತಿ ಮತ್ತು ಋತುಮಾನಕ್ಕೆ ಅನುಗುಣವಾಗಿ ಉನ್ನತೀಕರಣಗೊಳಿಸಲಾಗುತ್ತದೆ. ಸ್ಥಳೀಯ ಸಂಸ್ಥೆ ಲೆಕ್ಕಪತ್ರಗಳ ಅಪ್ಲಿಕೇಶನ್‌ಗಳನ್ನು ವಾರ್ಷಿಕವಾಗಿ ಉನ್ನತೀಕರಣಗೊಳಿಸಲಾಗಿದೆ.

**ಕೋಷ್ಟಕ 18 : ವೆಬ್ ಅಪ್ಲಿಕೇಶನ್‌ಗಳ ಮೇಲೆ ದತ್ತಾಂಶ ಉನ್ನತೀಕರಣದ ಆವರ್ತನ**

| ಕ್ರ. ಸಂ. | ವೆಬ್ ಅಪ್ಲಿಕೇಶನ್‌ಗಳು | ಪರಿಷ್ಕರಣೆ | | | |
|---|---|---|---|---|---|
| | | ವಾರಕ್ಕೆ | ತಿಂಗಳಿಗೆ | ಋತುಮಾನಕ್ಕೆ | ವರ್ಷಕ್ಕೆ |
| 1. | ಗ್ರಾಹಕ ಬೆಲೆ ಸೂಚ್ಯಂಕ | | ✓ | | |
| 2. | ಸಗಟು ಬೆಲೆ ಸೂಚ್ಯಂಕ | | ✓ | | |
| 3. | ನಗರಪ್ರದೇಶ ಚಿಲ್ಲರೆ ಬೆಲೆ ಸೂಚ್ಯಂಕ* | | ✓ | | |
| 4. | ಗ್ರಾಮೀಣ ಚಿಲ್ಲರೆ ಬೆಲೆ | | ✓ | | |
| 5. | ಕ್ಷೇತ್ರ ಗಣತಿ | | | ✓ | |
| 6. | ಬೆಳೆ ಕಟಾವು ಪ್ರಯೋಗಗಳು | | | ✓ | |
| 7. | ಸ್ಥಳೀಯ ಸಂಸ್ಥೆ ಖಾತೆಗಳು (ಆರ್ಥಿಕ ಮತ್ತು ಉದ್ದೇಶ ವರ್ಗೀಕರಣ) | | | | ✓ |

## 9.3 ದತ್ತಾಂಶ ವಿಶ್ಲೇಷಣೆ: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಪರಿಣಾಮ

### 9.3.1 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಅಭಿವೃದ್ಧಿ ಪಡಿಸಿದ ಸಾಂಖ್ಯಿಕ ಮೂಲ ಸೌಕರ್ಯ

#### 9.3.1.1 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಯೋಜಿಸಿದ ಚಟುವಟಿಕೆಗಳ ಸದ್ಯದ ಸ್ಥಿತಿಗತಿ

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಜಿಲ್ಲಾ ಸಾಂಖ್ಯಿಕ ಕಛೇರಿಯ ಅಧಿಕಾರಿಗಳಿಗಾಗಿ ಅತ್ಯಾಧುನಿಕ ಸಂಪರ್ಕ ತಂತ್ರಜ್ಞಾನವನ್ನು, ವೆಬ್ ಅಪ್ಲಿಕೇಶನ್‌ಗಳ ಮೂಲಕ ಸಕಾಲಿಕ ದತ್ತಾಂಶ ಪ್ರಸರಣವನ್ನು ಸಾಧ್ಯವಾಗಿಸಲು ಕ್ಷೇತ್ರದಲ್ಲಿನ ದತ್ತಾಂಶ ನಮೂದಿಗಾಗಿ ಹಸ್ತಚಾಲಿತ ಉಪಕರಣಗಳನ್ನು ಒದಗಿಸಲು–3 ವಿಧದ ಉಪಕರಣಗಳಾದ ಮಾಹಿತಿ ಸಂವಹನ ತಂತ್ರಜ್ಞಾನ ಉಪಕರಣ, ಮಾಹಿತಿ ತಂತ್ರಜ್ಞಾನ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳಲ್ಲಿ ಪ್ರತಿಯೊಂದರ ಅಡಿಯಲ್ಲಿ ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಕೆಲವು ಚಟುವಟಿಕೆಗಳನ್ನು ಯೋಜಿಸಲಾಗಿದೆ. ಯೋಜಿತ ಕಾರ್ಯಗಳು ಮತ್ತು ಅವುಗಳ ಚಾಲ್ತಿ ಸ್ಥಿತಿಯ ಬಗ್ಗೆ ಈ ವಿಭಾಗದಲ್ಲಿ ಚರ್ಚಿಸಲಾಗುತ್ತದೆ.

##### 9.3.1.1.1 ಮಾಹಿತಿ ಸಂವಹನ ತಂತ್ರಜ್ಞಾನ ಉಪಕರಣ

ಈ ಉಪಕರಣದ ಅಡಿಯಲ್ಲಿನ ಯೋಜಿತ ಕಾರ್ಯಗಳಲ್ಲಿ ಈ ಕೆಳಗಿನವುಗಳು ಒಳಗೊಳ್ಳುತ್ತವೆ:

**ಕೋಷ್ಟಕ 19: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಯೋಜಿಸಿದ ಮತ್ತು ಸಾಧಿಸಿದ ಮಾಹಿತಿ ಸಂವಹನ ತಂತ್ರಜ್ಞಾನದ ಅಗತ್ಯತೆಗಳು**

| ಕ್ರ.ಸಂ. | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ **ಅಡಿಯಲ್ಲಿ ಯೋಜಿತ ಚಟುವಟಿಕೆ** | ಗುರಿ | ಗುರಿ | ಗುರಿ |
|---|---|---|---|---|
| 1 | ಎಲ್ಲ ಇಲಾಖೆಗಳ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕಛೇರಿಗಳಲ್ಲಿ<br>ಇ–ಆಡಳಿತದ ಇಲಾಖೆಯಿಂದ ಒದಗಿಸಿದ ಕೆ ಸ್ವಾನ್ ಸೌಲಭ್ಯ ಉಪಯೋಗಿಸುವುದು.<br>ಸರ್ವರ್‌ಗಳನ್ನು ಕಳಿಸಲು ಇ–ಆಡಳಿತದ ಇಲಾಖೆ ಸ್ಥಾಪಿಸಿದ ದತ್ತಾಂಶ ಕೇಂದ್ರಗಳನ್ನು ಉಪಯೋಗಿಸುವುದು. | X | X | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಒದಗಿಸಿದ ಮಾಹಿತಿಯ ಅನ್ವಯ, ಕೆ ಸ್ವಾನ್ ಸೌಲಭ್ಯವನ್ನು ಮತ್ತು ಇ–ಆಡಳಿತದ ಇಲಾಖೆಯಿಂದ ಸ್ಥಾಪಿಸಲ್ಪಟ್ಟ ದತ್ತಾಂಶ ಕೇಂದ್ರಗಳನ್ನು ಉಪಯೋಗಿಸಿಲ್ಲ. |
| 2 | ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಆಇಖ ಗೆ ಒಂದು ಸರ್ವರ್‌ನ್ನು ಮತ್ತು 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗೆ ಮತ್ತೊಂದು ಸರ್ವರ್‌ನ್ನು ಒದಗಿಸುವುದು ಅಗತ್ಯವಾಗುವುದು ಮತ್ತು ಈ ಸರ್ವರ್‌ಗಳನ್ನು ರಾಜ್ಯ ಮಟ್ಟದ ದತ್ತಾಂಶ ಕೇಂದ್ರಗಳಿಗೆ ಕಳಿಸಲಾಗುವುದು. | 2 ಸರ್ವರ್‌ಗಳು | ಇಲ್ಲ | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಒದಗಿಸಿದ ಮಾಹಿತಿಯ ಅನ್ವಯ, ನಿಧಿಗಳ ಕೊರತೆಯಿಂದಾಗಿ ಈ ಸರ್ವರ್‌ಗಳನ್ನು ಭಾರತ ಸರ್ಕಾರವು ಖರೀದಿಸಿಲ್ಲ ಮತ್ತು ಪ್ರತಿಷ್ಠಾಪಿಸಿಲ್ಲ. |

| | | | | |
|---|---|---|---|---|
| 3 | ಈ ಸರ್ವರ್‌ಗಳನ್ನು 2010–11 ರ ಅವಧಿಯಲ್ಲಿ ಲಭ್ಯವಾಗಿಸಲಾಗುವುದು.ಈ 2 ಸರ್ವರ್‌ಗಳ ಅಂದಾಜು ಮೌಲ್ಯವು ರೂ. 5.00 ಲಕ್ಷ ಆಗುವುದು. | 2 ಸರ್ವರ್‌ಗಳು | ಇಲ್ಲ | ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಒದಗಿಸಿದ ಮಾಹಿತಿಯ ಅನ್ವಯ, ನಿಧಿಗಳ ಕೊರತೆಯಿಂದಾಗಿ ಈ ಸರ್ವರ್‌ಗಳನ್ನು ಭಾರತ ಸರ್ಕಾರವು ಖರೀದಿಸಿಲ್ಲ ಮತ್ತು ಪ್ರತಿಷ್ಠಾಪಿಸಿಲ್ಲ. |

**9.3.1.1.2 ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್**

ಈ ಉಪಕರಣದ ಅಡಿಯಲ್ಲಿನ ಯೋಜಿತ ಚಟುವಟಿಕೆಗಳಲ್ಲಿ ಈ ಕೆಳಗಿನವುಗಳು ಒಳಗೊಳ್ಳುತ್ತವೆ.

**ಕೋಷ್ಟಕ 20: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಡಿಯಲ್ಲಿ ಯೋಜಿಸಿದ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್.**

| ಕ್ರ.ಸಂ. | ಕರ್ನಾಟಕ ರಾಜ್ಯ ತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಯೋಜಿತ ಚಟುವಟಿಕೆ | ಗುರಿ | ಸಾಧನೆ | ಸದ್ಯದ ಸ್ಥಿತಿ |
|---|---|---|---|---|
| 1 | ಸಂಬಂಧಿಸಿದ ಇಲಾಖೆಗಳಿಂದ, ಸಮೀಕ್ಷೆಗಳನ್ನು ಕೈಗೊಳ್ಳುವುದಕ್ಕಾಗಿ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಒದಗಿಸುವುದಕ್ಕೆ 4828 ಮಿನಿ ಲ್ಯಾಪ್‌ಟಾಪ್‌ಗಳನ್ನು/10 ನೋಟ್ ಬುಕ್‌ಗಳನ್ನು/ಹಸ್ತಚಾಲಿತ ಉಪಕರಣಗಳನ್ನು ಖರೀದಿಸಲು ಯೋಜಿಸಲಾಯಿತು. ಮಿನಿ ಲ್ಯಾಪ್‌ಟಾಪ್‌ಗಳಿಗಾಗಿ ವಿತರಿಸಿದ ಬಜೆಟ್ 724.2 ಲಕ್ಷಗಳಷ್ಟು ಆಗಿತ್ತು. | 4828 | 4153 | ಇಲಾಖೆಯಿಂದ ಒದಗಿಸಿದ ಮಾಹಿತಿಯ ಅನ್ವಯ, ಇದುವರೆಗೆ ರೂ.786.708 ಲಕ್ಷ ಮೌಲ್ಯದ 4153 ಮಿನಿ–ಲ್ಯಾಪ್‌ಟಾಪ್‌ಗಳನ್ನು ಖರೀದಿಸಲಾಗಿದೆ. |
| 2 | ಸ್ಥಳೀಯ ಮಟ್ಟದ ಅಭಿವೃದ್ಧಿ ಮತ್ತು ಇತರ ಚಟುವಟಿಕೆಗಳಿಗಾಗಿ ಅಂಕಿಅಂಶಗಳ ಸಂಕಲನಕ್ಕಾಗಿ ತಾಲ್ಲೂಕು ಪಂಚಾಯತಿ ಕಛೇರಿಗಳಿಗೆ ಒದಗಿಸಲು 176 ಡೆಸ್ಕ್‌ಟಾಪ್‌ಗಳನ್ನು ಖರೀದಿಸಲಿಕ್ಕೆ ಯೋಜಿಸಲಾಯಿತು. ಡೆಸ್ಕ್‌ಟಾಪ್‌ಗಳಿಗಾಗಿ ಹಂಚಿಕೆ ಮಾಡಿದ ಬಜೆಟ್ ರೂ. 60.6 ಲಕ್ಷ ಆಗಿತ್ತು. | 176 | 463 | ಇಲಾಖೆಯಿಂದ ಒದಗಿಸಿದ ಮಾಹಿತಿಯ ಅನ್ವಯ, ಇದುವರೆಗೆ ರೂ.147.726 ಲಕ್ಷ ಮೌಲ್ಯದ 463 ಡೆಸ್ಕ್‌ಟಾಪ್‌ಗಳನ್ನು ಖರೀದಿಸಲಾಗಿದೆ. |
| 3 | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ 36 ಲ್ಯಾಪ್‌ಟಾಪ್‌ಗಳನ್ನು ರೂ. 12.6 ಲಕ್ಷ ಬಜೆಟ್‌ನಲ್ಲಿ ಖರೀದಿಸಲು ಯೋಜಿಸಲಾಯಿತು. | 36 | 37 | ಇಲಾಖೆಯಿಂದ ಒದಗಿಸಿದ ಮಾಹಿತಿಯ ಅನ್ವಯ, ಇದುವರೆಗೆ 37ಲ್ಯಾಪ್‌ಟಾಪ್‌ಗಳನ್ನು ಖರೀದಿಸಲಾಗಿದೆ. |
| 4 | ಎಲ್ಲಾ ಇಲಾಖೆಗಳ ಉಪಯೋಗಕ್ಕಾಗಿ, ವ್ಯವಸ್ಥಿತ ಸಾಫ್ಟ್‌ವೇರ್ ಸಾಧನಗಳು–ಸಾಂಖ್ಯಿಕ ವಿಶ್ಲೇಷಣಾತ್ಮಕ ಪರಿಹಾರ. ಈ ಚಟುವಟಿಕೆಗಾಗಿ ಹಂಚಿಕೆಮಾಡಿದ ಬಜೆಟ್ ರೂ. 300 ಲಕ್ಷ ಆಗಿತ್ತು. | x | x | ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಒದಗಿಸಿದ ಮಾಹಿತಿಯ ಅನ್ವಯ, ನಿಧಿಗಳ ಕೊರತೆಯಿಂದಾಗಿ ಯಾವುದೇ ಸಾಫ್ಟ್‌ವೇರ್ ಸಾಧನಗಳನ್ನು ಖರೀದಿಸಿಲ್ಲ. |

### 9.3.1.1.3 ಪೂರಕ ಉಪಕರಣ ಮತ್ತು ಸಾಫ್ಟ್‌ವೇರ್

**ಕೋಷ್ಟಕ 21 : ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಯೋಜಿಸಿದ ಪೂರಕ ಉಪಕರಣ**

| ಕ್ರ.ಸಂ. | ಕರ್ನಾಟಕ ರಾಜ್ಯ ತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಯೋಜಿತ ಚಟುವಟಿಕೆ | ಗುರಿ | ಸಾಧನೆ | ಸದ್ಯದ ಸ್ಥಿತಿ |
|---|---|---|---|---|
| 1 | 30 ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳಿಗೆ ಮತ್ತು ಮುಖ್ಯ ಕಛೇರಿಗೆ ಕಂಪ್ಯೂಟರ್ ಸಿಸ್ಟಮ್ ಮತ್ತು ಪ್ರಿಂಟರ್‌ಗಳ ಇತ್ತೀಚಿನ ಆವೃತ್ತಿಗಳನ್ನು ಒದಗಿಸಲು ಅಂದಾಜು ರೂ. 66.78 ಲಕ್ಷ ವೆಚ್ಚವಾಗುವುದು. | ಎಲ್ಲ 30 ಜಿಲ್ಲಾ ಸಾಂಖ್ಯಿಕ ಕಛೇರಿಗಳಿಗೆ ಅಗತ್ಯವಿರುವ ಹಾರ್ಡ್‌ವೇರ್ | ✓ | ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳಿಗೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗಳಿಗೆ 32 ಪ್ರೊಜೆಕ್ಟರ್‌ಗಳನ್ನು ಮತ್ತು ಸ್ಕ್ರೀನ್‌ಗಳನ್ನು; 172 ಪ್ರಿಂಟರ್‌ಗಳನ್ನು ತಾಲ್ಲೂಕು ಕಛೇರಿಗಳ ಸಾಂಖ್ಯಿಕ ನಿರೀಕ್ಷಕರಿಗೆ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗಳಿಗೆ 36 ಎಂಎಫ್‌ಡಿ ಪ್ರಿಂಟರ್‌ಗಳನ್ನು ತಾಲೂಕು ಕಛೇರಿಗಳ ಮತ್ತು ಜಿಲ್ಲಾ ಪಂಚಾಯತ್‌ನ ಸಾಂಖ್ಯಿಕ ನಿರೀಕ್ಷಕರಿಗೆ 236 ಯುಪಿಎಸ್‌ಗಳನ್ನು ; 176 ತಾಲೂಕಾ ಕಛೇರಿಗಳಿಗೆ 4153 ಮಿನಿ ಲ್ಯಾಪ್‌ಟಾಪ್‌ಗಳನ್ನು; ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗೆ 22 ಡೆಸ್ಕ್‌ಟಾಪ್‌ಗಳು, 3 ಲ್ಯಾಪ್‌ಟಾಪ್‌ಗಳು & 10 ಪ್ರಿಂಟರ್‌ಗಳನ್ನು; ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗೆ 16 ಡೆಸ್ಕ್‌ಟಾಪ್‌ಗಳು & 5 ಪ್ರಿಂಟರ್‌ಗಳನ್ನು ಒದಗಿಸಲಾಗಿದೆ. |
| 2 | ಸಾಫ್ಟ್‌ವೇರ್‌ಗಳೂ ಸೂಕ್ತವಾಗಿರುವುದು ಮತ್ತು ಅವುಗಳು ವೆಬ್ ಆಧಾರಿತ ಅಪ್ಲಿಕೇಶನ್‌ಗಳ ಅಡಿಯಲ್ಲಿ (ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಬೆಂಬಲಿತ) ಚಾಲನೆಗೊಳ್ಳುವವು. ಈ ಅಪ್ಲೀಕೇಶನ್‌ಗಳನ್ನು 2011–12 ರ ಅವಧಿಯಲ್ಲಿ ಸರಳೀಕರಿಸಲಾಗುವುದು. | X | X | ‣ 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳಿಗಾಗಿ ಸೂಕ್ತ ವೆಬ್ ಚಾಲಿತ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲು ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಸಂಸ್ಥೆಯ ಸೇವೆಗಳನ್ನು ಪಡೆಯಲಾಗಿದೆ. ಬೆಳೆ ಅಂದಾಜು ಸಮೀಕ್ಷೆ, ಬೆಳೆ ಕ್ಷೇತ್ರ ಗಣತಿ, ಗ್ರಾಹಕ ಬೆಲೆ ಸೂಚ್ಯಂಕ ಸಗಟು ಮಾರಾಟ ಬೆಲೆ ಸೂಚ್ಯಂಕ ಮತ್ತು ಔದ್ಯಮಿಕ ಉತ್ಪಾದನೆಯ ಸೂಚ್ಯಂಕಇವುಗಳಿಗೆ ಸಂಬಂಧಿಸಿದಂತೆ ಅಪ್ಲಿಕೇಶನ್‌ನ್ನು |

| | | | | |
|---|---|---|---|---|
| | | | | 2010–11 ರ ಅವಧಿಯಲ್ಲಿ ಕಾರ್ಯಾಚರಣೆಗೆ ಸಿದ್ಧಗೊಳಿಸಲಾಯಿತು.<br>▸ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮೂರು ಪ್ರೋಗ್ರಾಮರ್‌ಗಳನ್ನು ನಿಯೋಜಿಸಲಾಯಿತು. ಹಾಗಾಗಿ 7 ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲಾಯಿತು ಮತ್ತು ಈ ಅಪ್ಲಿಕೇಶನ್‌ಗಳ ಮೂಲಕ ದತ್ತಾಂಶವನ್ನು ನಮೂದಿಸಲಾಗುತ್ತದೆ.<br>▸ ಸ್ಥಳೀಯ ಸಂಸ್ಥೆಗಳ ವಂತಿಗೆಯ ಅಂದಾಜುಗಳು: ಸ್ಥಳೀಯ ಸಂಸ್ಥೆಗಳ ವಾರ್ಷಿಕ ಲೆಕ್ಕಪತ್ರಗಳ ಆರ್ಥಿಕ ವಿಶ್ಲೇಷಣೆಗಾಗಿ ವೆಬ್ ಆಧಾರಿತ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಎಲ್ಲ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ರಾಜ್ಯಮಟ್ಟದ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ತರಬೇತಿಯನ್ನು ಪೂರ್ಣಗೊಳಿಸಲಾಗಿದೆ. |

**9.3.1.1.4 ಕ್ಷೇತ್ರ ಮಟ್ಟದಲ್ಲಿ ಮಿನಿ ಲ್ಯಾಪ್‌ಟಾಪ್‌ಗಳು, ಡೆಸ್ಕ್‌ಟಾಪ್‌ಗಳು ಮತ್ತು ಇತರ ಪೂರಕ ಉಪಕರಣಗಳ (ಪ್ರಿಂಟರ್, ಯುಪಿಎಸ್, ಎಂಎಫ್‌ಡಿ, ಇತ್ಯಾದಿ) ಲಭ್ಯತೆ.**

ಕ್ಷೇತ್ರ ಮಟ್ಟದಲ್ಲಿನ ಸಾಂಖ್ಯಿಕ ನಿರೀಕ್ಷಕರು ಮತ್ತು ಕ್ಷೇತ್ರ ಸಿಬ್ಬಂದಿಗೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಒದಗಿಸಿದ ಮಿನಿಲ್ಯಾಪ್‌ಟಾಪ್‌ಗಳ ಲಭ್ಯತೆಯನ್ನು ಮೌಲ್ಯಮಾಪನ ಮಾಡಲು ಮೌಲ್ಯಮಾಪನ ಅಧ್ಯಯನಕ್ಕಾಗಿ ಆಯ್ಕೆಯಾದ 37 ತಾಲೂಕುಗಳನ್ನು ಒಳಗೊಂಡು ಎಲ್ಲ 5 ಜಿಲ್ಲಾ ಮಾದರಿಗಳಲ್ಲೂ ಔಪಚಾರಿಕ ಸಮೀಕ್ಷೆಗಳನ್ನು ಕೈಗೊಳ್ಳಲಾಯಿತು. ಈ ಅಧ್ಯಯನದ ಭಾಗವಾಗಿ ಮೌಲ್ಯಮಾಪನ ಮಾಡಿದ ಮಿನಿ ಲ್ಯಾಪ್‌ಟಾಪ್‌ಗಳ ಒಟ್ಟು ಸಂಖ್ಯೆಯನ್ನು ಈ ಕೆಳಕಂಡ ಕೋಷ್ಟಕವು ಸೂಚಿಸುತ್ತದೆ.

**ಕೋಷ್ಟಕ 22 : ಈ ಅಧ್ಯಯನದ ಭಾಗವಾಗಿ ಮೌಲ್ಯಮಾಪನ ಮಾಡಿದ ಮಿನಿ ಲ್ಯಾಪ್‌ಟಾಪ್‌ಗಳ ವಿವರಗಳು**

| ಜಿಲ್ಲೆ | ಮಿನಿ–ಲ್ಯಾಪ್‌ಟಾಪ್‌ಗಳು | |
|---|---|---|
| | ಮಿನಿ–ಲ್ಯಾಪ್‌ಟಾಪ್‌ಗಳ ಸಂಖ್ಯೆ | ಶೇಕಡಾ |
| ಬೆಳಗಾವಿ | 153 | 29.59 |
| ಚಿತ್ರದುರ್ಗ | 95 | 18.38 |
| ಮಂಡ್ಯ | 106 | 20.50 |
| ಶಿವಮೊಗ್ಗ | 71 | 13.73 |

| | | |
|---|---|---|
| ಯಾದಗಿರಿ | 92 | 17.79 |
| ಒಟ್ಟು | 517 | 100 |

ಕ್ಷೇತ್ರ ಸಿಬ್ಬಂದಿಯ ಉಪಯೋಗಕ್ಕಾಗಿ ಅವರ ಕಛೇರಿಯಲ್ಲಿ ಮಿನಿ–ಲ್ಯಾಪ್‌ಟಾಪ್‌ಗಳ ಲಭ್ಯತೆಯ ಬಗ್ಗೆ ಸಾಂಖ್ಯಿಕ ನಿರೀಕ್ಷಕರ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕವು ಸೂಚಿಸುತ್ತದೆ. ತಮ್ಮ ಕಛೇರಿಯಲ್ಲಿ ಮಿನಿ–ಲ್ಯಾಪ್‌ಟಾಪ್‌ಗಳ ಲಭ್ಯತೆಯು ಸರಾಸರಿ/ಕಳಪೆ ಆಗಿತ್ತು ಎಂದು ಶೇ. 62.16 ಪ್ರತಿಕ್ರಿಯೆದಾರರು ಸಾಂಖ್ಯಿಕ ನಿರೀಕ್ಷಕರು ಅಭಿಪ್ರಾಯಪಟ್ಟರು. ಮಿನಿ–ಲ್ಯಾಪ್‌ಟಾಪ್‌ಗಳ ಲಭ್ಯತೆಯು ಬಹು ಉತ್ತಮವಾಗಿತ್ತು ಎಂದು ಶೇ.37.84 ರಷ್ಟು ಪ್ರತಿಪಾದಕರು/ಸಾಂಖ್ಯಿಕ ನಿರೀಕ್ಷಕರು ಅಭಿಪ್ರಾಯ ಪಟ್ಟರು.

**ಕೋಷ್ಟಕ 23: ಮಿನಿ–ಲ್ಯಾಪ್‌ಟಾಪ್‌ಗಳ ಲಭ್ಯತೆಯ ಬಗ್ಗೆ ಸಾಂಖ್ಯಿಕ ನಿರೀಕ್ಷಕರ ಅಭಿಪ್ರಾಯ.**

| ಮಿನಿ–ಲ್ಯಾಪ್‌ಟಾಪ್‌ಗಳ ಲಭ್ಯತೆ | ಪ್ರತಿಕ್ರಿಯೆದಾರರ ಸಂಖ್ಯೆ | ಶೇಕಡಾ % |
|---|---|---|
| ಸಾಂಖ್ಯಿಕ ನಿರೀಕ್ಷಕರು | | |
| ಶ್ರೇಷ್ಠ (ಪೂರ್ಣಾವಧಿ) | – | – |
| ಬಹು ಉತ್ತಮ (ಕಛೇರಿ ಅವಧಿ ಬಳಕೆ) | 14 | 37.84 |
| ಸರಾಸರಿ | 18 | 48.65 |
| ಕಳಪೆ | 5 | 13.51 |
| ಬಹು ಕಳಪೆ | – | – |
| **ಒಟ್ಟು** | **37** | **100.00** |

ಸಾಂಖ್ಯಿಕ ನಿರೀಕ್ಷಕರಾಗಿ ತಾಲ್ಲೂಕು ಕಛೇರಿಗಳಲ್ಲಿ ಕೆಲಸ ಮಾಡುತ್ತಿದ್ದ ಎಲ್ಲಾ ಪ್ರತಿಕ್ರಿಯೆದಾರರು ಡೆಸ್ಕ್‌ಟಾಪ್‌ಗಳು, ಪ್ರಿಂಟರ್ ಮತ್ತು ಯುಪಿಎಸ್‌ಗಳನ್ನು ಉಪಯೋಗಿಸಿದ್ದರು.

**9.3.1.1.5 ಕ್ಷೇತ್ರ ಸಿಬ್ಬಂದಿಗೆ ಒದಗಿಸಿದ ಮಿನಿ–ಲ್ಯಾಪ್‌ಟಾಪ್‌ಗಳ ಕಾರ್ಯಾಚರಣೆಯ ಸದ್ಯದ ಸ್ಥಿತಿಗತಿ**

ಕ್ಷೇತ್ರ ಸಿಬ್ಬಂದಿಗೆ ಒದಗಿಸಲಾದ ಮಿನಿ–ಲ್ಯಾಪ್‌ಟಾಪ್‌ಗಳ ಕಾರ್ಯದ ಸದ್ಯದ ಸ್ಥಿತಿಯನ್ನು ಬ್ಯಾಟರಿ, ಕೀಬೋರ್ಡ್ ಮತ್ತು ಬ್ಯಾಟರಿಯಂತಹ ಪ್ರಮುಖ ಉಪಕರಣಗಳಿಗಾಗಿ ಮೌಲ್ಯಮಾಪನ ಮಾಡಲಾಯಿತು. ಮೌಲ್ಯಮಾಪನ ಮಾಡಿದ ಶೇ. 56–28 ರಷ್ಟು ಮಿನಿ ಲ್ಯಾಪ್‌ಟಾಪ್‌ಗಳ ಬ್ಯಾಟರಿಗಳು ಉತ್ತಮ ಬ್ಯಾಕ್ ಅಪ್‌ನಿಂದ ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿದ್ದವು. ಶೇ.86.85 ರಷ್ಟು ಮಿನಿ ಲ್ಯಾಪ್‌ಟಾಪ್ ಕೀಬೋರ್ಡ್‌ಗಳು ಅತ್ಯುತ್ತಮವಾಗಿ/ದಕ್ಷವಾಗಿ ಕಾರ್ಯನಿರ್ವಹಿಸುತ್ತಿದ್ದವು. ಮೌಲ್ಯಮಾಪನ ಮಾಡಿದ 87.23 ರಷ್ಟು ಲ್ಯಾಪ್‌ಟಾಪ್‌ಗಳ ಡಿಸ್‌ಪ್ಲೇ ಸ್ಕ್ರೀನ್‌ಗಳು ಅತ್ಯುತ್ತಮವಾಗಿ/ದಕ್ಷವಾಗಿ ಕಾರ್ಯನಿರ್ವಹಿಸುತ್ತಿದ್ದವು.–ಎಂಬುದನ್ನು ಈ ಕೆಳಗಿನ ಕೋಷ್ಟಕವು ಸೂಚಿಸುತ್ತದೆ.

**ಕೋಷ್ಟಕ 24: ಬ್ಯಾಟರಿ, ಕೀಬೋರ್ಡ್ ಮತ್ತು ಡಿಸ್‌ಪ್ಲೇ–ಇವುಗಳಿಗಾಗಿ ಮಿನಿಲ್ಯಾಪ್‌ಟಾಪ್‌ಗಳ ತಪಾಸಣೆ.**

| ಸಲಕರಣೆ/ ರೇಟಿಂಗ್ | ಶ್ರೇಷ್ಠ | ಬಹು ಉತ್ತಮ | ಸರಾಸರಿ | ಕಳಪೆ | ಬಹು ಕಳಪೆ | ಲಭ್ಯವಿಲ್ಲ | ಪರಿಶೀಲಿಸಿಲ್ಲ | ಒಟ್ಟು |
|---|---|---|---|---|---|---|---|---|
| ಬ್ಯಾಟರಿ | 51<br>(9.86) | 240<br>(46.42) | 89<br>(17.21) | 37<br>(7.16) | 60<br>(11.61) | 35<br>(6.77) | 5<br>(0.97) | 517<br>(100) |
| ಬ್ಯಾಟರಿ | 170<br>(32.88) | 279<br>(53.97) | 20<br>(3.87) | 1<br>(0.19) | 8<br>(1.55) | 34<br>(6.58) | 5<br>(0.97) | 517<br>(100) |
| ಬ್ಯಾಟರಿ | 173<br>(33.46) | 278<br>(53.77) | 15<br>(2.90) | 3<br>(0.58) | 8<br>(1.55) | 35<br>(6.77) | 5<br>(0.97) | 517<br>(100) |

5 ಜಿಲ್ಲಾ ಮಾದರಿಗಳಲ್ಲೂ ಕ್ಷೇತ್ರ ಸಿಬ್ಬಂದಿಗೆ ಒದಗಿಸಿದ ಮಿನಿ–ಲ್ಯಾಪ್‌ಟಾಪ್‌ಗಳ ಸಮಗ್ರ ಕಾರ್ಯಾಚರಣೆಯ (ಕಾರ್ಯಸ್ಥಿತಿ ಮತ್ತು ಉಪಯುಕ್ತತೆ) ಸದ್ಯದ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕವು ಸೂಚಿಸುತ್ತದೆ. 5 ಜಿಲ್ಲಾ ಮಾದರಿಗಳಲ್ಲೂ ಮೌಲ್ಯಮಾಪನ ಮಾಡಿದ ಶೇ. 67.77 ರಷ್ಟು ಮಿನಿ–ಲ್ಯಾಪ್‌ಟಾಪ್‌ಗಳ ಸಮಗ್ರ ಕಾರ್ಯಾಚರಣೆಯ ಬಹು ಉತ್ತಮವಾಗಿರುವುದು ಕಂಡು ಬಂದಿತು.

**ಕೋಷ್ಟಕ 25: ಕಾರ್ಯಸ್ಥಿತಿ ಮತ್ತು ಉಪಯಕ್ತತೆಗಾಗಿ ಮಿನಿ–ಲ್ಯಾಪ್‌ಟಾಪ್‌ಗಳ ತಪಾಸಣೆ**

| ಜಿಲ್ಲಾವಾರು | ಶ್ರೇಷ್ಠ | ಬಹು ಉತ್ತಮ | ಸರಾಸರಿ | ಕಳಪೆ | ಬಹು ಕಳಪೆ | ಲಭ್ಯವಿಲ್ಲ | ಪರಿಶೀಲಿಸಿಲ್ಲ | ಒಟ್ಟು |
|---|---|---|---|---|---|---|---|---|
| ಬೆಳಗಾವಿ | 0<br>0 | 108<br>20.97 | 25<br>4.85 | 14<br>2.72 | 3<br>0.58 | 0<br>0 | 3<br>0.58 | 153<br>29.71 |
| ಚಿತ್ರದುರ್ಗ | 0<br>0 | 66<br>12.82 | 23<br>4.47 | 1<br>0.19 | 4<br>0.78 | 0<br>0 | 0<br>0 | 94<br>18.25 |
| ಮಂಡ್ಯ | 0<br>0 | 71<br>13.79 | 0<br>0 | 0<br>0 | 0<br>0 | 33<br>6.41 | 2<br>0.39 | 106<br>20.58 |
| ಶಿವಮೊಗ್ಗ | 1<br>0.19 | 48<br>9.32 | 11<br>2.14 | 2<br>0.39 | 9<br>1.75 | 0<br>0 | 0<br>0 | 71<br>13.79 |
| ಯಾದಗಿರಿ | 0<br>0 | 56<br>10.87 | 23<br>4.47 | 8<br>1.55 | 3<br>0.58 | 1<br>0.19 | 0<br>0 | 91<br>17.67 |
| ಒಟ್ಟು | 1<br>0.19 | 349<br>67.77 | 82<br>15.92 | 25<br>4.85 | 19<br>3.69 | 34<br>6.6 | 5<br>0.97 | 515<br>100 |

**9.3.1.1.6 ಮಿನಿ–ಲ್ಯಾಪ್‌ಟಾಪ್‌ಗಳ ಸುರಕ್ಷಿತಗಾಗಿ ತಹಶೀಲ್ದಾರರು ತೆಗೆದುಕೊಂಡ ಕ್ರಮಗಳು**

5 ಜಿಲ್ಲಾ ಮಾದರಿಗಳಲ್ಲೂ ಕ್ಷೇತ್ರ ಸಿಬ್ಬಂದಿಗೆ ಒದಗಿಸಿದ ಮಿನಿ–ಲ್ಯಾಪ್‌ಟಾಪ್‌ಗಳ ಸುರಕ್ಷಿತೆಗಾಗಿ ತಹಶೀಲದಾರರು ಏನಾದರೂ ಕ್ರಮ ಕೈಗೊಂಡಿದ್ದಾರೆಯೆ ಎಂಬುದನ್ನು ಈ ಕೆಳಕಂಡ ಕೋಷ್ಟಕವು ಸೂಚಿಸುತ್ತದೆ. ವಿಶೇಷವಾಗಿ ತಯಾರಿಸಿದ ಅಲ್‌ಮೇರಾಗಳನ್ನು ಉಪಯೋಗಿಸುವ ಮೂಲಕ ತಮ್ಮ ಕಛೇರಿಯಲ್ಲಿನ ಮಿನಿ–ಲ್ಯಾಪ್‌ಟಾಪ್‌ಗಳಿಗಾಗಿ

ಸುರಕ್ಷಿತಾ ಕ್ರಮಗಳು ಸೂಕ್ತವಾಗಿದ್ದವು ಎಂದು ಸಾಂಖ್ಯಿಕ ನಿರೀಕ್ಷಕರಾಗಿ ಕೆಲಸ ಮಾಡಿದ ಶೇ.54.05 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯಪಟ್ಟರು. ಸಾಂಖ್ಯಿಕ ನಿರೀಕ್ಷಕರಾಗಿ ಕೆಲಸ ಮಾಡಿದ ಶೇ.49.95 ರಷ್ಟು ಪ್ರತಿಕ್ರಿಯೆದಾರರು ಅಲ್ಲಿ ಸುರಕ್ಷಿತಾ ಕ್ರಮಗಳನ್ನು ಶೇ.49.95 ರಷ್ಟು ಪ್ರತಿಕ್ರಿಯೆದಾರರು ಅಲ್ಲಿ ಸುರಕ್ಷಿತಾ ಕ್ರಮಗಳನ್ನು ಒದಗಿಸಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

**ಕೋಷ್ಟಕ 26: ಮಿನಿ–ಲ್ಯಾಪ್‌ಟಾಪ್‌ಗಳಿಗಾಗಿ ತಹಶೀಲ್ದಾರರು ಕೈಗೊಂಡ ಸುರಕ್ಷಿತಾ ಕ್ರಮಗಳು**

| ಪ್ರತಿಕ್ರಿಯೆ | ಪ್ರತಿಕ್ರಿಯೆದಾರರ ಸಂಖ್ಯೆ | ಶೇಕಡಾ % |
|---|---|---|
| 5 ಜಿಲ್ಲೆಗಳಲ್ಲಿನ ಸಾಂಖ್ಯಿಕ ನಿರೀಕ್ಷಕರು | | |
| ಹೌದು(ವಿಶೇಷವಾಗಿ ತಯಾರಿಸಿದ ಅಲ್‌ಮೇರಾಗಳನ್ನು ಒದಗಿಸಲಾಗಿತು) | 20 | 54.05 |
| ಪ್ರತಿಕ್ರಿಯೆ | ಪ್ರತಿಕ್ರಿಯೆದಾರರ ಸಂಖ್ಯೆ | ಶೇಕಡಾ % |
| ಇಲ್ಲ | 17 | 45.95 |
| **ಒಟ್ಟು** | **37** | **100** |

### 9.3.2 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಅಧಿಕಾರಿಗಳಿಗಾಗಿ ಕೈಗೊಂಡ ತರಬೇತಿಗಳ ಪರಿಣಾಮತ್ವ

ತರಬೇತಿ ಕಾರ್ಯಕ್ರಮಗಳ ಪರಿಣಾಮತ್ವವನ್ನು ಮೌಲ್ಯಮಾಪನ ಮಾಡಲು ಮೌಲ್ಯಮಾಪನ ಅಧ್ಯಯನಕ್ಕಾಗಿ ಆಯ್ಕೆಯಾದ 37 ತಾಲ್ಲೂಕುಗಳನ್ನು ಒಳಗೊಂಡು 5 ಜಿಲ್ಲಾ ಮಾದರಿಗಳಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಔಪಚಾರಿಕ ಸಮೀಕ್ಷೆಗಳನ್ನು ನಡೆಸಲಾಯಿತು. ಸಾಂಖ್ಯಿಕ ನಿರೀಕ್ಷಕರು, ಗ್ರಾಮಲೆಕ್ಕಿಗರು ಮತ್ತು ಗಣತಿದಾರರನ್ನು ಒಳಗೊಂಡು ತಾಲ್ಲೂಕು ಕಛೇರಿಗಳಲ್ಲಿ ಲಭ್ಯವಿರುವ ಎಲ್ಲ ಅಧಿಕಾರಿಗಳನ್ನು 37 ತಾಲ್ಲೂಕುಗಳಲ್ಲೂ ಈ ಅಧ್ಯಯನಕ್ಕಾಗಿ ಪರಿಗಣಿಸಲಾಗಿದೆ. ಔಪಚಾರಿಕ ಸಮೀಕ್ಷೆಯ ಭಾಗವಾಗಿರುವರೆಂದು ಅಂದಾಜಿಸಲಾಗಿದ್ದ 95 ಅಧಿಕಾರಿಗಳ ಪೈಕಿ, ಅಧ್ಯಯನ ಅವಧಿಯಲ್ಲಿ ಅವರಿಂದ ಕೈಗೊಂಡ ತರಬೇತಿಗಳಿಗಾಗಿ (ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ವಿವರಗಳ ಅನ್ವಯ) 73 ಪ್ರತಿಕ್ರಿಯೆದಾರರನ್ನು/ಟ್ರೇನಿಗಳನ್ನು ಸಂದರ್ಶಿಸಲಾಯಿತು.

ಇನ್ನುಳಿದ ಅಧಿಕಾರಿಗಳು ಕ್ಷೇತ್ರ ಭೇಟಿಯ ಅವಧಿಯಲ್ಲಿ ಲಭ್ಯವಿದ್ದಿಲ್ಲ. ಆದ್ದರಿಂದ ಅವರ ಸಂದರ್ಶನ ಮಾಡಿಲ್ಲ. ಅಲ್ಲದೆ ಕೆಲವು ಅಧಿಕಾರಿಗಳು ದತ್ತಾಂಶ ಸಂಗ್ರಹಣೆಯಲ್ಲಿ ತೊಡಗಿದ್ದರು ಮತ್ತು ಅವರು ಸಮೀಕ್ಷೆಗೆ ಲಭ್ಯವಿರಲಿಲ್ಲ. ಸಂದರ್ಶನ ಮಾಡಿದ ಟ್ರೇನಿಗಳ/ಪ್ರತಿಕ್ರಿಯೆದಾರರ ವಿವರಣೆ:

**ಕೋಷ್ಟಕ 27: ಸಂದರ್ಶನ ಮಾಡಿದ ಪ್ರತಿಕ್ರಿಯೆದಾರರ /ಅಧಿಕಾರಿಗಳ ವಿವರಗಳು**

| ಅಧಿಕಾರಿಯ ಹುದ್ದೆ | ಪ್ರತಿಕ್ರಿಯೆದಾರರ ಸಂಖ್ಯೆ | ಶೇಕಡಾ % |
|---|---|---|
| ಜಿಲ್ಲಾ ಮತ್ತು ತಾಲೂಕು ಕಛೇರಿಗಳಲ್ಲಿ ಅಧಿಕಾರಿಗಳು | | |
| ಸಾಂಖ್ಯಿಕ ನಿರೀಕ್ಷಕರು | 27 | 36.99 |
| ಗ್ರಾಮಲೆಕ್ಕಿಗರು | 39 | 53.42 |
| ಗಣತಿದಾರರು | 7 | 9.59 |
| **ಒಟ್ಟು** | **73** | **100** |

ತರಬೇತಿ ಕಾರ್ಯಕ್ರಮದ ಒಟ್ಟಾರೆ ಪರಿಣಾಮದ ಬಗ್ಗೆ ಸಾಂಖ್ಯಿಕ ನಿರೀಕ್ಷಕರು, ಗ್ರಾಮಲೆಕ್ಕಿಗರು ಹಾಗೂ ಗಣತಿದಾರರ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕ ತಿಳಿಸುತ್ತದೆ. ಕೈಗೊಂಡ ತರಬೇತಿ ಕಾರ್ಯಕ್ರಮಗಳ ಪರಿಣಾಮ ಮಧ್ಯಮ ದರ್ಜೆಯದಾಗಿತ್ತು ಎಂದು ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡಿದ ಶೇ.67.39 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯಪಟ್ಟರು. ಕೈಗೊಂಡ ತರಬೇತಿ ಕಾರ್ಯಕ್ರಮಗಳ ಪರಿಣಾಮವು ಅತ್ಯುತ್ತಮವಾಗಿತ್ತು ಎಂದು ಶೇ.59.46 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯಪಟ್ಟರು ಹಾಗೂ ಆ ತರಬೇತಿ ಕಾರ್ಯಕ್ರಮಗಳ ಪರಿಣಾಮವು ಮಧ್ಯಮ ದರ್ಜೆಯದಾಗಿತ್ತು ಎಂದು ಶೇ.50 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯಪಟ್ಟರು.

**ಕೋಷ್ಟಕ 28: ತರಬೇತಿ ಕಾರ್ಯಕ್ರಮಗಳ ಪರಿಣಾಮ ಕುರಿತು ಪ್ರತಿಕ್ರಿಯೆದಾರರ ಅಭಿಪ್ರಾಯ.**

| ಪ್ರತಿಕ್ರಿಯೆ | ಪ್ರತಿಕ್ರಿಯೆದಾರರ ಸಂಖ್ಯೆ | ಶೇಕಡಾ % |
|---|---|---|
| ಗ್ರಾಮಲೆಕ್ಕಿಗರು ಮತ್ತು ಗಣತಿದಾರರು | | |
| ಬಹು ಅಧಿಕ ಪರಿಣಾಮ | - | - |
| ಅಧಿಕ ಪರಿಣಾಮ | 5 | 10.87 |
| ಮಧ್ಯಮ ಪರಿಣಾಮ | 31 | 67.39 |
| ಕಡಿಮೆ ಪರಿಣಾಮ | 10 | 21.74 |
| ಪರಿಣಾಮವಿಲ್ಲ | - | - |
| **ಒಟ್ಟು** | **46** | **100** |
| ಸಾಂಖ್ಯಿಕ ನಿರೀಕ್ಷಕರು | | |
| ಬಹು ಅಧಿಕ ಪರಿಣಾಮ | 2 | 5.41 |
| ಅಧಿಕ ಪರಿಣಾಮ | 20 | 54.05 |
| ಮಧ್ಯಮ ಪರಿಣಾಮ | 15 | 40.54 |
| ಕಡಿಮೆ ಪರಿಣಾಮ | - | - |

| | | |
|---|---|---|
| ಪರಿಣಾಮವಿಲ್ಲ | – | – |
| **ಒಟ್ಟು** | **37** | **100** |
| **ಜಿಲ್ಲಾ ಸಾಂಖ್ಯಿಕ ಅಧಿಕಾರಿ, ಸಹಾಯಕ ಸಾಂಖ್ಯಿಕ ಅಧಿಕಾರಿ ಮತ್ತು ಸಹಾಯಕ ನಿರ್ದೇಶಕರು** | | |
| ಬಹು ಅಧಿಕ ಪರಿಣಾಮ | 1 | 16.67 |
| ಅಧಿಕ ಪರಿಣಾಮ | 2 | 33.33 |
| ಮಧ್ಯಮ ಪರಿಣಾಮ | 3 | 50.00 |
| ಕಡಿಮೆ ಪರಿಣಾಮ | – | – |
| ಪರಿಣಾಮವಿಲ್ಲ | – | – |
| **ಒಟ್ಟು** | **6** | **100** |

ತರಬೇತಿ ಕಾರ್ಯಕ್ರಮದ ಗುಣಮಟ್ಟದ ಬಗ್ಗೆ ಸಾಂಖ್ಯಿಕ ನಿರೀಕ್ಷಕರು, ಗ್ರಾಮಲೆಕ್ಕಿಗರು ಹಾಗೂ ಗಣತಿದಾರರ ಒಟ್ಟಾರೆ ಅಭಿಪ್ರಾಯವನ್ನು ಈ ಕೆಳಗಿನ ಕೋಷ್ಟಕ ತಿಳಿಸುತ್ತದೆ. ಕೈಗೊಂಡ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವು ದೀರ್ಘವಾಗಿತ್ತು ದರ್ಜೆಯದಾಗಿತ್ತು ಎಂದು ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡಿದ ಶೇ. 60.87 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯಪಟ್ಟರು. ಕೈಗೊಂಡ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವು ತಮ್ಮ ನಿರೀಕ್ಷೆಗಳಿಗೆ ತಕ್ಕದ್ದಾಗಿತ್ತು ಎಂದು ಸಾಂಖ್ಯಿಕ ನಿರೀಕ್ಷಕರಾಗಿಕೆಲಸ ಮಾಡಿದ ಶೇ. 68 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯಪಟ್ಟರು ಹಾಗೂ ಕೈಗೊಂಡ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವು ತಮ್ಮ ನಿರೀಕ್ಷೆಗಳಿಗೆ ತಕ್ಕದ್ದಾಗಿರುತ್ತದೆ ಎಂದು ಶೇ. 66.67ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯಪಟ್ಟರು.

**ಕೋಷ್ಟಕ 29: ತರಬೇತಿ ಕಾರ್ಯಕ್ರಮಗಳ ಸಮಗ್ರ ಗುಣಮಟ್ಟ**

| ಪ್ರತಿಕ್ರಿಯೆ | ಪ್ರತಿಕ್ರಿಯೆದಾರರ ಸಂಖ್ಯೆ | ಶೇಕಡಾ % |
|---|---|---|
| **ಗ್ರಾಮ ಲೆಕ್ಕಿಗರು ಹಾಗೂ ಗಣತಿದಾರರು** | | |
| ತರಬೇತಿ ನಿರೀಕ್ಷೆಗಳನ್ನು ಪೂರೈಸಿತು | **3** | **6.52** |
| ತರಬೇತಿ ವಿಷಯ ಪ್ರಸ್ತುತವಾಗಿತ್ತು | **15** | **32.61** |
| ತರಬೇತಿಯು ದೀರ್ಘವಾಗಿತ್ತು | **28** | **60.87** |
| ಒದಗಿಸಿದ ತರಬೇತಿ ಸಾಮಗ್ರಿ ಸಹಾಯಕವಾಗಿತ್ತು | – | – |
| ತರಬೇತುದಾರರು ದಕ್ಷರಾಗಿದ್ದರು | – | – |
| **ಒಟ್ಟು** | **46** | **100** |
| **ಸಾಂಖ್ಯಿಕ ನಿರೀಕ್ಷಕರು** | | |
| ತರಬೇತಿ ನಿರೀಕ್ಷೆಗಳನ್ನು ಪೂರೈಸಿತು | **17** | **68.00** |

| | | |
|---|---|---|
| ತರಬೇತಿ ವಿಷಯ ಪ್ರಸ್ತುತವಾಗಿತ್ತು | 7 | 28.00 |
| ತರಬೇತಿಯು ದೀರ್ಘವಾಗಿತ್ತು | 1 | 4.00 |
| ಒದಗಿಸಿದ ತರಬೇತಿ ಸಾಮಗ್ರಿ ಸಹಾಯಕವಾಗಿತ್ತು | – | – |
| ತರಬೇತುದಾರರು ದಕ್ಷರಾಗಿದ್ದರು | – | – |
| **ಒಟ್ಟು** | **37** | **100** |
| **ಜಿಲ್ಲಾ ಸಾಂಖ್ಯಿಕ ಅಧಿಕಾರಿ, ಸಹಾಯಕ ಸಾಂಖ್ಯಿಕ ಅಧಿಕಾರಿ ಮತ್ತು ಸಹಾಯಕ ನಿರ್ದೇಶಕರು** | | |
| ತರಬೇತಿ ನಿರೀಕ್ಷೆಗಳನ್ನು ಪೂರೈಸಿತು | 4 | 66.67 |
| ತರಬೇತಿ ವಿಷಯ ಪ್ರಸ್ತುತವಾಗಿತ್ತು | – | – |
| ತರಬೇತಿಯು ದೀರ್ಘವಾಗಿತ್ತು | 2 | 33.33 |
| ಒದಗಿಸಿದ ತರಬೇತಿ ಸಾಮಗ್ರಿ ಸಹಾಯಕವಾಗಿತ್ತು | – | – |
| ತರಬೇತುದಾರರು ದಕ್ಷರಾಗಿದ್ದರು | – | – |
| **ಒಟ್ಟು** | **6** | **100** |

ವಾಸ್ತವಿಕ ತರಬೇತಿ ಮತ್ತು ತರಬೇತಿ ಕಾರ್ಯಕ್ರಮದ ಅವಧಿಯಲ್ಲಿ ನೂತನ ತಂತ್ರಗಳ ಬಗ್ಗೆ ಸಾಂಖ್ಯಿಕ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಹಾಗೂ ಗಣತಿದಾರರ ಅಭಿಪ್ರಾಯಗಳನ್ನು ಈ ಕೆಳಕಂಡ ಕೋಷ್ಟಕವು ತಿಳಿಸುತ್ತದೆ. ವಾಸ್ತವಿಕ ತರಬೇತಿ ಮತ್ತು ನೂತನ ತಂತ್ರಗಳನ್ನು ತರಬೇತಿ ಕಾರ್ಯಕ್ರಮದ ಅವಧಿಯಲ್ಲಿ ಉಪಯೋಗಿಸಿಲ್ಲವೆಂದು ಜಿಲ್ಲಾ ಸಾಂಖ್ಯಿಕ ಅಧಿಕಾರಿ, ಸಾಂಖ್ಯಿಕ ನಿರೀಕ್ಷಕ, ಗ್ರಾಮ ಲೆಕ್ಕಿಗರು ಮತ್ತು ಗಣತಿದಾರರನ್ನು ಒಳಗೊಂಡು ಎಲ್ಲ ಅಧಿಕಾರಿಗಳು ಅಭಿಪ್ರಾಯಪಡುತ್ತಾರೆ.

**ಕೋಷ್ಟಕ 30: ತರಬೇತಿ ಕಾರ್ಯಕ್ರಮಗಳ ಅವಧಿಯಲ್ಲಿ ವಾಸ್ತವಿಕ ತರಬೇತಿಯ ಉಪಯೋಗ.**

| **ಅಧಿಕಾರಿಯ ಹುದ್ದೆ** | **ಹೌದು** | | **ಅಲ್ಲ** | |
|---|---|---|---|---|
| | **ಸಂಖ್ಯೆ** | **ಶೇಕಡಾ** | **ಸಂಖ್ಯೆ** | **ಶೇಕಡಾ** |
| **ಜಿಲ್ಲಾ ಮತ್ತು ತಾಲೂಕು ಕಛೇರಿಗಳಲ್ಲಿ ಅಧಿಕಾರಿಗಳು** | | | | |
| ಗ್ರಾಮ ಲೆಕ್ಕಿಗರು ಮತ್ತು ಗಣತಿದಾರರು | – | – | 46 | 100 |
| ಸಾಂಖ್ಯಿಕ ನಿರೀಕ್ಷಕರು | – | – | 25 | 100 |
| ಜಿಲ್ಲಾ ಸಾಂಖ್ಯಿಕ ಅಧಿಕಾರಿ, ಸಹಾಯಕ ಸಹಾಯಕ ನಿರ್ದೇಶಕರು | – | – | 6 | 100 |

ತರಬೇತಿ ಕಾರ್ಯಕ್ರಮದ ನಂತರ ಮುಂದುವರಿಕೆ ಚಟುವಟಿಕೆಗಳ ಬಗ್ಗೆ ಸಾಂಖ್ಯಿಕ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಹಾಗೂ ಗಣತಿದಾರರಾಗಿದ್ದ 71 ಅಧಿಕಾರಿಗಳ ಅಭಿಪ್ರಾಯವನ್ನು ಈ ಕೆಳಕಂಡ ಕೋಷ್ಟಕವು ತಿಳಿಸುತ್ತದೆ. ತರಬೇತಿಯ ನಂತರ ಯಾವುದೇ ಮುಂದುವರಿಕೆ ಚಟುವಟಿಕೆಗಳನ್ನು ಕೈಗೊಂಡಿಲ್ಲ ಎಂದು ಗ್ರಾಮ ಲೆಕ್ಕಿಗರಾಗಿ ಕೆಲಸ ಮಾಡಿದ ಶೇ.97.50 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯಪಡುತ್ತಾರೆ. ತರಬೇತಿಯ ನಂತರ ಯಾವುದೇ ಮುಂದುವರಿಕೆ ಚಟುವಟಿಕೆಗಳನ್ನು

ಕೈಗೊಂಡಿಲ್ಲ ಎಂದು ಸಾಂಖ್ಯಿಕ ನಿರೀಕ್ಷಕರಾಗಿ ಕೆಲಸ ಮಾಡಿದ ಶೇ. 88 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯಪಟ್ಟರು. ಶೇ. 83.33 ರಷ್ಟು ಪ್ರತಿಕ್ರಿಯೆದಾರರು / ಅಧಿಕಾರಿಗಳು ತರಬೇತಿಯ ನಂತರ ಯಾವುದೇ ಮುಂದುವರಿಕೆ ಚಟುವಟಿಕೆಗಳು ನಡೆದಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

**ಕೋಷ್ಟಕ 31 : ತರಬೇತಿ ಕಾರ್ಯಕ್ರಮಗಳ ನಂತರ ಮುಂದುವರಿಕೆ ಚಟುವಟಿಕೆಗಳು**

| ಅಧಿಕಾರಿಯ ಹುದ್ದೆ | ಹೌದು | | ಅಲ್ಲ | |
|---|---|---|---|---|
| | ಸಂಖ್ಯೆ | ಶೇಕಡಾ | ಸಂಖ್ಯೆ | ಶೇಕಡಾ |
| ಜಿಲ್ಲಾ ಮತ್ತು ತಾಲೂಕು ಕಛೇರಿಗಳಲ್ಲಿ ಅಧಿಕಾರಿಗಳು | | | | |
| ಗ್ರಾಮ ಲೆಕ್ಕಿಗರು ಮತ್ತು ಗಣತಿದಾರರು | 1 | 2.50 | 39 | 97.50 |
| ಸಾಂಖ್ಯಿಕ ನಿರೀಕ್ಷಕರು | 3 | 12.00 | 22 | 88.00 |
| ಜಿಲ್ಲಾ ಸಾಂಖ್ಯಿಕ ಅಧಿಕಾರಿ, ಸಹಾಯಕ ಸಹಾಯಕ ನಿರ್ದೇಶಕರು | 1 | 16.67 | 5 | 83.33 |

### 9.3.3 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಅಭಿವೃದ್ಧಿ ಪಡಿಸಿದ ವೆಬ್ ಅಪ್ಲಿಕೇಶನ್

#### 9.3.3.1 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಅಭಿವೃದ್ಧಿ ಪಡಿಸಿದ ವೆಬ್ ಅಪ್ಲಿಕೇಶನ್‌ಗಳು

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನ ಯೋಜನೆಯ ಅನ್ವಯ, ದತ್ತಾಂಶ ನಮೂದು, ಸಿಂಧುತ್ವ, ಪ್ರಕರಣ ಮತ್ತು ದತ್ತಾಂಶ ಪುನಸ್ಸಂಪಾದನೆಗಾಗಿ ವೆಬ್ ಆಧಾರಿತ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಬೇಕಾಗಿದ್ದವು. ವೆಬ್ ಆಧಾರಿತ ಸಾಫ್ಟ್‌ವೇರ್‌ನ್ನು ಎಲ್ಲಿ 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳಿಗಾಗಿ ಅಭಿವೃದ್ಧಿ ಪಡಿಸಬೇಕಾಗಿತ್ತು. ನ್ಯಾಶನಲ್ ಇನ್‌ಫಾರ್ಮ್ಯಾಟಿಕ್ಸ್ ಸೆಂಟರ್ ಸಂಸ್ಥೆಯು ಎಲ್ಲಿ ಚಟುವಟಿಕೆಗಳಿಗಾಗಿ ಒಂದು ವರ್ಷದ ಅವಧಿಯಲ್ಲಿ ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಲು ಒಪ್ಪಿಕೊಂಡಿದೆ. ಈ ಯೋಜನೆಯ ಅಡಿಯಲ್ಲಿ ಸಾಫ್ಟ್‌ವೇರ್‌ನ ಅಭಿವೃದ್ಧಿಗಾಗಿ ಒದಗಿಸಲು 2–3 ಪ್ರೋಗ್ರಾಮರ್‌ಗಳಿಗೆ ಕೋರಿದೆ. ಈ ಯೋಜನೆಯು ಪೂರ್ಣಗೊಳ್ಳುವವರೆಗೂ ಹೊರಗುತ್ತಿಗೆ ನೀಡುವುದರಿಂದ 2009–10ರಿಂದ ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಸಂಸ್ಥೆಗೆ ಅಗತ್ಯವಿರುವ ಪ್ರೋಗ್ರಾಮರ್‌ಗಳು ಲಭ್ಯವಾಗಿಸಲಾಗುವುದು ಎಂಬುದಾಗಿ ಒಪ್ಪಿಕೊಳ್ಳಲಾಯಿತು. ಈ ಪ್ರೋಗ್ರಾಮರ್‌ಗಳನ್ನು ಎರವಲು ಪಡೆಯುವ ಅಂದಾಜು ವೆಚ್ಚವು ಮೂರು ವರ್ಷಗಳಿಗಾಗಿ ಸುಮಾರು ರೂ.30 ಲಕ್ಷ ಆಗುವುದು.

ವೆಬ್ ಅಪ್ಲಿಕೇಶನ್ ಅಭಿವೃದ್ಧಿಪಡಿಸುವ ವರ್ಷವಾರು ಯೋಜನೆಯನ್ನು ಈ ಕೆಳಗೆ ಹೇಳಲಾಗಿದೆ:

**ಕೋಷ್ಟಕ 32: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ವೆಬ್ ಅಪ್ಲಿಕೇಶನ್‌ಗಳಿಗಾಗಿ ಅನುಷ್ಠಾನ ಯೋಜನೆ.**

| ವರ್ಷ | ವಿವರಗಳು |
|---|---|
| 2009–10 | ► ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಪರೀಕ್ಷೆಯು ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಸಂಸ್ಥೆಯಿಂದ ಕೈಗೊಳ್ಳಲ್ಪಡುವುದು. |
| 2010–11 | ►ಎಲ್ಲ ಸಾಫ್ಟ್‌ವೇರ್ ಸೂಕ್ತ ಸ್ಥಾನದಲ್ಲಿರುವುದು ಮತ್ತು 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳು ವೆಬ್ ಆಧಾರಿತ ಅಪ್ಲಿಕೇಶನ್‌ಗಳ ಅಡಿಯಲ್ಲಿ ನಡೆಯುವವು.<br>► ವೆಬ್ ಆಧಾರಿತ ಅಪ್ಲಿಕೇಶನ್‌ಗಳನ್ನು ಚಾಲನೆಗೊಳಿಸುವಲ್ಲಿ ಏನಾದರೂ ತೊಂದರೆಗಳಿದ್ದರೆ ಅವುಗಳನ್ನು ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಸಂಸ್ಥೆಯವರು ಪರಿಹರಿಸುವರು. |
| 2011–12 | ► ವೆಬ್ ಅಪ್ಲಿಕೇಶನ್‌ಗಳನ್ನು ಸರಳೀಕರಿಸುವುದು |

ಇಲ್ಲಿಯವರೆಗೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ವಿಶ್ವಾಸಾರ್ಹ, ನಂಬಲರ್ಹ ಹಾಗೂ ಸಕಾಲಿಕ ದತ್ತಾಂಶವನ್ನು ಹೊಂದಲು ಈ ಕೆಳಕಂಡ ವೆಬ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸದ್ಯದಲ್ಲಿ ದತ್ತಾಂಶವನ್ನು ಈ ಅಪ್ಲಿಕೇಶನ್‌ಗಳ ಮೂಲಕವೇ ನಮೂದಿಸಲಾಗುತ್ತಿದೆ. ಆ ವೆಬ್ ಅಪ್ಲಿಕೇಶನ್‌ಗಳಲ್ಲಿ ಈ ಕೆಳಗಿನವುಗಳು ಒಳಗೊಳ್ಳುತ್ತವೆ:

**ಕೋಷ್ಟಕ 33: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಿದ 7 ವೆಬ್–ಅಪ್ಲಿಕೇಶನ್‌ಗಳ ಅಡಿಯಲ್ಲಿ ಒಳಗೊಂಡ ಸಾಂಖ್ಯಿಕ ಚಟುವಟಿಕೆಗಳು.**

| ಕ್ರ. ಸಂ. | ವೆಬ್ ಅಪ್ಲಿಕೆಶನ್‌ಗಳು | ವೆಬ್ ಅಪ್ಲಿಕೆಶನ್‌ಗಳ ಅಡಿಯಲ್ಲಿ ಒಳಗೊಳ್ಳುವ ಸಾಂಖ್ಯಿಕ ಚಟುವಟಿಕೆಗಳು |
|---|---|---|
| 1. | ಗ್ರಾಹಕ ಬೆಲೆ ಸೂಚ್ಯಂಕ | ಗ್ರಾಹಕ ಬೆಲೆ ಸೂಚ್ಯಂಕ |
| 2. | ಸಗಟು ಬೆಲೆ ಸೂಚ್ಯಂಕ | ಸಗಟು ಬೆಲೆ ಸೂಚ್ಯಂಕ |
| 3. | ನಗರಪ್ರದೇಶ ಚಿಲ್ಲರೆ ಬೆಲೆ ಸೂಚ್ಯಂಕ* | – |
| 4. | ಗ್ರಾಮೀಣ ಚಿಲ್ಲರೆ ಬೆಲೆ ಸೂಚ್ಯಂಕ* | – |
| 5. | ಕ್ಷೇತ್ರ ಗಣತಿ | ಬೆಳೆ ಕ್ಷೇತ್ರ ಮತ್ತು ಉತ್ಪಾದನಾ ಅಂಕಿಅಂಶಗಳು |
| 6. | ಬೆಳೆ ಕಟಾವು ಪ್ರಯೋಗಗಳು | ಬೆಳೆ ಕ್ಷೇತ್ರ ಮತ್ತು ಉತ್ಪಾದನಾ ಅಂಕಿಅಂಶಗಳು |
| 7. | ಸ್ಥಳೀಯ ಸಂಸ್ಥೆ ಖಾತೆಗಳು (ಆರ್ಥಿಕ ಮತ್ತು ಉದ್ದೇಶ ವರ್ಗೀಕರಣ) | ಸ್ಥಳೀಯ ಸಂಸ್ಥೆಗಳ ಕೊಡುಗೆಗಳ ಅಂದಾಜುಗಳು |

### 9.3.3.2 ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಿದ ವೆಬ್ ಅಪ್ಲಿಕೇಶನ್‌ಗಳ ಸ್ಥಿತಿಗತಿ

20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳಲ್ಲಿ ಕೇವಲ 4 ಚಟುವಟಿಕೆಗಳು ಈ 7ವೆಬ್–ಅಪ್ಲಿಕೇಶನ್‌ಗಳ ಅಡಿಯಲ್ಲಿ ಒಳಗೊಳ್ಳುತ್ತವೆ. ಅಭಿವೃದ್ಧಿ ಪಡಿಸಿದ ವೆಬ್ ಅಪ್ಲಿಕೇಶನ್‌ಗಳ ಸದ್ಯದ ಸ್ಥಿತಿಗತಿಯನ್ನು ಹಾಗೂ ದತ್ತಾಂಶ ಉನ್ನತೀಕರಣದ ಆವರ್ತನವನ್ನು ಈ ಕೆಳಕಂಡ ಕೋಷ್ಟಕದಲ್ಲಿ ಸೂಚಿಸುತ್ತದೆ.

**ಕೋಷ್ಟಕ 34: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಿದ ವೆಬ್ ಅಪ್ಲಿಕೇಶನ್‌ಗಳ ಸದ್ಯದ ಸ್ಥಿತಿಗತಿ**

| ಕ್ರ. ಸಂ. | ವೆಬ್ ಅಪ್ಲಿಕೆಶನ್‌ಗಳು | ವೆಬ್ ಅಪ್ಲಿಕೆಶನ್‌ಗಳ ಅಡಿಯಲ್ಲಿ ಒಳಗೊಳ್ಳುವ ಸಾಂಖ್ಯಿಕ ಚಟುವಟಿಕೆಗಳು | ಕಾರ್ಯಾತ್ಮಕ | ಪರಿಷ್ಕರಣ | | | |
|---|---|---|---|---|---|---|---|
| | | | | ವಾರಕ್ಕೆ | ತಿಂಗಳಿಗೆ | ಋತುಮಾನಕ್ಕೆ | ವರ್ಷಕ್ಕೆ |
| 1. | ಗ್ರಾಹಕ ಬೆಲೆ ಸೂಚ್ಯಂಕ | ಗ್ರಾಹಕ ಬೆಲೆ ಸೂಚ್ಯಂಕ | ✓ | | ✓ | | |
| 2. | ಸಗಟು ಬೆಲೆ ಸೂಚ್ಯಂಕ | ಸಗಟು ಬೆಲೆ ಸೂಚ್ಯಂಕ | ✓ | | ✓ | | |
| 3. | ನಗರಪ್ರದೇಶ ಚಿಲ್ಲರೆ ಬೆಲೆ ಸೂಚ್ಯಂಕ* | - | ✓ | | ✓ | | |
| 4. | ಗ್ರಾಮೀಣ ಚಿಲ್ಲರೆ ಬೆಲೆಸೂಚ್ಯಂಕ* | - | ✓ | | ✓ | | |
| 5. | ಕ್ಷೇತ್ರ ಗಣತಿ | ಬೆಳೆ ಕ್ಷೇತ್ರ ಮತ್ತು ಉತ್ಪಾದನಾ ಅಂಕಿಅಂಶಗಳು | ✓ | | | ✓ | |
| 6. | ಬೆಳೆ ಕಟಾವು ಪ್ರಯೋಗಗಳು | ಬೆಳೆ ಕ್ಷೇತ್ರ ಮತ್ತು ಉತ್ಪಾದನಾ ಅಂಕಿಅಂಶಗಳು | ✓ | | | ✓ | |
| 7. | ಸ್ಥಳೀಯ ಸಂಸ್ಥೆ ಖಾತೆಗಳು (ಆರ್ಥಿಕ ಮತ್ತು ಉದ್ದೇಶ ವರ್ಗೀಕರಣ) | ಸ್ಥಳೀಯ ಸಂಸ್ಥೆಗಳ ಕೊಡುಗೆಗಳ ಅಂದಾಜುಗಳು | ✓ | | | | ✓ |

*ಈ ಅಪ್ಲಿಕೇಶನ್‌ಗಳಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಬೆಲೆಗಳ ಸೂಚ್ಯಂಕಗಳನ್ನು ಲೆಕ್ಕಾಚಾರ ಮಾಡಲು ಅಭಿವೃದ್ಧಿ ಪಡಿಸಲಾಯಿತು ಮತ್ತು ಅವುಗಳನ್ನು ಆಇಖ ಉಪಯೋಗಿಸುತ್ತದೆ.

### 9.3.3.3 ಲ್ಯಾಪ್‌ಟಾಪ್‌ಗಳ ಮತ್ತು ವೆಬ್ ಅಪ್ಲಿಕೇಶನ್‌ಗಳ ಸಾಫ್ಟ್‌ವೇರ್ ಬಳಕೆಗೆ ಸಂಬಂಧಿಸಿದ ತರಬೇತಿ

ಪ್ರಾಥಮಿಕ ಕಾರ್ಯಕರ್ತರಿಗೆ ಸಾಫ್ಟ್‌ವೇರ್ ವೆಬ್ ಅಪ್ಲಿಕೇಶನ್‌ಗಳ ಹಾಗೂ ಲ್ಯಾಪ್‌ಟಾಪ್‌ಗಳ ಬಳಕೆ ಮಾಡುವಲ್ಲಿ ತರಬೇತಿ ನೀಡಲಾಯಿತು. ಈ ಕೆಳಕಂಡ ತರಬೇತಿ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಆಯೋಜಿಸಲಾಯಿತು.

**ಕೋಷ್ಟಕ 35: ಲ್ಯಾಪ್‌ಟಾಪ್‌ಗಳನ್ನು ಮತ್ತು ವೆಬ್ ಅಪ್ಲಿಕೇಶನ್‌ಗಳ ಉಪಯೋಗಕ್ಕಾಗಿ ಕೈಗೊಂಡ ತರಬೇತಿ**

| ಕ್ರ. ಸಂ. | ತರಬೇತಿ ಕಾರ್ಯಕ್ರಮ | ಭಾಗವಹಿಸಿದವರು | ಸ್ಥಳ | ತರಬೇತಿ ನೀಡಿದವರು |
|---|---|---|---|---|
| 1. | ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಡೌನ್‌ಲೋಡಿಂಗ್ ಮತ್ತು ಅಪ್‌ಲೋಡಿಂಗ್ ಒಳಗೊಂಡಂತೆ ಲ್ಯಾಪ್‌ಟಾಪ್‌ಗಳ ನಿರ್ವಹಣೆ ಮತ್ತು ಉಪಯೋಗ.<br>ಎ) ತರಬೇತಿದಾರರ ತರಬೇತಿ | ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಜಿಲ್ಲಾ ಇನ್‌ಫಾರ್ಮಾಟಿಕ್ಸ್ ಆಧಿಕಾರ ಮತ್ತು ಪ್ರೋಗ್ರಾಮರ್ ಸಮಾಲೋಚಕರು. | ಬೆಂಗಳೂರು | ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ |
| | ಬಿ) ಸಾಂಖ್ಯಿಕ ನಿರೀಕ್ಷಕರು | ಸಾಂಖ್ಯಿಕ ನಿರೀಕ್ಷಕರು, ಗಣತಿದಾರರು | ಜಿಲ್ಲಾ ಕೇಂದ್ರ ಕಛೇರಿಗಳು | ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು ಮತ್ತು ಜಿಲ್ಲಾ ಮಾಹಿತಿ ಅಧಿಕಾರಿಗಳು ಮತ್ತು ಪ್ರೋಗ್ರಾಮರ್ ಸಮಾಲೋಚಕರು. |
| 2. | ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಸಂಸ್ಥೆ ಅಭಿವೃದ್ಧಿಪಡಿಸಿದ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಉಪಯೋಗಿಸಿ ಲ್ಯಾಪ್‌ಟಾಪ್‌ಗಳಲ್ಲಿ ದತ್ತಾಂಶ ನಮೂದು.<br>ಎ) ತರಬೇತಿದಾರರ ತರಬೇತಿ | ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು, ಜಿಲ್ಲಾ ಇನ್‌ಫಾರ್ಮಾಟಿಕ್ಸ್ ಆಧಿಕಾರ ಮತ್ತು ಪ್ರೋಗ್ರಾಮರ್ ಸಮಾಲೋಚಕರು. | ಬೆಂಗಳೂರು | ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ |
| | ಬಿ) ದತ್ತಾಂಶ ನಮೂದು ಮತ್ತು ಲ್ಯಾಪ್‌ಟಾಪ್ ನಿರ್ವಹಣೆ | ಸಂಬಂಧಿಸಿದ ಇಲಾಖಾ ಅಧಿಕಾರಿಗಳು (ಪ್ರಾಥಮಿಕ ಕಾರ್ಯಕರ್ತರು) ಸಾಂಖ್ಯಿಕ ನಿರೀಕ್ಷಕರು, ಗಣತಿದಾರರು | ತಹಶೀಲ್ದಾರ ಕಛೇರಿಗಳು | ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು ಮತ್ತು ಜಿಲ್ಲಾ ಮಾಹಿತಿ ಅಧಿಕಾರಿಗಳು ಮತ್ತು ಪ್ರೋಗ್ರಾಮರ್ ಸಮಾಲೋಚಕರು. |

### 9.3.4 ಇಲಾಖೆಗಳ ಕಾರ್ಯನೆರವೇರಿಕೆಯ ವಿಶ್ಲೇಷಣೆ

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ 2010–14ರ ಅಡಿಯಲ್ಲಿ ವಿಶ್ವಾಸಾರ್ಹ, ನಂಬಲರ್ಹ ಮತ್ತು ಸಕಾಲಿಕ ದತ್ತಾಂಶ ಮೂಲ ಸೌಕರ್ಯವನ್ನು ಮತ್ತು ದಾಖಲೆ ಸೂಚಕಗಳನ್ನು ಅಭಿವೃದ್ಧಿ ಪಡಿಸಲು ಹಣಕಾಸು ನೆರವನ್ನು ನೀಡಲಾಯಿತು. ಆ ಮೂರು ಇಲಾಖೆಗಳೆಂದರೆ:

(ಎ) ಕಾರ್ಖಾನೆಗಳ ಮತ್ತು ಬಾಯ್ಲರ್‌ಗಳ ಇಲಾಖೆ

(ಬಿ) ಕಾರ್ಮಿಕ ಇಲಾಖೆ

(ಸಿ) ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ

ಈ ಮೂರೂ ಇಲಾಖೆಗಳಲ್ಲಿ ಪ್ರತಿಯೊಂದಕ್ಕೆ ಒದಗಿಸಿದ ಹಣಕಾಸು ನೆರವು, ಪ್ರಗತಿ ಮತ್ತು ಸಾಧನೆಗಳನ್ನು ಈ ಕೆಳಗಿನಂತೆ ತಿಳಿಸಲಾಗುತ್ತದೆ.

**(ಎ) ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆ**

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, 'ಇ–ಸುರಕ್ಷತೆ'ಯ ಮೂಲಕ ಉದ್ದಿಮೆದಾರರಿಗೆ ಶೀಘ್ರ, ಪಾರದರ್ಶಕ ಮತ್ತು ಅಡಚಣೆ ಮುಕ್ತವಾದ ಆನ್‌ಲೈನ್ ಸೇವೆಗಳನ್ನು ಒದಗಿಸುವಲ್ಲಿ ಈ ಇಲಾಖೆಯು ಯಶಸ್ವಿಯಾಯಿತು. ಆನ್‌ಲೈನ್ ನೋಂದಣಿ ಪಡೆಯಲು ವಾರ್ಷಿಕ ಅರ್ಜಿ ಮತ್ತು ಆನ್‌ಲೈನ್ ನವೀಕರಣ ಪ್ರಮಾಣ ಪತ್ರಗಳನ್ನು ನೀಡಲು ಕ್ರಮ ಕೈಗೊಳ್ಳಲಾಯಿತು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಮಂಜೂರಾದ/ಬಿಡುಗಡೆ ಮಾಡಿದ ಮೊತ್ತದ/ವ್ಯಯಿಸಿದ ವೆಚ್ಚದ ವಿವರಗಳನ್ನು ಈ ಕೆಳಗಿನಂತೆ ತಿಳಿಸಲಾಗುತ್ತದೆ. ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಖರೀದಿಗಾಗಿ ವ್ಯಯಿಸಿದ ಎಲ್ಲ ವೆಚ್ಚಗಳನ್ನು ಸಾಂಖ್ಯಿಕ ಮೂಲ ಸೌಕರ್ಯದ ಅಭಿವೃದ್ಧಿಗಾಗಿ ಮಾತ್ರ ಸಂಪೂರ್ಣವಾಗಿ ಉಪಯೋಗಿಸಲಾಯಿತು ಮತ್ತು ಅವುಗಳನ್ನು ಕಿಯೋನಿಕ್ಸ್ ಲಿ. ಸಂಸ್ಥೆಯಿಂದ ಖರೀದಿಸಲಾಯಿತು.

**ಕೋಷ್ಟಕ 36: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಗೆ ಒದಗಿಸಿದ ನೆರವು.**

| ವರ್ಷ | ವಿವರಗಳು | ಮೊತ್ತ (ರೂ.) |
|---|---|---|
| 2012–2013 | ಇ–ಸುರಕ್ಷತೆ ಹಂತ 2 (ಸಾಫ್ಟ್‌ವೇರ್ ಅಭಿವೃದ್ಧಿ) | 7,00,000 |
| | ಐಬಿಎಂ ಕೇಸ್ ಮತ್ತು ಮ್ಯಾನೇಜರ್ ಲೈಸನ್ಸ್ | 8,00,000 |
| | ಕಂಟ್ರೋಲ್ ರೂಮ್ (ಡೆಸ್ಕ್ ಟಾಪ್, ಪ್ರಿಂಟರ್, ಲ್ಯಾಪ್ | 8,00,000 |
| | ಮಾಸ್ಟರ್ ತತ್ರಾಂಶ ನಿರ್ಮಾಣ | 6,00,000 |
| **2013–14ರಲ್ಲಿ ಮಂಜೂರಾದ ಒಟ್ಟು ಮೊತ್ತ** | | **29,00,000** |
| 2013–2014 | ಇ–ಸುರಕ್ಷತೆ<br>ಹಂತ 2 ಅನುಷ್ಠಾನ ಮತ್ತು ಅಪ್ಲಿಕೇಶನ್‌ನ ಹೊಂದಾಣಿಕೆ) | 33,00,000 |
| | ಉದ್ದಿಮೆ ಮತ್ತು ಬಾಯ್ಲರ್‌ಗಳು ಸಾಫ್ಟ್‌ವೇರ್ ಅಭಿವೃದ್ಧಿ | |
| | ಸಾಫ್ಟ್‌ವೇರ್ ಖರೀದಿ | |
| **2013–14ರಲ್ಲಿ ಮಂಜೂರಾದ ಒಟ್ಟು ಮೊತ್ತ** | | **33,00,000** |
| **ಅಭಿವೃದ್ಧಿಗೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಮಂಜೂರಾದ ಒಟ್ಟು ಮೊತ್ತ** | | **62,00,000** |

**ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯಿಂದ ನಿಧಿ ಬಳಕೆಯ ವಿವರಗಳು**

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ, ಅಗತ್ಯದ ಸಾಂಖ್ಯಿಕ ಮೂಲ ಸೌಕರ್ಯವನ್ನು ಅಭಿವೃದ್ಧಿ ಪಡಿಸಲು ಈ ಇಲಾಖೆಗೆ ರೂ.64 ಲಕ್ಷ ಮೊತ್ತವನ್ನು ಕೊಡಲಾಯಿತು. ಈ 64 ಲಕ್ಷ ಮೊತ್ತದಲ್ಲಿ, ಈ ಇಲಾಖೆಯು ರೂ.62 ಲಕ್ಷ ಮೊತ್ತವನ್ನು ಉಪಯೋಗಿಸಿತು ಮತ್ತು ಉಳಿದ ರೂ.2 ಲಕ್ಷ ಮೊತ್ತವನ್ನು ವಾಪಸು ಮಾಡಲಾಯಿತು. ಮಂಜೂರಾದ ಒಟ್ಟು ಮೊತ್ತದ ಸಮಗ್ರ ಬಳಕೆ ಅನುಪಾತವು ಶೇ. 96.87 ರಷ್ಟಾಯಿತು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ನಿಧಿ ಬಳಕೆಯ ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಲಾಗಿದೆ.

**ಕೋಷ್ಟಕ 37: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆಯಿಂದ ನಿಧಿ ಬಳಕೆ**

| ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆಯಿಂದ ನಿಧಿ ಬಳಕೆ (ರೂ.ಗಳಲ್ಲಿ) | | | |
|---|---|---|---|
| ಬಿಡುಗಡೆ ಮಾಡಿದ ಮೊತ್ತ | ವಾಸ್ತವಿಕ ವೆಚ್ಚ | ವಾಪಸುಮಾಡಿದ ಮೊತ್ತ | ನಿಧಿ ಬಳಕೆ = ವಾಸ್ತವಿಕ ವೆಚ್ಚ /ಬಿಡುಗಡೆ ಮಾಡಿದ ಮೊತ್ತ ಥ 100 |
| 64,00,000 | 62,00,000 | 2,00,000 | 96.87 % |

**ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯಿಂದ ಅನುಷ್ಠಾನಗೊಂಡ ಚಟುವಟಿಕೆಗಳ ಪಟ್ಟಿ**

**ಕೋಷ್ಟಕ 38: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯಿಂದ ಅನುಷ್ಠಾನಗೊಂಡ ಚಟುವಟಿಕೆಗಳ ಪಟ್ಟಿ**

| ಕ್ರ. ಸಂ. | ಅಂಶಗಳು | ಇಲಾಖೆಯಿಂದ ಸಾಧನೆಗಳು |
|---|---|---|
| 1. | ಕಾರ್ಖಾನೆಗಳ ಅಧಿನಿಯಮ, 1948 ರ ಅಡಿಯಲ್ಲಿ ಲೈಸನ್ಸ್ ನೋಂದಣಿ ಮತ್ತು ಮಂಜೂರಾತಿ | ಕಾರ್ಯ ವಿಧಾನದ ಬಗ್ಗೆ ಮಾಹಿತಿ ಮತ್ತು ಒದಗಿಸಲು ಅಗತ್ಯವಾದ ಎಲ್ಲ ದಸ್ತಾವೇಜುಗಳ ಸಮಗ್ರ ಪಟ್ಟಿ–ಇವುಗಳು ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತವೆ |
| 2. | ಕಾರ್ಖಾನೆಗಳ ಅಧಿನಿಯಮ, 1949ರ ಅಡಿಯಲ್ಲಿ ಲೈಸನ್ಸ್ ನೋಂದಣಿ ಮತ್ತು ಮಂಜೂರಾತಿ | ಸಂಪೂರ್ಣ ಅರ್ಜಿಯ ಅನುಮೋದನೆಗಾಗಿ ಕಾನೂನಿನ ಮೂಲಕ ಕಡ್ಡಾಯಗೊಳಿಸಿದ ಸ್ಪಷ್ಟ ಸಕಾಲಿಕತೆಯನ್ನು ವ್ಯಾಖ್ಯಾನಿಸುವುದು. |
| 3. | ಕಾರ್ಖಾನೆಗಳ ಅಧಿನಿಯಮ, 1950 ಅಡಿಯಲ್ಲಿ ಲೈಸನ್ಸ್ ನೋಂದಣಿ ಮತ್ತು ಮಂಜೂರಾತಿ. | ದಸ್ತಾವೇಜು ಸಲ್ಲಿಕೆ ಮತ್ತು ಪರಿಶೀಲನೆಗಾಗಿ ಭೌತಿಕ ಸ್ಪರ್ಶಕ್ಕಾಗಿ ಅಗತ್ಯವಿಲ್ಲದ ಆನ್‌ಲೈನ್ ಅರ್ಜಿ ಮತ್ತು ಸಂದಾಯಕ್ಕೆ ಅನುಮತಿಸುವ ವ್ಯವಸ್ಥೆಯ ವಿನ್ಯಾಸ ಮತ್ತು ಅನುಷ್ಠಾನ. |

| | | |
|---|---|---|
| 4. | ಕಾರ್ಖಾನೆಗಳ ಕಾಯ್ದೆ, 1951ರ ಅಡಿಯಲ್ಲಿ ಲೈಸನ್ಸ್ ನೋಂದಣಿ ಮತ್ತು ಮಂಜೂರಾತಿ | ಆನ್‌ಲೈನ್ ಪೋರ್ಟಲ್‌ನಿಂದ ಅಂತಿಮ ಸಹಿಯಾದ ಅನುಮೋದನೆ ಪ್ರಮಾಣ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಬಳಕೆದಾರರಿಗೆ ಅನುವಾಗುವ ವ್ಯವಸ್ಥೆಯನ್ನು ಖಚಿತಪಡಿಸುವುದು. |
| 5. | ಕಾರ್ಖಾನೆಗಳ ಅಧಿನಿಯಮ, 1952 ರ ಅಡಿಯಲ್ಲಿ ಲೈಸನ್ಸ್ ನೋಂದಣಿ ಮತ್ತು ಮಂಜೂರಾತಿ | ಸಾರ್ವಜನಿಕ ಕ್ಷೇತ್ರದಲ್ಲಿ, ಅನುಮೋದನಾ ಪ್ರಮಾಣ ಪತ್ರಗಳನ್ನು ಸುಲಭವಾಗಿ ಪರಿಶೀಲಿಸಲು ಮೂರನೇ ಪಕ್ಷಕಾರರಿಗೆ ಅನುಮತಿಸುವುದು |
| 6. | ಕಾರ್ಖಾನೆಗಳ ಅಧಿನಿಯಮ, 1948 ರ ಅಡಿಯಲ್ಲಿ ಯಾವುದೇ ಕಟ್ಟಡವನ್ನು ಕಾರ್ಖಾನೆಯಂತೆ ನಿರ್ಮಿಸಲು/ ವಿಸ್ತರಿಸಲು/ ಅಥವಾ ಉಪಯೋಗಿಸಲು ನಕ್ಷೆ ಮತ್ತು ಪರವಾನಿಗೆಯನ್ನು ಅನುಮೋದಿಸುವುದು. | ಕಾರ್ಯ ವಿಧಾನದ ಬಗ್ಗೆ ಮಾಹಿತಿ ಮತ್ತು ಒದಗಿಸಲು ಅಗತ್ಯವಾದ ಎಲ್ಲ ದಸ್ತಾವೇಜುಗಳ ಸಮಗ್ರ ಪಟ್ಟಿ–ಇವುಗಳು ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತವೆ. |
| 7. | ಕಾರ್ಖಾನೆಗಳ ಅಧಿನಿಯಮ, 1949 ರ ಅಡಿಯಲ್ಲಿ ಯಾವುದೇ ಕಟ್ಟಡವನ್ನು ಕಾರ್ಖಾನೆಯಂತೆ ನಿರ್ಮಿಸಲು/ವಿಸ್ತರಿಸಲು/ಅಥವಾ ಉಪಯೋಗಿಸಲು ನಕ್ಷೆ ಮತ್ತು ಪರವಾನಿಗೆಯನ್ನು ಅನುಮೋದಿಸುವುದು. | ಸಂಪೂರ್ಣ ಅರ್ಜಿಯ ಅನುಮೋದನೆಗಾಗಿ ಕಾನೂನಿನ ಮೂಲಕ ಕಡ್ಡಾಯಗೊಳಿಸಿದ ಸ್ಪಷ್ಟ ಸಕಾಲಿಕತೆಯನ್ನು ವ್ಯಾಖ್ಯಾನಿಸುವುದು. |
| 8. | ಕಾರ್ಖಾನೆಗಳ ಅಧಿನಿಯಮ, 1950 ರ ಅಡಿಯಲ್ಲಿ ಯಾವುದೇ ಕಟ್ಟಡವನ್ನು ಕಾರ್ಖಾನೆಯಂತೆ ನಿರ್ಮಿಸಲು/ವಿಸ್ತರಿಸಲು/ ಅಥವಾ ಉಪಯೋಗಿಸಲು ನಕ್ಷೆ ಮತ್ತು ಪರವಾನಿಗೆಯನ್ನು ಅನುಮೋದಿಸುವುದು. | ದಸ್ತಾವೇಜು ಸಲ್ಲಿಕೆ ಮತ್ತು ಪರಿಶೀಲನೆಗಾಗಿ ಭೌತಿಕ ಸ್ಪರ್ಶಕ್ಕಾಗಿ ಅಗತ್ಯವಿಲ್ಲದ ಆನ್‌ಲೈನ್ ಅರ್ಜಿ ಮತ್ತು ಸಂದಾಯಕ್ಕೆ ಅನುಮತಿಸುವ ವ್ಯವಸ್ಥೆಯ ವಿನ್ಯಾಸ ಮತ್ತು ಅನುಷ್ಠಾನ |
| 9. | ಕಾರ್ಖಾನೆಗಳ ಅಧಿನಿಯಮ, 1950 ರ ಅಡಿಯಲ್ಲಿ ಯಾವುದೇ ಕಟ್ಟಡವನ್ನು ಕಾರ್ಖಾನೆಯಂತೆ ನಿರ್ಮಿಸಲು/ವಿಸ್ತರಿಸಲು/ ಅಥವಾ ಉಪಯೋಗಿಸಲು ನಕ್ಷೆ ಮತ್ತು ಪರವಾನಿಗೆಯನ್ನು ಅನುಮೋದಿಸುವುದು. | ಆನ್‌ಲೈನ್ ಪೋರ್ಟಲ್‌ನಿಂದ ಅಂತಿಮ ಸಹಿಯಾದ ಅನುಮೋದನೆ ಪ್ರಮಾಣ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಬಳಕೆದಾರರಿಗೆ ಅನುವಾಗುವ ವ್ಯವಸ್ಥೆಯನ್ನು ಖಚಿತಪಡಿಸುವುದು. |
| 10. | ಕಾರ್ಖಾನೆಗಳ ಅಧಿನಿಯಮ, 1950 ರ ಅಡಿಯಲ್ಲಿ ಯಾವುದೇ ಕಟ್ಟಡವನ್ನು ಕಾರ್ಖಾನೆಯಂತೆ ನಿರ್ಮಿಸಲು/ವಿಸ್ತರಿಸಲು/ ಅಥವಾ ಉಪಯೋಗಿಸಲು ನಕ್ಷೆ ಮತ್ತು ಪರವಾನಿಗೆಯನ್ನು ಅನುಮೋದಿಸುವುದು. | ಸಾರ್ವಜನಿಕ ಕ್ಷೇತ್ರದಲ್ಲಿ, ಅನುಮೋದನಾ ಪ್ರಮಾಣ ಪತ್ರಗಳನ್ನು ಸುಲಭವಾಗಿ ಪರಿಶೀಲಿಸಲು ಮೂರನೇ ಪಕ್ಷಕಾರರಿಗೆ ಅನುಮತಿಸುವುದು |
| 11. | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1923 ರ ಅಡಿಯಲ್ಲಿ ಲೈಸನ್ಸ್. | ಕಾರ್ಯ ವಿಧಾನದ ಬಗ್ಗೆ ಮಾಹಿತಿ ಮತ್ತು ಒದಗಿಸಲು ಅಗತ್ಯವಾದ ಎಲ್ಲ ದಸ್ತಾವೇಜುಗಳ ಸಮಗ್ರ ಪಟ್ಟಿ–ಇವುಗಳು ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತವೆ. |
| **12** | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1924 ರ ಅಡಿಯಲ್ಲಿ ಲೈಸನ್ಸ್ | ಸಂಪೂರ್ಣ ಅರ್ಜಿಯ ಅನುಮೋದನೆಗಾಗಿ ಕಾನೂನಿನ ಮೂಲಕ ಕಡ್ಡಾಯಗೊಳಿಸಿದ ಸ್ಪಷ್ಟ ಸಕಾಲಿಕತೆಯನ್ನು ವ್ಯಾಖ್ಯಾನಿಸುವುದು. |
| **13** | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1925 ರ ಅಡಿಯಲ್ಲಿ ಲೈಸನ್ಸ್ | ದಸ್ತಾವೇಜು ಸಲ್ಲಿಕೆ ಮತ್ತು ಪರಿಶೀಲನೆಗಾಗಿ ಭೌತಿಕ ಸ್ಪರ್ಶಕ್ಕಾಗಿ ಅಗತ್ಯವಿಲ್ಲದ ಆನ್‌ಲೈನ್ ಅರ್ಜಿ ಮತ್ತು ಸಂದಾಯಕ್ಕೆ ಅನುಮತಿಸುವ ವ್ಯವಸ್ಥೆಯ ವಿನ್ಯಾಸ ಮತ್ತು ಅನುಷ್ಠಾನ |
| **14** | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1926 ರ ಅಡಿಯಲ್ಲಿ ಲೈಸನ್ಸ್ | ಆನ್‌ಲೈನ್ ಪೋರ್ಟಲ್‌ನಿಂದ ಅಂತಿಮ ಸಹಿಯಾದ ಅನುಮೋದನೆ ಪ್ರಮಾಣ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಬಳಕೆದಾರರಿಗೆ ಅನುವಾಗುವ ವ್ಯವಸ್ಥೆಯನ್ನು ಖಚಿತಪಡಿಸುವುದು. |

| | | |
|---|---|---|
| 15 | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1927 ರ ಅಡಿಯಲ್ಲಿ ಲೈಸನ್ಸ್. | ಸಾರ್ವಜನಿಕ ಕ್ಷೇತ್ರದಲ್ಲಿ, ಅನುಮೋದನಾ ಪ್ರಮಾಣ ಪತ್ರಗಳನ್ನು ಸುಲಭವಾಗಿ ಪರಿಶೀಲಿಸಲು ಮೂರನೇ ಪಕ್ಷಕಾರರಿಗೆ ಅನುಮತಿಸುವುದು |
| 16 | ಕಾರ್ಖಾನೆಗಳ ಅಧಿನಿಯಮ, 1948 ರ ಅಡಿಯಲ್ಲಿ ಲೈಸನ್ಸ್ ನವೀಕರಣ. | ಕಾರ್ಯ ವಿಧಾನದ ಬಗ್ಗೆ ಮಾಹಿತಿ ಒದಗಿಸಲು ಅಗತ್ಯವಾದ ಎಲ್ಲ ದಸ್ತಾವೇಜುಗಳ ಸಮಗ್ರ ಪಟ್ಟಿ–ಇವುಗಳು ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತವೆ. |
| 17 | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1927ರ ಅಡಿಯಲ್ಲಿ ಲೈಸನ್ಸ್ ನವೀಕರಣ. | ಸಂಪೂರ್ಣ ಅರ್ಜಿಯ ಅನುಮೋದನೆಗಾಗಿ ಕಾನೂನಿನ ಮೂಲಕ ಕಡ್ಡಾಯಗೊಳಿಸಿದ ಸ್ಪಷ್ಟ ಸಕಾಲಿಕತೆಯನ್ನು ವ್ಯಾಖ್ಯಾನಿಸುವುದು. |
| 18 | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1927ರ ಅಡಿಯಲ್ಲಿ ಲೈಸನ್ಸ್ ನವೀಕರಣ. | ದಸ್ತಾವೇಜು ಸಲ್ಲಿಕೆ ಮತ್ತು ಪರಿಶೀಲನೆಗಾಗಿ ಭೌತಿಕ ಸ್ಪರ್ಶಕ್ಕಾಗಿ ಅಗತ್ಯವಿಲ್ಲದ ಆನ್‌ಲೈನ್ ಅರ್ಜಿ, ಶೋಧನೆ ಮತ್ತು ಮೇಲ್ವಿಚಾರಣೆಯನ್ನು ಅನುಮತಿಸುವ ವ್ಯವಸ್ಥೆಯ ವಿನ್ಯಾಸ ಮತ್ತು ಅನುಷ್ಠಾನ. |
| 19 | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1927ರ ಅಡಿಯಲ್ಲಿ ಲೈಸನ್ಸ್ ನವೀಕರಣ. | ಆನ್‌ಲೈನ್ ಪೋರ್ಟಲ್‌ನಿಂದ ಅಂತಿಮ ಸಹಿಯಾದ ಅನುಮೋದನೆ ಪ್ರಮಾಣ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಬಳಕೆದಾರರಿಗೆ ಅನುವಾಗುವ ವ್ಯವಸ್ಥೆಯನ್ನು ಖಚಿತಪಡಿಸುವುದು. |
| 20 | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1927ರ ಅಡಿಯಲ್ಲಿ ಲೈಸನ್ಸ್ ನವೀಕರಣ. | ಸಾರ್ವಜನಿಕ ಕ್ಷೇತ್ರದಲ್ಲಿ, ಅನುಮೋದನಾ ಪ್ರಮಾಣ ಪತ್ರಗಳನ್ನು ಸುಲಭವಾಗಿ ಪರಿಶೀಲಿಸಲು ಮೂರನೇ ಪಕ್ಷಕಾರರಿಗೆ ಅನುಮತಿಸುವುದು. |
| 21 | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1923ರ ಅಡಿಯಲ್ಲಿ ಲೈಸನ್ಸ್ ನವೀಕರಣ. | ಕಾರ್ಯ ವಿಧಾನದ ಬಗ್ಗೆ ಮಾಹಿತಿ ಒದಗಿಸಲು ಅಗತ್ಯವಾದ ಎಲ್ಲ ದಸ್ತಾವೇಜುಗಳ ಸಮಗ್ರ ಪಟ್ಟಿ–ಇವುಗಳು ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತವೆ ಎಂಬುದನ್ನು ಖಚಿತಪಡಿಸುವುದು. |
| 22 | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1924ರ ಅಡಿಯಲ್ಲಿ ಲೈಸನ್ಸ್ ನವೀಕರಣ. | ಸಂಪೂರ್ಣ ಅರ್ಜಿಯ ಅನುಮೋದನೆಗಾಗಿ ಕಾನೂನಿನ ಮೂಲಕ ಕಡ್ಡಾಯಗೊಳಿಸಿದ ಸ್ಪಷ್ಟ ಸಕಾಲಿಕತೆಯನ್ನು ವ್ಯಾಖ್ಯಾನಿಸುವುದು. |
| 23 | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1925ರ ಅಡಿಯಲ್ಲಿ ಲೈಸನ್ಸ್ ನವೀಕರಣ. | ದಸ್ತಾವೇಜು ಸಲ್ಲಿಕೆ ಮತ್ತು ಪರಿಶೀಲನೆಗಾಗಿ ಭೌತಿಕ ಸ್ಪರ್ಶಕ್ಕಾಗಿ ಅಗತ್ಯವಿಲ್ಲದ ಆನ್‌ಲೈನ್ ಅರ್ಜಿ, ಶೋಧನೆ ಮತ್ತು ಮೇಲ್ವಿಚಾರಣೆಯನ್ನು ಅನುಮತಿಸುವ ವ್ಯವಸ್ಥೆಯನ್ನು ವಿನ್ಯಾಸಗೊಳಿಸುವುದು ಮತ್ತು ಅನುಷ್ಠಾನಗೊಳಿಸುವುದು. |
| 24 | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1926ರ ಅಡಿಯಲ್ಲಿ ಲೈಸನ್ಸ್ ನವೀಕರಣ. | ಆನ್‌ಲೈನ್ ಪೋರ್ಟಲ್‌ನಿಂದ ಅಂತಿಮ ಸಹಿಯಾದ ಅನುಮೋದನೆ ಪ್ರಮಾಣ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಬಳಕೆದಾರರಿಗೆ ಅನುವಾಗುವ ವ್ಯವಸ್ಥೆಯನ್ನು ಖಚಿತಪಡಿಸುವುದು. |
| 25 | ಭಾರತೀಯ ಬಾಯ್ಲರ್‌ಗಳ ಅಧಿನಿಯಮ, 1927ರ ಅಡಿಯಲ್ಲಿ ಲೈಸನ್ಸ್ ನವೀಕರಣ. | ಸಾರ್ವಜನಿಕ ಕ್ಷೇತ್ರದಲ್ಲಿ, ಅನುಮೋದನಾ ಪ್ರಮಾಣ ಪತ್ರಗಳನ್ನು ಸುಲಭವಾಗಿ ಪರಿಶೀಲಿಸಲು ಮೂರನೇ ಪಕ್ಷಕಾರರಿಗೆ ಅನುಮತಿಸುವುದು. |
| 26 | ತಪಾಸಣೆ ಸುಧಾರಣಾ ಸಾಧನಗಳು. | ಎಲ್ಲ ಕಾರ್ಮಿಕ ಕಾನೂನುಗಳ ಅಡಿಯಲ್ಲಿ ಉದ್ದಿಮೆಗಳ (ಉನ್ನತ, ಮಧ್ಯಮ ಹಾಗೂ ಕಡಿಮೆ ಹೊಣೆಯಂತಹ) ಹೊಣೆ ನಿರೂಪಣೆಯನ್ನು ಆಧರಿಸಿದ ಅನುಸರಣೆ ತಪಾಸಣಾ ಅಗತ್ಯತೆಗಳ ಭಿನ್ನತೆ ತೋರಿಸುವುದು. |
| 27 | ಕಾರ್ಖಾನೆಗಳ ಅಧಿನಿಯಮ, 1949ರ ಅಡಿಯಲ್ಲಿ ಅನುಸರಣಾ ತಪಾಸಣೆಗಳು. | ಗಣಕೀಕೃತ ಹೊಣೆ ನಿರ್ಧಾರಣೆಯನ್ನು ಆಧರಿಸಿ ತಪಾಸಣೆಗೊಳ್ಳಲು ಅಗತ್ಯವಿರುವ ಸಂಸ್ಥೆಗಳನ್ನು |

| | | |
|---|---|---|
| | | ಗುರುತಿಸುವುದಕ್ಕಾಗಿ ವ್ಯವಸ್ಥೆಯನ್ನು ವಿನ್ಯಾಸಗೊಳಿಸುವುದು ಮತ್ತು ಅನುಷ್ಠಾನಗೊಳಿಸುವುದು. |
| **28** | ಕಾರ್ಖಾನೆಗಳ ಅಧಿನಿಯಮ, 1950ರ ಅಡಿಯಲ್ಲಿ ಅನುಸರಣಾ ತಪಾಸಣೆಗಳು. | 48 ಗಂಟೆಗಳಲ್ಲಿ ಇಲಾಖೆಗೆ ತಪಾಸಣಾ ವರದಿಯ ಸಲ್ಲಿಕೆಯನ್ನು ಕಡ್ಡಾಯಗೊಳಿಸುವುದು. |
| **29** | ಕಾರ್ಖಾನೆಗಳ ಅಧಿನಿಯಮ, 1951ರ ಅಡಿಯಲ್ಲಿ ಅನುಸರಣಾ ತಪಾಸಣೆಗಳು. | ಪೋರ್ಟಲ್‌ನ್ನು ಲಾಗ್ ಇನ್ ಮಾಡಲು ಮತ್ತು ತಮ್ಮ ವ್ಯವಹಾರಗಳ ಬಗ್ಗೆ ಸಲ್ಲಿಸಲಾದ ತಪಾಸಣಾ ವರದಿಗಳನ್ನು ನೋಡಲು ಮತ್ತು ಡೌನ್‌ಲೋಡ್ ಮಾಡಿಕೊಳ್ಳಲು ಬಳಕೆದಾರರಿಗೆ ಅನುಮತಿಸುವುದು. |
| **30** | ಕಾರ್ಖಾನೆಗಳ ಅಧಿನಿಯಮ, 1952ರ ಅಡಿಯಲ್ಲಿ ಅನುಸರಣಾ ತಪಾಸಣೆಗಳು. | ನಿರೀಕ್ಷಕರ ಗಣಕೀಕೃತ ನಿಯೋಜನೆಗಾಗಿ ವ್ಯವಸ್ಥೆಯನ್ನು ವಿನ್ಯಾಸಗೊಳಿಸುವುದು ಮತ್ತು ಅನುಷ್ಠಾನಗೊಳಿಸುವುದು. |
| **31** | ಕಾರ್ಖಾನೆಗಳ ಅಧಿನಿಯಮ, 1952ರ ಅಡಿಯಲ್ಲಿ ಅನುಸರಣಾ ತಪಾಸಣೆಗಳು. | ಒಬ್ಬನೇ ನಿರೀಕ್ಷಕನು ಅದೇ ಸಂಸ್ಥೆಯನ್ನು ಕ್ರಮಾನುಗತವಾಗಿ ಎರಡು ಸಲ ತಪಾಸಣೆ ಮಾಡದಂತೆ ಕಡ್ಡಾಯಗೊಳಿಸುವುದು. |

**ಮೂಲ:** ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆ

(ಬಿ) **ಕಾರ್ಮಿಕ ಇಲಾಖೆ**

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಇಲಾಖೆಯ ಪ್ರಯೋಜನಕ್ಕಾಗಿ ಆನ್‌ಲೈನ್ ಅರ್ಜಿಯನ್ನು ಅಭಿವೃದ್ಧಿಪಡಿಸಲು ಈ ಇಲಾಖೆಗೆ ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯು ಬೆಂಬಲಿಸಿತು.

ಇ–ಕಾರ್ಮಿಕ ಬ್ಯಾನರ್ ಅಡಿಯಲ್ಲಿ ಅಭಿವೃದ್ಧಿ ಪಡಿಸಿದ ವೆಬ್ ಪೋರ್ಟಲ್‌ನ್ನು ಒಂದು ವರ್ಷದ ಹಿಂದೆಯೆ ಘೋಷಿಸಲಾಯಿತು. ಈಗ ಈ ಇಲಾಖೆಯ ದೃಢವಾದ ಸಾಂಖ್ಯಿಕ ವ್ಯವಸ್ಥೆಯನ್ನು ಹೊಂದಿದೆ ಮತ್ತು ಇಲಾಖೆಯ ಬಹಳಷ್ಟು ಚಟುವಟಿಕೆಗಳು ಬಳಕೆದಾರ ಸ್ನೇಹಿಯಾಗಿವೆ. ಇ–ಕಾರ್ಮಿಕ ಎಂಬುದು ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಮುಂಗಟ್ಟುಗಳ ಅಧಿನಿಯಮ, 1961 ರ ಅಡಿಯಲ್ಲಿ ವ್ಯಾಪಾರಿ ಸಂಸ್ಥೆಗಳ ನೋಂದಣಿ ಮತ್ತು ನವೀಕರಣಕ್ಕಾಗಿ ಇರುವ ಸೌಲಭ್ಯವಾಗಿದೆ. ಅವು ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆಯಿಂದ ಜಾರಿಗೊಳಿಸುತ್ತಿರುವ ರಾಜ್ಯ ಕಾರ್ಮಿಕ ಕಾನೂನುಗಳು ಹಾಗೂ ನಿಯಮಗಳಲ್ಲಿ ಒಂದಾಗಿದೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ಅಂಗಡಿ ಮತ್ತು ವಾಣಿಜ್ಯ ಮುಂಗಟ್ಟುಗಳ ಮಾಲೀಕರಿಗಾಗಿ ಮತ್ತು ಸಾರ್ವಜನಿಕರಿಗಾಗಿ ವೃತ್ತಪತ್ರಿಕೆ ಜಾಹೀರಾತು ಮತ್ತು ಕರಪತ್ರಗಳ ಮೂಲಕ 2013–14 ಮತ್ತು 2014–15ರ ಅವಧಿಯಲ್ಲಿ ಇ–ಕಾರ್ಮಿಕ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.

ಈ ಇಲಾಖೆಗೆ 2011–2012ರ ಅವಧಿಯಲ್ಲಿ ಮೊದಲ ಕಂತಿನಲ್ಲಿ ರೂ.63.20 ಲಕ್ಷ ಮೊತ್ತವನ್ನು ಬಿಡುಗಡೆ ಮಾಡಲಾಯಿತು. ಅದರಲ್ಲಿ ಇಲಾಖೆಯ ರೂ.11.53 ಲಕ್ಷ ಮೊತ್ತವನ್ನು ಬಳಸಿಕೊಂಡಿತು ಮತ್ತು ಇನ್ನುಳಿದ ರೂ.51.66 ಲಕ್ಷ ಮೊತ್ತವನ್ನು ಬಳಸಿಕೊಂಡಿಲ್ಲ. 2014–15ರಲ್ಲಿ ಈ ಇಲಾಖೆಗೆ ರೂ.15 ಲಕ್ಷ ಮೊತ್ತವನ್ನು ಬಿಡುಗಡೆ ಮಾಡಲಾಯಿತು. ಅದರಲ್ಲಿ ಕೇವಲ ರೂ.11.14 ಲಕ್ಷ ಮೊತ್ತವನ್ನು ಇಲಾಖೆಯು ಬಳಸಿಕೊಂಡಿಲ್ಲ. ಮಂಜೂರಾದ ಒಟ್ಟು ಮೊತ್ತದ ಸಮಗ್ರ ಬಳಕೆಯ ಅನುಪಾತವು ಶೇ. 28.98 ರಷ್ಟಿತ್ತು.

| ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಅಡಿಯಲ್ಲಿ ಕಾರ್ಮಿಕ ಇಲಾಖೆಯಿಂದ ನಿಧಿ ಬಳಕೆ (ಲಕ್ಷ ರೂ. ಗಳಲ್ಲಿ) | | | |
|---|---|---|---|
| ಬಿಡುಗಡೆ ಮಾಡಿದ ಮೊತ್ತ | ವಾಸ್ತವಿಕ ವೆಚ್ಚ | ವಾಪಸುಮಾಡಿದ ಮೊತ್ತ | ನಿಧಿ ಬಳಕೆ = ವಾಸ್ತವಿಕ ವೆಚ್ಚ /ಬಿಡುಗಡೆ ಮಾಡಿದ ಮೊತ್ತ x 100 |
| 78.20 | 22.67 | 55.53 | 28.98 % |

**(ಅ) ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ**

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯವು 15 ಮಹತ್ವದ ಜಿಲ್ಲೆಗಳಿಗಾಗಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿತು. ಆ 15 ಜಿಲ್ಲೆಗಳೆಂದರೆ – ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು, ಮಂಗಳೂರು, ಶಿವಮೊಗ್ಗ, ಹುಬ್ಬಳ್ಳಿ, ದಾವಣಗೆರೆ, ಬೆಳಗಾವಿ, ಬಾಗಲಕೋಟೆ, ಗುಲಬರ್ಗಾ, ತುಮಕೂರು, ಕೊಪ್ಪಳ, ಬಳ್ಳಾರಿ ಮತ್ತು ಕಾರವಾರ. ಅಂಕಿಅಂಶಗಳ ಗುಣಮಟಟವನ್ನು ಸುಧಾರಿಸಲು ಅಂಕಿ ಅಂಶಗಳ ನಿರ್ಮಾಪಕರಿಗೆ 1 ದಿನದ ಜಾಗೃತಿ ಕಾರ್ಯಾಗಾರವನ್ನು ಈ ಜಿಲ್ಲೆಗಳಲ್ಲೆಲ್ಲ ಏರ್ಪಡಿಸಲಾಯಿತು. ಈ ಕಾರ್ಯಾಗಾರದ ವಿಷಯಗಳೆಂದರೆ –

ಎ) ಸಾಂಖ್ಯಿಕ ಚಟುವಟಿಕೆಗಳು
ಬಿ) ನಿಯಮ ಮತ್ತು ನಿಬಂಧನೆಗಳು
ಸಿ) ದತ್ತಾಂಶ ಮತ್ತು ಸಂಬಂಧಿತ ವಿಷಯಗಳ ಸಂಗ್ರಹಣ

**ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದ ಕ್ರಿಯಾಯೋಜನೆ**

**ಕೋಷ್ಟಕ 39: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದ ಕ್ರಿಯಾಯೋಜನೆ.**

| ಕ್ರ. ಸಂ. | ವಿವರಗಳು | ಪರಿಮಾಣ | ಮೊತ್ತ (ರೂ.) |
|---|---|---|---|
| 1. | ಸಾಂಖ್ಯಿಕ ಚಟುವಟಿಕೆಗಳು, ನಿಯಮಗಳು, ನಿಬಂಧನೆಗಳು ಮತ್ತು ಅಧಿನಿಯಮಗಳು–ಇವುಗಳನ್ನು ಒಳಗೊಂಡ ಕೈಪಿಡಿಯನ್ನು ಮುದ್ರಿಸುವುದು. | 15000 ಪ್ರತಿಗಳು x ರೂ. 25 | 3,75,000 |
| 2. | ಫೋಲ್ಡರ್, ಪೆನ್ನು, ಬರೆಯುವ ಪ್ಯಾಡ್ | 75 x 15 x ರೂ. 50 | 56, 250 |
| 3. | ಶಿಬಿರಾರ್ಥಿಗಳಿಗೆ ಚಹ ಮತ್ತು ಆಹಾರ ವ್ಯವಸ್ಥೆ. | 75 x 15 x ರೂ. 100 | 1,12,500 |
| 4. | ಕಾರ್ಯಾಗಾರಕ್ಕಾಗಿ ವ್ಯವಸ್ಥೆಗಳು | 15 x ರೂ. 1000 | 15,000 |
| 5. | ಕಾರ್ಯಾಗಾರಕ್ಕಾಗಿ ತರಬೇತಿ ಭವನವನ್ನು ಬಾಡಿಗೆಗೆ ಪಡೆಯುವುದು. | 15 x ರೂ. 5000 | 75,000 |
| 6. | ಇತರೆ (ಸಾರಿಗೆ ಇತ್ಯಾದಿ) | – | 15,000 |
| | **ಒಟ್ಟು** | | **6,48,750** |

**ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಿಂದ ನಿಧಿ ಬಳಕೆಯ ವಿವರಗಳು**

ಈ ಇಲಾಖೆಗೆ ರೂ.6,60,000/– ಮೊತ್ತವನ್ನು ಬಿಡುಗಡೆ ಮಾಡಲಾಯಿತು. ಅದರಲ್ಲಿ ಇಲಾಖೆಯ ರೂ.5,02,000/– ಮೊತ್ತವನ್ನು ಬಳಸಿದೆ ಮತ್ತು ರೂ.1,57,800/– ಮೊತ್ತವನ್ನು ಬಳಸಿಲ್ಲ. ಮಂಜೂರು ಮಾಡಿದ ಒಟ್ಟು ಮೊತ್ತದ ಸಮಗ್ರ ಬಳಕೆಯ ಅನುಪಾತವು ಶೇ.76.06ರಷ್ಟಿತ್ತು. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಿಂದ ನಿಧಿ ಬಳಕೆಯ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ:

**ಕೋಷ್ಟಕ 40: ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಿಂದ ನಿಧಿ ಬಳಕೆ**

| ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಿಂದ ನಿಧಿ ಬಳಕೆ (ಲಕ್ಷ ರೂ. ಗಳಲ್ಲಿ) | | | |
|---|---|---|---|
| ಬಿಡುಗಡೆ ಮಾಡಿದ ಮೊತ್ತ | ವಾಸ್ತವಿಕ ವೆಚ್ಚ | ವಾಪಸು ಮಾಡಿದ ಮೊತ್ತ | ನಿಧಿ ಬಳಕೆ = ವಾಸ್ತವಿಕ ವೆಚ್ಚ /ಬಿಡುಗಡೆ ಮಾಡಿದ ಮೊತ್ತ x 100 |
| 6,60,000 | 5,02,200 (ಕೈಪಿಡಿ ಮುದ್ರಣ, ಲಾಜಿಸ್ಟಿಕ್ಸ್ ಮತ್ತು 15 ಜಿಲ್ಲಾ ಮಟ್ಟದ ಕಾರ್ಯಾಗಾರ ವೆಚ್ಚಗಳು) | 1,57,800 | 76.06 % |

**(ಆ) ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಒದಗಿಸಿದ ನೆರವನ್ನು ಆಧರಿಸಿದ 3 ಇಲಾಖೆಗಳ ನೆರವೇರಿಕೆ**

ವಿಶ್ವಾಸಾರ್ಹ, ನಂಬಲರ್ಹ ಹಾಗೂ ಸಕಾಲಿಕ ಸಾಂಖ್ಯಿಕ ಮೂಲ ಸೌಕರ್ಯ, ದತ್ತಾಂಶ ಹಾಗೂ ದಾಖಲೆ ಸೂಚಕಗಳನ್ನು ಅಭಿವೃದ್ಧಿ ಪಡಿಸಲು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಹಣಕಾಸು ನೆರವನ್ನು ನೀಡಿದ 3 ಇಲಾಖೆಯ ಶೇ. 96.87 ರಷ್ಟು ಅತ್ಯಧಿಕ ನಿಧಿ ಬಳಕೆ ಅನುಪಾತ ಹೊಂದಿತ್ತು ಮತ್ತು ಕಾರ್ಮಿಕ ಇಲಾಖೆಗೆ ಹೋಲಿಸಿದರೆ, ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯವು ಸಾಂಖ್ಯಿಕ ಮೂಲ ಸೌಕರ್ಯವನ್ನು ಅಭಿವೃದ್ಧಿ ಪಡಿಸುವಲ್ಲಿ ಯಶಸ್ವಿಯಾಯಿತು ಮತ್ತು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಗುರಿಗಳ ಅನ್ವಯ ಆನ್‌ಲೈನ್ ವೆಬ್ ಅಪ್ಲಿಕೇಶನ್‌ಗಳನ್ನು ಅನುಷ್ಠಾನಗೊಳಿಸಿತು.

| ಕ್ರ. ಸಂ. | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ 3 ಇಲಾಖೆಗಳಿಗೆ ನೆರವು | | | |
|---|---|---|---|---|
| | ಇಲಾಖೆ ಹೆಸರು | ಇಲಾಖೆಯ ನಿಧಿ ಬಳಕೆಯ ಅನುಪಾತ | ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಸಾಂಖ್ಯಿಕ ಮೂಲಸೌಕರ್ಯಗಳು ಅಭಿವೃದ್ಧಿಯಾಗಿವೆಯೆ? | ಆನ್‌ಲೈನ್ ವೆಬ್ ಅಪ್ಲಿಕೇಶನ್‌ಗಳನ್ನು ಮತ್ತು ದತ್ತಾಂಶ ಸಂಗ್ರಹಣೆಯನ್ನು ಅನುಷ್ಠಾನಗೊಳಿಸಲಾಗಿದೆಯೆ? |

| | | | | |
|---|---|---|---|---|
| 1. | ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆ | 96.87% | ಹೌದು | ಹೌದು |
| 2. | ಕಾರ್ಮಿಕ ಇಲಾಖೆ | 28.98% | ಇಲ್ಲ | ಹೌದು |
| 3. | ಉದ್ಯೋಗ ಮತ್ತು ತರಬೇತಿ ಇಲಾಖಾ ನಿರ್ದೇಶನಾಲಯ | 76.06% | ಇಲ್ಲ | ಇಲ್ಲ |

## 9.4 ಪ್ರಕರಣ ಅಧ್ಯಯನ– ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಸಾಧನೆಗಳು

ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಏಜೆನ್ಸಿಯು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಇಲಾಖಾ ಮಟ್ಟದಲ್ಲಿ ಸೂಕ್ತ ಯೋಜನೆಯನ್ನು ನಿರೂಪಿಸಲು ಮತ್ತು ಅಗತ್ಯವಾದ ನೀತಿ ನಿರ್ಣಯವನ್ನು ತೆಗೆದುಕೊಳ್ಳಲು ವಿಶ್ವಾಸಾರ್ಹ ಮತ್ತು ಸಕಾಲಿಕ ಅಂಕಂಶಗಳನ್ನು ಒದಗಿಸುವುದರಿಂದ ರಾಜ್ಯ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸಲು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಯೋಜನೆಯ ಅಡಿಯಲ್ಲಿ ವಿವಿಧ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗಿದೆ. ರಾಜ್ಯದಲ್ಲಿನ ಸಾಂಖ್ಯಿಕ ಮೂಲ ಸೌಕರ್ಯ ಮತ್ತು ವ್ಯವಸ್ಥೆಗಳನ್ನು ಸುಧಾರಿಸಲು 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳಲ್ಲೂ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಉಪಕ್ರಮಗಳನ್ನು ಸಹ ಕೈಗೊಂಡಿದ್ದಾರೆ.

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯಿಂದ ಆದ ಕೆಲವು ಪ್ರಮುಖ ಸಾಧನೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗುತ್ತದೆ.

ಎ) **ನಿಧಿ ಬಳಕೆ:** ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರೂಪಿಸಿದ ಕಾರ್ಯನೀತಿ ಗುರಿಗಳನ್ನು ಮತ್ತು ಕಾರ್ಯನೀತಿಗಳನ್ನು ಈಡೇರಿಸಲಾಗಿದೆ ಮತ್ತು ಅನುಷ್ಠಾನಗೊಳಿಸಲಾಗಿದೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಮಂಜೂರು ಮಾಡಿದ ಒಟ್ಟು ಮೊತ್ತದ ಸಮಗ್ರ ನಿಧಿ ಬಳಕೆ ಅನುಪಾತವು ಶೇ.90.53 ಇತ್ತು, ಅದರಲ್ಲಿ ಕರ್ನಾಟಕ ಸರ್ಕಾರಕ್ಕಾಗಿ ನಿಧಿ ಬಳಕೆ ಅನುಪಾತವು ಶೇ.87.66 ಆಗಿದೆ.

**ಬಿ) ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಿದ ಸಾಂಖ್ಯಿಕ ಮೂಲಸೌಕರ್ಯ:**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ 425 ಡೆಸ್ಕ್‌ಟಾಪ್‌ಗಳನ್ನು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಒಳಗೊಂಡು ಜಿಲ್ಲಾ ಸಾಂಖ್ಯಿಕ ಅಧಿಕಾರಿ ಕಛೇರಿಗಳು, ತಾಲೂಕು ಕಛೇರಿಗಳು, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಿಗೆ ಒದಗಿಸಲಾಗಿದೆ. 176 ತಾಲೂಕು ಕಛೇರಿಗಳಿಗೆ 4153 ಲ್ಯಾಪ್‌ಟಾಪ್‌ಗಳನ್ನು ಒದಗಿಸಲಾಗಿದೆ. 22 ಡೆಸ್ಕ್‌ಟಾಪ್‌ಗಳು, 3 ಲ್ಯಾಪ್‌ಟಾಪ್‌ಗಳು ಮತ್ತು 5 ಪ್ರಿಂಟರ್‌ಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ಒದಗಿಸಲಾಗಿದೆ.

- 32 ಲ್ಯಾಪ್‌ಟಾಪ್‌ಗಳನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳಿಗೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗಳಿಗೆ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಗಳಿಗೆ ಒದಗಿಸಲಾಗಿದೆ.

32 ಪ್ರಾಜೆಕ್ಟರ್‌ಗಳನ್ನು ಮತ್ತು ಸ್ಕ್ರೀನ್‌ಗಳನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳಿಗೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗಳಿಗೆ ಒದಗಿಸಲಾಗಿದೆ. 176 ಪ್ರಿಂಟರ್‌ಗಳನ್ನು ತಾಲೂಕಾ ಕಛೇರಿಗಳಲ್ಲಿನ ಸಾಂಖ್ಯಿಕ ನಿರೀಕ್ಷಕರಿಗೆ ಒದಗಿಸಲಾಗಿದೆ. 36 ಎಂಎಫ್‌ಡಿ ಪ್ರಿಂಟರ್‌ಗಳನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳಿಗೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗಳಿಗೆ ಒದಗಿಸಲಾಗಿದೆ.

- 176 ತಾಲೂಕುಗಳ ಪೈಕಿ 120 ತಾಲೂಕುಗಳು ವಿಶೇಷವಾಗಿ ವಿನ್ಯಾಸಗೊಳಿಸಿದ ಲ್ಯಾಪ್‌ಟಾಪ್ ಚಾರ್ಜರ್ ಮತ್ತು ಅಲ್ಮೆರಾಗಳನ್ನು ಮಿನಿ ಲ್ಯಾಪ್ ಟಾಪ್‌ಗಳ ರಕ್ಷಣೆಗಾಗಿ ಸಿದ್ಧಪಡಿಸಿದವು. ಗುಣಮಟ್ಟದಲ್ಲಿ ಸುಧಾರಣೆ ಮತ್ತು ಸಾಂಖ್ಯಿಕ ದತ್ತಾಂಶಗಳ ಪ್ರಸಾರ–ಈ ಉದ್ದೇಶಕ್ಕೆ ಪೂರಕವಾಗಿರುವ ಸಾಂಖ್ಯಿಕ ಕಾರ್ಯಾಚರಣೆಗಳನ್ನು ಸುಧಾರಿಸುವುದಕ್ಕಾಗಿ ತಾಲ್ಲೂಕು ಕಛೇರಿಗಳ ಹಾಗು ಜಿಲ್ಲಾ ಪಂಚಾಯತಿಯ ಸಾಂಖ್ಯಿಕ ನಿರೀಕ್ಷಕರಿಗೆ 236 ಯುಪಿಎಸ್‌ಗಳನ್ನು ಒದಗಿಸಲಾಯಿತು. ಇಲಾಖೆಗಳ ವಿವಿಧ ಮುಖ್ಯಸ್ಥರೊಂದಿಗೆ ಹಲವಾರು ವಿಚಾರ ಸಂಕಿರಣಗಳನ್ನು, ಕಾರ್ಯಾಗಾರಗಳನ್ನು ಮತ್ತು ಸಭೆಗಳನ್ನು ಆರಂಭದಿಂದಲೂ ನಡೆಸಲಾಗಿದೆ.

- ಕಾರ್ಖಾನೆಗಳ ಮತ್ತು ಬಾಯ್ಲರ್‌ಗಳ ಆನ್‌ಲೈನ್ ನೋಂದಣಿಯನ್ನು ಪೂರ್ಣಗೊಳಿಸಲಾಗಿದೆ ಮತ್ತು ರಿಟರ್ನ್‌ಗಳ ಗಣಕೀಕರಣವು ಪ್ರಗತಿಯಲ್ಲಿದೆ. ಇ–ಸುರಕ್ಷೆ

- ಇ–ಜನ್ಮ ಅಪ್ಲಿಕೇಶನ್ ಮೂಲಕ ಆನ್‌ಲೈನ್ ನೋಂದಣಿಯನ್ನು ಪ್ರಕಟಿಸಲು 2015–16ರಲ್ಲಿ ಜ-ಎಚಿಟಿಒಚಿ ಎಂಬ ಆನ್‌ಲೈನ್ ಅಪ್ಲಿಕೇಶನ್‌ನ್ನು ಅಭಿವೃದ್ಧಿ ಪಡಿಸಲಾಯಿತು ಮತ್ತು ಪರಿಚಯಿಸಲಾಯಿತು.

- ನ್ಯಾಶನಲ್ ಇನ್‌ಫಾರ್ಮೇಟಿಕ್ಸ್ ಸೆಂಟರ್ ನೆರವಿನೊಂದಿಗೆ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು 7 ವೆಬ್ ಅಪ್ಲಿಕೇಶನ್ ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಯಿತು. ಅವುಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದವರು 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗಾಗಿ ಉಪಯೋಗಿಸುತ್ತಾರೆ. ಬೆಳೆ ಅಂದಾಜು ಸಮೀಕ್ಷೆ, ಬೆಳೆ ಕ್ಷೇತ್ರ ಗಣತಿ, ಗ್ರಾಹಕ ಬೆಲೆ ಸೂಚ್ಯಂಕ, ಸಗಟು ದರ ಸೂಚ್ಯಂಕ ಮತ್ತು ಔದ್ಯಮಿಕ ಉತ್ಪಾದನೆಯ ಸೂಚ್ಯಂಕ ಇವುಗಳಿಗೆ ಸಂಬಂಧಿಸಿದ ವೆಬ್ ಅಪ್ಲಿಕೇಶನ್‌ಗಳನ್ನು 2010–11ರಲ್ಲಿ ಕಾರ್ಯಾಚರಣೆಗಾಗಿ ಸಿದ್ಧಪಡಿಸಲಾಯಿತು. ಹಾಗಾಗಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ವಿಶ್ವಾಸಾರ್ಹ, ನಂಬಲರ್ಹ ಹಾಗೂ ದತ್ತಾಂಶಗಳನ್ನು ಹೊಂದಲು ಈ ಕೆಳಕಂಡ 7 ವೆಬ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸದ್ಯದಲ್ಲಿ ದತ್ತಾಂಶವನ್ನು ಈ ಅಪ್ಲಿಕೇಶನ್‌ಗಳ ಮೂಲಕ ನಮೂದಿಸಲಾಗುತ್ತದೆ. ಕಾರ್ಯಾಚರಣೆಯಲ್ಲಿರುವ ವೆಬ್ ಅಪ್ಲಿಕೇಶನ್‌ಗಳು ಈ ಕೆಳಗಿನಂತಿವೆ.

  1) ಗ್ರಾಹಕ ಬೆಲೆ ಸೂಚ್ಯಂಕ

  2) ಸಗಟು ಮಾರಾಟ ಬೆಲೆ ಸೂಚ್ಯಂಕ

  3) ನಗರ ಪ್ರದೇಶ ಚಿಲ್ಲರೆ ಬೆಲೆ ಸೂಚ್ಯಂಕ

4) ಗ್ರಾಮೀಣ ಪ್ರದೇಶ ಬೆಲೆ ಸೂಚ್ಯಂಕ

5) ಕ್ಷೇತ್ರ ಗಣತಿ

6) ಪೈರು ಕಟಾವು ಪ್ರಯೋಗಗಳು

7) ಸ್ಥಳೀಯ ಸಂಸ್ಥೆ ಲೆಕ್ಕ ಪತ್ರಗಳು (ಆರ್ಥಿಕ ಮತ್ತು ಉದ್ದೇಶ ವರ್ಗೀಕರಣ)

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ವೆಬ್ ಪಬ್ಲಿಕ್ ಪೋರ್ಟಲ್‌ನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸಾಂಖ್ಯಿಕ ದತ್ತಾಂಶ ವರದಿಯನ್ನು ಪಡೆಯಲು ಸಾರ್ವಜನಿಕರಿಗೆ ಅವು ಲಭ್ಯವಿದೆ. ಸಾಂಖ್ಯಿಕ ಮೂಲಸೌಕರ್ಯವನ್ನು ಸುಧಾರಿಸುವ ಉದ್ದೇಶದಿಂದ, ವೆಬ್ ಪೋರ್ಟಲ್ ನಿರ್ಮಾಣವು ತಳಮಟ್ಟಗಳಲ್ಲಿ ದತ್ತಾಂಶ ಸಂಗ್ರಹಿಸುವಲ್ಲಿ ನೆರವಾಗಿದೆ ಮತ್ತು ಕೇಂದ್ರೀಕೃತ ವೆಬ್ ಪೋರ್ಟಲ್‌ಗೆ ದತ್ತಾಂಶವನ್ನು ರವಾನಿಸಲು ಅನುವಾಗಿದೆ ಮತ್ತು ಅವು ದತ್ತಾಂಶದ ಸಂಗ್ರಹಣೆ, ಪುನಸ್ಸಂಪಾದನೆ ಮತ್ತು ವಿಶ್ಲೇಷಣೆಯನ್ನು ಬಹು ಸುಲಭಗೊಳಿಸಿದೆ.
- ಬಳಕೆದಾರರಿಗೆ ಸುಲಭ ಹಾಗೂ ಉತ್ತಮ ಪ್ರವೇಶಾತಿಗಾಗಿ ಇಲಾಖಾ ವೆಬ್‌ಸೈಟ್ ಮೂಲಕ ವಿಶ್ಲೇಷಿತ ದತ್ತಾಂಶವನ್ನು ಒಳಗೊಂಡ ವಾರ್ಷಿಕ ವರದಿಗಳು ಲಭ್ಯವಿರುತ್ತವೆ.
- ಕರ್ನಾಟಕ ಮಳಿಗೆಗಳು ಮತ್ತು ವಾಣಿಜ್ಯ ಮುಗ್ಗಟ್ಟುಗಳ ಅಧಿನಿಯಮದ ಅಡಿಯಲ್ಲಿ ನೋದಾಯಿಸಿದ ಮತ್ತು ನೋಂದಾಯಿಸದ ವ್ಯಾಪಾರಿ ಸಂಸ್ಥೆಗಳ ಸಂಗ್ರಹಣೆ ಮತ್ತು ಗಣಕೀಕರಣವನ್ನು ಕಾರ್ಮಿಕ ಇಲಾಖೆಯು ಆರಂಭಿಸಿದೆ ಮತ್ತು ಅದು 2012-13 ರಿಂದ ಅನುಷ್ಠಾನಗೊಳಿಸಿದೆ.

**ಅ) ಅಭಿವೃದ್ಧಿಪಡಿಸಿದ ಭೌತಿಕ ಮೂಲಸೌಕರ್ಯ**

- ಹಾಸನ, ದಕ್ಷಿಣ ಕನ್ನಡ ಮತ್ತು ಮೈಸೂರು ಜಿಲ್ಲೆಗಳಲ್ಲಿ ರೂ.39.90 ಲಕ್ಷ ವೆಚ್ಚದಲ್ಲಿ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಕಟ್ಟಡಗಳ ನಿರ್ಮಾಣಕ್ಕಾಗಿ ಸೈಟ್‌ಗಳನ್ನು ಖರೀದಿಸಲಾಗಿದೆ.
- ಬೆಂಗಳೂರು (ನಗರ) ಮತ್ತು ಬೆಂಗಳೂರು (ಗ್ರಾಮೀಣ) ಜಿಲ್ಲೆಗಳ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಟ್ಟಡಗಳ ನಿರ್ಮಾಣವನ್ನು 2012-13ರ ಅವಧಿಯಲ್ಲಿ ಪೂರ್ಣಗೊಳಿಸಲಾಯಿತು.
- ಹಾಸನ, ಚಿಕ್ಕಮಗಳೂರು ಮತ್ತು ರಾಯಚೂರುಗಳಲ್ಲಿ ರೂ.3.74 ಕೋಟಿ ವೆಚ್ಚದಲ್ಲಿ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಕಟ್ಟಡದ ನಿರ್ಮಾಣವನ್ನು ಕೈಗೊಳ್ಳಲಾಯಿತು.
- ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಯ ನವೀಕರಣ, ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ದಾಸ್ತಾನು ಮಳಿಗೆ ಮತ್ತು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಯಲ್ಲಿ ತರಬೇತಿ ಹಾಲ್‌ನ ನಿರ್ಮಾಣ-ಇವುಗಳನ್ನು ಸಹ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಪೂರ್ಣಗೊಳಿಲಾಗಿದೆ.

**ಆ) ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅಡಿಯಲ್ಲಿ ಕೈಗೊಂಡ ತರಬೇತಿಗಳು**

- ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಶ್ರವಣ–ದೃಶ್ಯ ತರಬೇತಿ ಸಾಮಗ್ರಿಯನ್ನು ಬಳಸುವುದರಿಂದ ಉಪಗ್ರಹ ಸಂಪರ್ಕಿತ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ನೂತನ ತರಬೇತಿ ವಿಧಾನಗಳನ್ನು ಪರಿಚಯಿಸುವಲ್ಲಿ ಸಾಧನವಾಗಿದೆ. ಅವು ಒಂದೇ ಸಮಾವೇಶದಲ್ಲಿ 25,000 ದಷ್ಟು ಶಿಬಿರಾರ್ಥಿಗಳು ಭಾಗವಹಿಸಿದ ಸಾಮೂಹಿಕ ತರಬೇತಿಗಳನ್ನು ಕೈಗೊಳ್ಳುವಲ್ಲಿ ಉಪಯುಕ್ತವಾಗಿವೆ.

- 2011–12 ರಿಂದ 2014–15ರ ಅವಧಿಯಲ್ಲಿ 2,22,314 ಅಭ್ಯರ್ಥಿಗಳನ್ನು ತರಬೇತಿಗೊಳಿಸಲಾಯಿತು. ಅವರಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು, ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಜಿಲ್ಲಾ ಮತ್ತು ಉಪ–ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮಾಲೋಚಕರು, ಜಿಲ್ಲಾ ಪಂಚಾಯತಿ ಅಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು (ತಾಲೂಕು ಮಟ್ಟ) ಮತ್ತು ಸಾಂಖ್ಯಿಕ ನಿರೀಕ್ಷಣಾಧಿಕಾರಿಗಳು ಹಾಗೂ ಗಣತಿಗಾರರು–ಒಳಗೊಳ್ಳುತ್ತಾರೆ.

- ಅಂಕಿಅಂಶಗಳ ಗುಣಮಟ್ಟವನ್ನು ಸುಧಾರಿಸಲು ಅಂಕಿಅಂಶಗಳ ತಯಾರಕರಿಗಾಗಿ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಅನುದಾನಿತ ಜಾಗೃತಿ ಕಾರ್ಯಾಗಾರವನ್ನು ಕೈಗೊಳ್ಳಲಾಯಿತು.

- ಸಾಂಖ್ಯಿಕ ಇಲಾಖೆಯಲ್ಲಿ ಪ್ರಥಮ ಬಾರಿಗೆ ಶ್ರವಣ–ದೃಶ್ಯ ತರಬೇತಿ ಸಾಮಗ್ರಿಯನ್ನು 2014–15ರ ಅವಧಿಯಲ್ಲಿ ಪೈರು ಕಟಾವು ಪ್ರಯೋಗಗಳಿಗಾಗಿ ಸಿದ್ಧಪಡಿಸಲಾಯಿತು.

- ಬೆಳೆ ಕ್ಷೇತ್ರ ಮತ್ತು ಉತ್ಪಾದ`ನಾ ಅಂಕಿ ಅಂಶಗಳು: ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಗಳನ್ನು ಹೊರತುಪಡಿಸಿ ಎಲ್ಲ ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸದಸ್ಯರಿಗಾಗಿ ಹೋಬಳಿ ಮಟ್ಟದ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು ಮತ್ತು ದಕ್ಷಿಣ ಕನ್ನಡ, ಗುಲ್ಬರ್ಗಾ, ಕಾರವಾರ, ಉಡುಪಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ತರಬೇತಿಯನ್ನು ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಅಂದಾಜು 45491 ಅಭ್ಯರ್ಥಿಗಳು ಹಾಜರಿದ್ದರು.

- ಅಂಗಡಿಗಳು ಮತ್ತು ವಾಣಿಜ್ಯ ಮುಂಗಟ್ಟುಗಳ ನೋಂದಣಿ ಬಗ್ಗೆ ಪ್ರಚಾರದ ಮೂಲಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರಿಗಾಗಿ ಜಾಗೃತಿ ಕಾರ್ಯಕ್ರಮವನ್ನು 2014–15ರ ಅವಧಿಯಲ್ಲಿ ಆಯೋಜಿಸಲಾಗಿತ್ತು.

- ದತ್ತಾಂಶ ಸಂಗ್ರಹಣೆ ಮತ್ತು ಪ್ರಸಾರದಲ್ಲಿ ಸುಧಾರಣೆಗಾಗಿ ಈ ಅಧಿನಿಯಮದ ಮತ್ತು ನಿಯಮಗಳ ಅಡಿಯಲ್ಲಿ ಮಾಡಿದ ಉಪಬಂಧಗಳ ಬಗ್ಗೆ ಸಾಂಖ್ಯಿಕ ಸಿಬ್ಬಂದಿಗೆ ಜ್ಞಾನ ನೀಡಲು ಮತ್ತು ಜಾಗೃತಗೊಳಿಸಲು ಅವರಿಗಾಗಿ ದಿನಾಂಕ 19–02–2013ರಂದು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

# 10. ಶೋಧನೆಗಳು ಮತ್ತು ಚರ್ಚೆಗಳು

**ಪ್ರಶ್ನೆ 1– ಅಂಕಿಅಂಶಗಳ ಸಂಗ್ರಹಣ ಅಧಿನಿಯಮ, 2008 ಮತ್ತು ನಿಯಮಗಳ ಅನುಷ್ಠಾನ**

- ಸಾಂಖ್ಯಿಕ ವಿಷಯಗಳಲ್ಲಿ ಎಲ್ಲ ಸರ್ಕಾರಿ ಇಲಾಖೆಗಳಿಗೆ ಉಪಬಂದಿಸಲು ಮತ್ತು ಸಲಹೆ ನೀಡಲು ರಾಜ್ಯದ ಎಲ್ಲ ಸಾಂಖ್ಯಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮ ಮತ್ತು ನಿಯಮಗಳಲ್ಲಿ ನಮೂದಿಸಿದ ಎಲ್ಲ ಅಧಿಕಾರಿಗಳು ಮತ್ತು ಕರ್ತವ್ಯಗಳನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು ಸಂಪರ್ಕ ಇಲಾಖೆಯನ್ನಾಗಿ ಮಾಡಲಾಗಿದೆ. ಉಲ್ಲೇಖ: ಸರ್ಕಾರಿ ಆದೇಶ ಸಂ. ಪಿಡಿ 183 ಎಸ್ಎಮ್ಸಿ 2010 ದಿನಾಂಕ 25–01–2011
- ಅಂಕಿಅಂಶಗಳು ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ಜನವರಿ 2012 ರಂದು 'ಅಂಕಿ ಅಂಶಗಳ ಸಂಗ್ರಹಣಾ ಅಧಿನಿಯಮ, 2008 ಎಂಬ ಕಿರುಪುಸ್ತಕವನ್ನು ಹೊರತಂದಿದೆ. ಈ ಕಿರುಹೊತ್ತಿಗೆಯಲ್ಲಿ – ಅಂಕಿ ಅಂಶಗಳ ಸಂಗ್ರಹಣಾ ಅಧಿನಿಯಮ, 2008 ರ ಉಪಬಂಧಗಳು ಮತ್ತು ಅದರಡಿ ರಚಿಸಿದ ನಿಯಮಗಳು, ಸಾಮಾನ್ಯ ಪ್ರಶ್ನೆಗಳು ಮತ್ತು ಅವುಗಳಿಗೆ ಉತ್ತರಗಳು – ಇವುಗಳನ್ನು ಒಳಗೊಂಡಿದೆ. ಈ ಅಧಿನಿಯಮವನ್ನು ನೈಜ ಕ್ರಿಯಾಶೀಲತೆಯಿಂದ ಅನುಷ್ಠಾನಗೊಳಿಸಲು ಸಾಂಖ್ಯಿಕ ಚಟುವಟಿಕೆಗಳಲ್ಲಿ ತೊಡಗಿದ ಎಲ್ಲಾ ಸಂಬಂಧಿಸಿದ ಇಲಾಖೆಗಳಿಗೆ 'ಅಂಕಿ ಅಂಶಗಳ ಸಂಗ್ರಹಣಾ ಅಧಿನಿಯಮ, 2008 ಮತ್ತು ನಿಯಮಗಳು 2011' ರ ಪ್ರತಿಗಳನ್ನು ವಿತರಿಸಲಾಗಿದೆ.
- ಗುಣಮಟ್ಟದ ದತ್ತಾಂಶ ಮಾಹಿತಿಯನ್ನು ಸಂಗ್ರಹಿಸುವಲ್ಲಿಅಧಿನಿಯಮದ ಉಪಯೋಗದ ಬಗ್ಗೆಜಾಗೃತಿ ಮೂಡಿಸಲು ಜಿಲ್ಲಾ ಅಧಿಕಾರಿಗಳಿಗಾಗಿ ಮುಖ್ಯ ಯೋಜನಾ ಅಧಿಕಾರಿಗಳಿಂದಜಿಲ್ಲಾ ಮಟ್ಟಗಳಲ್ಲಿ ಸಭೆಗಳನ್ನು ನಡೆಸಲಾಯಿತು. ಈ ಅಧಿನಿಯಮದ ಬಗ್ಗೆ ಜಾಗೃತಿ ಮೂಡಿಸಲು ಎಲ್ಲ ಸಂಬಂಧಿಸಿದ ಇಲಾಖೆಗಳೊಂದಿಗೆ ರಾಜ್ಯ ಮಟ್ಟದ ಸಭೆಯನ್ನೂ ಸಹ ನಡೆಸಲಾಗಿದೆ.
- ಸಂಗ್ರಹಿಸಿದ ದತ್ತಾಂಶದ ಗುಣಮಟ್ಟವನ್ನು ಸುಧಾರಿಸಲು ಮತ್ತು ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಒಂದು ಸೆಟ್ ದತ್ತಾಂಶವನ್ನು ನಿರ್ವಹಿಸಲಾಗುತ್ತದೆ ಹಾಗೂ ಅದರ ವರದಿಗಳನ್ನು ಸಾರ್ವಜನಿಕ ಕ್ಷೇತ್ರದ ಮೂಲಕ ಪ್ರಸಾರ ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ಪ್ರಮುಖ 21 ಇಲಾಖೆಗಳ ಸಾಂಖ್ಯಿಕ ಚಟುವಟಿಗಳನ್ನು ಪರಿಶೀಲಿಸುವ ಉದ್ದೇಶದಿಂದ ಅರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಜಂಟಿ ನಿರ್ದೇಶಕರ/ ಉಪನಿರ್ದೇಶಕರ ಅಧ್ಯಕ್ಷತೆಯ ಅಡಿಯಲ್ಲಿ 12 ಕೋರ್ ಸಮಿತಿಗಳನ್ನು ರಚಿಸಲಾಗಿದೆ.
- ವಿವಿಧ ಸಂಬಂಧಿಸಿದ ಇಲಾಖೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ ರಾಜ್ಯದಲ್ಲಿ ಸಂವೇದನಾಶೀಲ ತರಬೇತಿಯನ್ನು ಆಯೋಜಿಸಲಾಗಿದೆ. ನೇಮಕವಾದ ಸಹಾಯಕ ನಿರ್ದೇಶಕರಿಗೆ ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳಿಗೆ ಸಾಮಾನ್ಯ ಬುನಾದಿ ಕೋರ್ಸ್‌ನ್ನು ನಡೆಸುವ ಆಡಳಿತಾತ್ಮಕ ತರಬೇತಿ ಸಂಸ್ಥೆ 'ಸಿ' ದರ್ಜೆ ಅಧಿಕಾರಿಗಳಿಗೆ ತರಬೇತಿ ನೀಡುತ್ತಿದ್ದು, ಅದರ ತರಬೇತಿ ಕಾರ್ಯಕ್ರಮದಲ್ಲಿ 'ಅಂಕಿ ಅಂಶಗಳ ಸಂಗ್ರಹಣ ಅಧಿನಿಯಮ 2008 ಮತ್ತು ನಿಯಮಗಳು 2011' ನ್ನು ಕಡ್ಡಾಯ ವಿಷಯವಾಗಿ ಸೇರಿಸಲು ಸೂಚಿಸಲಾಗಿದೆ.

## ಪ್ರಶ್ನೆ 2– ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆ ಅನುಷ್ಟಾನ ಯೋಜನೆಯ ಅಡಿಯಲ್ಲಿ ಗುರಿಗಳು ಮತ್ತು ಕಾರ್ಯನೀತಿಗಳು

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಗುರಿಗಳನ್ನು ಮತ್ತು ಕಾರ್ಯನೀತಿಗಳನ್ನು ಕಂಡುಕೊಳ್ಳಲಾಗಿದೆ ಮತ್ತು ಭಾಗಶಃ ಅನುಷ್ಠಾನಗೊಳಿಸಲಾಗಿದೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ 9 ಗುರಿಗಳ ಅಡಿಯಲ್ಲಿ ಕೆಲವು ಮುಖ್ಯ ನಿರ್ಣಯಗಳನ್ನು ಈ ಕೆಳಗಿನಂತೆ ಪಟ್ಟಿಮಾಡಲಾಗಿದೆ:
- **ಸಾಂಖ್ಯಿಕ ಕಾರ್ಯಾಚರಣೆಗಳನ್ನು ಸುಧಾರಿಸುವುದು**
- ಸಾಂಖ್ಯಿಕ ದತ್ತಾಂಶದ ಗುಣಮಟ್ಟ ಮತ್ತು ಪ್ರಸಾರದಲ್ಲಿ ಸುಧಾರಣೆ ತರುವ ಉದ್ದೇಶಕ್ಕೆ ಪೂರಕವಾಗಿರುವ ಸಾಂಖ್ಯಿಕ ಕಾರ್ಯಾಚರಣೆಗಳನ್ನು ಸುಧಾರಿಸುವುದಕ್ಕಾಗಿ ಹಲವಾರು ವಿಚಾರ ಸಂಕಿರಣಗಳನ್ನು, ಕಾರ್ಯಾಗಾರಗಳನ್ನು ಹಾಗೂ ಸಭೆಗಳನ್ನು ಇಲಾಖೆಗಳ ವಿವಿಧ ಮುಖ್ಯಸ್ಥರೊಂದಿಗೆ ಆರಂಭದಿಂದಲೂ ನಡೆಸಲಾಯಿತು.
- ಬಳಕೆದಾರರ ಅಗತ್ಯತೆಗಳನ್ನು ತಿಳಿದುಕೊಳ್ಳುವುದಕ್ಕಾಗಿ ಎಲ್ಲ ಸಂಬಂಧಿಸಿದ ಇಲಾಖೆಗಳೊಂದಿಗೆ 2 ಸಭೆಗಳನ್ನು ಮಾಡಲಾಗಿದೆ ಮತ್ತು ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ಮತ್ತು 13ನೇ ಹಣಕಾಸು ಆಯೋಗದ ಅಡಿಯಲ್ಲಿ ಸೂಚಿಸಿದ ಸುಧಾರಣೆಗಳನ್ನು ಒಳಗೊಂಡು ರಾಜ್ಯದಲ್ಲಿನ ಪ್ರಸ್ತುತ ಸಾಂಖ್ಯಿಕ ವ್ಯವಸ್ಥೆಯ ಪರಿಣಾಮವಾಗಿ ಅಧ್ಯಯನವನ್ನು ಕೈಗೊಳ್ಳುವಂತೆ ಡೆಲೊಟ್ಟೆಯವರನ್ನು ಕೋರಲಾಯಿತು. ಅಲ್ಲದೆ ಪ್ರಸ್ತುತ ಇರುವ ಅಂತರಗಳನ್ನೂ ಸಹ ಕಂಡುಕೊಳ್ಳಲಾಗಿದೆ ಮತ್ತು ರಾಜ್ಯದಲ್ಲಿನ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸಲು ತಾಂತ್ರಿಕ ಮತ್ತು ಹಣಕಾಸು ಅಡಚಣೆಗಳನ್ನು ಹಾಗೂ ಶಿಫಾರಸು ಮಾಡಲ್ಪಟ್ಟ 308 ಸಲಹೆಗಳೊಂದಿಗೆ ಈ ಅಂತರಗಳನ್ನು ಕಿರಿದುಗೊಳಿಸುವುದಕ್ಕಾಗಿ ಲಭ್ಯವಿರುವ ಕಾರ್ಯನೀತಿಯುಕ್ತ ಆಯ್ಕೆಗಳನ್ನು ಸಹ ಕಂಡುಕೊಳ್ಳಲಾಗಿದೆ.
- ಬಳಕೆದಾರರಿಗೆ ಸುಲಭ ಹಾಗೂ ಉತ್ತಮ ಪ್ರವೇಶಾತಿಗಾಗಿ ಇಲಾಖಾ ವೆಬ್‌ಸೈಟ್ ಮೂಲಕ ವಿಶ್ಲೇಷಿತ ದತ್ತಾಂಶವನ್ನು ಒಳಗೊಂಡ ವಾರ್ಷಿಕ ವರದಿಗಳು ಲಭ್ಯವಿರುತ್ತವೆ.
- 13ನೇ ಹಣಕಾಸು ಆಯೋಗ ನಿಧಿಯ ಅಡಿಯಲ್ಲಿ ಇ–ಲೈಬ್ರರಿಯನ್ನು ಉಪಯೋಗಿಸಿಕೊಂಡು ಮೆಟಾಡೇಟಾ ಸಿದ್ಧಪಡಿಸಲಾಯಿತು.

**ಆಯೋಜಿಸಿದ ಕಾರ್ಯಾಗಾರಗಳು ಮತ್ತು ತರಬೇತಿಗಳು**

- ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯಿಂದ ಅನುದಾನಿತವಾದ ಅಂಕಿಅಂಶಗಳ ಗುಣಮಟ್ಟವನ್ನು ಸುಧಾರಿಸಲು, ಅಂಕಿಅಂಶಗಳನ್ನು ತಯಾರಕರಿಗಾಗಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ಜಾಗೃತಿ ಕಾರ್ಯಗಾರವನ್ನು ಏರ್ಪಡಿಸಲಾಯಿತು.

- ವಿಶ್ವಾಸಾರ್ಹ ಹಾಗೂ ಸಕಾಲಿಕ ಅಂಕಿಅಂಶಗಳ ವಿಶ್ಲೇಷಣೆಯೊಂದಿಗೆ 'ಇಲಾಖೆಗಳ ವಾರ್ಷಿಕ ಆಡಳಿತ ವರದಿಯ ಮರುವಿನ್ಯಾಸಗೊಳಿಸುವುದು' ಕುರಿತು ವಿವಿಧ ಇಲಾಖಾ ಪ್ರತಿನಿಧಿಗಳ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಯಿತು.

- ಅಧಿಕಾರಿಗಳಿಗೆ ಮತ್ತು ಲೈನ್ ಇಲಾಖಾ ಅಧಿಕಾರಿಗಳಿಗಾಗಿ ಆಇಖಾಜ್ಯ ಮಟ್ಟದಲ್ಲಿ ಸಾಂಖ್ಯಿಕ ಚಟುವಟಿಕೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಲಿದೆ ಮತ್ತು ಜಿಲ್ಲಾ ಸಾಂಖ್ಯಿಕ ಕಛೇರಿಗಳು ಜಿಲ್ಲೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ.

- 2011–12 ರಿಂದ 2014–15ರ ಅವಧಿಯಲ್ಲಿ 2,22,314 ಅಭ್ಯರ್ಥಿಗಳನ್ನು ತರಬೇತಿಳಿಸಲಾಯಿತು. ಅವರಲ್ಲಿ ಡಿ.ಐ.ಎಸ್. ಅಧಿಕಾರಿಗಳು, ಲೈನ್ ಇಲಾಖಾ ಅಧಿಕಾರಿಗಳು ಜಿಲ್ಲಾ ಮತ್ತು ಉಪ–ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮಾಲೋಚಕರು, ಜಿಲ್ಲಾ ಪಂಚಾಯತಿ ಅಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು (ತಾಲೂಕು ಮಟ್ಟ) ಮತ್ತು ಸಾಂಖ್ಯಿಕ ಪರೀಕ್ಷಾಧಿಕಾರಿಗಳು ಹಾಗೂ ಗಣತಿಗಾರರು– ಒಳಗೊಳ್ಳುತ್ತಾರೆ.

- ಮೊದಲ ಬಾರಿಗೆ, ಸಾಂಖ್ಯಿಕ ಇಲಾಖೆಯಲ್ಲಿ ಬೆಳೆ ಕತ್ತರಿಸುವ ಪ್ರಯೋಗಗಳಿಗಾಗಿ ದೃಶ್ಯ–ಶ್ರವಣ ತರಬೇತಿ ಸಾಮಗ್ರಿಗಳನ್ನು 2014–15ರ ಅವಧಿಯಲ್ಲಿ ತಯಾರಿಸಲಾಯಿತು.

**ವೆಬ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸುವುದು**

- ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯಿಂದ ಅನುದಾನಿತವಾದ ಅಂಕಿಅಂಶಗಳ ಗುಣಮಟ್ಟವನ್ನು ಸುಧಾರಿಸಲು, ಅಂಕಿಅಂಶಗಳನ್ನು ತಯಾರಕರಿಗಾಗಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ಜಾಗೃತಿ ಕಾರ್ಯಗಾರವನ್ನು ಏರ್ಪಡಿಸಲಾಯಿತು.
- 20 ಮುಖ್ಯ ಸಾಂಖ್ಯಿಕ ಚಟುವಟಿಕೆಗಳಿಗಾಗಿ ಸೂಕ್ತ ವೆಬ್ ಚಾಲಿತ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲು ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಸಂಸ್ಥೆಯ, ಸೇವೆಗಳನ್ನು ಪಡೆಯಲಾಗಿದೆ. ಈ ಉದ್ದೇಶಕ್ಕಾಗಿ, ಈ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲು ಹೊರಗುತ್ತಿಗೆ ಆಧಾರದಲ್ಲಿ ನಿಯೋಜಿತವಾದ 2 ಪ್ರೋಗ್ರಾಮರ್‌ಗಳಿಗೆ ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್‌ನಿಂದ ಒಬ್ಬರು ಸಿಸ್ಟಮ್ ಅನಲಿಸ್ಟ್ ಹಾಗೂ ಇಬ್ಬರು ತಾಂತ್ರಿಕ ನಿರ್ದೇಶಕರು ಮಾರ್ಗದರ್ಶನ ನೀಡುತ್ತಿದ್ದಾರೆ.
- ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮೂರು ಪ್ರೋಗ್ರಾಮರ್‌ಗಳನ್ನು ನಿಯೋಜಿಸಲಾಯಿತು. ಹಾಗಾಗಿ ಈ ಕೆಳಗಿನ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲಾಯಿತು ಮತ್ತು ಈ ಅಪ್ಲಿಕೇಶನ್‌ಗಳ ಮೂಲಕ ದತ್ತಾಂಶವನ್ನು ನಮೂದಿಸಲಾಗುತ್ತದೆ.
    - ಗ್ರಾಹಕ ಬೆಲೆ ಸೂಚ್ಯಂಕ
    - ಸಗಟು ಮಾರಾಟ ಬೆಲೆ ಸೂಚ್ಯಂಕ
    - ನಗರ ಪ್ರದೇಶ ಚಿಲ್ಲರೆ ಮಾರಾಟ ಬೆಲೆ ಸೂಚ್ಯಂಕ

  - ಗ್ರಾಮೀಣ ಪ್ರದೇಶ ಚಿಲ್ಲರೆ ಮಾರಾಟ ಬೆಲೆ ಸೂಚ್ಯಂಕ
  - ಕ್ಷೇತ್ರ ಗಣತಿ
  - ಬೆಳೆ ಕಟಾವು ಪ್ರಯೋಗಗಳು
  - ಔದ್ಯಮಿಕ ಉತ್ಪಾದನಾ ಸೂಚ್ಯಂಕ
  - ಸ್ಥಳೀಯ ಸಂಸ್ಥೆ ಲೆಕ್ಕ ಪತ್ರಗಳು (ಆರ್ಥಿಕ ಮತ್ತು ಉದ್ದೇಶ ವರ್ಗೀಕರಣ)
  - ಕರ್ನಾಟಕ-ಪಕ್ಷಿನೋಟ

- ನೂತನ ಮಾಹಿತಿ ಸಂವಹನ ತಂತ್ರಜ್ಞಾನವು ಅಪ್ಲಿಕೇಶನ್‌ಗಳನ್ನು ಉಪಯೋಗಿಸುವಲ್ಲಿ ಉಪ-ಜಿಲ್ಲೆ ಮಟ್ಟದಲ್ಲಿ ಸಿಬ್ಬಂದಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಲು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗೆ 30 ಪ್ರೋಗ್ರಾಮರ್ ಸಮಾಲೋಚಕರನ್ನು ಒದಗಿಸಲಾಯಿತು.
- ಜಿಲ್ಲೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಮತ್ತು ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಕೆಲಸ ಮಾಡಲು 2014-15 ರ ಅವಧಿಯಲ್ಲಿ ಇ-ಟೆಂಡರ್ ಪ್ರಕ್ರಿಯೆಯ ಮೂಲಕ 60 ಕಾರ್ಯಕ್ರಮ ಸಮಾಲೋಚಕರನ್ನು ನೇಮಿಸಲಾಗಿದೆ. ಈ ಕಾರ್ಯಕ್ರಮ ಸಮಾಲೋಚಕರು, ಅಪ್ಲಿಕೇಶನ್‌ಗಳನ್ನು ಮತ್ತು ಮಿನಿ ಲ್ಯಾಪ್‌ಟಾಪ್‌ಗಳನ್ನು ಉಪಯೋಗಿಸುವಲ್ಲಿ ಇದುವರೆಗೆ ಸುಮಾರು 14,100 ಪ್ರಾಥಮಿಕ ಕಾರ್ಯಕರ್ತರಿಗೆ ತರಬೇತಿ ನೀಡಲಾಗಿದೆ.
- ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳು ಇಲಾಖೆಯ ನೊಂದಣಿ ಮತ್ತು ರಿಟರ್ನ್‌ಗಳಿಗಾಗಿ ವೆಬ್ ಪೋರ್ಟಲ್‌ನ್ನು 2012-13 ರ ಅವಧಿಯಲ್ಲಿ ಪೂರ್ಣಗೊಳಿಸಲಾಯಿತು. ಈ ವೆಬ್ ಪೋರ್ಟಲ್‌ನ ಮರು ಹೊಂದಾಣಿಕೆಯನ್ನು 2014-15 ರಲ್ಲಿ ಮಾಡಲಾಯಿತು. ಈ ವೆಬ್ ಪೋರ್ಟಲ್‌ನ ಪರಿಷ್ಕರಣೆಯನ್ನು 2014-15ರ ಅವಧಿಯಲ್ಲಿ ಮಾಡಲಾಯಿತು.
- ಸ್ಥಳೀಯ ಸಂಸ್ಥೆಗಳ ವಂತಿಗೆಯ ಅಂದಾಜುಗಳು: ಸ್ಥಳೀಯ ಸಂಸ್ಥೆಗಳ ವಾರ್ಷಿಕ ಲೆಕ್ಕಪತ್ರಗಳ ಆರ್ಥಿಕ ವಿಶ್ಲೇಷಣೆಗಾಗಿ ವೆಬ್ ಆಧಾರಿತ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಎಲ್ಲ ಅಧಿಕಾರಿಗಳಿಗೆ ಮತ್ತು ಸಿಬ್ಬಂಧಿಗೆ ರಾಜ್ಯಪಟ್ಟದ, ಜಿಲ್ಲಾ ಮತ್ತು ತಾಲೂಕು ಮಟ್ಟದ ತರಬೇತಿಯನ್ನು ಪೂರ್ಣಗೊಳಿಸಲಾಗಿದೆ.
- ಕಾರ್ಖಾನೆಗಳ ಮತ್ತು ಬಾಯ್ಲರ್‌ಗಳ ಆನ್‌ಲೈನ್ ನೋಂದಣಿಯನ್ನು ಪೂರ್ಣಗೊಳಿಸಲಾಗಿದೆ ಮತ್ತು ರಿಟರ್ನ್‌ಗಳ ಗಣಕೀಕರಣ ಕಾರ್ಯವು ಪ್ರಗತಿಯಲ್ಲಿದೆ ಇ-ಸುರಕ್ಷೆ
- ಇ-ಜನ್ಮ ಕಾರ್ಯಕ್ರಮಕ್ಕಾಗಿ ಪ್ರಚಾರ ನೀಡುವುದಕ್ಕಾಗಿ ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು 14,40,000 ಜಾಹೀರುಗಳನ್ನು ಮುದ್ರಿಸಲಾಗಿದೆ ಮತ್ತು ಜಿಲ್ಲೆಗಳಿಗೆ ವಿತರಿಸಲಾಗಿದೆ.
- ಗುಣಮಟ್ಟದ ಹಾಗೂ ಸಕಾಲಿಕ ಕೃಷಿ ಅಂಕಿಅಂಶಗಳ ಸಂಗ್ರಹಣೆ ಮತ್ತು ವರದಿಮಾಡುವಿಕೆಯಲ್ಲಿ ಸ್ಮಧಾರಣೆ ಉಂಟುಮಾಡಲು, ಮೂರು ಋತುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವ 'ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಒಕ್ಕೂಟ ಬೆಂಗಳೂರು'-ಇದರೊಂದಿಗೆ ಸಹಭಾಗಿತ್ವದಲ್ಲಿ ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ನೆಲ್ಲೂರು ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಜಿಐಎಸ್-ಜಿಪಿಎಸ್ ಸಹಾಯದೊಂದಿಗೆ

ಪ್ರಾಯೋಗಿಕ ಬೆಲೆ ಸೂಚಿ–ಪಟ್ಟಿ ಮತ್ತು ನವೀಕರಣ ವ್ಯವಸ್ಥೆ ಯೋಜನೆ–ಇವುಗಳ ಪ್ರಾಯೋಗಿಕ ಅನುಷ್ಠಾನವನ್ನು ಕೈಗೊಳ್ಳಲಾಗಿದೆ.

- ಆಸ್ತಿ ಮತ್ತು ಫಲಾನುಭವಿ ಭೂಪಟ ರಚನೆ ಎಂಬ ಜಿ.ಐ.ಎಸ್. ಮತ್ತು ಜಿ.ಪಿ.ಎಸ್. ಬಳಸುವ ಪ್ರಾಯೋಗಿಕ ಯೋಜನೆಯನ್ನು 'ಕರ್ನಾಟಕ ಸ್ಟೇಟ್ ರಿಮೋಟ್ ಸೆನ್ಸಿಂಗ್ ಅಪ್ಲಿಕೇಶನ್ ಸೆಂಟರ್' ಸಹಯೋಗದೊಂದಿಗೆ ಶಿವಮೊಗ್ಗ, ಧಾರವಾಡ ಮತ್ತು ತುಮಕೂರು ಜಿಲ್ಲೆಗಳಲ್ಲಿ ಆರಂಭಿಸಲು ಚಿಂತಿಸಲಾಗಿದೆ.ಅದರಿಂದಾಗಿ ವಿವಿಧ ಯೋಜನೆಗಳ ಪರಿಣಾಮಕಾರಿ ಹಾಗೂ ದಕ್ಷ ನಿರೂಪಣೆ, ಅನುಷ್ಠಾನ ಮತ್ತು ಮೇಲ್ವಿಚಾರಣೆ ರಾಜ್ಯ ಸರ್ಕಾರಕ್ಕೆ ಸಹಾಯಕವಾಗುವುವು. ಇಂತಹದೇ ವಿಧದ ಯೋಜನೆಯನ್ನು ಕೆ.ಎಸ್.ಆರ್.ಎಸ್.ಎ.ಸಿ. ಸಂಸ್ಥೆಯು ಕೆ–ಜಿ.ಐ.ಎಸ್. ಕಾರ್ಯಕ್ರಮದ ಅಡಿಯಲ್ಲಿ ಆರಂಭಿಸಿದರು, ಸರ್ಕಾರದ ನಿರ್ದೇಶನಗಳ ಅನ್ವಯ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಸಾರ್ವಜನಿಕ ಆಸ್ತಿ ಭೂಪಟರಚನೆ ಕಾರ್ಯಕ್ರಮವನ್ನು ಸ್ಥಗಿತಗೊಳಿಸಿದೆ.

**ತೆರವಾದ ಹುದ್ದೆಗಳನ್ನು ಭರ್ತಿಮಾಡುವುದು**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ನಿರ್ಣಯಗಳ ಅನ್ವಯ, ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮವಾಗಿ–19 ಸಹಾಯಕ ನಿರ್ದೇಶಕರು, 225 ಸಾಂಖ್ಯಿಕ ಪರೀಕ್ಷಕರು, 30 ಗಣತಿದಾರರನ್ನು ನೇಮಿಸಲಾಗಿದೆ ಹಾಗೂ ಅವರನ್ನು ವಿವಿಧ ಹುದ್ದೆಗಳಲ್ಲಿ ನಿಯೋಜಿಸಲಾಗಿದೆ.

**ಅಭಿವೃದ್ಧಿಪಡಿಸಿದ ಹಾಡ್‌ವೇರ್ ಮೂಲಸೌಕರ್ಯ**

- 176 ತಾಲ್ಲೂಕುಗಳ ಪೈಕಿ 120 ತಾಲೂಕುಗಳು ಮಿನಿ ಲ್ಯಾಪ್‌ಟಾಪ್‌ಗಳನ್ನು ಸುರಕ್ಷಿತವಾಗಿಡಲು ವಿಶೇಷವಾಗಿ ವಿನ್ಯಾಸಗೊಳಿಸಿದ ಲ್ಯಾಪ್‌ಟಾಪ್ ಚಾರ್ಜರ್ ಮತ್ತು ಅಲ್‌ಮೇರವನ್ನು ಸಿದ್ದಪಡಿಸಿದ್ದಾರೆ. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳು ತಾಲ್ಲೂಕು ಕಛೇರಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ ಒಳಗೊಂಡು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಕಛೇರಿಗಳಿಗೆ 425 ಡೆಸ್ಕ್‌ಟಾಪ್‌ಗಳನ್ನು ಒದಗಿಸಲಾಗಿದೆ. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳಿಗೆ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಕಛೇರಿಗಳಿಗೆ 34 ಲ್ಯಾಪ್‌ಟಾಪ್‌ಗಳನ್ನು ಒದಗಿಸಲಾಗಿದೆ. ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳಿಗೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಛೇರಿಗಳಿಗೆ 32 ಪ್ರೊಜೆಕ್ಟರ್‌ಗಳನ್ನು ಮತ್ತು ಸ್ಕ್ರೀನ್‌ಗಳನ್ನು; 172 ಪ್ರಿಂಟರ್‌ಗಳನ್ನು ತಾಲ್ಲೂಕು ಕಛೇರಿಗಳ ಸಾಂಖ್ಯಿಕ ನಿರೀಕ್ಷಕರಿಗೆ; ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಕಛೇರಿಗಳಿಗೆ 36 MFD ಪ್ರಿಂಟರ್‌ಗಳನ್ನು ತಾಲೂಕು ಕಛೇರಿಗಳ ಮತ್ತು ಜಿಲ್ಲಾ ಪಂಚಾಯತ್‌ನ ಸಾಂಖ್ಯಿಕ ಪರೀಕ್ಷಕರಿಗೆ 236 ಯುಪಿಎಸ್ ಗಳನ್ನು ; 176 ತಾಲೂಕಾ ಕಛೇರಿಗಳಿಗೆ 4153 ಮಿನಿ ಲ್ಯಾಪ್‌ಟಾಪ್‌ಗಳನ್ನು; ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗೆ 22 ಡೆಸ್ಕ್‌ಟಾಪ್‌ಗಳು, 3 ಲ್ಯಾಪ್‌ಟಾಪ್‌ಗಳು ಮತ್ತು 10 ಪ್ರಿಂಟರ್‌ಗಳನ್ನು; ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಕಛೇರಿಗೆ 16 ಡೆಸ್ಕ್‌ಟಾಪ್‌ಗಳು ಮತ್ತು 5 ಪ್ರಿಂಟರ್‌ಗಳನ್ನು–ಒದಗಿಸಲಾಗಿದೆ.

- ಹಾಸನ, ದಕ್ಷಿಣ ಕನ್ನಡ ಮತ್ತು ಮೈಸೂರುಗಳಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಕಛೇರಿ ಕಟ್ಟಡಗಳನ್ನು ನಿರ್ಮಿಸಲು ಖಾಲಿ ನಿವೇಶನಗಳನ್ನು ಖರೀದಿಸಲಾಗಿದೆ.

- ಬೆಂಗಳೂರು (ನಗರ) ಮತ್ತು ಬೆಂಗಳೂರು (ಗ್ರಾಮಾಂತರ) ಗಳಲ್ಲಿನ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಕಟ್ಟಡಗಳ ನಿರ್ಮಾಣವನ್ನು 2012–13 ರಲ್ಲಿ ಪೂರ್ಣಗೊಳಿಸಲಾಯಿತು.
- ಹಾಸನ ಮತ್ತು ಚಿಕ್ಕಮಗಳೂರಿನಲ್ಲಿ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಕಟ್ಟಡಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಈ ಎರಡು ಕಛೇರಿ ಕಟ್ಟಡಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಈ ಎರಡು ಕಛೇರಿ ಕಟ್ಟಡಗಳ ನಿರ್ಮಾಣವನ್ನು 2014–15 ರಲ್ಲಿ ಕೈಗೊಳ್ಳಲಾಯಿತು.
- ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಕಟ್ಟಡಗಳ ನಿರ್ಮಾಣಕ್ಕಾಗಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗಾಗಿ ಕ್ರಮವಾಗಿರು ರೂ.132.00 ಲಕ್ಷ ಮತ್ತು ರೂ.168.00 ಲಕ್ಷ ಮೊತ್ತಗಳಿಗಾಗಿ ಆಡಳಿತಾತ್ಮಕ ಅನುಮೋದನೆಯನ್ನು 2014–15 ರಲ್ಲಿ ಕೊಡಲಾಯಿತು. ಪ್ರಥಮ ಕಂತನ್ನು ಅನುಷ್ಠಾನಗೊಳಿಸುತ್ತಿರುವ ಏಜೆನ್ಸಿಗಳಿಗೆ ಬಿಡುಗಡೆ ಮಾಡಲಾಯಿತು.
- ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ/ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಆಇಖ ಕಛೇರಿಗೆ ಗೋಡೌನ್‌ನ ನಿರ್ಮಾಣಕ್ಕಾಗಿ ರೂ.99.50 ಲಕ್ಷ ಮೊತ್ತಕ್ಕಾಗಿ ಆಡಳಿತಾತ್ಮಕ ಅನುಮೋದನೆಯನ್ನು 2014–15ರ ಅವಧಿಯಲ್ಲಿ ಕೊಡಲಾಯಿತು. ಪ್ರಥಮ ಕಂತನ್ನು ಅನುಷ್ಠಾನಗೊಳಿಸುತ್ತಿರುವ ಏಜೆನ್ಸಿಗೆ ಬಿಡುಗಡೆ ಮಾಡಲಾಯಿತು.
- ಉತ್ತಮ ಕೆಲಸದ ವಾತಾವರಣಕ್ಕಾಗಿ ರೂ.5.24 ಲಕ್ಷ ವೆಚ್ಚದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳ ಚೇಂಬರ್‌ನ ನವೀಕರಣ.

**ಪ್ರಶ್ನೆ 3–ದತ್ತಾಂಶ ಸಂಗ್ರಹಕ್ಕಾಗಿ ಕ್ಷೇತ್ರ ಸಿಬ್ಬಂದಿಗೆ ಒದಗಿಸಿದ ಸಲಕರಣೆಗಳ ಲಭ್ಯತೆ ಮತ್ತು ಕಾರ್ಯಕ್ಷಮತೆ**

- ಸಾಂಖ್ಯಿಕ ದತ್ತಾಂಶದ ಗುಣಮಟ್ಟ ಮತ್ತು ಪ್ರಸಾರದಲ್ಲಿ ಸುಧಾರಣೆ ತರುವ ಉದ್ದೇಶಕ್ಕೆ ಪೂರಕವಾಗಿರುವ ಸಾಂಖ್ಯಿಕ ಕಾರ್ಯಾಚರಣೆಗಳನ್ನು ಸುಧಾರಿಸುವುದಕ್ಕಾಗಿ ಹಲವಾರು ವಿಚಾರ ಸಂಕಿರಣಗಳನ್ನು, ಕಾರ್ಯಾಗಾರಗಳನ್ನು ಹಾಗೂ ಸಭೆಗಳನ್ನು ಇಲಾಖೆಗಳ ವಿವಿಧ ಮುಖ್ಯಸ್ಥರೊಂದಿಗೆ ಆರಂಭದಿಂದಲೂ ನಡೆಸಲಾಯಿತು.
- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಸಂಬಂಧಿಸಿದ ಇಲಾಖೆಗಳಿಂದ ಸಮೀಕ್ಷೆಗಳನ್ನು ಕೈಗೊಳ್ಳುವುದಕ್ಕಾಗಿ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಒದಗಿಸುವುದಕ್ಕೆ 4828 ಮಿನಿ ಲ್ಯಾಪ್‌ಟಾಪ್‌ಗಳನ್ನು/10 ನೆಟ್ ಬುಕ್‌ಗಳನ್ನು/ಹಸ್ತಚಾಲಿತ ಉಪಕರಣಗಳನ್ನು ಖರೀದಿಸಲು ಯೋಜಿಸಲಾಯಿತು. ಮಿನಿ ಲ್ಯಾಪ್‌ಟಾಪ್‌ಗಳಿಗಾಗಿ ವಿತರಿಸಿದ ಆಯವ್ಯಯ 724.2 ಲಕ್ಷಗಳಷ್ಟು ಆಗಿತ್ತು. ಸದರಿ ಇಲಾಖೆಯಿಂದ ಒದಗಿಸಲಾದ ಮಾಹಿತಿಯ ಅನ್ವಯ ಇಂದಿನವರೆಗೆ ರೂ.786.708 ಲಕ್ಷ ಮೌಲ್ಯದ 4153 ಮಿನಿ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲಾಗಿದೆ.
- ಸ್ಥಳೀಯ ಮಟ್ಟದ ಅಭಿವೃದ್ಧಿ ಮತ್ತು ಇತರ ಚಟುವಟಿಕೆಗಳಿಗಾಗಿ ಅಂಕಿಅಂಶಗಳ ಸಂಕಲನಕ್ಕಾಗಿ ತಾಲ್ಲೂಕು ಪಂಚಾಯತಿ ಕಛೇರಿಗಳಿಗೆ ಒದಗಿಸಲು 176 ಡೆಸ್ಕ್‌ಟಾಪ್‌ಗಳನ್ನು ಖರೀದಿಸಲು ಯೋಜಿಸಲಾಯಿತು.

ಡೆಸ್ಕ್‌ಟಾಪ್‌ಗಳಿಗಾಗಿ ಹಂಚಿಕೆಮಾಡಿದ ಆಯವ್ಯಯ ರೂ. 60.6 ಲಕ್ಷ ಆಗಿತ್ತು. ಇಲಾಖೆಯಿಂದ ಒದಗಿಸಿದ ಮಾಹಿತಿಯ ಅನ್ವಯ, ಇದುವರೆಗೆ ರೂ.147.726 ಲಕ್ಷ ಮೌಲ್ಯದ 463 ಡೆಸ್ಕ್‌ಟಾಪ್‌ಗಳನ್ನು ಖರೀದಿಸಲಾಗಿದೆ.

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ 36 ಲ್ಯಾಪ್‌ಟಾಪ್‌ಗಳನ್ನು ರೂ. 12.6 ಲಕ್ಷ ಬಜೆಟ್‌ನಲ್ಲಿ ಖರೀದಿಸಲು ಯೋಜಿಸಲಾಯಿತು. ಇಲಾಖೆಯಿಂದ ಒದಗಿಸಿದ ಮಾಹಿತಿಯ ಅನ್ವಯ, ಇದುವರೆಗೆ 37 ಲ್ಯಾಪ್‌ಟಾಪ್‌ಗಳನ್ನು ಖರೀದಿಸಲಾಗಿದೆ.
- ಎಲ್ಲಾ ಇಲಾಖೆಗಳ ಉಪಯೋಗಕ್ಕಾಗಿ, ವ್ಯವಸ್ಥಿತ ಸಾಫ್ಟ್‌ವೇರ್ ಸಾಧನಗಳು–ಸಾಂಖ್ಯಿಕ ವಿಶ್ಲೇಷಣಾತ್ಮಕ ಪರಿಹಾರ ಈ ಚಟುವಟಿಕೆಗಾಗಿ ಹಂಚಿಕೆಮಾಡಿದ ಬಜೆಟ್ ರೂ. 300 ಲಕ್ಷ ಆಗಿತ್ತು. ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಒದಗಿಸಿದ ಮಾಹಿತಿಯ ಅನ್ವಯ, ಭಾರತ ಸರ್ಕಾರದ ನಿಧಿಗಳ ಕೊರತೆಯಿಂದಾಗಿ ಯಾವುದೇ ಸಾಫ್ಟ್‌ವೇರ್ ಸಾಧನಗಳನ್ನು ಖರೀದಿಸಿಲ್ಲ.
- 30 ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗೆ ಮತ್ತು ಮುಖ್ಯ ಕಛೇರಿಗೆ ಕಂಪ್ಯೂಟರ್ ಸಿಸ್ಟಮ್ ಮತ್ತು ಪ್ರಿಂಟರ್‌ಗಳ ಇತ್ತೀಚಿನ ಆವೃತ್ತಿಗಳನ್ನು ಒದಗಿಸಲು ಅಂದಾಜು ರೂ. 66.78 ಲಕ್ಷ ವೆಚ್ಚವಾಗುವುದು.

**ಮಹತ್ವದ ಸಾಧನೆಯನ್ನು ಈ ಕೆಳಗಿನಂತೆ ಮಾಡಲಾಗಿದೆ:**

- ಎಲ್ಲ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳಿಗೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಕಛೇರಿಗಳಿಗೆ 32 ಪ್ರೊಜೆಕ್ಟರ್‌ಗಳನ್ನು ಮತ್ತು ಸ್ಕ್ರೀನ್‌ಗಳನ್ನು ಪೂರೈಸಲಾಗಿದೆ.
- 176 ಪ್ರಿಂಟರ್‌ಗಳನ್ನು ತಾಲ್ಲೂಕು ಕಛೇರಿಗಳ ಸಾಂಖ್ಯಿಕ ನಿರೀಕ್ಷಕರಿಗೆ ಒದಗಿಸಲಾಗಿದೆ.
- 10 ಪ್ರಿಂಟರ್‌ಗಳನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗೆ ಒದಗಿಸಲಾಗಿದೆ.
- ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಕಛೇರಿಗಳಿಗೆ 36 ಎಂಎಫ್‌ಡಿ ಪ್ರಿಂಟರ್‌ಗಳನ್ನು ಒದಗಿಸಲಾಗಿದೆ.
- ತಾಲೂಕು ಕಛೇರಿಗಳ ಮತ್ತು ಜಿಲ್ಲಾ ಪಂಚಾಯತ್‌ನ ಸಾಂಖ್ಯಿಕ ನಿರೀಕ್ಷಕರಿಗೆ 236 ಯುಪಿಎಸ್‌ಗಳನ್ನು ಒದಗಿಸಲಾಗಿದೆ.
- ತಾಲ್ಲೂಕು ಕಛೇರಿಗಳಿಗೆ ಮತ್ತು ಜಿಲ್ಲಾ ಪಂಚಾಯತಿಗಳಿಗೆ 5 ಪ್ರಿಂಟರ್‌ಗಳನ್ನು ಒದಗಿಸಲಾಗಿದೆ.

- ಅಗತ್ಯವಾದಾಗ ದತ್ತಾಂಶ ಸಂಗ್ರಹಕ್ಕಾಗಿ ಕ್ಷೇತ್ರ ಅಧಿಕಾರಿಗಳ ಉಪಯೋಗಕ್ಕಾಗಿ ಮಿನಿ–ಲ್ಯಾಪ್‌ಟಾಪ್‌ಗಳ ಲಭ್ಯತೆಯು ಬಹು ಉತ್ತಮವಾಗಿತ್ತು ಎಂದು ಶೇ.37.84 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯ ಪಟ್ಟರು.
- ತಮ್ಮ ಕಛೇರಿಯಲ್ಲಿ ಕ್ಷೇತ್ರ ಅಧಿಕಾರಿಗಳ ಉಪಯೋಗಕ್ಕಾಗಿ ಮಿನಿ–ಲ್ಯಾಪ್‌ಟಾಪ್‌ಗಳ ಲಭ್ಯತೆಯು ಸರಾಸರಿ/ಕಳಪೆ ಆಗಿತ್ತು ಎಂದು ಶೇ. 62.16 ಪ್ರತಿಕ್ರಿಯೆದಾರರು ಅಭಿಪ್ರಾಯ ಪಟ್ಟರು. ಕಳಪೆ ಬ್ಯಾಟರಿ ಬ್ಯಾಕ್ ಮತ್ತು ಮಿನಿ–ಲ್ಯಾಪ್‌ಟಾಪ್‌ಗಳಕಳಪೆ ನಿರ್ವಹಣೆಯಿಂದಾಗಿ ಅವುಗಳ ಲಭ್ಯತೆಯು ಕಳಪೆಯಾಗಿತ್ತು ಎಂದು ಎಲ್ಲ 23 ಪ್ರತಿಕ್ರಿಯೆದಾರರು/ ಸಾಂಖ್ಯಿಕ ನಿರೀಕ್ಷಕರು ಹೇಳಿದರು.

- ಕ್ಷೇತ್ರ ಸಿಬ್ಬಂದಿಗೆ ಒದಗಿಸಲಾದ ಮಿನಿ–ಲ್ಯಾಪ್‌ಟಾಪ್‌ಗಳ ಕಾರ್ಯದ ಸದ್ಯದ ಸ್ಥಿತಿಯನ್ನು ಬ್ಯಾಟರಿ, ಕೀಬೋರ್ಡ್ ಮತ್ತು ಬ್ಯಾಟರಿಯಂತಹ ಪ್ರಮುಖ ಉಪಕರಣಗಳಿಗಾಗಿ ಮೌಲ್ಯಮಾಪನ ಮಾಡಲಾಯಿತು. ಮೌಲ್ಯಮಾಪನ ಮಾಡಿದ ಶೇ. 56–28 ರಷ್ಟು ಮಿನಿ ಲ್ಯಾಪ್‌ಟಾಪ್‌ಗಳ ಬ್ಯಾಟರಿಗಳು ಉತ್ತಮ ಬ್ಯಾಕ್ ಅಪ್‌ನಿಂದ ಸಾಮಾನ್ಯವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಶೇ.86.85 ರಷ್ಟು ಮಿನಿ ಲ್ಯಾಪ್‌ಟಾಪ್ ಕೀಬೋರ್ಡ್‌ಗಳು ಅತ್ಯುತ್ತಮವಾಗಿ/ದಕ್ಷವಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಮೌಲ್ಯಮಾಪನ ಮಾಡಿದ 87.23 ರಷ್ಟು ಲ್ಯಾಪ್‌ಟಾಪ್‌ಗಳ ಡಿಸ್‌ಪ್ಲೇ ಸ್ಕ್ರೀನ್‌ಗಳು ಅತ್ಯುತ್ತಮವಾಗಿ/ದಕ್ಷವಾಗಿ ಕಾರ್ಯ ನಿರ್ವಹಿಸುತ್ತಿದ್ದವು.
- ಮಿನಿ ಲ್ಯಾಪ್‌ಟಾಪ್‌ಗಳನ್ನು ಅವುಗಳ ಉತ್ತಮ ಕಾರ್ಯಸ್ಥಿತಿಗಾಗಿ ಮತ್ತು ಉಪಯುಕ್ತತೆಗಾಗಿ ಮೌಲ್ಯಮಾಪನ ಮಾಡಲಾಯಿತು. ಮಾಹಿತಿಗಳನ್ನು ಸಂಗ್ರಹಿಸಲು ಕ್ಷೇತ್ರ ಸಿಬ್ಬಂದಿಯಿಂದ ತಾಲೂಕು ಕಛೇರಿಗಳಿಗೆ/ ಸಾಂಖ್ಯಿಕ ನಿರೀಕ್ಷಕರಿಗೆ ಬಳಕೆಗಾಗಿ ಒದಗಿಸಿದ ಮಿನಿ ಲ್ಯಾಪ್ ಟಾಪ್‌ಗಳಲ್ಲಿ ಶೇ.67.77 ರಷ್ಟು ಅತ್ಯುತ್ತಮವಾಗಿರುವುದು ಕಂಡುಬಂದಿತು.
- ವಿಶೇಷವಾಗಿ ತಯಾರಿಸಿದ ಅಲ್‌ಮೇರಾಗಳನ್ನು ಉಪಯೋಗಿಸುವ ಮೂಲಕ ತಮ್ಮ ಕಛೇರಿಯಲ್ಲಿನ ಮಿನಿ–ಲ್ಯಾಪ್‌ಟಾಪ್‌ಗಳಿಗಾಗಿ ಸುರಕ್ಷತಾ ಕ್ರಮಗಳು ಸೂಕ್ತವಾಗಿದ್ದವು ಎಂದು ಸಾಂಖ್ಯಿಕ ನಿರೀಕ್ಷಕರಾಗಿ ಕೆಲಸ ಮಾಡಿದ ಶೇ.54.05 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯಪಟ್ಟರು. ಸಾಂಖ್ಯಿಕ ನಿರೀಕ್ಷಕರಾಗಿ ಕೆಲಸ ಮಾಡಿದ ಶೇ.49.95 ರಷ್ಟು ಪ್ರತಿಕ್ರಿಯೆದಾರರು ಅಲ್ಲಿ ಸುರಕ್ಷಿತಾ ಕ್ರಮಗಳನ್ನು ಶೇ.49.95 ರಷ್ಟು ಪ್ರತಿಕ್ರಿಯೆದಾರರು ಅಲ್ಲಿ ಸುರಕ್ಷಿತಾ ಕ್ರಮಗಳನ್ನು ಒದಗಿಸಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

**ಪ್ರಶ್ನೆ 4–ಪ್ರಮುಖ ಸಾಂಖ್ಯಿಕ ಚಟುವಟಿಕೆಗಳು**

- ಸಾಂಖ್ಯಿಕ ಚಟುವಟಿಕೆಗಳಿಗಾಗಿ ದತ್ತಾಂಶ ಸಂಗ್ರಹಣೆಯ ವಿಧಾನಗಳು ಮಾನವಚಾಲಿತವಾಗಿದ್ದವು ಮತ್ತು ಲ್ಯಾಪ್‌ಟಾಪ್‌ಗಳ ಮೂಲಕ ಆನ್‌ಲೈನ್ ಆಗಿದ್ದವು.
- ಸಾಂಖ್ಯಿಕ ಚಟುವಟಿಕೆಗಳಾದ–ಗ್ರಾಹಕ ಬೆಲೆ ಸೂಚ್ಯಂಕ, ಸಗಟು ಬೆಲೆ ಸೂಚ್ಯಂಕ, ಬೆಳೆ ಪ್ರದೇಶ ಮತ್ತು ಉತ್ಪಾದನೆ ಅಂದಾಜುಗಳು ಮತ್ತು ಸ್ಥಳೀಯ ಸಂಸ್ಥೆಗಳ ಕೊಡುಗೆಗಳ ಅಂದಾಜುಗಳು–ಇವುಗಳ ವೆಬ್ ಅಪ್ಲಿಕೇಶನ್‌ಗಳನ್ನು ದತ್ತಾಂಶಗಳನ್ನು ಸಂಗ್ರಹಿಸಲಿಕ್ಕೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಅಭಿವೃದ್ಧಿಪಡಿಸಲಾಯಿತು.
- ಆರೋಗ್ಯ, ಶಿಕ್ಷಣ, ವಿದ್ಯುಚ್ಛಕ್ತಿ, ಪರಿಸರ ಮತ್ತು ಅರಣ್ಯ, ನೀರು ಪೂರೈಕೆ ಮತ್ತು ನೈರ್ಮಲ್ಯ ಹಾಗೂ ಸಾರಿಗೆ ಬಗ್ಗೆ ಪಮುಖ ಸಾಂಖ್ಯಿಕ ಚಟುವಟಿಕೆಗಳೊಂದಿಗೆ ವ್ಯವಹರಿಸುವ ಇಲಾಖೆಗಳು ಸದೃಢ ಗಣಕೀಕೃತ ದತ್ತಾಂಶ ಕಣಜವನ್ನು ಹೊಂದುತ್ತಿವೆ. ಆದ್ದರಿಂದ ಅದನ್ನು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಕೈಗೊಂಡಿಲ್ಲ.

**ಪ್ರಶ್ನೆ 5–ಮೆ॥ ಡೆಲೊಟ್ಟೆ ಅಧ್ಯಯನದ ಶಿಫಾರಸ್ಸುಗಳು.**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಚಟುವಟಿಕೆಗಳನ್ನು ಮುಂದಕ್ಕೆ ಕೊಂಡೊಯ್ಯಲು (ಎ) ಕೃಷಿ ಮತ್ತು ಪೂರಕ ವಲಯದ ಅಂಕಿಅಂಶಗಳು (ಬಿ) ಮಾನವ ಸಂಪನ್ಮೂಲ ಸಂಬಂಧಿತ ಅಂಕಿಅಂಶಗಳು (ಸಿ) ಪ್ರಾದೇಶಿಕ ಲೆಕ್ಕಪತ್ರಗಳ ಅಂಕಿಅಂಶಗಳು (ಡಿ) ಮೂಲಸೌಕರ್ಯ ಅಂಕಿಅಂಶಗಳು (ಇ) ಜಿಲ್ಲಾ ಮತ್ತು ಸಾಂಖ್ಯಿಕ ಸುಧಾರಣೆ–ವಿಷಯಗಳನ್ನು ಒಳಗೊಂಡ ಅಧ್ಯಯನವನ್ನು ಮೆ॥ ಡೆಲೊಟ್ಟೆ ರವರಿಗೆ ವಹಿಸಲಾಯಿತು.
- ಭಾರತ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಮತ್ತು 13ನೇ ಹಣಕಾಸು ಆಯೋಗದ ಅಡಿಯಲ್ಲಿ ಉಂಟಾದ ಸುಧಾರಣೆಗಳನ್ನು ಒಳಗೊಂಡು ರಾಜ್ಯದಲ್ಲಿನ ಅಸ್ತಿತ್ವದಲ್ಲಿರುವ ಸಾಂಖ್ಯಿಕ ವ್ಯವಸ್ಥೆಯ ಸಾಂದರ್ಭಿಕ ಅಧ್ಯಯನವನ್ನು/ ನಿರ್ಧರಣೆಯನ್ನು ಈ ಅಧ್ಯಯನವು ಮಾಡಿತು.
- ತಾಂತ್ರಿಕ ಮತ್ತು ಹಣಕಾಸು ತೊಡಕುಗಳೊಂದಿಗೆ ಅಂತರಗಳನ್ನು ಕಡಿಮೆ ಮಾಡುವುದಕ್ಕಾಗಿ ಅಸ್ತಿತ್ವದಲ್ಲಿರುವ ಅಂತರಗಳನ್ನು ಮತ್ತು ಲಭ್ಯವಿರುವ ಕಾರ್ಯನೀತಿಯುಕ್ತ ಆಯ್ಕೆಗಳನ್ನು ಅದು ಗುರುತಿಸಿದೆ ಮತ್ತು ರಾಜ್ಯದಲ್ಲಿ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸಲು 308 ಸಲಹೆಗಳನ್ನು ಶಿಫಾರಸ್ಸು ಮಾಡಿದೆ.
- ಡೆಲೊಟ್ಟೆ ವರದಿಯ ಅನುಷ್ಠಾನದ ಬಗ್ಗೆ ಅವರ ಅಭಿಪ್ರಾಯವನ್ನು ಕೋರಿ ಸಂಬಂಧಿಸಿದ ಇಲಾಖೆಗಳಿಗೆ ಈ ಮೇಲ್ಕಂಡ 5 ವಿಷಯಗಳಿಗೆ 308 ಶಿಫಾರಸ್ಸುಗಳನ್ನು ಕಳಿಸಲಾಯಿತು.
- ಒಟ್ಟಿನಲ್ಲಿ ಬಹುಪಾಲು ಉದ್ದೇಶಿತ ಶಿಫಾರಸ್ಸುಗಳನ್ನು ಸರ್ಕಾರವು ಒಪ್ಪಿಕೊಂಡಿದೆ. ಆದರೆ ಈ ಶಿಫಾರಸ್ಸುಗಳ ಅನುಷ್ಠಾನದ ಬಗ್ಗೆ ಅತ್ಯಂತ ಅಲ್ಪ ಪ್ರಮಾಣದಲ್ಲಿ ಕ್ರಮಕೈಗೊಳ್ಳಲಾಗಿದೆ.

**ಪ್ರಶ್ನೆ 6–ಸಿಬ್ಬಂದಿ ಮತ್ತು ಅಧಿಕಾರಿಗಳಿಗಾಗಿ ಕೈಗೊಂಡ ತರಬೇತಿಗಳ ಪರಿಣಾಮತ್ವ**

- ಸ್ವಯಂಸೇವಕರಾಗಿ ಕೆಲಸ ಮಾಡಿದ ಶೇ.67.39 ರಷ್ಟು ಪ್ರತಿಕ್ರಿಯೆದಾರರು–ಕೈಗೊಂಡ ತರಬೇತಿ ಕಾರ್ಯಕ್ರಮಗಳ ಪರಿಣಾಮ ಮಧ್ಯಮ ದರ್ಜೆಯದಾಗಿತ್ತು ಎಂದು ಅಭಿಪ್ರಾಯಪಟ್ಟರು. ಶೇ.59.46 ರಷ್ಟು ಪ್ರತಿಕ್ರಿಯೆದಾರರು––ಕೈಗೊಂಡ ತರಬೇತಿ ಕಾರ್ಯಕ್ರಮಗಳ ಪರಿಣಾಮವು ಅತ್ಯುತ್ತಮವಾಗಿತ್ತು ಎಂದು ಅಭಿಪ್ರಾಯಪಟ್ಟರು ಹಾಗೂ ಶೇ.50ರಷ್ಟು ಪ್ರತಿಕ್ರಿಯೆದಾರರು ಆ ತರಬೇತಿ ಕಾರ್ಯಕ್ರಮಗಳ ಪರಿಣಾಮವು ಮಧ್ಯಮ ದರ್ಜೆಯದಾಗಿತ್ತು ಎಂದು ಅಭಿಪ್ರಾಯಪಟ್ಟರು.
- ಕೈಗೊಂಡ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವು ದೀರ್ಘವಾಗಿತ್ತು ದರ್ಜೆಯದಾಗಿತ್ತು ಎಂದು ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡಿದ ಶೇ. 60.87 ರಷ್ಟು ಪ್ರತಿಕ್ರಿಯೆದಾರರು–ಅಭಿಪ್ರಾಯಪಟ್ಟರು. ಕೈಗೊಂಡ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವು ತಮ್ಮ ನಿರೀಕ್ಷೆಗಳಿಗೆ ತಕ್ಕದ್ದಾಗಿತ್ತು ಎಂದು ಸಾಂಖ್ಯಿಕ ನಿರೀಕ್ಷಕರಾಗಿ ಕೆಲಸ ಮಾಡಿದ ಶೇ. 68 ರಷ್ಟು ಪ್ರತಿಕ್ರಿಯೆದಾರರು–ಅಭಿಪ್ರಾಯಪಟ್ಟರು ಹಾಗೂ ಕೈಗೊಂಡ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವು ತಮ್ಮ ನಿರೀಕ್ಷೆಗಳಿಗೆ ತಕ್ಕದ್ದಾಗಿತ್ತು ಎಂದು ಶೇ. 66.67ರಷ್ಟು ಪ್ರತಿಕ್ರಿಯೆದಾರರು–ಅಭಿಪ್ರಾಯಪಟ್ಟರು.

- ಎಲ್ಲ ಕೌಶಲ್ಯ ತರಬೇತಿ ಮತ್ತು ಹೊಸ ತಂತ್ರಗಳನ್ನು ತರಬೇತಿ ಕಾರ್ಯಕ್ರಮದ ಅವಧಿಯಲ್ಲಿ ಉಪಯೋಗಿಸಿಲ್ಲ ಎಂದು ಜಿಲ್ಲಾ ಸಾಂಖ್ಯಿಕ ಅಧಿಕರಿಗಳು, ಸಾಂಖ್ಯಿಕ ನಿರೀಕ್ಷಕರು ಮತ್ತು ಗಣತಿದಾರರನ್ನು ಒಳಗೊಂಡು ಎಲ್ಲ ಅಧಿಕಾರಿಗಳೂ ಅಭಿಪ್ರಾಯಪಟ್ಟರು.
- ತರಬೇತಿಯ ನಂತರ ಯಾವುದೇ ಮುಂದುವರಿಕೆ ಚಟುವಟಿಕೆಗಳನ್ನು ಕೈಗೊಂಡಿಲ್ಲ ಎಂದು ಗ್ರಾಮಲೆಕ್ಕಿಗರು ಕೆಲಸ ಮಾಡಿದ ಶೇ. 97.50 ರಷ್ಟು ಪ್ರತಿಕ್ರಿಯೆದಾರರು–ಅಭಿಪ್ರಾಯಪಡುತ್ತಾರೆ. ತರಬೇತಿಯ ನಂತರ ಯಾವುದೇ ಮುಂದುವರಿಕೆ ಚಟುವಟಿಕೆಗಳನ್ನು ಕೈಗೊಂಡಿಲ್ಲ ಎಂದು ಸಾಂಖ್ಯಿಕ ನಿರೀಕ್ಷಕರಾಗಿ ಕೆಲಸ ಮಾಡಿದ ಶೇ. 88ರಷ್ಟು ಪ್ರತಿಕ್ರಿಯೆದಾರರು–ಅಭಿಪ್ರಾಯಪಟ್ಟರು. ಶೇ. 83.33 ರಷ್ಟು ಪ್ರತಿಕ್ರಿಯೆದಾರರು–/ಅಧಿಕಾರಗಳು ಅಧಿಕಾರಿಗಳು ತರಬೇತಿಯ ನಂತರ ಯಾವುದೇ ಮುಂದುವರಿಕೆ ಚಟುವಟಿಕೆಗಳು ನಡೆದಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

**ಪ್ರಶ್ನೆ 7– ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಪ್ರೋಗ್ರಾಂ ಸಮಾಲೋಚಕರ ಪಾತ್ರ ಮತ್ತು ಕರ್ತವ್ಯಗಳು**

- ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಇನ್‌ಫಾರ್ಮ್ಯಾಟಿಕ್ಸ್ ಸೆಂಟರ್‌ನಲ್ಲಿ ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಅಭಿವೃದ್ಧಿಪಡಿಸಿದ ಸಾಫ್ಟ್‌ವೇರ್‌ಗಳಿಗೆ ಮಾರ್ಗದರ್ಶನ ಮಾಡಲು ಮತ್ತು ಅವುಗಳನ್ನು ನಿರ್ವಹಿಸಲು ಪ್ರೋಗ್ರಾಮರ್ ಸಮಾಲೋಚಕರನ್ನು ಕಳಿಸಲಾಯಿತು.
- ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ತಾಂತ್ರಿಕ ನಿರ್ದೇಶಕರ ಶ್ರೇಣಿಯ ಅಧಿಕಾರಿಯಾದ 'ಯೋಜನಾ ಸಂಯೋಜಕ'ರು ಮುಖ್ಯಸ್ಥನಾಗಿರುವ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ ಅಡಿಯಲ್ಲಿ ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್‌ಯು ಸಾಫ್ಟ್‌ವೇರ್ ಅಭಿವೃದ್ಧಿ ತಂಡವನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ನಿಯೋಜಿಸಿತು. ಅವರಿಗೆ ಹಿರಿಯ ಸಿಸ್ಟಮ್ ಅನಲಿಸ್ಟ್, ನ್ಯಾಶನಲ್ ಇನ್‌ಫಾರ್ಮಿಟಿಕ್ ಸೆಂಟರ್ ಮತ್ತು ಇಬ್ಬರು ಹೊರಗುತ್ತಿಗೆ ಪ್ರೋಗ್ರಾಮರ್‌ಗಳು ಸಹಾಯ ಮಾಡಿದರು.
- ನೂತನ ಮಾಹಿತಿ ಸಂವಹನ ತಂತ್ರಜ್ಞಾನ ಅಪ್ಲಿಕೇಶನ್‌ಗಳ ಬಳಕೆ ಮಾಡುವಲ್ಲಿ ಉಪ–ಜಿಲ್ಲಾ ಮಟ್ಟದಲ್ಲಿ ಸಿಬ್ಬಂದಿಗೆ ತರಬೇತಿ ನೀಡಲು ಮಾರ್ಗದರ್ಶನ ಮಾಡಲು 30 ಪ್ರೋಗ್ರಾಮರ್ ಸಮಾಲೋಚಕರನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗೆ ಒದಗಿಸಲಾಯಿತು.
- ಅಪ್ಲಿಕೇಶನ್‌ಗಳ ಹಾಗೂ ಮಿನಿಲ್ಯಾಪ್‌ಟಾಪ್‌ಗಳ ಬಳಕೆ ಮಾಡುವಲ್ಲಿ ಪ್ರೋಗ್ರಾಮ್ ಸಮಾಲೋಚಕರು ಸುಮಾರು 14,100 ಪ್ರಾಥಮಿಕ ಕಾರ್ಯಕರ್ತರನ್ನು ತರಬೇತಿಗೊಳಿಸಿದ್ದಾರೆ.
- ಜಿಲ್ಲೆಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು 60 ಪ್ರೋಗ್ರಾಮರ್ ಸಮಾಲೋಚಕರನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಮತ್ತು ಜಿಲ್ಲಾ ಪಂಚಾಯತ್ ಕಛೇರಿಗಳಲ್ಲಿ ಕೆಲಸ ಮಾಡಲು 2014–15 ಅವಧಿಯಲ್ಲಿ ಇ–ಟೆಂಡರ್ ಪ್ರಕ್ರಿಯೆಯ ಮೂಲಕ ನೇಮಿಸಲಾಯಿತು.
- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ಪ್ರತ್ಯೇಕ ಸಮಾಲೋಚಕರನ್ನು ಮಾರ್ಚ್, 2013 ರಿಂದ ಜೂನ್ 2014 ರ ವರೆಗಿನ ಅವಧಿಯಲ್ಲಿ ಎರವಲು ಪಡೆಯಲಾಯಿತು.

- ಈ ಪ್ರತ್ಯೇಕ ಸಮಾಲೋಚಕರು–ಕಾರ್ಯಕ್ರಮ ನಿರೂಪಣೆ, ಸಂಬಂಧಿಸಿದ ಏಜೆನ್ಸಿಗಳೊಂದಿಗೆ ಸಂಯೋಜನೆ, ಮೌಲ್ಯ ನಿರ್ಣಯ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯೊಂದಿಗೆ ದೈನಂದಿನ ಪತ್ರ ವ್ಯವಹಾರ ಇತ್ಯಾದಿಗಳಲ್ಲಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನದಲ್ಲಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಯೋಜನಾ ನಿರ್ದೇಶಕರಿಗೆ–ಬೆಂಬಲ ಸೇವೆಯನ್ನು ಒದಗಿಸಿದರು.
- ಬೆಳೆ ದಾಸ್ತಾನು ಉನ್ನತೀಕರಣ, ಸಾರ್ವಜನಿಕ ಆಸ್ತಿ ಮತ್ತು ಫಲಾನುಭವಿ ಮ್ಯಾಪ್ಪಿಂಗ್ ಮತ್ತು ಸಿಸ್ಟಮ್ ಪ್ರಾಜೆಕ್ಟ್‌ನ ಮೇಲ್ವಿಚಾರಣೆ–ಇತ್ಯಾದಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಗೆ ವಹಿಸಿದ ಹೆಚ್ಚುವರಿ ಕಾರ್ಯಗಳಲ್ಲಿ ಮತ್ತು ಏಖುಆಂ ಯೋಜನಾ ಅಧಿಕಾರಿಯು ವಹಿಸಿದ ಯಾವುದೇ ಕಾರ್ಯದಲ್ಲಿ ಸಹ ಈ ಸಮಾಲೋಚಕರು ನೆರವಾದರು.

**ಪ್ರಶ್ನೆ8–ವೆಬ್ ಪೋರ್ಟಲ್‌ನ ಲಭ್ಯತೆ ಮತ್ತು ವೆಬ್ ಅಪ್ಲಿಕೇಶನ್‌ಗಳ ಮೇಲೆ ದತ್ತಾಂಶ ಪರಿಷ್ಕರಣೆಯ ಆವರ್ತನ.**

- ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ವೆಬ್ ಪಬ್ಲಿಕ್ ಪೋರ್ಟಲ್‌ನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸಾಂಖ್ಯಿಕ ದತ್ತಾಂಶ ವರದಿಯನ್ನು ಪಡೆಯಲು ಸಾರ್ವಜನಿಕರಿಗೆ ಅವು ಲಭ್ಯವಿದೆ. ವಿವಿಧ ಅಧಿಕೃತ ಅಂಕಿಅಂಶಗಳು ಮತ್ತು ಸಮೀಕ್ಷೆಗಳಿಗಾಗಿ ಮಾದರಿಗಳ ಮತ್ತು ಪ್ರಶ್ನಾವಳಿಗಳ ಅಂತರ್ನಿರ್ಮಿತ ದತ್ತಾಂಶವನ್ನು ಒಳಗೊಂಡ ವೆಬ್ ಅಪ್ಲಿಕೇಶನ್‌ಗಳನ್ನು ಪ್ರತಿಷ್ಠಾಪಿಸಿದ ನೋಟ್‌ಬುಕ್‌ಗ'ಳು/ ಮಿನಿ ಲ್ಯಾಪ್‌ಗಳ ಮೂಲಕ ದತ್ತಾಂಶವು ಕ್ಷೇತ್ರ ಅಧಿಕಾರಿಗಳಿಂದ ಸಂಗ್ರಹಿಸಲ್ಪಡುತ್ತದೆ. ದತ್ತಾಂಶದ ಸಂಕಲನ ಮತ್ತು ವಿಶ್ಲೇಷಣೆಯನ್ನು ಜಿಲ್ಲಾ ಮಟ್ಟದಲ್ಲಿ ಮಾಡಲಾಗುತ್ತದೆ ಮತ್ತು ಹೆಚ್ಚಿನ ವಿಶ್ಲೇಷಣೆ, ಪ್ರಕಟಣೆ ಮತ್ತು ದತ್ತಾಂಶದ ಪ್ರಸಾರಕ್ಕಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದವರಿಂದ ಅಂತಿಮಗೊಳಿಸಲಾಗುತ್ತದೆ.
- ವೆಬ್ ಪೋರ್ಟಲ್‌ನ ನಿರ್ಮಾಣದಿಂದಾಗಿ ತಳಹದಿ ಮಟ್ಟದಲ್ಲಿ ದತ್ತಾಂಶ ಸಂಗ್ರಹಣೆಯಲ್ಲಿ ನೆರವಾಗಿದೆ ಮತ್ತು ಕೇಂದ್ರೀಕೃತ ವೆಬ್ ಪೋರ್ಟಲ್‌ಗೆ ದತ್ತಾಂಶ ಸೇರ್ಪಡೆಗೆ ಅನುವಾಗಿದೆ ಮತ್ತು ದತ್ತಾಂಶ ಸಂಗ್ರಹಣೆ, ದತ್ತಾಂಶ ಶೇಖರಣೆ, ಪುನಸ್ಸಂಪಾದನೆ ಮತ್ತು ದತ್ತಾಂಶದ ವಿಶ್ಲೇಷಣೆಯನ್ನು ಸುಗಮಗೊಳಿಸಿದೆ.
- ಒಟ್ಟು 7 ಅಪ್ಲಿಕೇಶನ್‌ಗಳಲ್ಲಿ ಎ) ಗ್ರಾಹಕ ಬೆಲೆ ಸೂಚ್ಯಾಂಕ್ ಬಿ) ಸಗಟು ಮಾರಾಟ ಬೆಲೆ ಸೂಚ್ಯಂಕಸಿ) ನಗರ ಪ್ರದೇಶ ಚಿಲ್ಲರೆ ಮಾರಾಟ ಬೆಲೆ ಸೂಚ್ಯಂಕಮತ್ತು ಡಿ) ಗ್ರಾಮೀಣ ಪ್ರದೇಶ ಬೆಲೆ ಸೂಚ್ಯಂಕ–ಈ 4 ಅಪ್ಲಿಕೇಶನ್‌ಗಳನ್ನು ತಿಂಗಳ ಆಧಾರದಲ್ಲಿ ಪರಿಷ್ಕರಿಸಲಾಗುತ್ತದೆ. ಆದರೆ ಕ್ಷೇತ್ರ ಗಣತಿ ಮತ್ತು ಋತುಮಾನಕ್ಕೆ ಅನುಗುಣವಾಗಿ ಪರಿಷ್ಕರಿಸಲಾಗುತ್ತದೆ. ಸ್ಥಳೀಯ ಸಂಸ್ಥೆ ಲೆಕ್ಕಪತ್ರಗಳ ಅಪ್ಲಿಕೇಶನ್‌ಗಳನ್ನು ವಾರ್ಷಿಕವಾಗಿ ಉನ್ನತೀಕರಣಗೊಳಿಸಲಾಗಿದೆ.

**ಪ್ರಶ್ನೆ 9–ವೆಬ್ ಪೋರ್ಟಲ್‌ನ ಲಭ್ಯತೆ ಮತ್ತು ವೆಬ್ ಅಪ್ಲಿಕೇಶನ್‌ಗಳ ಮೇಲೆ ದತ್ತಾಂಶ ಪರಿಷ್ಕರಣೆಯ ಆವರ್ತನ.**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ವಿಶ್ವಾಸಾರ್ಹ, ನಂಬಲರ್ಹ ಹಾಗೂ ದತ್ತಾಂಶಗಳನ್ನು ಹೊಂದಲು ಈ ಕೆಳಕಂಡ 7 ವೆಬ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ

ಪಡಿಸಲಾಗಿದೆ ಮತ್ತು ಸದ್ಯದಲ್ಲಿ ದತ್ತಾಂಶವನ್ನು ಈ ಅಪ್ಲಿಕೇಶನ್‌ಗಳ ಮೂಲಕ ದತ್ತಾಂಶವನ್ನು ನಮೂದಿಸಲಾಗುತ್ತದೆ. ಕಾರ್ಯಾಚರಣೆಯಲ್ಲಿರುವ ವೆಬ್ ಅಪ್ಲಿಕೇಶನ್‌ಗಳು ಈ ಕೆಳಗಿನಂತಿವೆ.

1) ಗ್ರಾಹಕ ಬೆಲೆ ಸೂಚ್ಯಂಕ

2) ಸಗಟು ಮಾರಾಟ ಬೆಲೆ ಸೂಚ್ಯಂಕ

3) ನಗರ ಪ್ರದೇಶ ಚಿಲ್ಲರೆ ಬೆಲೆ ಸೂಚ್ಯಂಕ

4) ಗ್ರಾಮೀಣ ಪ್ರದೇಶ ಬೆಲೆ ಸೂಚ್ಯಂಕ

5) ಕ್ಷೇತ್ರ ಗಣತಿ

6) ಪೈರು ಕಟಾವು ಪ್ರಯೋಗಗಳು

7) ಸ್ಥಳೀಯ ಸಂಸ್ಥೆ ಲೆಕ್ಕ ಪತ್ರಗಳು (ಆರ್ಥಿಕ ಮತ್ತು ಉದ್ದೇಶ ವರ್ಗೀಕರಣ)

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಅಭಿವೃದ್ಧಿಪಡಿಸಿದ 7 ವೆಬ್ ಅಪ್ಲಿಕೇಶನ್‌ಗಳು ಕಾರ್ಯಾಚರಣೆಯಲ್ಲಿವೆ ಮತ್ತು ಈ ಮೇಲ್ಕಂಡ ಕೋಷ್ಟಕದಲ್ಲಿ ತಿಳಿಸಿದಂತೆ ಮಾಸಿಕವಾಗಿ, ಋತುಮಾನಕ್ಕನುಗುಣವಾಗಿ ಮತ್ತು ವಾರ್ಷಿಕವಾಗಿ ನಿರಂತರವಾಗಿ ಪರಿಷ್ಕರಿಸಲಾಗುತ್ತದೆ.
- 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳ ಪೈಕಿ ಕೇವಲ 4 ಸಾಂಖ್ಯಿಕ ಚಟುವಟಿಕೆಗಳನ್ನು ಈ 7 ವೆಬ್ ಅಪ್ಲಿಕೇಶನ್‌ಗಳು ಒಳಗೊಳ್ಳುತ್ತವೆ.

**ಪ್ರಶ್ನೆ 10– ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಒದಗಿಸಲಾದ ನೆರವನ್ನು ಆಧರಿಸಿ 3 ಇಲಾಖೆಗಳ ನೆರವು.**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆ 2010–14ರ ಅಡಿಯಲ್ಲಿ ವಿಶ್ವಾಸಾರ್ಹ, ನಂಬಲರ್ಹ ಮತ್ತು ಸಕಾಲಿಕ ದತ್ತಾಂಶ ಮೂಲ ಸೌಕರ್ಯವನ್ನು ಮತ್ತು ದಾಖಲೆ ಸೂಚಕಗಳನ್ನು ಅಭಿವೃದ್ಧಿ ಪಡಿಸಲು ಹಣಕಾಸು ನೆರವನ್ನು ನೀಡಲಾಯಿತು. ಆ 3 ಇಲಾಖೆಗಳೆಂದರೆ:

ಕಾರ್ಖಾನೆಗಳ ಮತ್ತು ಬಾಯ್ಲರ್‌ಗಳ ಇಲಾಖೆ

ಕಾರ್ಮಿಕ ಇಲಾಖೆ

ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ

- ವಿಶ್ವಾಸಾರ್ಹ, ನಂಬಲರ್ಹ ಹಾಗೂ ಸಕಾಲಿಕ ಸಾಂಖ್ಯಿಕ ಮೂಲ ಸೌಕರ್ಯ, ದತ್ತಾಂಶ ಹಾಗೂ ದಾಖಲೆ ಸೂಚಕಗಳನ್ನು ಅಭಿವೃದ್ಧಿ ಪಡಿಸಲು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಹಣಕಾಸು ನೆರವನ್ನು ನೀಡಿದ 3 ಇಲಾಖೆಯ ಶೇ. 96.87 ರಷ್ಟು ಅತ್ಯಧಿಕ ನಿಧಿ ಬಳಕೆ ಅನುಪಾತ ಹೊಂದಿತ್ತು ಮತ್ತು ಕಾರ್ಮಿಕ ಇಲಾಖೆಗೆ ಹೋಲಿಸಿದರೆ, ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯವು

ಸಾಂಖ್ಯಿಕ ಮೂಲ ಸೌಕರ್ಯವನ್ನು ಅಭಿವೃದ್ಧಿ ಪಡಿಸುವಲ್ಲಿ ಯಶಸ್ವಿಯಾಯಿತು ಮತ್ತು ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಗುರಿಗಳ ಅನ್ವಯ ಆನ್‌ಲೈನ್ ವೆಬ್ ಅಪ್ಲಿಕೇಶನ್‌ಗಳನ್ನು ಅನುಷ್ಠಾನಗೊಳಿಸಿತು.

**ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ ಇಲಾಖೆ**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, 'ಇ–ಸುರಕ್ಷತೆ'ಯ ಮೂಲಕ ಉದ್ದಿಮೆದಾರರಿಗೆ ಶೀಘ್ರ, ಪಾರದರ್ಶಕ ಮತ್ತು ಅಡಚಣೆ ಮುಕ್ತವಾದ ಆನ್‌ಲೈನ್ ಸೇವೆಗಳನ್ನು ಒದಗಿಸುವಲ್ಲಿ ಈ ಇಲಾಖೆಯು ಯಶಸ್ವಿಯಾಯಿತು.
- ಆನ್‌ಲೈನ್ ನೋಂದಣಿ ಪಡೆಯಲು ವಾರ್ಷಿಕ ಅರ್ಜಿ ಮತ್ತು ಆನ್‌ಲೈನ್ ನವೀಕರಣ ಪ್ರಮಾಣಪತ್ರಗಳನ್ನು ನೀಡಲು ಕ್ರಮ ಕೈಗೊಳ್ಳಲಾಯಿತು.
- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ಅಗತ್ಯದ ಸಾಂಖ್ಯಿಕ ಮೂಲ ಸೌಕರ್ಯವನ್ನು ಅಭಿವೃದ್ಧಿ ಪಡಿಸಲು ಈ ಇಲಾಖೆಗೆ ರೂ.64 ಲಕ್ಷ ಮೊತ್ತವನ್ನು ಕೊಡಲಾಯಿತು. ಈ 64 ಲಕ್ಷ ಮೊತ್ತದಲ್ಲಿ, ಈ ಇಲಾಖೆಯು ರೂ. 62 ಲಕ್ಷ ಮೊತ್ತವನ್ನು ಉಪಯೋಗಿಸಿತು ಮತ್ತು ಉಳಿದ ರೂ. 2 ಲಕ್ಷ ಮೊತ್ತವನ್ನು ವಾಪಸು ಮಾಡಲಾಯಿತು. ಮಂಜೂರಾದ ಒಟ್ಟು ಮೊತ್ತದ ಸಮಗ್ರ ಬಳಕೆ ಅನುಪಾತವು ಶೇ. 96.87 ರಷ್ಟಾಯಿತು.

**ಕಾರ್ಮಿಕ ಇಲಾಖೆ**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ಅಂಗಡಿ ಮತ್ತು ವಾಣಿಜ್ಯ ಮುಂಗಟ್ಟುಗಳ ಮಾಲೀಕರಿಗಾಗಿ ಮತ್ತು ಸಾರ್ವಜನಿಕರಿಗಾಗಿ ವೃತ್ತಪತ್ರಿಕೆ ಜಾಹೀರಾತು ಮತ್ತು ಕರಪತ್ರಗಳ ಮೂಲಕ 2013–14 ಮತ್ತು 2014–15ರ ಅವಧಿಯಲ್ಲಿ ಇ–ಕಾರ್ಮಿಕ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.
- ಈ ಇಲಾಖೆಗೆ 2011–2012ರ ಅವಧಿಯಲ್ಲಿ ಮೊದಲ ಕಂತಿನಲ್ಲಿ ರೂ. 63.20 ಲಕ್ಷ ಮೊತ್ತವನ್ನು ಬಿಡುಗಡೆ ಮಾಡಲಾಯಿತು. ಅದರಲ್ಲಿ ಇಲಾಖೆಯ ರೂ.11.53 ಲಕ್ಷ ಮೊತ್ತವನ್ನು ಬಳಸಿಕೊಂಡಿತು ಮತ್ತು ಇನ್ನುಳಿದ ರೂ. 51.66 ಲಕ್ಷ ಮೊತ್ತವನ್ನು ಬಳಸಿಕೊಂಡಿಲ್ಲ. 2014–15ರಲ್ಲಿ ಈ ಇಲಾಖೆಗೆ ರೂ.15 ಲಕ್ಷ ಮೊತ್ತವನ್ನು ಬಿಡುಗಡೆ ಮಾಡಲಾಯಿತು. ಅದರಲ್ಲಿ ಕೇವಲ ರೂ. 11.14 ಲಕ್ಷ ಮೊತ್ತವನ್ನು ಇಲಾಖೆಯು ಬಳಸಿಕೊಂಡಿಲ್ಲ. ಮಂಜೂರಾದ ಒಟ್ಟು ಮೊತ್ತದ ಸಮಗ್ರ ಬಳಕೆಯ ಅನುಪಾತವು ಶೇ. 28.98 ರಷ್ಟಿತ್ತು.

**ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯವು 15 ಮಹತ್ವದ ಜಿಲ್ಲೆಗಳಿಗಾಗಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿತು. ಆ 15 ಜಿಲ್ಲೆಗಳೆಂದರೆ–ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು, ಮಂಗಳೂರು, ಶಿವಮೊಗ್ಗ, ಹುಬ್ಬಳ್ಳಿ, ದಾವಣಗೆರೆ, ಬೆಳಗಾವಿ, ಬಾಗಲಕೋಟೆ, ಗುಲಬರ್ಗಾ, ತುಮಕೂರು, ಕೊಪ್ಪಳ, ಬಳ್ಳಾರಿ ಮತ್ತು ಕಾರವಾರ.

ಅಂಕಿಅಂಶಗಳ ಗುಣಮಟ್ಟವನ್ನು ಸುಧಾರಿಸಲು ಅಂಕಿ ಅಂಶಗಳ ಉತ್ಪಾದಕರಿಗೆ 1 ದಿನದ ಜಾಗೃತಿ ಕಾರ್ಯಾಗಾರವನ್ನು ಈ ಜಿಲ್ಲೆಗಳಲ್ಲೆಲ್ಲ ಏರ್ಪಡಿಸಲಾಯಿತು. ಈ ಕಾರ್ಯಾಗಾರದ ವಿಷಯಗಳೆಂದರೆ –

ಸಾಂಖ್ಯಿಕ ಚಟುವಟಿಕೆಗಳು

ನಿಯಮ ಮತ್ತು ನಿಬಂಧನೆಗಳು

ದತ್ತಾಂಶ ಮತ್ತು ಸಂಬಂಧಿತ ವಿಷಯಗಳ ಸಂಗ್ರಹಣ

- ಈ ಇಲಾಖೆಗೆ ರೂ. 6,60,000/– ಮೊತ್ತವನ್ನು ಬಿಡುಗಡೆ ಮಾಡಲಾಯಿತು. ಅದರಲ್ಲಿ ಇಲಾಖೆಯ ರೂ.5,02,000/– ಮೊತ್ತವನ್ನು ಬಳಸಿದೆ ಮತ್ತು ರೂ.1,57,800/– ಮೊತ್ತವನ್ನು ಬಳಸಿಲ್ಲ. ಮಂಜೂರು ಮಾಡಿದ ಒಟ್ಟು ಮೊತ್ತದ ಸಮಗ್ರ ಬಳಕೆಯ ಅನುಪಾತವು ಶೇ.76.06 ರಷ್ಟಿತ್ತು.

**ಪ್ರಶ್ನೆ 11– ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ನೆರವು.**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಮಂಜೂರು ಮಾಡಿದ ಒಟ್ಟು ಮೊತ್ತದ ಸಮಗ್ರ ನಿಧಿ ಬಳಕೆ ಅನುಪಾತವು ಶೇ. 90.53 ಇತ್ತು, ಅದರಲ್ಲಿ ಕರ್ನಾಟಕ ಸರ್ಕಾರಕ್ಕಾಗಿ ನಿಧಿ ಬಳಕೆ ಅನುಪಾತವು ಶೇ. 87.66 ಆಗಿದೆ.
- ನ್ಯಾಶನಲ್ ಇನ್‌ಫಾರ್ಮೇಟಿಕ್ಸ್ ಸೆಂಟರ್‌ನ ನೆರವಿನೊಂದಿಗೆ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ 7 ವೆಬ್ ಅಪ್ಲಿಕೇಶನ್ ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಯಿತು. ಅವುಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದವರು 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗಾಗಿ ಉಪಯೋಗಿಸುತ್ತಾರೆ. ಬೆಳೆ ಅಂದಾಜು ಸಮೀಕ್ಷೆ, ಬೆಳೆ ಕ್ಷೇತ್ರ ಗಣತಿ, ಗ್ರಾಹಕ ಬೆಲೆ ಸೂಚಿ, ಹೋಲ್‌ಸೇಲ್ ದರ ಸೂಚಿ ಮತ್ತು ಔದ್ಯಮಿಕ ಉತ್ಪಾದನೆಯ ಸೂಚಿ ಇವುಗಳಿಗೆ ಸಂಬಂಧಿಸಿದ ವೆಬ್ ಅಪ್ಲಿಕೇಶನ್‌ಗಳನ್ನು 2010–11ರಲ್ಲಿ ಕಾರ್ಯಾಚರಣೆಗಾಗಿ ಸಿದ್ಧಪಡಿಸಲಾಯಿತು.ಹಾಗಾಗಿ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ, ವಿಶ್ವಾಸಾರ್ಹ, ನಂಬಲರ್ಹ ಹಾಗೂ ದತ್ತಾಂಶಗಳನ್ನು ಹೊಂದಲು ಈ ಕೆಳಕಂಡ 7 ವೆಬ್ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸದ್ಯದಲ್ಲಿ ದತ್ತಾಂಶವನ್ನು ಈ ಅಪ್ಲಿಕೇಶನ್‌ಗಳ ಮೂಲಕ ದತ್ತಾಂಶವನ್ನು ನಮೂದಿಸಲಾಗುತ್ತದೆ.
- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಸಾಂಖ್ಯಿಕ ಮೂಲಸೌಕರ್ಯವನ್ನು ಸುಧಾರಿಸುವ ಉದ್ದೇಶದೊಂದಿಗೆ ಎಲ್ಲ ಅನುಷ್ಠಾನಗೊಳಿಸುತ್ತಿರುವ ಪಾಲುದಾರರಿಗೆ ಸಮರ್ಪಕ ಹಾರ್ಡ್‌ವೇರ್‌ನ್ನು ಒದಗಿಸಲಾಗಿದೆ. ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಒಳಗೊಂಡು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಛೇರಿಗಳು, ತಾಲ್ಲೂಕು ಕಛೇರಿಗಳಿಗೆ 463 ಡೆಸ್ಕ್‌ಟಾಪ್‌ಗಳನ್ನು ಒದಗಿಸಲಾಗಿದೆ. ಅದರಂತೆ 4,153 ಮಿನಿ ಲ್ಯಾಪ್‌ಟಾಪ್‌ಗಳನ್ನು 176 ತಾಲ್ಲೂಕು ಕಛೇರಿಗಳಿಗೆ ಒದಗಿಸಲಾಗಿದೆ. ಅಲ್ಲದೆ, 37 ಲ್ಯಾಪ್‌ಟಾಪ್‌ಗಳನ್ನು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಮತ್ತು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಕಛೇರಿಗಳಿಗೆ ಒದಗಿಸಲಾಗಿದೆ.

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ವೆಬ್ ಪಬ್ಲಿಕ್ ಪೋರ್ಟಲ್‌ನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸಾಂಖ್ಯಿಕ ದತ್ತಾಂಶ ವರದಿಯನ್ನು ಪಡೆಯಲು ಸಾರ್ವಜನಿಕರಿಗೆ ಅವು ಲಭ್ಯವಿದೆ. ಸಾಂಖ್ಯಿಕ ಮೂಲಸೌಕರ್ಯವನ್ನು ಸುಧಾರಿಸುವ ಉದ್ದೇಶದಿಂದ, ವೆಬ್ ಪೋರ್ಟಲ್ ನಿರ್ಮಾಣವು ತಳಮಟ್ಟಗಳಲ್ಲಿ ದತ್ತಾಂಶ ಸಂಗ್ರಹಿಸುವಲ್ಲಿ ನೆರವಾಗಿದೆ ಮತ್ತು ಕೇಂದ್ರೀಕೃತ ವೆಬ್ ಪೋರ್ಟಲ್‌ಗೆ ದತ್ತಾಂಶವನ್ನು ರವಾನಿಸಲು ಅನುವಾಗಿದೆ ಮತ್ತು ಅವು ದತ್ತಾಂಶದ ಸಂಗ್ರಹಣೆ, ಪುನಸ್ಸಂಪಾದನೆ ಮತ್ತು ವಿಶ್ಲೇಷಣೆಯನ್ನು ಬಹು ಸುಲಭಗೊಳಿಸಿದೆ.

- ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ಶ್ರವಣ–ದೃಶ್ಯ ತರಬೇತಿ ಸಾಮಗ್ರಿಯನ್ನು ಬಳಸುವುದರಿಂದ ಉಪಗ್ರಹ ಸಂಪರ್ಕಿತ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ನೂತನ ತರಬೇತಿ ವಿಧಾನಗಳನ್ನು ಪರಿಚಯಿಸುವಲ್ಲಿ ಸಾಧನವಾಗಿದೆ. ಅವು ಒಂದೇ ಸಮಾವೇಶದಲ್ಲಿ 25,000 ದಷ್ಟು ಶಿಬಿರಾರ್ಥಿಗಳು ಭಾಗವಹಿಸಿದ ಸಾಮೂಹಿಕ ತರಬೇತಿಗಳನ್ನು ಕೈಗೊಳ್ಳುವಲ್ಲಿ ಉಪಯುಕ್ತವಾಗಿವೆ.

- 2011–12 ರಿಂದ 2014–15ರ ಅವಧಿಯಲ್ಲಿ 2,22,314 ಅಭ್ಯರ್ಥಿಗಳನ್ನು ತರಬೇತಿಗೊಳಿಸಲಾಯಿತು. ಅವರಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು, ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಜಿಲ್ಲಾ ಮತ್ತು ಉಪ– ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮಾಲೋಚಕರು, ಜಿಲ್ಲಾ ಪಂಚಾಯತಿ ಅಧಿಕಾರಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು (ತಾಲ್ಲೂಕು ಮಟ್ಟ) ಮತ್ತು ಸಾಂಖ್ಯಿಕ ನಿರೀಕ್ಷಕರು ಹಾಗೂ ಗಣತಿಗಾರರು– ಒಳಗೊಳ್ಳುತ್ತಾರೆ.

**ಪ್ರಶ್ನೆ 12– ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಮುಂದುವರಿಕೆ**

- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅನುಷ್ಠಾನವನ್ನು ಮುಂದುವರಿಸಬಹುದು. ಈ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು ಕರ್ನಾಟಕದಲ್ಲಿ ಅನುಷ್ಠಾನಗೊಳ್ಳಬೇಕಾದ ಈ ವಿಧದ ಪ್ರಥಮ ಯೋಜನೆಯಾಗಿದೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯು–ವಿಶ್ವಾಸನೀಯ ಮತ್ತು ಸಕಾಲಿಕ ಅಧಿಕೃತ ಅಂಕಿ–ಅಂಶಗಳನ್ನು ಸಂಗ್ರಹಿಸಲು, ಸಂಕಲಿಸಲು ಮತ್ತು ಪ್ರಸಾರ ಮಾಡುವುದಕ್ಕಾಗಿ ಸಾಂಖ್ಯಿಕ ಸಾಮರ್ಥ್ಯವನ್ನು, ಮೂಲಸೌಕರ್ಯವನ್ನು ಸುಧಾರಿಸುವ ಉದ್ದೇಶದಿಂದ ರಾಜ್ಯ ಸಾಂಖ್ಯಿಕ ವ್ಯವಸ್ಥೆಗಳನ್ನು ಬಲಪಡಿಸುವ– ಉದ್ದೇಶವನ್ನು ಹೊಂದಿದೆ. ಸರ್ಕಾರವು ಸಂಪೂರ್ಣ, ನಿಖರ, ಸಕಾಲಿಕ ಹಾಗೂ ವಿಶ್ವಾಸಾರ್ಹ ದತ್ತಾಂಶ ಸಂಗ್ರಹವನ್ನು ನಿರ್ಮಿಸುವುದರಿಂದ ಅತ್ಯುತ್ತಮವಾದ ಆರ್ಥಿಕ ಅಭಿವೃದ್ಧಿ ನೀತಿಗಳನ್ನು ರೂಪಿಸಲು ಈ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಮುಂದುವರಿಕೆಯಿಂದ ಸಾಧ್ಯವಾಗುತ್ತದೆ.

# 11. ಪ್ರತಿಫಲನಗಳು ಮತ್ತು ನಿರ್ಣಯಗಳು

ಅಂಕಿಅಂಶಗಳ ಸಂಗ್ರಹಣ ಅಧಿನಿಯಮ 2008 ಮತ್ತು ನಿಮಮಗಳು ಅಂಕಿಅಂಶಗಳನ್ನು ಸಂಗ್ರಹಿಸುವಲ್ಲಿ ಸಾಂಖ್ಯಿಕ ಅಧಿಕಾರಿಗಳಿಗೆ ಹಲವಾರು ಅಧಿಕಾರಗಳನ್ನು ಒದಗಿಸುತ್ತವೆ. ಅಂಕಿಅಂಶಗಳನ್ನು ಸಂಗ್ರಹಿಸುವುದು ತೊಂದರೆದಾಯಕ ಹಾಗೂ ಶ್ರಮದಾಯಕ ಕಾರ್ಯವಾಗಿದೆ. ನಿರಂತರ ದತ್ತಾಂಶ ಸಂಗ್ರಹಣ ಯೋಜನೆ ಯಾವುದೇ ಸಮೀಕ್ಷೆಯ ಅಡಿಯಲ್ಲಿ ವಿಶಿಷ್ಟ ಉದ್ದೇಶಕ್ಕಾಗಿ ದತ್ತಾಂಶ ಸಂಗ್ರಹಣೆಯ ಉದ್ದೇಶವನ್ನು ವಿವರಿಸುವ ನಿಖರ ಮಾಹಿತಿಯನ್ನು ಮಾಹಿತಿದಾರನು ಒದಗಿಸಬಹುದು ಅಥವಾ ಒದಗಿಸಲಿಕ್ಕಿಲ್ಲ. ಯಾವುದೇ ಯೋಜನೆಯ ಅಡಿಯಲ್ಲಿ ಅಧಿಸೂಚಿಸಲ್ಪಡುತ್ತಿದ್ದರೆ, ಅದು ಅಂತಹ ಪರಿಸ್ಥಿತಿಗಳನ್ನು ತಪ್ಪಿಸುವುದು ಮತ್ತು ವಿಶ್ವಾಸಾರ್ಹ ಮಾಹಿತಿಯನ್ನು ಪಡೆಯುವಲ್ಲಿ ಪ್ರಯೋಜನವಾಗುವುದು.

- ಎಲ್ಲ ಸಾಂಖ್ಯಿಕ ಚಟುವಟಿಕೆಗಳಿಗಾಗಿ ನೋಡಲ್ ಏಜೆನ್ಸಿಯಾದ ಇಲಾಖೆಯ (ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ)ಅಧಿಕಾರಿಗಳೊಂದಿಗೆ ಈ ಅಧಿನಿಯಮವು ದತ್ತಾಂಶ ಸಂಗ್ರಹಣೆಯ ನಕಲು ತಡೆಯಬಹುದಾಗಿತ್ತು ಮತ್ತು ತಾಂತ್ರಿಕ ಗುಣಮಟ್ಟಗಳನ್ನು ನಿರ್ವಹಿಸುವಲ್ಲಿ ಪ್ರಯೋಜಕವಾಗಬಹುದಾಗಿತ್ತು. ದತ್ತಾಂಶವನ್ನು ಎಲೆಕ್ಟ್ರಾನಿಕ್ ಒಳಗೊಂಡು ವಿವಿಧ ರೀತಿಗಳಲ್ಲಿ ಸಂಗ್ರಹಿಸಬಹುದಾಗಿತ್ತು. ನಿಗದಿತ ದಿನಾಂಕದಂದು ಮಾಹಿತಿ ಸಂಗ್ರಹಿಸಲು ಮಾದರಿಯನ್ನು ಮಾಹಿತಿದಾರನಿಗೇ ಬಿಡಲಾಯಿತು ಮತ್ತು ವೈಯಕ್ತಿಕ ಮಾಹಿತಿಯನ್ನು ವಿಶ್ವಾಸಾರ್ಹವಾಗಿ ಇಡಲಾಗುತ್ತಿತ್ತು
- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರೂಪಿಸಿದ ಕಾರ್ಯನೀತಿ ಗುರಿಗಳನ್ನು ಮತ್ತು ಕಾರ್ಯನೀತಿಗಳನ್ನು ಈಡೇರಿಸಲಾಗಿದೆ ಮತ್ತು ಅನುಷ್ಠಾನಗೊಳಿಸಲಾಗಿದೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಮಂಜೂರು ಮಾಡಿದ ಒಟ್ಟು ಮೊತ್ತದ ಸಮಗ್ರ ನಿಧಿ ಬಳಕೆ ಅನುಪಾತವು ಶೇ.90.53 ಇತ್ತು, ಅದರಲ್ಲಿ ಕರ್ನಾಟಕ ಸರ್ಕಾರಕ್ಕಾಗಿ ನಿಧಿ ಬಳಕೆ ಅನುಪಾತವು ಶೇ.87.66 ಆಗಿದೆ.
- ಸಾಂಖ್ಯಿಕ ದತ್ತಾಂಶದ ಗುಣಮಟ್ಟ ಮತ್ತು ಪ್ರಸಾರದಲ್ಲಿ ಸುಧಾರಣೆ ತರುವ ಉದ್ದೇಶಕ್ಕೆ ಪೂರಕವಾಗಿರುವ ಸಾಂಖ್ಯಿಕ ಕಾರ್ಯಾಚರಣೆಗಳನ್ನು ಸುಧಾರಿಸುವುದಕ್ಕಾಗಿ ಹಲವಾರು ವಿಚಾರ ಸಂಕಿರಣಗಳನ್ನು, ಕಾರ್ಯಾಗಾರಗಳನ್ನು ಹಾಗೂ ಸಭೆಗಳನ್ನು ಇಲಾಖೆಗಳ ವಿವಿಧ ಮುಖ್ಯಸ್ಥರೊಂದಿಗೆ ಆರಂಭದಿಂದಲೂ ನಡೆಸಲಾಯಿತು.
- ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯು ನ್ಯಾಶನಲ್ ಇನ್‌ಫಾರ್ಮೇಟಿಕ್ಸ್ ಸೆಂಟರ್‌ನೆರವಿನೊಂದಿಗೆ 7 ವೆಬ್ ಅಪ್ಲಿಕೇಶನ್ ಅಭಿವೃದ್ಧಿಪಡಿಸುವಲ್ಲಿ ಯಶಸ್ವಿಯಾಯಿತು. ಅವುಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದವರು 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗಾಗಿ ಉಪಯೋಗಿಸುತ್ತಾರೆ. ಬೆಳೆ ಅಂದಾಜು ಸಮೀಕ್ಷೆ, ಬೆಳೆ ಕ್ಷೇತ್ರ ಗಣತಿ, ಗ್ರಾಹಕ ಬೆಲೆ ಸೂಚಿ, ಸಗಟು ದರ ಸೂಚಿ ಮತ್ತು ಔದ್ಯಮಿಕ ಉತ್ಪಾದನೆಯ ಸೂಚಿ ಇವುಗಳಿಗೆ ಸಂಬಂಧಿಸಿದ ವೆಬ್ ಅಪ್ಲಿಕೇಶನ್‌ಗಳನ್ನು 2010–11ರಲ್ಲಿ ಕಾರ್ಯಾಚರಣೆಗಾಗಿ ಸಿದ್ಧಪಡಿಸಲಾಯಿತು.
- ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ವೆಬ್ ಪಬ್ಲಿಕ್ ಪೋರ್ಟಲ್‌ನ್ನು ಅಭಿವೃದ್ಧಿ ಪಡಿಸಲಾಗಿದೆ ಮತ್ತು ಸಾಂಖ್ಯಿಕ ದತ್ತಾಂಶ ವರದಿಯನ್ನು ಪಡೆಯಲು ಸಾರ್ವಜನಿಕರಿಗೆ ಅವು ಲಭ್ಯವಿದೆ. ಸಾಂಖ್ಯಿಕ ಮೂಲಸೌಕರ್ಯವನ್ನು ಸುಧಾರಿಸುವ ಉದ್ದೇಶದಿಂದ, ವೆಬ್ ಪೋರ್ಟಲ್

ನಿರ್ಮಾಣವು ತಳಮಟ್ಟಗಳಲ್ಲಿ ದತ್ತಾಂಶ ಸಂಗ್ರಹಿಸುವಲ್ಲಿ ನೆರವಾಗಿದೆ ಮತ್ತು ಕೇಂದ್ರೀಕೃತ ವೆಬ್ ಪೋರ್ಟಲ್‌ಗೆ ದತ್ತಾಂಶವನ್ನು ರವಾನಿಸಲು ಅನುವಾಗಿದೆ ಮತ್ತು ಅವು ದತ್ತಾಂಶದ ಸಂಗ್ರಹಣೆ, ಪುನಸ್ಸಂಪಾದನೆ ಮತ್ತು ವಿಶ್ಲೇಷಣೆಯನ್ನು ಬಹು ಸುಲಭಗೊಳಿಸಿದೆ.

- ರಾಜ್ಯದಲ್ಲಿ ಸಾಂಖ್ಯಿಕ ಮೂಲಸೌಕರ್ಯ ಸುಧಾರಿಸುವಲ್ಲಿ ಮಹತ್ವದ ಸಾಧನೆಗಳಾಗಿವೆ. ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಬಲವರ್ಧಕ ಯೋಜನೆಯ ಅಡಿಯಲ್ಲಿ ಲೈನ್ ಇಲಾಖೆಗಳಿಂದ, ಸಮೀಕ್ಷೆಗಳನ್ನು ಕೈಗೊಳ್ಳುವುದಕ್ಕಾಗಿ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಒದಗಿಸುವುದಕ್ಕೆ 4828 ಮಿನಿ ಲ್ಯಾಪ್‌ಟಾಪ್‌ಗಳನ್ನು/ 10 ನೆಟ್ ಬುಕ್‌ಗಳನ್ನು/ಹಸ್ತಚಾಲಿತ ಉಪಕರಣಗಳನ್ನು ಖರೀದಿಸಲು ಯೋಜಿಸಲಾಯಿತು. ಮಿನಿ ಲ್ಯಾಪ್‌ಟಾಪ್‌ಗಳಿಗಾಗಿ ವಿತರಿಸಿದ ಬಜೆಟ್ 724.2 ಲಕ್ಷಗಳಷ್ಟು ಆಗಿತ್ತು. ಸದರಿ ಇಲಾಖೆಯಿಂದ ಒದಗಿಸಲಾದ ಮಾಹಿತಿಯ ಅನ್ವಯ ಇಂದಿನವರೆಗೆ ರೂ.786.708 ಲಕ್ಷ ಮೌಲ್ಯದ 4153 ಮಿನಿ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲಾಗಿದೆ.

- ಕ್ಷೇತ್ರ ಸಿಬ್ಬಂದಿಗೆ ಒದಗಿಸಲಾದ ಮಿನಿ–ಲ್ಯಾಪ್‌ಟಾಪ್‌ಗಳ ಕಾರ್ಯದ ಸದ್ಯದ ಸ್ಥಿತಿಯನ್ನು ಬ್ಯಾಟರಿ, ಕೀಬೋರ್ಡ್ ಮತ್ತು ಬ್ಯಾಟರಿಯಂತಹ ಪ್ರಮುಖ ಉಪಕರಣಗಳಿಗಾಗಿ ಮೌಲ್ಯಮಾಪನ ಮಾಡಲಾಯಿತು. ಮೌಲ್ಯಮಾಪನ ಮಾಡಿದ ಶೇ. 56.28 ರಷ್ಟು ಮಿನಿ ಲ್ಯಾಪ್‌ಟಾಪ್‌ಗಳ ಬ್ಯಾಟರಿಗಳು ಉತ್ತಮ ಬ್ಯಾಕ್ ಅಪ್‌ನಿಂದ ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿದ್ದವು. ಶೇ.86.85 ರಷ್ಟು ಮಿನಿ ಲ್ಯಾಪ್‌ಟಾಪ್ ಕೀಬೋರ್ಡ್‌ಗಳು ಅತ್ಯುತ್ತಮವಾಗಿ/ದಕ್ಷವಾಗಿ ಕಾರ್ಯನಿರ್ವಹಿಸುತ್ತಿದ್ದವು. ಮೌಲ್ಯಮಾಪನ ಮಾಡಿದ 87.23ರಷ್ಟು ಲ್ಯಾಪ್‌ಟಾಪ್‌ಗಳ ಡಿಸ್‌ಪ್ಲೇ ಸ್ಕ್ರೀನ್‌ಗಳು ಅತ್ಯುತ್ತಮವಾಗಿ/ದಕ್ಷವಾಗಿ ಕಾರ್ಯನಿರ್ವಹಿಸುತ್ತಿದ್ದವು.

- ಮಿನಿ ಲ್ಯಾಪ್‌ಟಾಪ್‌ಗಳ ಸಮಗ್ರ ಕಾರ್ಯಸ್ಥಿತಿಗಾಗಿ ಮತ್ತು ಉಪಯುಕ್ತತೆಗಾಗಿ ಮೌಲ್ಯಮಾಪನ ಮಾಡಲಾಯಿತು. ಮಾಹಿತಿಗಳನ್ನು ಸಂಗ್ರಹಿಸಲು ಕ್ಷೇತ್ರ ಸಿಬ್ಬಂದಿಯಿಂದ ತಾಲ್ಲೂಕು ಕಛೇರಿಗಳಿಗೆ/ಸಾಂಖ್ಯಿಕ ನಿರೀಕ್ಷಕರಿಗೆ ಬಳಕೆಗಾಗಿ ಒದಗಿಸಿದ ಮಿನಿ ಲ್ಯಾಪ್ ಟಾಪ್‌ಗಳಲ್ಲಿ ಶೇ.67.77 ರಷ್ಟು ಅತ್ಯುತ್ತಮವಾಗಿರುವುದು ಕಂಡುಬಂದಿತು.

- ಅಗತ್ಯವಾದಾಗ ದತ್ತಾಂಶ ಸಂಗ್ರಹಕ್ಕಾಗಿ ಕ್ಷೇತ್ರ ಅಧಿಕಾರಿಗಳ ಉಪಯೋಗಕ್ಕಾಗಿ ಮಿನಿ–ಲ್ಯಾಪ್‌ಟಾಪ್‌ಗಳ ಲಭ್ಯತೆಯು ಬಹು ಉತ್ತಮವಾಗಿತ್ತು ಎಂದು ಶೇ.37.84 ರಷ್ಟು ಪ್ರತಿಕ್ರಿಯೆದಾರರು ಅಭಿಪ್ರಾಯ ಪಟ್ಟರು.
